# BLINK / AYOMAYA

Written by

SRINIDHI BENGALURU

SWA
SCREENWRITERS ASSOCIATION

Email : srinidhibengaluru98@gmail.com
Phone Number: 9113506210

**ಆಡಿಯೊ ದೃಶ್ಯ** – ಟೈಟಲ್ಸ್ ಸಾಗುವ ವೇಳೆ ಹಿನ್ನೆಲೆಯಲ್ಲಿ ಮೂಡಿಬರುತ್ತದೆ

ಫಸ್ಟ್ ಬೆಲ್ ರಿಂಗ್ ಆಗುತ್ತದೆ , ಜನರ ಗುಸು ಗುಸು ಮಾತುಗಳು ತಣ್ಣಗಾಗುತ್ತದೆ , ಅಲ್ಲಿ ಇಲ್ಲಿ ಮೆಲುದನಿಯಲ್ಲಿ ಮಾತುಗಳು ಕೇಳಿಬರುತ್ತಿದೆ , ಒಂದಿಬ್ಬರ ಫೋನ್ ರಿಂಗಣಿಸುತ್ತಿದೆ , ದೂರದಲ್ಲಿ ಆಂಗಿಕಮ್ ಭುವನಂ ಯಸ್ಯ ಪ್ರಾರ್ಥನೆ ಕೇಳುತ್ತಿದೆ , ಮೈಕ್ ಟೆಸ್ಟ್ ನಡೆಯುತ್ತಿದೆ , ಮೇಳದವರು ಒಂದೆರಡು ವಾದ್ಯಗಳನ್ನು ಪರೀಕ್ಷಿಸುವ ಸದ್ದು ಕೇಳಿಬರುತ್ತಿದೆ. ಅಪೂರ್ವ ಮೇಳದವರೊಂದಿಗೆ ಮಾತನಾಡುತ್ತಿರುವುದು ಕೇಳುತ್ತದೆ.

APOORVA

ಪ್ರವಿ ಮ್ಯೂಸಿಕ್ ಕ್ಯೂ ಶೀಟ್ , ತಬಲಾ ಪಕ್ಕ ಇಟ್ಟಿದ್ದೀನಿ ..

PRAVEENA

ಹಮ್.. ಆಕ್ಟರ್ಸ್ ಗೆ ಪಿಚ್ ಮೈನ್ಟೈನ್ ಮಾಡೋಕ್ಕೆ ಹೇಳು
ಮಗ , ಒಬ್ಬೊಬ್ರು ಒಂದೊಂದ್ ರೇಂಜ್ ತಗೊತ್ತಾರೆ

APOORVA

ಪಾಪ ಹೊಸಬರು ಗುರು , ಸಾಂಗ್ ಬಂದಾಗ ಸ್ಟೇಜ್
ಮೈಕ್ ಕಮ್ಮಿ ಮಾಡಿಸ್ತೀನಿ , ನೀವೇ ಸ್ವಲ್ಪ ಪುಶ್ ಮಾಡ್ರೋ
ಪ್ಲೀಸ್..

ಪ್ರಾರ್ಥನೆ ಮುಗಿಯುತ್ತದೆ , ಎರಡನೇ ಬೆಲ್ ರಿಂಗ್ ಆಗುತ್ತದೆ , ಮೈಕ್ ಅಲ್ಲಿ ತಂಡದ ಹೆಸರು , ಹಾಗೂ ನಾಟಕದ ಪರಿಚಯ ಆಗುತ್ತದೆ , ಅಪೂರ್ವ ನಡೆದು ಗ್ರೀನ್ ರೂಮ್ ಕಡೆಗೆ ಹೋಗುತ್ತಿರುವ ಸದ್ದು ಕೇಳಿಬರುತ್ತಿದೆ . ಅವನ ನಡಿಗೆಯ ಸದ್ದಿನೊಂದಿಗೆ ಸ್ಪೀಕರ್ ಸದ್ದು ನಿಧಾನಗತಿಯಲ್ಲಿ ಕಮ್ಮಿಯಾಗುತ್ತದೆ. ನಾಟಕದ ಹೆಸರು ಹೇಳುವಾಗ ಮೈಕ್ ಸಿಸ್ಟಮ್ ಸಮಸ್ಯೆಯಾಗಿ ಕೊಯ್ ಎಂದು ಕೇಳಿ ಬರುತ್ತದೆ.

PRAVEENA

ಆಂತರ್ಯ ರಂಗತಂಡ ಪ್ರಸ್ತುತ ಪಡಿಸುವ ಸಾಫೋಕ್ಲಿಸ್
ಕವಿಯ ದುರಂತ ನಾಟಕ ದೊರೆ ಈಡಿಪಸ್ , ಕನ್ನಡಕ್ಕೆ ಪಿ.
ಲಂಕೇಶ್ , ನಿರ್ದೇಶನ ದೇವನಹಳ್ಳಿ ಸುರೇಶ್ , ಪ್ರೇಕ್ಷಕರು
ನಾಟಕಕ್ಕೆ ಅಡ್ಡಿಯಾಗದಂತೆ ತಮ್ಮ ಮೊಬೈಲ್ ಫೋನ್
ಗಳನ್ನೂ ಸ್ವಿಚ್ ಆಫ್ ಮಾಡಬೇಕಾಗಿ ಕೇಳಿಕೊಳ್ಳುತ್ತೇವೆ.

ಸ್ಕ್ರೀನ್ ಮೇಲೆ ದೃಶ್ಯ ಮೂಡುತ್ತಿದ್ದಂತೆ , ಮೂರನೇ ಬೆಲ್ ಕೂಡ ರಿಂಗಣಿಸುತ್ತದೆ.

SWA SCREENWRITERS ASSOCIATION

INT. GREEN ROOM , EVENING

**September 2 . 2022**

ಅಪೂರ್ವ ಗ್ರೀನ್ ರೂಮ್ ಪ್ರವೇಶಿಸಿದ್ದಾನೆ , ನಟರೆಲ್ಲ ಒಬ್ಬರಿಗೊಬ್ಬರು ವಿಶ್ ಮಾಡಿಕೊಳ್ಳುತ್ತಿದ್ದಾರೆ , ಎರಡನೇ ದೃಶ್ಯಕ್ಕೆ ಬರುವವರದ್ದು ಮೇಕಪ್ ಆಗುತ್ತಿದೆ , ನಿರ್ದೇಶಕರು "ಕೊಟ್ಯ" ಎಂದು ಅಪೂರ್ವನನ್ನು ಕೇಳುತ್ತಾರೆ , ಅಪೂರ್ವ ಹ್ಞು ಎಂದು ತಲೆ ಆಡಿಸುತ್ತಾನೆ , ಅಪೂರ್ವ ನಟರಿಗೆ ವಿಶ್ ಮಾಡುತ್ತಾನೆ , ಸ್ವಪ್ನ ಮೇಕಪ್ ಮಾಡಿಕೊಳ್ಳುತ್ತಿದ್ದಾಳೆ , ಮಿಕ್ಕ ನಟರೆಲ್ಲರೂ ಗ್ರೀನ್ ರೂಮ್ ಇಂದ ಸೈಡ್ ವಿಂಗ್ ಕಡೆಗೆ ನಡೆಯುತ್ತಿದ್ದಾರೆ , ಕನ್ನಡಿಯ ಮೂಲಕ ಅಪೂರ್ವನ ಮುಖ ರಿವೀಲ್ ಆಗುತ್ತದೆ , ನಟರೆಲ್ಲ ಹೊರಟಮೇಲೆ ಅಪೂರ್ವ ಹಾಗೂ ಸ್ವಪ್ನ ಮಾತ್ರ ಗ್ರೀನ್ ರೂಮ್ ಅಲ್ಲಿಯೇ ಇದ್ದಾರೆ , ಸ್ವಪ್ನ ಕಣ್ ಕಪ್ಪು ಬಳಿಯಲು ಅಪೂರ್ವಾಗೆ ಹೇಳುತ್ತಾಳೆ , ಅಪೂರ್ವ ಕಣ್ ಕಪ್ಪು ಬಳೆಯುತ್ತಿದ್ದಾನೆ, ಅಷ್ಟರಲ್ಲೇ , ಸತ್ಯ ರೆಸ್ಟ್ ರೂಮ್ ಇಂದ ಬಂದವನೇ ಕಿರೀಟ ಧರಿಸಿ ಕನ್ನಡಿಯಲ್ಲಿ ಅವನನ್ನು ನೋಡಿಕೊಳ್ಳುವ ಹಾಗೆ ಸ್ವಪ್ನಾಳನ್ನು ನೋಡಿ ಆಸೆಯ ಕಣ್ಣುಗಳಲ್ಲಿ ಸ್ಮೈಲ್ ಮಾಡುತ್ತಾನೆ , ಸ್ವಪ್ನ ಗಟ್ಟಿಯಾಗಿ ಕಣ್ಣು ಮುಚ್ಚುತ್ತಾಳೆ , ಕಣ್ ಕಪ್ಪು ಹಚ್ಚಿ ಮುಗಿಸಿದ್ದೆ ಸಂಪೂರ್ಣವಾಗಿ ಕಣ್ಣು ಬಿಡುತ್ತಾಳೆ , ಅಪೂರ್ವ ಆಕೆಯನ್ನು ತಬ್ಬಿ ಆಲ್ ದಿ ಬೆಸ್ಟ್ ಹೇಳುತ್ತಾನೆ . ಅಷ್ಟರಲ್ಲೇ ಅಪೂರ್ವನ ಫೋನ್ ರಿಂಗಣಿಸುತ್ತದೆ .. ಗ್ರೀನ್ ರೂಮ್ ಇಂದ ಹೊರಕ್ಕೆ ಬರುತ್ತಾನೆ , ಬರುವ ಬರದಲ್ಲಿ ಸೈಡ್ ವಿಂಗ್ ಅಲ್ಲಿದ್ದ ಕತ್ತಿ ಕಾಲಿಗೆ ತಗುಲಿ ನೆಲಕ್ಕುರುಳುತ್ತದೆ. ಅವ್ಚ್ !!! ಎಂದು ಅದನ್ನು ಮೆಲ್ಲಗೆ ಇಟ್ಟು ಬಿರಬಿರನೆ ಹೊರ ನಡೆಯುತ್ತಾನೆ. ಕಾಲಿಗೆ ಪೆಟ್ಟಾಗಿ ರಕ್ತ ಸುರಿಯುತ್ತದೆ. ಅದು ಅವನ ಗಮನಕ್ಕೆ ಬಂದಿರುವುದಿಲ್ಲ.

CUT TO:

EXT. RANGAMANDIRA , EVENING

ಅಪೂರ್ವ ಪೆಟ್ಟಾಗಿರುವ ಕಾಲಿಗೆ ಜಗ್ ಮೂಲಕ ನೀರನ್ನು ಸುರಿಯುತ್ತ , ಕುಳಿತಲ್ಲಿಯೇ ಕರೆಯಲ್ಲಿ ಮಾತನಾಡುತ್ತಿದ್ದಾನೆ. ಆತನ ಮುಂದೆ ನಾಲ್ಕೈದು ಜನ ರಂಗಮಂದಿರದ ಒಳಕ್ಕೆ ನಡೆದು ಹೋಗುತ್ತಿದ್ದಾರೆ. ಅವನ ಹಿಂದೆ ದೊರೆ ಈಡಿಪಸ್ ನಾಟಕದ ಪೋಸ್ಟರ್ ಹಾಗೂ ಇತರೆ ನಾಟಕಗಳ ಪೋಸ್ಟರ್ಗಳು , ನಟನೆ ಕಾರ್ಯಾಗಾರದ ಪೋಸ್ಟರ್ಗಳು ಇವೆ.

APOORVA

ಯಸ್ ಸರ್ , ಎಡಿಟಿಂಗ್ ಬರುತ್ತೆ ಸರ್ , ಆದ್ರೆ ಆಫ್ಟರ್ ಎಫೆಕ್ಟ್ಸ್ ಅಷ್ಟು ಐಡಿಯಾ ಇಲ್ಲ , ಓಕೇ ಓಕೇ ಪಾರ್ಟ್ ಟೈಮ್ ಸರ್ , ಇಲ್ಲ ಅದು ಎಕ್ಸಾಮ್ಸ್ ಕ್ಲಿಯರ್ ಮಾಡ್ಬೇಕಿತ್ತು , ಸೊ ಫುಲ್ ಟೈಮ್ ಆದ್ರೆ ಸ್ವಲ್ಪ ಕಷ್ಟ ಆಗತ್ತೆ ಅಂತ . ಓನ್ ಸಿಸ್ಟಮಾ ... ಅಯ್ಯೋ ಇಲ್ವಲ್ಲ ಸರ್ , ಸರ್ ಕೇಳಿಸ್ಲಿಲ್ಲಾ ...... ಓ ಓಕೆ ಸರ್, ಥಾಂಕ್ ಯು . ಪರವಾಗಿಲ್ಲ ಸರ್ ..

CUT TO:

EXT. DHUM ANGADI , EVENING

ಅಪೂರ್ವ ತನ್ನ ಗೆಳೆಯ ಕಿಟ್ಟಿಯ ಜತೆ ದಮ್ ಅಂಗಡಿಯ ಎದುರು ಒಂದು ಗಾಡಿಯ ಮೇಲೆ ಕುಳಿತಿದ್ದಾನೆ, ಗಾಯವಾದ ಕಾಲಿಗೆ ಬ್ಯಾಂಡೇಜ್ ಹಾಕಿಕೊಳ್ಳುತ್ತಿದ್ದಾನೆ , ಕಿಟ್ಟಿ ಸಿಗರೇಟು ಹಾಗೂ ಟಿ ಕೊಡುತ್ತಾನೆ ಅಪೂರ್ವ ಸಿಗರೇಟು ಹಚ್ಚಿಕೊಂಡು ಸೇದುತ್ತ ಮಾತು ಪ್ರಾರಂಭಿಸುತ್ತಾನೆ.

APOORVA

ಈ ಅಟೆಂಪ್ಟು ಹೋಯಿತು ಮಗ , ಅಮ್ಮಂಗೆ ಫೇಲ್ ಆದ ವಿಷ್ಯ ಹೇಳಲ್ಲ , ಇಲ್ಲೇ ಕೆಲ್ಸ ಸಿಕ್ತು ಅಂತ ಹೇಳ್ತಿನಿ , ಎಲ್ಲಾದ್ರೂ ಪಾರ್ಟ್ ಟೈಮ್ ಕೆಲ್ಸ ಮಾಡಿ ತಿಂಗ್ಳು ಖರ್ಚ್ ನೋಡ್ಕೊಳ್ಬೇಕು , ಎಲ್ಲದಕ್ಕೂ ಅಮ್ಮನ್ ಮೇಲೆ ಡಿಪೆಂಡ್ ಆಗಿರಕ್ಕಾಗಲ್ಲ ಇನ್ನು , ಮುಂದಿನ ಅಟೆಂಪ್ಟ್ ಕ್ಲಿಯರ್ ಮಾಡ್ಲೇಬೇಕು..

KITTI

ರಘು ಹೇಳಿದ್ ಕಂಪನಿ ಏನಾಯ್ತು ?

APOORVA

ಸ್ವಂತ ಸಿಸ್ಟಮ್ ಇರಬೇಕಂತೆ , ನಾನ್ ಈಗಿರೋ ಪರಿಸ್ಥಿತೀಲಿ ಎಲ್ಲಾದ್ರೂ ಕಳ್ತನ ಮಾಡ್ಬೇಕಷ್ಟೆ.

CUT TO:

EXT. BENGALURU ROADS , NIGHT

ಅಪೂರ್ವ ಮತ್ತು ಕಿಟ್ಟಿ ಊಟಕ್ಕೆ ತಂದಿದ್ದ ದೊಡ್ಡ ಪಾತ್ರೆಗಳನ್ನು ಹೋಟೆಲ್ ಗೆ ಹಿಂತಿರುಗಿಸಲು ಗಾಡಿಯಲ್ಲಿ ಹೋಗುತ್ತಿದ್ದಾರೆ , ಗಾಡಿ ಬೆಂಗಳೂರಿನ ವಿವಿಧ ರಸ್ತೆಗಳಲ್ಲಿ ಮೂವ್ ಆಗುತ್ತದೆ , ಹಿನ್ನೆಲೆಯಲ್ಲಿ ಇವರಿಬ್ಬರ ಮಾತುಗಳು ಕೇಳಿಬರುತ್ತಿದೆ. ( ವಾಯ್ಸ್ ಓವರ್ )

KITTI

ಮಗ ನಮ್ ಟಾನಿಕ್ ಫ್ರೆಂಡು, ಫೇಸಬುಕ್ , ಯೌಟ್ಯೂಬ್ ಅಲ್ಲಿ ಯಾವ್ದೋ ಚಾನೆಲ್ ಶುರು ಮಾಡೌನಂತೆ , ಆರ್ಟಿಕಲ್ಸ್ ಬರಿಯಕ್ಕೆ ಹುಡಗುರ್ ಬೇಕು ಅಂತಿದ್ದ , ಕೇಳ್ನೋಡ್ತಿನಿ ಒಂದ್ ಸರ್ತಿ.

ಅಪೂರ್ವ ಯೋಚನೆಯಲ್ಲಿ ಬೈಕ್ ಓಡಿಸುತ್ತಿದ್ದಾನೆ , ರಸ್ತೆಯೊಂದರ ತಿರುವಲ್ಲಿ ಗಾಡಿಯೊಂದು ಸಡನ್ ಆಗಿ ಇವರ ಎದುರು ಬರುತ್ತದೆ.

GAADIYAVANU

ನೋಡ್ಕೊಂಡ್ ಬಾರೋ ನಿನ್ನಮ್ಮನ್....

SWA SCREENWRITERS ASSOCIATION

APOORVA

ಆಯ್ತು ಗುರು , ಸಮಾದಾನ , ಇಷ್ಟಕೆಲ್ಲ ಅಮ್ಮನ್ನ
ಯಾಕ್ ಕರೀತ್ಯಾ .. ಸಾರಿ

CUT TO:

EXT. HOTEL OUTSIDE , NIGHT

ಹೋಟೆಲ್ ಅಲ್ಲಿ ಪಾತ್ರೆಗಳನ್ನು ಕೊಟ್ಟು , ಮಿಕ್ಕ ಹಣವನ್ನು ಪಡೆಯುತ್ತಾರೆ , ಅಲ್ಲಿಂದ ಹೊರಡುತ್ತಾರೆ.

CUT TO:

INT. RANGAMANDIRA , EVENING

ನಾಟಕದ ಕೆಲವು ದೃಶ್ಯಗಳು ಮೂವ್ ಆಗುತ್ತವೆ . ಅಪೂರ್ವ ಸೈಡ್ ವಿಂಗ್ ಇಂದ ಗ್ರೀನ್ ರೂಮ್ ಕಡೆಗೆ ನಡೆಯುತ್ತಾನೆ.

ನಾಟಕದಲ್ಲಿ ..

OEDIPUS

ನಾನು , ನನ್ನ ತಂದೆಯನ್ನು ಕೊಲೆ ಮಾಡುತ್ತೇನೆಂದು
ಹೇಳಿದ , ಅದನ್ನು ಕೇಳಿದವನೇ ಅಲ್ಲಿಂದ ಓಡಿದೆ...

SMASH CUT TO:

JOCASTA

ವಿಧಿ ನಮ್ಮನ್ನು ಆಳುತ್ತದೆ , ಯಾವುದೂ ಮುಂಚೆ
ತಿಳಿಯುವುದಿಲ್ಲ , ಆದ್ದರಿಂದ ಯಾವನೇ ಆಗಲಿ ಯಾಕೇ
ಹೆದರಬೇಕು ?

CUT TO:

INT. GREEN ROOM , EVENING

ನಾಟಕದ ದೃಶ್ಯಗಳು ಹಿನ್ನೆಲೆಯಲ್ಲಿ ನಡೆಯುತ್ತಿರುವ ಸದ್ದು ಕೇಳುತ್ತಿದೆ , ಅಪೂರ್ವ ಮೇಕಪ್ ವಸ್ತುಗಳನ್ನು ಪ್ಯಾಕ್ ಮಾಡುತ್ತಿದ್ದಾನೆ , ಗ್ರೀನ್ ರೂಮ್ ಅಲ್ಲಿ ಬೇರೆಯಾರೂ ಕಾಣುತ್ತಿಲ್ಲ , ಕೆಲವೇ ಕ್ಷಣಗಳಲ್ಲಿ ಒಬ್ಬ ಮುದುಕ ಕನ್ನಡಿಯಲ್ಲಿ ಕಾಣಿಸಿಕೊಳ್ಳುತ್ತಾನೆ , ಅಪೂರ್ವ ಮುದುಕನನ್ನು ಗಮನಿಸುವುದಿಲ್ಲ , ಆದರೆ ಆ ಮುದುಕ ವಿಚಿತ್ರವಾಗಿ ಅಪೂರ್ವನನ್ನೇ ನೋಡುತ್ತಿರುತ್ತಾನೆ ನಂತರದಲ್ಲಿ ಅಪೂರ್ವನನ್ನು ನೋಡುತ್ತಾ ಮಾತನಾಡಲು ಆರಂಭಿಸುತ್ತಾನೆ.

SWA SCREENWRITERS ASSOCIATION

MUDUKA

ಅಪೂರ್ವ .. ಹೇಗಿದ್ಯಾ , ಯಶೋಧ ಹೇಗಿದ್ದಾಳೆ !

ನಿಧಾನವಾಗಿ ವೇದಿಕೆಯ ಅಂಬಿಯನ್ಸ್ ಕಡಿಮೆಯಾಗತೊಡಗುತ್ತದೆ.

APOORVA

( ಕೆಲಸ ಮಾಡುತ್ತಿದ್ದವ ನಿಲ್ಲಿಸಿ ) ಎಕ್ಸ್ ಕ್ಯೂಸ್ ಮೀ !

MUDUKA

ನಿನ್ನಮ್ಮ ಹೇಗಿದ್ದಾಳೆ ಅಂತ ಕೇಳ್ದೆ !?

APOORVA

ನಿವ್ಯಾರ್ ಅಂತ ಗೊತ್ತಾಗ್ಲಿಲ್ಲ !

MUDUKA

ಅವಳಿಗೆ ಹೇಳು , ಅವಳ ಗಂಡ ಇನ್ನು ಸತ್ತಿಲ್ಲ ಅಂತ ..

APOORVA

( ಶಾಕ್ ) ಯಾರ್ ನೀವು ?

MUDUKA

ನಿಂಗೆ ತುಂಬಾ ಬೇಕಾದೌನು !

APOORVA

ಅಮ್ಮ ಹೇಗ್ ಗೊತ್ತು ನಿಮಗೆ ?

MUDUKA

ಟೈಮ್ ಬಂದಾಗ ಎಲ್ಲ ಹೇಳ್ತೀನಿ ! ( ಕಾಲಲ್ಲಿ ರಕ್ತ ಸೋರುತ್ತಿರುತ್ತದೆ , ಅದನ್ನು ನೋಡಿ ) ಕಾಲ್ ಒರಿಸ್ಕೊ ...

ಎಂದು ಹೇಳಿ ಮುದುಕ ಹೊರಟುಬಿಡುತ್ತಾರೆ , ಲೀಡ್ ಅವರನ್ನು ಹಿಂಬಾಲಿಸಿಕೊಂಡು ಹೋಗಲು ಮುಂದಾಗುತ್ತಾನೆ , ಅಷ್ಟರಲ್ಲಿ ಒಬ್ಬ ನಟ ಬಂದು , ಆತುರ ಆತುರದಲ್ಲಿ ಅಪೂರ್ವನನ್ನು ಮಾತನಾಡಿಸಲು ಮುಂದಾಗುತ್ತಾನೆ.

SWA SCREENWRITERS ASSOCIATION

ACTOR

ಮಗ ನೇಣ್ ಹಗ್ಗ ಇಲ್ಲೇ ಇಟ್ಟಿದ್ದೆ , ಪ್ಲೀಸ್ ನೋಡೋ
ಎಲ್ಲೋ ಮಿಸ್ ಆಗೋಗಿದೆ , ನೆಕ್ಸ್ಟ್ ನಂದೇ ಸೀನಿರದು ‼

ಎಂದು ಹೇಳುತ್ತಾನೆ , ಅಪೂರ್ವ ನೇಣು ಹಗ್ಗ ಹುಡುಕಿ ಕೊಡುತ್ತಾನೆ , ಆ ಮುದುಕ ಯಾರು ಅನ್ನುವ ಪ್ರಶ್ನೆ ಅವನನ್ನು ಕಾಡುತ್ತಲೆಯಿರುತ್ತದೆ, ಅಪೂರ್ವ ಚಿಂತಿಸುತ್ತಿದ್ದಾನೆ.

CUT TO:

INT. GREEN ROOM , EVENING ( TOILET )

ಅಪೂರ್ವ ಚಿಂತಿಸುತ್ತಿದ್ದಾನೆ , ಹಿನ್ನೆಲೆಯಲ್ಲಿ ವಾಯ್ಸ್ ಓವರ್ ಮೂಲಕ ಅವನ ಧ್ವನಿ ಮೂಡುತ್ತದೆ .

APOORVA

( ವಿ.ಓ ) ಕಣ್ಣು ಮುಚ್ಚಿ ಕಣ್ಣು ಬಿಡುವಷ್ಟರಲ್ಲಿ ಎಲ್ಲಾ
ನಡೆದುಹೋಗಿತ್ತು ! , ಅವತ್ತು ಆ ಮುದುಕ ಸಿಗದೆಯಿದ್ದಿದ್ರೆ
ಎಲ್ಲಾ ಸರಿಯಾಗಿ ಇರೋದೇನೋ ⁉ ನಂಗೊತ್ತಿಲ್ಲ ,
ಅವತ್ತು ಅಲ್ಲಿ ಶುರುವಾದ ಪ್ರಶ್ನೆಗಳಿಗೆ ಉತ್ತರಗಳನ್ನ
ಹುಡುಕುತ್ತ ಹೋದೆ , ಮುಂದೆ ಮತ್ತಷ್ಟು ಪ್ರಶ್ನೆಗಳು
ನನಗಾಗಿ ಕಾಯ್ತಿದ್ವು , ಮೊದಲನೇ ಪ್ರಶ್ನೆ ಯಾರವನು?

MATCH CUT TO:

INT. DRAMA STAGE , EVENING

ವಾಯ್ಸ್ ಓವರ್ ಮುಗಿಯುವುದರಲ್ಲಿ ಲೀಡ್ ಸ್ಟೇಜ್ ಮೇಲೆ ನಿಂತಿರುತ್ತಾನೆ , ನಾಟಕದ ಕಲಾವಿದರು ಹಾಗೂ ತಂತ್ರಜ್ಞರು ಸ್ಟೇಜ್ ಲೈಟ್ ಇಳಿಸುತ್ತಿರುತ್ತಾರೆ , ಲೈಟ್ ವೇರಿಯಾಗುತ್ತಿರುತ್ತದೆ , ಅಪೂರ್ವನ ಮನಸ್ಥಿತಿಯಂತೆ ಲೈಟ್ ಕೂಡ ಬೇರೆ ಬೇರೆ ದಿಕ್ಕುಗಳಿಂದ ಮೂಡುತ್ತಿರುತ್ತದೆ , ಅಪೂರ್ವನ ಮುಖದಮೇಲೆ ಲೈಟ್ ಮೂವ್ ಆಗುತ್ತಿರುತ್ತದೆ , ಮೇಕ್ ಅಪ್ ಅಲ್ಲಿಯೇ ಅಪೂರ್ವನ ಮುಂದೆ ನಿಂತಿದ್ದ ಸ್ವಪ್ನ ಅವನ ಮಾತನ್ನು ಕೇಳಿಸಿಕೊಳ್ಳುತ್ತಿದ್ದವಳು ಮರುಮಾತಾಡಲು ಮುಂದಾಗುತ್ತಾಳೆ.

SWAPNA

ನಿನ್ ತಾತ , ಯಾರೋ ನಮ್ ಹುಡುಗರೇ ಪ್ರಾಂಕ್
ಮಾಡಿರ್ತಾರೆ ಅಪ್ಪು, ಹೋದ್ಸರ್ತಿ ರಾಮ್ ಅಂಕಲ್ ನ ಕಳ್ಸಿ
ನಮ್ಮಿಬ್ಬರು ವಿಷ್ಯ ನಮ್ ಚಿಕ್ಕಪ್ಪಂಗೆ ಗೊತ್ತಾಯ್ತು ಅಂತ
ದೊಡ್ ಸೀನ್ ಕ್ರಿಯೇಟ್ ಮಾಡಿರ್ಲಿಲ್ವ , ನಿಂಗೆ ಇವೆಲ್ಲ
ಹೊಸದಾ ⁉

APOORVA

ಪ್ರಾಂಕ್ ಆಗಿರೋಕೆ ಚಾನ್ಸೇ ಇಲ್ಲ ಸ್ವಪ್ನ , ಆ ಮುದುಕನ್ನ
ನಾನು ಇದಕ್ಕೆ ಮುಂಚೆ ಎಲ್ಲೂ ನೋಡಿಲ್ಲ.

SWAPNA

ನಿನ್ ಸುಮ್ನೆ ಚಿಕ್ಕದನ್ನೆಲ್ಲ ದೊಡ್ಡದ್ ಮಾಡ್ಕೊಳ್ಬ್ಯಾ ಅಪ್ಪು ,
ಇವತ್ ನನ್ ಪರ್ಫಾರ್ಮೆನ್ಸ್ ಚನ್ನಾಗಿತ್ತೇನೋ , ನನ್
ಮೋನೊಲಾಗ್ ದೋಸೆ ಹಾಕಿದ್ ಗೊತ್ತಾಗಿಲ್ಲ ತಾನೇ..

APOORVA

ಇಲ್ಲ , ( ಆ ಪ್ರಶ್ನೆಯಲ್ಲೇ ಇದ್ದಾನೆ )

ಅಷ್ಟರಲ್ಲಿ ಡೈರೆಕ್ಟರ್ ಸ್ವಪ್ನಾಳಿಗೆ ಮೇಕ್ ಅಪ್ ರಿಮೋವ್ ಮಾಡುವಂತೆ ಹೇಳುತ್ತಾರೆ , ತಂತ್ರಜ್ಞರು ಹಾಗೂ ಕಲಾವಿದರು ಸೆಟ್ ಪ್ರಾಪರ್ಟಿಗಳನ್ನು ಶಿಫ್ಟ್ ಮಾಡುತ್ತಿರುತಾರೆ , ಮಾತನಾಡುತ್ತ ಅಪೂರ್ವ ಮತ್ತು ಸ್ವಪ್ನ ಗ್ರೀನ್ ರೂಮ್ ಕಡೆಗೆ ನಡೆದು ಹೋಗುತ್ತಾರೆ... ಅಷ್ಟರಲ್ಲಿ ಸತ್ಯ ಸ್ವಪ್ನಾಳ ಸಮೀಪ ನಡೆದುಬರುತ್ತಾನೆ.

SATHYA

ಸ್ವಪ್ನ ಒಂದ್ ನಿಮಿಷ ಬರ್ತ್ಯ , ಇಫ್ ಯು ಡೋಂಟ್
ಮೈಂಡ್ ! , ಅಪ್ಪ ಅಮ್ಮ ಬಂದಿದ್ದಾರೆ ಸೊ
ಇಂಟ್ರೊಡ್ಯೂಸ್ ಮಾಡ್ಸನ ಅನ್ಕೊಂಡೆ ,

ಸ್ವಪ್ನ ಅಪೂರ್ವನ ಕೈಲಿದ್ದ ಕೊಬ್ಬರಿ ಎಣ್ಣೆ , ಹಾಗೂ ಟಿಶ್ಯೂ ಪೇಪರ್ ತಗೆದುಕೊಂಡು , ಹೊರಡುತ್ತಾಳೆ

ಸತ್ಯನ ತಂದೆ ತಾಯಿ ಜತೆಗೆ ಸ್ವಪ್ನ ಮಾತನಾಡುತ್ತಿರುವುದನ್ನು ದೂರದಿಂದಲೇ ಅಪೂರ್ವ ಸೆಟ್ ರಿಮೂವ್ ಮಾಡುತ್ತಾ ಗಮನಿಸುತ್ತಾನೆ. ಅಪೂರ್ವನಿಗೆ ಅದು ಹಿಡಿಸುವುದಿಲ್ಲ , ಆಕೆ ನಗುನಗುತ್ತಾ ಸತ್ಯನ ತಂದೆ ತಾಯಿಯ ಜತೆಗೆ ಮಾತನಾಡುತ್ತಿರುವುದನ್ನು ನೋಡಿ ಮನಸಿಗೆ ಇರುಸುಮುರುಸಾಗುತ್ತದೆ.

CUT TO:

EXT. RANGAMANDIRA , EVENING ( PARKING LOT )

ಅಪೂರ್ವ ಸ್ವಪ್ನಾಳ ಗಾಡಿಯಲ್ಲಿ ಕುಳಿತ್ತಿದ್ದಾನೆ , ಒಂದು ಟೆಂಪೋ ಗೆ ಕೆಲವರು ಟ್ರಂಕ್ ಗಳನ್ನು ಸಾಲಾಗಿ ಹಿಡಿದು ಲಗೇಜ್ ಗಳನ್ನು ತುಂಬಿಸುತ್ತಿದ್ದಾರೆ , ಸ್ವಪ್ನ ತನ್ನ ಗೆಳತಿ ಮಿಕ್ಕಿ ಜತೆಗೆ ಮಾತನಾಡುತಿದ್ದಾಳೆ .ತನ್ನ ಗಾಡಿಯ ಕಡೆಗೆ ನಡೆದುಕೊಂಡು ಬರುತ್ತಾ ಮಾತು ಸಾಗುತ್ತಿದೆ. ಸ್ವಪ್ನ ಆತುರ ಆತುರದಲ್ಲಿ ಮಾತನಾಡುತ್ತಿದ್ದಾಳೆ. ಕೃಷ್ಣ ಹಾಗು ಇತರ ಹುಡುಗರು ಅಲ್ಲಿಯೇ ಚಿತ್ರಾನ್ನ ತಿನ್ನುತ್ತಾ ಗಾಡಿಯ ಮೇಲೆ ಕುಳಿತಿದ್ದಾರೆ.

SWAPNA

ಮಿಕ್ಕಿ , ಅಪ್ಪಂಗೆ ನಿಮ್ಮನೇಲೇ ನೈಟ್ ಸ್ಟೇ ಮಾಡ್ತಿದ್ದೀನಿ
ಅಂತ ಹೇಳಿದೀನಿ , ಯಾವಾಗಾದ್ರೂ ಸಿಕ್ರೆ ಮ್ಯಾನೇಜ್
ಮಾಡೇ ! , ಪ್ಲೀಸ್

MIKKI

ಯಾವಾಗ್ಲೂ ನಾನೇ ಸಿಗೋದೇನೆ ನಿಂಗೆ !!

SWAPNA

ಪ್ಲೀಸ್ ಡಾರ್ಲಿಂಗ್ , ನಿನ್ ಲವ್ ಗೆ  ನಾನ್ ಹೆಲ್ಪ್ ಮಾಡಿಲ್ವಾ !

KITTI

ಅದು ಹೊಗೆ ಹಾಕುಸ್ಕೊತ್ತಲ್ಲ ( ನಗು )

SWAPNA

ಬಾಯಾರಿಕೆ ಅಂದ್ರೆ ಬಾವಿ ತಂಕ ಕರ್ಕೊಂಡ್ ಹೋಗಬೋದು , ನೀರು ಕುಡಿಯದು ಬಿಡದು ಅವ್ರಿಗ್ ಬಿಟ್ಟಿದ್ದು .

MIKKI

ಸರಿ ಹೋಗಮ್ಮ ಮ್ಯಾನೇಜ್ ಮಾಡ್ತೀನಿ  , ಬಟ್ ಹುಷರಪ್ಪೆ ಅಪ್ಪಿ ತಪ್ಪಿ ನಿಂಗ್ ಹೊಟ್ಟೆ ಬಂದ್ರೆ ನಾನ್ ಸಿಕ್ಕಾಕೊಬೇಕಾಗತ್ತೆ !

SWAPNA

ಅಪೂರ್ವ ಓಲ್ಡ್ ಸ್ಕೂಲ್ ಬಿಡೆ , ಹೆಚ್ಚನ್ರೆ ಹಂಸಲೇಖ ಹಾಡಾಕಿ ಆಮ್ಲೆಟ್ ಮಾಡ್ಕೊಡ್ತಾನಷ್ಟೇ
( ಎಂದು ಹೇಳಿ , ಗಾಡಿ ಹತ್ತಿ ಕೂರುತ್ತಾಳೆ ) ಬೈ

ಅಪೂರ್ವ ಗಾಡಿಯನ್ನು ಪ್ರಾರಂಭಿಸುತ್ತಾನೆ , ಸ್ವಪ್ನ ಗಾಡಿಯನ್ನು ಏರಿ ಎಲ್ಲರಿಗೂ ಬೈ ಹೇಳುತ್ತಾಳೆ , ಗಾಡಿ ಸಾಗುತ್ತದೆ. ಅಪೂರ್ವವನ ಗಾಡಿಯ ಮುಂದೆ ಪ್ರಾಪರ್ಟಿ ಟ್ರಕ್ ಸಾಗುತ್ತದೆ .

CUT TO:

EXT. BENGALURU ROADS , NIGHT

ಖಾಲಿ ರಸ್ತೆಗಳಲ್ಲಿ ಗಾಡಿ ಸಾಗುತ್ತಿದೆ , ವಾಯ್ಸ್ ಓವರ್ ನಲ್ಲಿ ಸ್ವಪ್ನ ಮತ್ತು ಅಪೂರ್ವ ಮಾತನಾಡುವುದು ಕೇಳಿಬರುತ್ತದೆ.

APOORVA

ಆ ಲೋಫರ್ನನ್ ಮಗ  ಅಪ್ಪ ಅಮ್ಮನ್ ಪರಿಚಯ ಮಾಡಿಸ್ತಿದ್ದ ! , ಏನಂತೆ ವಿಷ್ಯ ?


©Srinidhi S
SWA Membership Number:54490

SWAPNA

ಅವನಂದ್ರೆ ಯಾಕಷ್ಟ್ ಉರ್ಕೋತ್ಯ ಅಪ್ಪು , ಕ್ಯಾಶುವಲ್
ಆಗಿ ಮೀಟ್ ಮಾಡಿಸ್ದ ಅಷ್ಟೇ , ಚಿಲ್

APOORVA

ಇತ್ತೀಚಿಗೆ ನಿನ್ ಮೇಲೆ ಜಾಸ್ತಿನೇ ಕನ್ಸರ್ನ್ ತೋರುಸ್ತಿದ್ದಾನೆ
ನಂಗದ್ ಇಷ್ಟ ಆಗ್ತಿಲ್ಲ

SWAPNA

ನೋಡೋ ದೃಷ್ಟಿ ಸರಿಗಿದ್ರೆ ಎಲ್ಲ ಸರಿಯಾಗೇ ಕಾಣತ್ತೆ ,

DIALOGUE CUT

EXT. APOORVA HOUSE , NIGHT

ಅಪೂರ್ವ ಮತ್ತು ಸ್ವಪ್ನ ಮನೆಯ ಮುಂದೆ ಬಂದು ನಿಂತಿದ್ದಾರೆ , ಸ್ವಪ್ನ ಚಪ್ಪಲಿಯನ್ನು ಸರಿಯಾಗಿ ಜೋಡಿಸಿ ಇಡುತ್ತಾಳೆ , ಅಪೂರ್ವ ಹೇಗಂದರೆ ಹಾಗೆ ಬಿಡುತ್ತಾನೆ , ಅಪೂರ್ವ ಮನೆಯ ಬಾಗಿಲು ತೆರೆದಿದ್ದೆ ಇಬ್ಬರೂ ಒಳಕ್ಕೆ ಹೋಗುತ್ತಾರೆ .

APOORVA

ಹೊ , ಗೊತ್ತಿರ್ಲಿಲ್ಲ , ಥ್ಯಾಂಕ್ಸ್ ಮೇಡಂ , ಈ ನಮ್
ಕೆಟ್ ದೃಷ್ಟಿನ ಸರಿ ಮಾಡ್ಕೊಳ್ತಿವಿ , ನಿಮ್ಮಿಂದ
ಕಲಿಯೋದು ತುಂಬಾ ಇದೆ !

SWAPNA

ಉರ್ಕೊಳೋದು , ಡೌಟ್ ಪಡೋದು ಬಿಟ್ರೆ ಬೇರೆ ಕೆಲ್ಸಾನೆ
ಇಲ್ವಾ ನಿಂಗೆ !

DIALOGUE CUT

INT. APOORVA HOUSE , NIGHT ( KITCHEN )

ಅಪೂರ್ವ ಅಡುಗೆಮನೆಯಲ್ಲಿ ಬ್ರೆಡ್ ಆಮ್ಲೆಟ್ ಮಾಡುತ್ತಿದ್ದಾನೆ , ಸ್ವಪ್ನ ಅಪೂರ್ವನ ಚಡ್ಡಿ ಮತ್ತು ಶರ್ಟ್ ಹಾಕಿಕೊಂಡು ಅಡುಗೆ ಮನೆಯನ್ನು ಪ್ರವೇಶಿಸುತ್ತ ಮಾತನಾಡುತ್ತಾಳೆ

SCREENWRITERS ASSOCIATION

APOORVA

ಕೆಲಸ ಇಲ್ಲ , ಅದಿಕ್ಕೆ ಕನ್ಸರ್ನ್ ಕಮ್ಮಿಯಾಗ್ತಿದೆ ಅಲ್ವ ,
ಎಕ್ಸಾಮ್ಸ್ ಕ್ಲಿಯರ್ ಮಾಡಿಲ್ಲ , ದುಡಿಯಲ್ಲ , ಆಸ್ತಿಯಿಲ್ಲ ,
ಬ್ಯಾಕ್ರೌಂಡ್ ಇಲ್ಲ , ನಿನಗೇನಮ್ಮ ಸಿಟಿ ಸೆಂಟರ್ ಅಲ್ಲಿ
60–40 ಸೈಟು , ಕಾರು , ಗಾಡಿ , ಸೆಕ್ಯೂರ್ಡ್ ಜಾಬು , ಎಲ್ಲ
ಇದೆ , ನಂದು ಅಂತ ಆರು ಬೈ ಮೂರು ಜಾಗಾನೂ ಇಲ್ಲ
ಸೊ ಸ್ಟೇಟಸ್ ಮ್ಯಾಚ್ ಆಗಲ್ಲ ಅನ್ಸತ್ತೆ

SWAPNA

ಸ್ಟೇಟಸ್ ನೋಡಿ ಲವ್ ಮಾಡೋಹಾಗಿದ್ದಿದ್ರೆ , ನಂಗೆ
ತುಂಬಾನೇ ಆಪ್ಷನ್ಸ್ ಇದ್ವು !

ಆಮ್ಲೆಟ್ ಅನ್ನು ತಟ್ಟೆಗೆ ಹಾಕಿ ಸ್ವಪ್ನಾಳ ಕೈಗೆ ಕೊಡುತ್ತಾನೆ , ಅದನ್ನು ಪಡೆದು ತಿನ್ನುತ್ತಾ ಸ್ವಪ್ನ ಮಾತು ಮುಂದುವರೆಸುತ್ತಾಳೆ

SWAPNA (CONT'D)

ಸ್ವಲ್ಪ ಉಪ್ಪು ಕಮ್ಮಿ ಆಗಿದೆ ಅನ್ನಿಸ್ತಿಲ್ವಾ !

APOORVA

ನಾನ್ ಹಾಕಿದ್ರೆ ಉಪ್ಪು ಕೂಡ ಸಪ್ಪೆ ಅನ್ಸತ್ತೆ ನಿಂಗೆ , ಸ್ವಪ್ನ
ನನ್ನಿಂದ ನಿಂಗ್ ಸ್ಯಾಟಿಸ್ಫ್ಯಾಕ್ಷನ್ ಏ ಇಲ್ಲ ಅಲ್ವ ಇರ್ಲಿ !?

ಸ್ವಪ್ನ ರಿಯಾಕ್ಷನ್

APOORVA
(CONT'D)
ಮಿಕ್ಕಿ ಗೆ ಏನ್ ಹೇಳ್ದೆ ನೀನು , ನಾನ್ ಓಲ್ಡ್ ಸ್ಕೂಲ್ ಆ !
ಹಂಸಲೇಖ ರವಿ ಮಾಮನ್ ಸಿನಿಮಾಗಳಿಗೇ ಜಾಸ್ತಿ ಹಿಟ್ಸ್
ಕೊಟ್ಟಿರೋದು ನೆನಪಿರಲಿ . ( ಸ್ಮೈಲ್ )

SWAPNA

ವಾಟ್ ಡು ಯು ಮೀನ್ !?

ಅಪೂರ್ವ ಸ್ವಪ್ನಾಳನ್ನು ಸನಿಹ ಎಳೆದುಕೊಂಡು

APOORVA

ನಂಗೂ ರಸಿಕತೆ ಇದೇ ಅಂದೇ !

SWA SCREENWRITERS ASSOCIATION

ಸ್ವಪ್ನ ಅಪೂರ್ವಾಗೆ ಆಮ್ಲೆಟ್ ತಿನ್ನಿಸುತ್ತಿದ್ದಾಳೆ , ಅಪೂರ್ವ ಸ್ವಪ್ನಾಳ ಕೂದಲು ಸರಿಮಾಡುತ್ತಾನೆ , ಇಬ್ಬರ ಕಣ್ಣುಗಳು ಸೇರುತ್ತಿವೆ, ಸ್ವಪ್ನ ಅಪೂರ್ವನ ಕೆನ್ನೆಗೆ ಕೈ ಸವರುತ್ತಾಳೆ , ಇಬ್ಬರು ಲವ್ ಮೂಡ್ ಗೆ ಹೋಗುತ್ತಾರೆ. ಸ್ವಪ್ನ ಕೈಲಿದ್ದ ತಟ್ಟೆಯನ್ನು ತೆಗೆದು ಅಪೂರ್ವ ಪಕ್ಕಕ್ಕೆ ಇಡುತ್ತಾನೆ , ಸ್ವಪ್ನ ಅಪೂರ್ವನ ಮೇಲೆ ಕೂರುತ್ತಾಳೆ , ಇಬ್ಬರು ಚುಂಬಿಸಲು ಮುಂದಾಗುತ್ತಾರೆ , **ಇಂಟಿಮೇಟ್ ದೃಶ್ಯ**

CUT TO:

INT. APOORVA HOUSE , NIGHT ( HALL )

ಸ್ವಪ್ನ ಅಪೂರ್ವನ ಎದೆಗೆ ಒರಗಿ ಮಲಗಿದ್ದಾಳೆ , ಅಪೂರ್ವನ ತಲೆ ಸವರುತ್ತಿದ್ದಾನೆ , ಅಷ್ಟರಲ್ಲಿ ಅಪೂರ್ವನ ಮೊಬೈಲ್ ಗೆ ಮೆಸೇಜ್ ಪಾಪ್ ಅಪ್ ಆಗುತ್ತದೆ , ಅಪೂರ್ವ ಓಪನ್ ಮಾಡುತ್ತಾನೆ , ಕಿಟ್ಟಿ ಒಬ್ಬನ ಕಾಂಟ್ಯಾಕ್ ನಂಬರ್ ಹಾಗೂ ಒಂದು ವಾಯ್ಸ್ ನೋಟನ್ನು ಕಳಿಸಿರುತ್ತಾನೆ. ಅಪೂರ್ವ ವಾಯ್ಸ್  ನೋಟ್ ಪ್ಲೇ ಮಾಡುತ್ತಾನೆ.

KITTI

(ವಾ.ಓ) ( ಹಿನ್ನೆಲೆಯಲ್ಲಿ ಗಾಡಿಯ ಗಾಳಿ ಸದ್ದು ) ಮಗ , ಟಾನಿಕ್ ಫ್ರೆಂಡ್ ಚಾನಲ್ ನಡಿಸ್ತನ್ವೆ ಅಂದಿದ್ನಲ್ಲ , ಅವನ್ ನಂಬರ್ ಇದು , ಟಾನಿಕ್ ಎಲ್ಲ ಹೇಳ್ ಅವನಂತೆ , ಬೆಳಗ್ಗೆ ಹತ್ತು ವರೆ ಅಷ್ಟಲ್ಲಿ ಅವರಿಗ್ ಒಂದ್ ಕಾಲ್ ಹಾಕಿ ಮಿಕ್ಕಿದ್ ಮಾತಾಡ್ಕೊ ಆಯ್ತಾ.

ಅಪೂರ್ವ ಥ್ಯಾಂಕ್ಸ್  ಮಗ ಎಂದು ಮೆಸೇಜ್ ಕಳಿಸುತ್ತಾನೆ . ತನ್ನೊಳಗೆ ತಾನು ಮಾತನಾಡಿಕೊಳ್ಳುವುದಕ್ಕೆ ಆರಂಭಿಸುತ್ತಾನೆ .

APOORVA

ಕೆಲಸ ಸಿಕ್ರೆ ಸಾಕು ! , ಸಪ್ನೆ ಒಂದ್ ಐದು ಸಾವ್ರ ಸಾಲ ಕೊಡ್ತೈನೆ , ನೆಕ್ಸ್ಟ್ ಮಂತ್ ತೀರಿಸ್ತೀನಿ.

SWAPNA

( ಗಟ್ಟಿಯಾಗಿ ತಬ್ಬಿ ಮಲಗಿ , ಮೊಬೈಲ್ ಅಪೂರ್ವನಿಗೆ ಕೊಡುತ್ತ )  ಹ್ಞು  , ಈಗೊಂದ್ ಸಾವಿರ ಪೆಟಿಎಂ ಮಾಡ್ಕೋ , ಮಿಕ್ಕಿದ್ ನಾಳೆ ಸಂಜೆ ಕ್ಯಾಶ್ ಕೊಡ್ತೀನಿ , ಸರಿನ..

ಅಪೂರ್ವ ದುಡ್ಡನ್ನು ತನ್ನ ನಂಬರ್ ಗೆ ಸೆಂಡ್ ಮಾಡುತ್ತಾನೆ , ಅಷ್ಟರಲ್ಲಿ ಸತ್ಯ ಸ್ವಪ್ನಾಳ ಕಾಸ್ಟ್ಯೂಮ್ ಕವರ್ ತನ್ನ ಬಳಿ ಇದೆ , ಮತ್ತು ಮಾರನೇ ದಿನ ಹಿಂತಿರುಗಿಸುವುದಾಗಿ ಮೆಸೇಜ್ ಮಾಡಿರುತ್ತಾನೆ ,

APOORVA

ಥ್ಯಾಂಕ್ಸ್  ಕಣೋ ( ಹಣೆಗೆ ಮುತ್ತಿಡುತ್ತಾನೆ )

SWA SCREENWRITERS ASSOCIATION

SWAPNA

ಈ ಸರ್ತಿ ಆದರು ಕ್ಲಿಯರ್ ಮಾಡ್ಕೊಳೋ , ಟೈಮ್
ಓಡ್ತಿದೆ ಅಪ್ಪು, ಡಿಲೆ ಆದಷ್ಟು ಮನೇಲಿ ಪ್ರೆಶರ್
ಜಾಸ್ತಿಯಾಗತ್ತೆ.

ಅಪೂರ್ವ ಉತ್ತರಿಸುವುದಿಲ್ಲ , ತಿರುಗುತ್ತಿರುವ ಟೇಬಲ್ ಫ್ಯಾನ್ ನೋಡುತ್ತಾ ಮಲಗಿದ್ದಾನೆ , ಚಿಂತೆಯಲ್ಲಿರುವುದು ಸ್ಪಷ್ಟವಾಗುತ್ತದೆ.

CUT TO:

INT.RANGAMANDIRA STAGE , DREAMY

ಅಪೂರ್ವ ಸ್ಟೇಜ್ ಮಧ್ಯ ನಿಂತಿದ್ದಾನೆ , ಅವನ ಹಿಂದೆ ಮುಂದೆ ನಾಟಕದ ಪಾತ್ರಗಳು ವಿವಿಧ ಭಂಗಿಯಲ್ಲಿ ನಿಂತಿವೆ , ಮುದುಕ , ಮೇಳದವರ ಮುಂದೆ ನಿಂತಿದ್ದಾನೆ , ಸಂಪೂರ್ಣವಾಗಿ ಹೊಗೆ ಆವರಿಸಿದೆ ಮುದುಕ ಅಪೂರ್ವನ ಕಡೆಗೆ ನೋಡುತ್ತಾ

MUDUKA

ಯಶೋಧ ಹೇಗಿದ್ದಾಳೆ , ಅವಳಿಗೆ ಹೇಳು ಅವಳ ಗಂಡ
ಇನ್ನು ಸತ್ತಿಲ್ಲ ಅಂತ

APOORVA

ಅಮ್ಮ ಹೇಗ್ ಗೊತ್ತು ನಿಮಗೆ ?

DRAMA CHARACTERS

ಯಾರವನು ?

ಸಂಗೀತ ತಾರಕಕ್ಕೇರುತ್ತದೆ ..

DIALOGUE CUT

INT. APOORVA OFFICE , DAY

**September 3 . 2022**

ಅಪೂರ್ವ ಹೆಚ್.ಆರ್ ಚೇಮ್ಬರ್ ಅಲ್ಲಿ ಕುಳಿತಿದ್ದಾನೆ , ಟಿ.ವಿ ಯಲ್ಲಿ ನ್ಯೂಸ್ ಬರುತ್ತಿದೆ , ಹೆಚ್ ಆರ್ ಕೈಲಿ ಅಪೂರ್ವನ ರೆಸ್ಯುಮ್ ಇದೇ , ಆದರೆ ಅವನ ಗಮನ ನ್ಯೂಸ್ ಮೇಲೆಯೇ ಇದೆ , ಹೆಚ್.ಆರ್ ಲ್ಯಾಪ್ಟಾಪ್ ಅಲ್ಲಿ ಶೇರ್ ಮಮಾರ್ಕೆಟ್ ಗ್ರಾಫ್ ನೋಡುತ್ತಿದ್ದಾನೆ , ಹೆಚ್.ಆರ್ ಗಮನ ( ಟಿವಿ , ಲ್ಯಾಪ್ಟಾಪ್ ) ಇವೆರಡರ ಮೇಲೆಯೇ ಇದೆ.

APOORVA

ಅಪೂರ್ವ ಸರ್ , ಅಪೂರ್ಣ ಅಲ್ಲ , ಪೂರ್ವ , ಪೂರ್ವ
ದಿಕ್ಕು , ನಾಟ್ ಪೂರ್ಣ

H.R

ಒಹ್ , ಓಕೇ , ನೋಡಿ ಅಪೂರ್ಣ್ ಪಾರ್ಟ್ ಟೈಮ್ ಅಂದ್ರೆ ದಿನಕ್ಕೆ ನಾಲಕ್ ಆರ್ಟಿಕಲ್ ಪೋಸ್ಟ್ ಮಾಡ್ಬೇಕಾಗುತ್ತೆ , ರಿಲೇಟೆಡ್ ಟು ಕರೆಂಟ್ ಅಫೇರ್ಸ್ ಫುಡ್ ಅಂಡ್ ಲೈಫ್ ಸ್ಟೈಲ್ , ಲ್ಯಾಂಗ್ವೇಜ್ ಗ್ರಿಪ್ ಇದೆ ಅಲ್ವ ?

APOORVA

ಡಿಗ್ರೀಲಿ ಮೇಜರ್ ಕನ್ನಡ ಸರ್ ! ( ರೆಸ್ಯುಮ್ ಕಡೆಗೆ ಬೆರಳು ಮಾಡುತ್ತಾನೆ )

H.R

ಗುಡ್ ( ಮತ್ತೊಂದು ಚೇಮ್ಬರ್ ಅಲ್ಲಿ ಇರುವ ಶಿವುನನ್ನ ಕರೆಯುತ್ತಾ ಮಾತನಾಡುತ್ತಾನೆ ) , ಶಿವೂ ಸಿಸ್ಟಮ್ ಖಾಲಿ ಇದ್ಯಾ ? , ( ಶಿವು ಹೌದು ಎಂದು ರಿಯಾಕ್ಟ್ ಮಾಡುತ್ತಾನೆ ) , ಕ್ರಿಯೇಟಿವ್ ಹೆಡ್ ಶಿವಕುಮಾರ್ ಅಂತ ಸಾಂಪಲ್ ಆರ್ಟಿಕಲ್ಸ್ ತೋರುಸ್ತಾರೆ , ಅದನ್ ನೋಡಿ ನೀವೊಂದು ರೈಟ್ ಅಪ್ ಮಾಡಿ ಹೊರಡಿ , ಸಂಜೆ ಕಾಲ್ ಮಾಡ್ತೀವಿ. ಇಫ್ ಸೆಲೆಕ್ಟ್ ಆದ್ರೆ ತ್ರೀ ಡೇಸ್ ಟ್ರೈನಿಂಗ್ ಇರತ್ತೆ , ಆಮೇಲೆ ವರ್ಕ್ ಫ್ರಮ್ ಹೋಮ್ ಮಾಡಬೋದು ( ಸ್ಮೈಲ್ )

APOORVA

ಸರ್ , ಅದು ಪ್ಯಾಕೇಜ್ ಏನಿರತ್ತೆ ಅಂತ ..

H.R

ಸದ್ಯಕ್ಕೆ ಟೆನ್ ತೌಸನ್ಡ್ ಕೊಡ್ತೀವಿ , ಮುಂದೆ ನೋಡಣ

APOORVA

ದಿನಕ್ಕೆ ನಲಕ್ ಆರ್ಟಿಕಲ್ ಅಂತೀರಾ ಹದಿನೈದು ಆದರು ಕೊಟ್ಟಿದ್ರೆ ಹೆಲ್ಪ್ ಆಗದು

H.R

ಸ್ಟಾರ್ಟ್ ಅಪ್ ಅಲ್ವ ಇನಿಶಿಯಲಿ ನಿಮ್ ಸಪೋರ್ಟ್ ತುಂಬಾ ಮುಖ್ಯ ಆಗತ್ತೆ ಅಪೂರ್ಣ್, ನೋಡೋಣ , ನಿಮ್ ಆರ್ಟಿಕಲ್ಸ್ ಇಂದ ಚಾನೆಲ್ ಪುಶ್ ಆದ್ರೆ ಏನಾದ್ರು ಯೋಚನೆ ಮಾಡಬೋದು ( ಸ್ಮೈಲ್ )

CUT TO:

SWA SCREENWRITERS ASSOCIATION

EXT. DHUM ANGADI , DAY

ಅಪೂರ್ವ ಟಿ ಕುಡಿಯುತ್ತಿದ್ದಾನೆ , ಜತೆಗೆ ಸಿಗರೇಟು ಎಳೆಯುತ್ತಿದ್ದಾನೆ , ಕೊಳಕಾದ ರಸ್ತೆಯಲ್ಲ , ಕೊಳಕಾದ ಜಾಗದಂತಿರುವ ಕಟ್ಟೆಯೊಂದರ ಬಳಿ ಕುಳಿತಿದ್ದಾನೆ . ಕರೆಯಲ್ಲಿ ಸ್ವಪ್ನಾಳೊಂದಿಗೆ ಮಾತನಾಡುತ್ತಿದ್ದಾನೆ

SWAPNA

( ಕರೆಯಲ್ಲಿ ) ಅಪ್ಪು ನನ್ ಕೇಳಿದ್ರೆ , ಈಗ ಇದಕ್ಕೆ ಜಾಯಿನ್ ಆಗು , ಒಂದ್ ರೆಗ್ಯುಲರ್ ಇಂಕಮ್ ಅಂತ ಇರತ್ತೆ . ಎಡಿಟಿಂಗ್ ಏನಾದ್ರೂ ಸಿಕ್ಕಿದ್ರೆ , ಪ್ರಾಜೆಕ್ಟ್ ಬೇಸಿಸ್ ಮೇಲೆ ಫ್ರೀಲಾನ್ಸ್ ಮಾಡ್ಕೊಳ್ಬೋದು.

APOORVA

ನಾನು ಅದೇ ಯೋಚಿಸ್ತಿದ್ದೆ , ಆಪ್ ಕಾಲ್ ಬರ್ಲಿ ನೋಡಣ

SWAPNA

( ಕರೆಯಲ್ಲಿ ) ಇವತ್ ಫೋರ್ ಥರ್ಟಿ ಅಷ್ಟರಲ್ಲೇ ಆಫೀಸ್ ಹತ್ರ ಬಾರೋ , ನಿನ್ನೆ ಶೋ ದು ರಿವ್ಯೂವ್ ಸೆಷನ್ ಬೇರೆ ಇದೆ , ಸ್ವಲ್ಪ ಬೇಗ ಹೋಗಣ

ಸರಿ ಎಂದು ಹೇಳಿ ಅಪೂರ್ವ ಕರೆಯನ್ನು ಕಟ್ ಮಾಡುತ್ತಾನೆ.

CUT TO:

EXT. BENGALURU ROADS , DAY

ಅಪೂರ್ವನ ಗಾಡಿ ಬೆಂಗಳೂರಿನ ಗಲ್ಲಿಗಳಲ್ಲಿ ಸಾಗುತ್ತದೆ , ಫ್ಲೇ ಓವರ್ ಮೂಲಕ ಮೈಸೂರ್ ಬ್ಯಾಂಕ್ ಸಮೀಪದ ಪುಸ್ತಕದ ಅಂಗಡಿಯ ಬಳಿ ಬರುತ್ತದೆ , ಅಪೂರ್ವ ಪಾರ್ಕ್ ಮಾಡಲು ಮುಂದಾಗಿದ್ದೆ , ಅದೇ ಜಾಗದಲ್ಲಿ ಮತ್ತೊಬ್ಬ ವ್ಯಕ್ತಿ ತನ್ನ ಗಾಡಿಯನ್ನು ನಿಲ್ಲಿಸುತ್ತಾನೆ , ಅಪೂರ್ವ ಅವರೊಂದಿಗೆ ಜಗಳ ಮಾಡದೆ ತನ್ನ ಗಾಡಿಯನ್ನು ಮತ್ತೊಂದು ಜಾಗದಲ್ಲಿ ತಂದು ನಿಲ್ಲಿಸುತ್ತಾನೆ

CUT TO:

EXT. BOOK STORE , DAY

ಅಪೂರ್ವ ರಸ್ತೆ ಬದಿಯ ಪುಸ್ತಕದ ಅಂಗಡಿಯಲ್ಲಿ ನಿಂತಿದ್ದಾನೆ , ಅಂಗಡಿಯ ಮಾಲೀಕನೊಂದಿಗೆ ಮಾತನಾಡುತ್ತಿದ್ದಾನೆ.

APOORVA

ಅಣ್ಣ ಮೊನ್ನೆ ನಾಲಕ್ ಬುಕ್ ಹೇಳ್ಬಿಟ್ ಹೋಗಿದ್ದೆ , ಸೋಮವಾರ ತರ್ಸಿತೀನಿ ಅಂದಿದ್ರಿ !


**©Srinidhi S**
**SWA Membership Number:54490**

ಅಂಗಡಿಯವನು ಪುಸ್ತಕದ ಕವರ್ ಕೊಡುತ್ತಾನೆ , ಒಟ್ಟು ಬೆಲೆಯನ್ನು ನೋಡುವ ಅಪೂರ್ವ

APOORVA
(CONT'D)
ಅಮೌಂಟ್ ಶಾರ್ಟೇಜ್ ಇದೆ , ನಾಳೆ ಇನ್ನೆರಡು ತಗೋಳ್ತೀನಿ ,ಬೇರೆಯಾರಿಗೂ ಸೇಲ್ ಮಾಡ್ಬೇಡಿ ಅಣ್ಣ ಪ್ಲೀಸ್.

ಅಂಗಡಿಯವನು ಎರಡು ಪುಸ್ತಕವನ್ನು ವಾಪಸ್ಸು ಇಡುತ್ತಾನೆ , ಅಪೂರ್ವ ಎರಡನ್ನು ತಗೆದುಕೊಂಡು , ತನ್ನ ಬ್ಯಾಗಿಗೆ ಹಾಕಿಕೊಳ್ಳುತ್ತಾನೆ , ದುಡ್ಡು ಕೊಡುತ್ತಾನೆ , ಅಂಗಡಿಯವ ಚಿಲ್ಲರೆ ಕೊಡಲು ಒಟ್ಟು ಮಾಡುತ್ತಿರುತ್ತಾನೆ , ಅಷ್ಟರಲ್ಲಿ  ತುಸುವೇ ದೂರದಲ್ಲಿ ಆ ಮುದುಕ ನಿಂತು ಅಪೂರ್ವನನ್ನೇ ನೋಡುತ್ತಿರುವುದು ಕಾಣುತ್ತದೆ. ಅಪೂರ್ವ ಅವನನ್ನೇ ನೋಡುತ್ತಾನೆ , ಅಷ್ಟರಲ್ಲಿ ಚಿಲ್ಲರೆ ಕೊಡಲು ಅಂಗಡಿಯವನು ಕರೆಯುತ್ತಾನೆ ( ಸಂಗೀತ ತಾರಕಕ್ಕೇರುತ್ತಿದೆ ) ಅಪೂರ್ವ ಚಿಲ್ಲರೆ ತಗೆದುಕೊಂಡು , ಮತ್ತೆ ಅತ್ತ ನೋಡಿದರೆ ಆ ಮುದುಕ ಕಾಣುವುದಿಲ್ಲ .ಆಕಡೆ ಈಕಡೆ ಕಣ್ಣಾಡಿಸುತ್ತಾನೆ , ಎಲ್ಲೂ ಕಾಣುವುದಿಲ್ಲ , ಹಗಲುವೇಷದ ವಾನರಸೇನೆ ಅತ್ತ ಕಡೆಯಿಂದ ನಡೆದುಕೊಂಡು ಬರುತ್ತಿರುತ್ತದೆ . ಅವರು ಅಡ್ಡಲಾಗಿ ಬರುವುದರಿಂದ ಅಪೂರ್ವನಿಗೆ ಆ ಮುದುಕ ಎಲ್ಲೂ ಕಾಣುವುದಿಲ್ಲ.

CUT TO:

EXT. FOOD CART , DAY

ಬಾಣಲೆಗೆ ಬಜ್ಜಿ ಬೀಳುತ್ತದೆ , ಆ ಆವರಿಸಿರುವ ಹೊಗೆಯಲ್ಲಿ ಅಪೂರ್ವನ ಮುಖ ವಿಚಿತ್ರವಾಗಿ ಕಾಣುತ್ತಿದೆ , ಅಪೂರ್ವ ಏನೋ ಯೋಚಿಸುತ್ತ ಕುಳಿತಿದ್ದಾನ. ಅಪೂರ್ವ , ಕೃಷ್ಣ , ಮೈಕಲ್ ಊಟ ಮಾಡುತ್ತಿದ್ದಾರೆ . ಸ್ನೇಹಿತರು ಏನನ್ನೋ ಮಾತನಾಡುತ್ತಿದ್ದಾರೆ , ಅಪೂರ್ವ ಅವರೊಂದಿಗೆ ಮಾತನಾಡುತ್ತ ಸ್ನೇಹಿತರ ಮಧ್ಯೆ ಕಣ್ಣಾಡಿಸುತ್ತಾನೆ ಅದೇ ಮುದುಕ ರಸ್ತೆಯ ಇನ್ನೊಂದು ಬದಿಯಲ್ಲಿ ನಿಂತು ಇವನನ್ನೇ ನೋಡುತ್ತಿರುವುದು ಕಾಣುತ್ತದೆ . ಗಾಡಿಗಳ ಓಡಾಟದ ಮಧ್ಯೆ ಆ ಮುದುಕ ಕಾಣುತ್ತಾನೆ ಅಪೂರ್ವ ಅವನನ್ನೇ ನೋಡುತ್ತಾ ಏಳುತ್ತಾನೆ. ದೊಡ್ಡ ದೊಡ್ಡ ಗಾಡಿಗಳು ಅಡ್ಡಲಾಗಿ ಆ ಮುದುಕ ಮರೆಯಾಗುತ್ತಾನೆ. ಅಪೂರ್ವನ ಕಾಲು ತರಚುತ್ತದೆ , ಆದ ಗಾಯದ ಮೇಲೆ ಮತ್ತೊಂದು ಗಾಯವಾಗುತ್ತದೆ.

SWA
SCREENWRITERS
ASSOCIATION

APOORVA

ಅಮ್ಮ .. ( ಕಿರುಚುತ್ತಾನೆ )

ಗೆಳೆಯರು ಅವನ ಕಡೆ ನೋಡುತ್ತಾರೆ , ಏನಾಯಿತು ಎಂದು ಗೆಳೆಯರು ಕಣ್ಣ ಸನ್ನೆಯಲ್ಲೇ ಕೇಳುತ್ತಾರೆ ಅಪೂರ್ವ ಏನಿಲ್ಲ ಎನ್ನುತ್ತಾನೆ , ಫಾಸ್ಟ್ ಕಟ್ ಗಳಲ್ಲಿ ಮೈಕಲ್ ಬ್ಯಾಂಡೇಜ್ ತರುವುದು , ಊಟವಾಗಿದ್ದೆ ಕೈ ತೊಳೆಯುವುದು , ಅಪೂರ್ವ ಕಾಲಿಗೆ ಬ್ಯಾಂಡೇಜ್ ಹಾಕಿಕೊಳ್ಳುವ ಮಾಂಟೇಜ್ ಗಳು ಮೂವ್ ಆಗುತ್ತವೆ

ಅಪೂರ್ವ ಬ್ಯಾಂಡೇಜ್ ಹಾಕಿಕೊಳ್ಳುತ್ತಾ ಮಾತನಾಡುತ್ತಾನೆ.

APOORVA
(CONT'D)
ನಿನ್ನೆ ಶೋ ಮಧ್ಯ ಗ್ರೀನ್ ರೂಮ್ ಗೆ ಒಬ್ಬ ಮುದುಕ ಬಂದಿದ್ದ , ನಿನ್ನಮನ್ಗೆ ಹೇಳು ಅವಳ ಗಂಡ ಇನ್ನು ಸತ್ತಿಲ್ಲ , ಬದುಕಿದ್ದಾರೆ ಅಂತೆಲ್ಲ ಹೇಳ್ದ ..

MICHAEL

ಬ್ರೋ ನಿಮಗೆ ಅಪ್ಪ ಇಲ್ವಾ !?

KITTI

ಇವನಿಗೆ ಐದು ವರ್ಷ ಇದ್ದಾಗಲೋ ಏನೋ ಮನೆ ಬಿಟ್ ಹೋದೋರು ವಾಪಾಸ್ ಬಂದಿಲ್ವಂತೆ . ಅದೆಲ್ಲ ದೊಡ್ ಕತೆ ಮಗ, ನೆಕ್ಸ್ಟ್ ಸಿಟ್ಟಿಂಗ್ ಅಲ್ಲಿ ಹೇಳ್ತಿನಿ ಬಿಡು ( ಅಪೂರ್ವನಿಗೆ ) ನೀನ್ ಹೇಳ್ ಗುರು

APOORVA

ಬುಕ್ ತಗೋಳಕ್ಕೆ ಹೋಗಿದ್ನಲ್ಲ , ಅಲ್ಲೂ ಅದೇ ಮುದುಕನ್ನ ನೋಡಿದೆ , ಈಗ ಊಟ ಮಾಡೋವಾಗಲು , ಅಲ್ಲೇ ( ಬೆರಳು ಮಾಡಿ ತೋರಿಸುತ್ತಾನೆ ) ನಿಂತು ನನ್ನ ನೋಡ್ತಿದ್ದ ನಾನ್ ಎದ್ದು ಹೋಗೋ ಅಷ್ಟರಲ್ಲಿ ಎಲ್ಲೋ ಮಾಯಾ ಆಗವ್ನೆ ನಂಗೇನೋ ವಿಚಿತ್ರ ಅನ್ನಿಸ್ತಿದೆ ಗುರು. ಯಾರಾದ್ರೂ ನನ್ನ ಫಾಲೋ ಮಾಡ್ತಿದ್ರೆ...

MICHAEL

ಬ್ರೋ ರಾತ್ರಿ ಯಾವ್ ಇಂಗ್ಲಿಷ್ ಫಿಲಂ ನೋಡಿದ್ರಿ

KITTI

( ನಗು ) ಯಾರೋ ಅಂಡರ್ ಕವರ್ ಏಜೆನ್ಟ್ ಫಾಲೋ ಮಾಡ್ತವ್ನೆ ನಿನ್ನ ಇಕ್ತಾನ್ ಬಗ್ಗಿ ಗೂಟ. (ನಗುವನು) ಸ್ಟೇಷನ್ ಅಲ್ಲಿ ಕಾಚದಲ್ಲೆ ಕೂರುಸ್ತಾರೆ ನೋಡ್ತಿರು

( ರೇಗಿಸಿಕೊಂಡು ನಗುವರು )

APOORVA

ತ್ತು ನನ್ ಮಕ್ಳ , ನಿಜ ಕಣ್ರೊ !!

KITTI

ತಿಕ ಮುಚ್ಕೊಂಡ್ ನಡಿಯೋ , ಫಾಲೋ ಮಾಡ್ತವರಂತೆ

ಗೆಳೆಯರು ನಗುತ್ತ , ಛೇಡಿಸುತ್ತಾರೆ.

SWA SCREENWRITERS ASSOCIATION

APOORVA

ನಕ್ಕನ್ ಸಾಯ್ರಿ ( ಸ್ಮೈಲ್ ಮಾಡುತ್ತಾನೆ )

CUT TO:

FIRST SONG

ಹಾಡಿನ ಮೇಲೆ ಮಾಂಟೇಜ್

EXT. REHEARSAL PLACE , EVENING

EXT. BENGALURU ROADS , EVENING

1. ಒಂದು ಹುಡುಗಿ ನಾಟಕದ ತಾಲೀಮಿನಲ್ಲಿ ಹಾಡುತ್ತಿರುವುದು , ಒಬ್ಬೊಬ್ಬರೇ ಗಾಡಿಗಳಲ್ಲಿ ತಾಲೀಮಿನ ಜಾಗಕ್ಕೆ ಬರುತ್ತಿರುವುದು. ಚಪ್ಪಲಿಗಳನ್ನು ಸಾಲಾಗಿ ಬಿಡುವುದು , ನಿರ್ದೇಶಕರು ನಾಟಕದ ಪ್ರಾಪರ್ಟಿಗಳನ್ನು ಇಳಿಸುವುದು , ಮುಖವಾಡಗಳನ್ನು ಹೊರಕ್ಕೆ ತಗೆಯುವುದು. ಹಾಡನ್ನು ಎಂಜಾಯ್ ಮಾಡುತ್ತಿರುವುದು.

2. ಅಪೂರ್ವ ತನ್ನ ಸ್ನೇಹಿತರಾದ ಮೈಕಲ್ ಹಾಗೂ ಕಿಟ್ಟಿ ಜತೆಗೆ ತ್ರಿಬ್ಬಲ್ ರೇಡ್ ಮಾಡುತ್ತಾ ಸ್ವಪ್ನಾಳ ಆಫೀಸ್ ಸಮೀಪ ಬರುತ್ತಾನೆ , ಆತನನ್ನು ಡ್ರಾಪ್ ಮಾಡಿ ಸ್ನೇಹಿತರು ಹೊರಡುತ್ತಾರೆ , ಸ್ವಪ್ನ ಸೈನ್ ಔಟ್ ಮಾಡಿ ಬರುವುದು , ಪಾರ್ಕಿಂಗ್ ಲಾಟ್ ಇಂದ ಗಾಡಿಯನ್ನು ತಗೆಯುವುದು , ಅಪೂರ್ವ ಗಾಡಿ ಏರುವುದು. ರಿಹಿರ್ಸಲ್ ಜಾಗಕ್ಕೆ ಗಾಡಿ ಪ್ರವೇಶಿಸುವುದು. ಅಪೂರ್ವ ಬೇರೆಯವರು ಸಾಲಾಗಿ ಚಪ್ಪಲಿ ಬಿಟ್ಟಿದ್ದರೆ , ತಾನು ಆ ಸಾಲಿನಿಂದ ಸೆಪೆರೇಟ್ ಚಪ್ಪಲಿ ಬಿಡುವುದು.

3. ರಿಹರ್ಸಲ್ ಜಾಗವನ್ನು ಕ್ಲೀನ್ ಮಾಡಿಕೊಳ್ಳುವುದು , ಹಾಡುತ್ತಿರುವ ಮೇಳದವರೊಂದಿಗೆ ಹೋಗಿ ತಾವುಗಳು ಧ್ವನಿಗೂಡಿಸುವುದು. ಎಂಜಾಯ್ ಮಾಡುತ್ತಿರುವುದು.

4. ಅಪೂರ್ವ ಟೀ ತರಲು ಹೊರಡುವುದು , ಅದೇ ಸಮಯದಲ್ಲಿ ನಾಟಕದ ಹುಡುಗರೆಲ್ಲ , ಹಿಂದಿನ ಶೋ ರಿವ್ಯೂ ಗಳನ್ನು ಓದುವುದು , ನಿರ್ದೇಶಕರು ಒಂದಿಷ್ಟು ಬದಲಾವಣೆಗಳನ್ನು ತಿಳಿಸುವುದು , ಅಪೂರ್ವ ಟಿ ತರುತಿದ್ದಂತೆ , ಟಿ ಸೇವಿಸಲು ನಾಟಕದವರೆಲ್ಲ ಸಜ್ಜಾಗುವುದು. ಬ್ರೇಕ್ ಸಮಯದಲ್ಲಿ ನಿರ್ದೇಶಕರು ನಾಟಕದ ಹುಡುಗರನ್ನು ಗುಂಪು ಕಟ್ಟಿಕೊಂಡು ಮಾತನಾಡುತ್ತಿರುವುದು. ಟಿ ತಂದ ಅಪೂರ್ವ ತಾನೂ ಎರಡು ಗ್ಲಾಸ್ ಟಿ ತಗೆದುಕೊಂಡು ಸ್ವಪ್ನಾಳ ಸನಿಹ ತೆರಳುವುದು, ಸ್ವಪ್ನಾಳೊಂದಿಗೆ ಮಾತನಾಡುತಿದ್ದ ಸತ್ಯ ಅಪೂರ್ವ ಬಂದೊಡನೆ ನಗುತ್ತಲೇ ಬೇರೆಡೆಗೆ ತೆರಳುವುದು.

CUT TO:

EXT. REHEARSAL PLACE , EVENING

**ಹಾಡಿನ ನಡುವೆ ಬರುವ ದೃಶ್ಯ**

SWA SCREENWRITERS ASSOCIATION

ಕಿತ್ತಾಡಿಕೊಂಡಿದ್ದ ಮೈಕಲ್ ಹಾಗೂ ಮಿಕ್ಕಿ ಸರಿಹೋಗಿರುತ್ತಾರೆ , ಕಿಟ್ಟಿ ಅವರಿಬ್ಬರಿಗೆ ಹಾಂಡ್ಶೇಕ್ ಮಾಡಿಸುತ್ತಾನೆ , ಮಿಕ್ಕಿ ಮೈಕಲ್ ಹಗ್ ಮಾಡಿಕೊಳ್ಳುತ್ತಾರೆ , ಕಿಟ್ಟಿ ಜೋರಾಗಿ ಕಿರುಚುತ್ತಾ ಎಂಜಾಯ್ ಮಾಡುತ್ತಿರುತ್ತಾನೆ , ಅದೇ ಸಮಯದಲ್ಲಿ ಸ್ವಪ್ನ ಹಾಗೂ ಸತ್ಯ ಕುಳಿತಿದ್ದ ಜಾಗಕ್ಕೆ ಗೆಳೆಯರ ಗುಂಪು ಬರುತ್ತದೆ.

SWAPNA

ಏನ್ ತಿನ್ನೋಹಾಗ್ ನೋಡ್ತಿದ್ಯ , ⁉

APOORVA

ಏನಿಲ್ಲ !

SWAPNA

ಹೇಳಿ ಸರ್ ಪರ್ವಾಗಿಲ್ಲ
( ಅಪೂರ್ವನ ಕೂದಲನ್ನು ಸರಿ ಮಾಡುತ್ತಾಳೆ )

APOORVA

ಈ ಮೂಗುತಿ ನಿಂಗ್ ಸಕ್ಕತ್ತಾಗ್ ಕಾಣತ್ತೆ ಕಣೆ

ಅವರಿಬ್ಬರೂ ಹತ್ತಿರ ಕೂರುತ್ತಿದ್ದಂತೆ , ಮೈಕಲ್ , ಕಿಟ್ಟಿ ಅವರ ಮಾತುಕತೆಗೆ ಅಡ್ಡಿಪಡಿಸಿ ಮಾತನಾಡಲು ಮುಂದಾಗುತ್ತಾರೆ.

KITTI

ಮಿಕ್ಕಿ ಮೈಕಲ್ ಮತ್ತೆ ಒಂದಾಗವ್ರೆ ... ಸೊ ಪ್ರೇಮಲೋಕ ಸೃಷ್ಟಿಸಿದ ಸ್ವಪ್ನನ್ಗೆ ಮಿಕ್ಕಿ ಕಡೆಯಿಂದ ಸಿಲ್ಕ್

ಮೈಕಲ್ ಸಿಲ್ಕ್ ಚಾಕಲೇಟ್ ಕೊಡಲು ಮುಂದಾಗುತ್ತಾನೆ.

MICHAEL

ಮತ್ತೆ ಕಿತ್ತಾಡ್ಕೋಳಲ್ಲ ಸ್ವಪ್ನ ಅವ್ರೆ , ಈ ಸರ್ತಿ ಟ್ರು ಲವ್ ಆಗ್ಬಿಟ್ಟಿದ್ದೆ , ಮಿಸ್ ಇಲ್ದೆ ಮದ್ವೆ ಆಗ್ತೀನಿ.

APOORVA

ಲೋಫರ್ ನನ್ ಮಕ್ಳ , ನಂಗೆಲ್ರೋ ಚಾಕ್ಲೇಟು , ನಾನ್ ಸಪೋರ್ಟ್ ಏ ಮಾಡಿಲ್ವಾ ನಿಮ್ ಟ್ರು ಲವ್ ಗೆ.

MICHAEL

ಒಂದೇ ಇರದು ಭೈ , ಇಬ್ರು ಅರ್ದರ್ದ ಮಾಡ್ಕೊಂಡ್ಬಿಡಿ

SWA SCREENWRITERS ASSOCIATION

APOORVA

ಚಾನ್ಸೇ ಇಲ್ಲ ಗುರು , ನಂಗ್ ಪೂರ್ತಿ ಬೇಕು

MIKKI

ಅಪ್ಪು ಅವ್ರೆ , ಒಂದ್ ಕೆಲ್ಸ ಮಾಡಣ , ನೀವಿಬ್ರು ಕಣ್ಣಲ್ ಕಣ್ಣಿಟ್ ನೋಡ್ಕೊಳಿ ಯಾರ್ ಜಾಸ್ತಿಹೊತ್ತು ಬ್ಲಿಂಕ್ ಹೋಲ್ಡ್ ಮಾಡ್ತಾರೋ ಅವ್ರಿಗೆ ಈ ಚಾಕಲೇಟ್ ಕೊಡ್ತಿವಿ.

KITTI

( ಮಿಕ್ಕಿ ತಲೆಗೆ ಹೊಡೆಯುತ್ತಾನೆ )
ಲೇ ಚೈಲ್ದು , ಡೈಲಾಗ್ ಪ್ರಾಕ್ಟೀಸ್ ಮಾಡೊಗು

SWAPNA

ಮಿಕ್ಕಿ ಸಕತ್ ಮಜಾ ಇದೇ ಕಣೆ , ನಾನ್ ರೆಡಿ ಗುರು , ನೋಡಣ ಹೂ ಹ್ಯಾಸ್ ಮೊರ್ ಪೊಟೆನ್ಷಿಯಲ್ ಅಂತ

APOORVA

( ಎದ್ದೇಳಲು ಮುಂದಾಗುವನು ) ನಾನ್ ಬರಲ್ಲ ತಾಯಿ , ಸೋತು ಅಜೀಬ್ ಆಗಕ್ಕೆಲ್ಲ ಇಷ್ಟ ಇಲ್ಲ ನಂಗೆ

SWAPNA

ಅಪ್ಪು , ಪ್ಲೀಸ್ ಕಣೋ

APOORVA

ನೋ ವೆ !!

ಸ್ವಪ್ನ ಅಪೂರ್ವನನ್ನೇ ನೋಡುತ್ತಾ ಕಣ್ ಸನ್ನೆಯಲ್ಲೆ ಕೇಳಿಕೊಳ್ಳುತ್ತಾಳೆ , ಅಪೂರ್ವ ಓಕೆ ಎಂದು ತಲೆಯಾಡಿಸುತ್ತಾನೆ.

JUMP CUT TO:

**ಹಾಡಿನ ಉಳಿದ ಸಾಲುಗಳು ಪ್ಲೆ ಆಗುತ್ತದೆ**

ಇಬ್ಬರೂ ಮುಖಾಮುಖಿ ಕೂರುತ್ತಾರೆ , ಫ್ರೆಂಡ್ಸ್ ತಯಾರಾಗುತ್ತಾರೆ , ದೂರದಲ್ಲಿ ಮಾತನಾಡುತ್ತಿದ್ದ ನಿರ್ದೇಶಕರು ಕೂಡ ಇವರನ್ನೇ ನೋಡಲು ಮುಂದಾಗುತ್ತಾರೆ.

NIRDESHAKA

ಇವತ್ತು ಒಬ್ರು ಸ್ಪೆಷಲ್ ವ್ಯಕ್ತಿನಾ ಪರಿಚಯ ಮಾಡ್ಕೊಡ್ತೀನಿ , ಒಬ್ಬ ಮನುಷ್ಯ ಹೀಗೂ  ಬದುಕಬಹುದಾ ಅನ್ನೋದಕ್ಕೆ ಉದಾಹರಣೆ ಅವ್ರು.

SWA SCREENWRITERS ASSOCIATION

ಮಾತು ಮುಗಿಯುತ್ತಿದ್ದಂತೆ ನಿರ್ದೇಶಕರ ಗಮನ ಸ್ವಪ್ನ ಹಾಗೂ ಅಪೂರ್ವ ಕಡೆಗೆ ತಿರುಗುತ್ತದೆ. ಸ್ಪರ್ಧೆ ಪ್ರಾರಂಭವಾಗುತ್ತದೆ , ಅಪೂರ್ವ ಮತ್ತು ಸ್ವಪ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳಲು ಆರಂಭಿಸುತ್ತಾರೆ , ಸ್ಟಾಪ್ ವಾಚ್ ಅಲ್ಲಿ ಟೈಮ್ ಓಡಲು ಪ್ರಾರಂಭವಾಗುತ್ತದೆ. ಒಂದು ನಿಮಿಷ ಆಗುತ್ತಿದ್ದಹಾಗೆ ಸ್ವಪ್ನ ಕಣ್ಣು ಮಿಟುಕಿಸಿಬಿಡುತ್ತಾಳೆ , ಆದರೆ ಅಪೂರ್ವ ಕಣ್ಣು ಮಿಟುಕಿಸದೆ ಒಂದೇಕಡೆ ದೃಷ್ಟಿ ಇಟ್ಟಿರುತ್ತಾನೆ, ಸ್ವಪ್ನ ಸೋತ ನಂತರ ಅಪೂರ್ವನ ಕಣ್ಣ ಎದುರು ಕೈ ಸನ್ನೆಗಳನ್ನು ಮಾಡುತ್ತಾ ಇರಿಟೇಟ್ ಮಾಡಲು ಮುಂದಾಗುತ್ತಾಳೆ , ಗೆಳೆಯರು ಸಹ ಅಪೂರ್ವ ಬ್ಲಿಂಕ್ ಮಾಡುವಂತೆ ಮಾಡಲು ಹರಸಾಹಸ ಪಡುತ್ತಾರೆ , ಆದರೆ ಅಪೂರ್ವ ಬ್ಲಿಂಕ್ ಮಾಡುವುದಿಲ್ಲ. ನಿರ್ದೇಶಕರು ಕೂಡ ಇಂವೋಲ್ವ್ ಆಗುತ್ತಾರೆ. ಯಾರೆಷ್ಟೇ ಪ್ರಯತ್ನ ಪಟ್ಟರು ಅಪೂರ್ವ ಮಾತ್ರ ಕಣ್ಣು ಮಿಟುಕುಸುವುದೇಯಿಲ್ಲ. ತೆರೆದ ಕಣ್ಣು ತೆರೆದಂತೆಯೇ ಒಂದೇ ಕಡೆ ದೃಷ್ಟಿ ಇಟ್ಟಿರುತ್ತಡೆ.

**ಹಾಡಿನ ನಡುವೆ ಬರುವ ದೃಶ್ಯ**

SWAPNA

ಸಾಕು ಬಿಡೋ ನಾನೇ ಸೋತಿದ್ದು , ಅಪ್ಪು

ಸ್ವಪ್ನ ಎಷ್ಟೇ ಪ್ರಯತ್ನ ಪಟ್ಟರು ಅಪೂರ್ವನಿಗೆ ಎಚ್ಚರವಾಗುವುದಿಲ್ಲ. ದೃಶ್ಯ ಇಂಟೆನ್ಸ್ ಆಗುತ್ತದೆ , ಅಪೂರ್ವನಿಗೆ ಇಲ್ಲಿನ ಗಮನ ಇರುವುದೇಯಿಲ್ಲ , ಎಂಟು-ಹತ್ತು ನಿಮಿಷ ಆಗಿರುತ್ತದೆ , ದಿಢೀರನೆ ಅಪೂರ್ವನಿಗೆ ದೂರದಲ್ಲಿ ತನ್ನ ಅಪೂರ್ವನಂತೆಯೇ ಕಾಣುವ ಪ್ರತಿರೂಪಿ ವ್ಯಕ್ತಿ ಹಾಗೂ ಆ ಮುದುಕ ನಿಂತು ಇವನನ್ನೇ ನೋಡುತ್ತಿರುವುದು ಕಾಣುತ್ತದೆ. ಅಪೂರ್ವನಿಗೆ ಶಾಕ್ ಆಗಿ ಎಚ್ಚರವಾಗಿಬಿಡುತ್ತದೆ , ಕಣ್ಣು ಮಿಟುಕಿಸುತ್ತಾನೆ. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ತನ್ನ ಪ್ರತಿರೂಪಿ ಹಾಗೂ ಅಜ್ಜ ಕಾಣುವುದಿಲ್ಲ. ಅಪೂರ್ವ ಅತ್ತಿತ್ತ ಗಮನ ಹರಿಸುತ್ತಾನೆ. ಎಲ್ಲಿಯೂ ಅವರ ಕುರುಹೂ ಸಿಗುವುದಿಲ್ಲ.

MIKKI

ದೇವ್ರು ಗುರು ನೀನು , ಯಪ್ಪಾ ೧೫ ನಿಮಿಷ ಕಾಣ್
ಮಿಟಕಿಸದೆ ಒಂದೇ ಕಡೆ ನೋಡೋದಂದ್ರೆ ಸುಮ್ನೇನಾ ,
ತಗೋ ಸಿಲ್ಕು

CUT TO:

**ಹಾಡಿನ ಉಳಿದ ಸಾಲುಗಳು ಪ್ಲೆ ಆಗುತ್ತದೆ**

MONTAGES

1. ಅಪೂರ್ವ ಮುಖ ತೊಳೆದುಕೊಳ್ಳಲು ಮುಂದಾಗುತ್ತಾನೆ

2. ತಾಲೀಮು ಶುರುವಾಗುವುದು , ಸರ್ಕಲ್ ಮಾಡಿ ಪ್ರಾರ್ಥನೆ ಮಾಡುವುದು , ವಾಲಿಬಾಲ್ ಆಡುವುದು , ನೃತ್ಯ , ನಾಟಕ ಪ್ರಾಕ್ಟೀಸ್ ಮಾಡುತ್ತಿರುವುದು , ಸೆಟ್ಗಳಲ್ಲಿ ಯಾವುದಕ್ಕೆ ರೀ ಸ್ಟಿಚಿಂಗ್ ಇದೆಯೋ ಅದನ್ನು ಸ್ಟಿಚ್ ಮಾಡುತ್ತಿರುವುದು , ಎಲ್ಲರೂ ನಗುತ್ತಿರುವುದು , ಅಪೂರ್ವ ತಾನೊಬ್ಬನೇ ದೂರದಲ್ಲಿ ಕುಳಿತು ಎಲ್ಲವನ್ನು ನೋಡುತ್ತಿರುವುದು ,

3. ಅಪೂರ್ವನಿಗೆ ಕರೆ ಬರುತ್ತದೆ , ಕಂಪನಿಯವರು ಕರೆ ಮಾಡುತ್ತಾರೆ , ಅಪೂರ್ವ ಕರೆ ಸ್ವೀಕರಿಸಲು ನಾಟಕದವರ ಗುಂಪಿನಿಂದ ತುಸು ದೂರ ಬರುತ್ತಾನೆ.

SWA SCREENWRITERS ASSOCIATION

**ಹಾಡು ಮುಕ್ತಾಯವಾಗುತ್ತದೆ**

APOORVA

( ಕರೆಯಲಿ ) ಹಾ , ಸರ್

H.R

ಅಪೂರ್ಣ್ , ಆರ್ಟಿಕಲ್ ನೋಡಿದೆ , ಇಟ್ಸ್ ಗುಡ್ , ಗ್ರಿಪ್ ಇದೆ , ಅಡ್ಜಕ್ಟಿವ್ಸ್ ಚನ್ನಾಗ್ ಯೂಸ್ ಮಾಡ್ತೀರಾ , ಬಟ್ ತುಂಬಾ ಡೀಪಾಗಿ ಕನ್ನಡ ವರ್ಡ್ಸ್ ಯೂಸ್ ಮಾಡಿದ್ದೀರಪ್ಪಾ ಸ್ವಲ್ಪ ಕಂಗ್ಲಿಷ್ ಅಲ್ಲಿ ಬರೀರಿ , ಟಾರ್ಗೆಟ್ ಯೂಸರ್ ಅರ್ಬನ್ ಬೆಂಗಳೂರ್ ಸೈಡ್ ಇರೋದ್ರಿಂದ ಅವ್ರ್ ಪಲ್ಸ್ ನಮಗೆ ಗೊತ್ತಿರ್ಬೇಕು ಅಂಡ್ ಅವರಿಗೆ ಹತ್ತಿರ ಆಗೋ ಲ್ಯಾಂಗ್ವೇಜ್ ಅಲ್ಲಿ ಸರ್ವ್ ಮಾಡಬೇಕು ನಾವು

APOORVA

ಓಕೇ ಸರ್ , ಮಾಡ್ತೀನಿ , ನೋ ಪ್ರಾಬ್ಲಮ್

H.R

ನೀವ್ ಒಂದ್ ಕೆಲಸ ಮಾಡಿ , ಈ ವೀಕ್ ಡಾಕ್ಯುಮೆಂಟರಿ ಶೂಟ್ ಗೆ ಶಿವಮೊಗ್ಗಕ್ ಹೋಗ್ತಿದ್ದೀವಿ , ನೀವು ನೆಕ್ಸ್ಟ್ ವೀಕ್ ಜಾಯಿನ್ ಆಗ್ಬಿಡಿ , ಓಕೇ ನಾ , ಸರಿನಪ್ಪ , ಟೆಕ್ ಕೇರ್

ಸೈಕಲ್ ನಿಲ್ಲಿಸಿ , ಜುಬ್ಬಾ ಧರಿಸಿರುವ ವೃದ್ಧರೊಬ್ಬರು ತಾಲೀಮಿನ ಜಾಗವನ್ನು ಪ್ರವೇಶಿಸುತ್ತಾರೆ , ಅವರು ಬರುತ್ತಿದ್ದಹಾಗೆಯೇ , ನಿರ್ದೇಶಕರು ಅವರ ಕುರಿತು ಪರಿಚಯ ಮಾಡಿಕೊಡುತ್ತಾರೆ.

SWA SCREENWRITERS ASSOCIATION

NIRDESHAKA

ಬಂದ್ರು ನೋಡಿ , ಆಗ್ಲೇ ಹೇಳ್ತಿದ್ನಲ್ಲ ಸ್ಪೆಷಲ್ ವ್ಯಕ್ತಿ ಅಂತ , ಇವ್ರೇ ಮೇಷ್ಟ್ರು, ಒಂದು ಕಾಲದಲ್ಲಿ ಬರಹಗಾರರಾಗಿದ್ರು , ರಾಜ್ಯ ವಾಣಿ ಅನ್ನೋ ಟ್ಯಾಬ್ಲಾಯ್ಡ್ ಗೆ ಸೀರಿಯಲ್ ಬರೀತಿದ್ರು , ಈಗ ನೀವೆಲ್ಲ ವೆಬ್ ಸಿರೀಸ್ ನೋಡ್ತಿರಲ್ಲ , ಆಗೆಲ್ಲ ಇವರ ಪತ್ತೇದಾರಿ ಕಥೆಗಳಿಗೆ ಕಾಯ್ತಾ ಇರ್ತಿದ್ವಿ ನಾವು , ಆದ್ರೆ ಏನಾಯಿತೋ ಗೊತ್ತಿಲ್ಲ ಒಮ್ಮೆಗೆ ಎಲ್ಲ ನಿಲ್ಲಿಸ್ಬಿಟ್ರು , ಗೊತ್ತು ಗುರಿ ಇಲ್ಲದೆ ಅಲೆದಾಡ್ತಿರ್ತಾರೆ , ವಾದ್ಯಗಳನ್ನ ನುಡಿಸ್ತಾರೆ , ಪುಸ್ತಕಗಳನ್ನ ಸೈಕಲ್ ನಲ್ಲಿ ಹಾಕೊಂಡ್ ತಿರಿಗ್ತಿರ್ತಾರೆ , ನೀವು ಓದಿ ಮುಗಿಸಿದ ಪುಸ್ತಕವನ್ನ ಅವರಿಗೆ ಕೊಟ್ರೆ , ಉಪಯೋಗ ಆಗೋರಿಗೆ ಉಚಿತವಾಗಿ ಹಂಚ್ತಾರೆ , ಮನೆ ಮಠ ಇಲ್ಲ , ಅವ್ರ್ ಹಿನ್ನೆಲೇನು ಯಾರಿಗೂ ಗೊತ್ತಿಲ್ಲ , ಎಲ್ಲಾದ್ರೂ ನಾಟ್ಕ ಪ್ರಾಕ್ಟೀಸ್ ನಡೀತಿದ್ರೆ ಅವರಿಗೆ ಸಹಾಯ ಮಾಡ್ತಾರೆ , ದುಡ್ ತಗೋಳೋದಿಲ್ಲ , ಎರಡ್ ಹೊತ್ತು ಊಟ , ಮಲಗೋದಕ್ಕೆ ಸಣ್ಣ ಜಾಗ ಕೊಟ್ರೆ ಸಾಕು , ಮಾತನಾಡೋದಿಲ್ಲ , ಇಲ್ಲಿ ಮಾತನಾಡಿ ಪ್ರಯೋಜನ ಇಲ್ಲ ಅನ್ನೋದು ಅವರ ನಿಲುವು , ಸಮಾನತೆ ಇಲ್ಲ ಅಂತ ಕಾಲಿಗೆ ಚಪ್ಪಲಿ ಹಾಕೋದಿಲ್ಲ . ಈ ಶೋ ಗೆ ನಮ್ ಜತೆ ಇರ್ತಾರೆ , ನೋಡ್ತಿರಲ್ಲ ನಿಮಗೆ ಗೊತ್ತಾಗತ್ತೆ ಎಲ್ಲ.

**ಮೇಷ್ಟ್ರು ( ಆ ವೃದ್ಧ ) ಬದುಕಿನ ದೃಶ್ಯಗಳು ಡೈಲಾಗ್ ಮೇಲೆಯೇ ಮೂವ್ ಆಗುತ್ತವೆ**

MONTAGES

೧. ನಗರದ ರಸ್ತೆ ಬದಿಯ ವಾಚನಾಲಯವೊಂದರಲ್ಲಿ ಪದಬಂದ ಬಿಡಿಸುತ್ತಿರುತ್ತಾರೆ.
೨. ಪುಸ್ತಕಗಳನ್ನು ಸೈಕಲ್ ನಲ್ಲಿ ಹಾಕಿಕೊಂಡು ಓಡಾಡುತ್ತಿರುವುದು , ಬೇಕಾದವರಿಗೆ ಕೊಡುವುದು.
೩. ರಸ್ತೆಯ ಮೂಲೆಯಲ್ಲಿ ಮಲಗುವುದು , ಗಿಡ ನೆಡುವುದು. ರಸ್ತೆಯಲ್ಲಿ ಕಸ ಕಂಡರೆ ತಾವೇ ಮುಂದಾಗಿ ಕ್ಲೀನ್ ಮಾಡುವುದು.
೪. ಕೊಳಲು ನುಡಿಸುತ್ತಿರುವುದು ,
೫. ರಾತ್ರಿ ಕುಡಿತ ಮತ್ತಿನಲ್ಲಿ ಏನೇನೋ ಕತೆಗಳನ್ನು ಗೀಚುತ್ತಿರುವುದು.
೬. ಸೆಟ್ ವರ್ಕ್ ಮಾಡುತ್ತಿರುವುದು. ಮುಖವಾಡ ಹಾಕಿ ಮಕ್ಕಳಿಗೆ ನಗಿಸುತ್ತಿರುವುದು.

CUT TO:

EXT. RANGAMANDIRA , NIGHT ( PARKING LOT )

**September 2 . 2022**

ಮೇಷ್ಟ್ರು ನಾಟಕ ಪ್ರದರ್ಶನದ ದಿನ ಸೈಕಲ್ ನಲ್ಲಿ ಪಾರ್ಕಿಂಗ್ ಸ್ಥಳದ ಬಳಿ ಬರುತ್ತಾರೆ , ಸೈಕಲ್ ನಿಲ್ಲಿಸುತ್ತಾರೆ , ಅದೇ ಸಮಯದಲ್ಲಿ ಅಪೂರ್ವ ಮತ್ತು ಕಿಟ್ಟಿ ತಮ್ಮ ಗಾಡಿಗೆ ಊಟದ ಬಾಕ್ಸ್ ಹಾಕಿಕೊಂಡು ಗೇಟ್ ನಿಂದ ಹೊರಕ್ಕೆ ಹೋಗುತ್ತಿರುತ್ತಾರೆ.

CUT TO:

EXT. RANGAMANDIRA , NIGHT ( PARKING LOT )

ಶೋ ಮುಗಿದ ನಂತರ ನಿರ್ದೇಶಕರು ಒಬ್ಬ ಹುಡುಗನಿಗೆ ಹಣ ಕೊಡುತ್ತಿರುತ್ತಾರೆ , ಆಗ ರಂಗಮಂದಿರದಿಂದ ಹೊರಕ್ಕೆ ಬಂದ ಮೇಷ್ಟ್ರು ನಿರ್ದೇಶಕರನ್ನು ನೋಡುತ್ತಾರೆ. ನಿರ್ದೇಶಕರು ಅವರನ್ನು ಗಮನಿಸಿ , ಸಂತೋಷಪಟ್ಟು , ಅವರನ್ನು ಆಲಂಗಿಸುತ್ತಾರೆ. ದೂರದಲ್ಲಿ ಪಾರ್ಕಿಂಗ್ ಲಾಟ್ ಬಳಿ ಅಪೂರ್ವ ಸ್ವಪ್ನಾಳ ಗಾಡಿಯ ಮೇಲೆ ಕುಳಿತಿರುತ್ತಾನೆ , ಹಾಗೂ ಸ್ವಪ್ನ ಮಿಕ್ಕಿ ಜತೆಗೆ ಮಾತನಾಡುತ್ತಿರುತ್ತಾಳೆ , ಸೆಟ್ ಗಳನ್ನು ಟೆಂಪೋಗೆ ತುಂಬಿಸಲಾಗುತ್ತಿರುತ್ತದೆ.

NIRDESHAKA

ಮೇಷ್ಟ್ರೇ ಇದೇನ್ ಇಲ್ಲಿ ( ಕಾಲಿಗೆ ಬೀಳುತ್ತಾರೆ )
ಯಾವಾಗ್ ಬಂದ್ರಿ , ನಾಟ್ಕ ನೋಡಿದ್ರ

ಮೇಷ್ಟ್ರು ನಾಟಕ ಅದ್ಭುತವಾಗಿತ್ತು ಎಂದು ಕೈ ಸನ್ನೆ ಮಾಡುತ್ತಾರೆ

NIRDESHAKA (CONT'D)

ಬೆಂಗ್ಳುರ್ ಕಡೆಗೆ ಬಂದ್ಬಿಟ್ಟಿದ್ದೀರಾ , ಇಲ್ಲಿನ ಸ್ಪೀಡ್ ಅಡ್ಜಸ್ಟ್
ಆಗಲ್ಲ ಅಂತಿದ್ರಿ

ಮೇಷ್ಟ್ರು - ನಿನ್ನ ಜತೆ ಕೆಲಸ ಮಾಡಬೇಕು ಅನ್ನಿಸ್ತು ಎಂದು ಸನ್ನೆ ಮಾಡುತ್ತಾರೆ.

CUT TO:

EXT. REHEARSAL PLACE , EVENING

**September 3 . 2022**

ನಿರ್ದೇಶಕರು ಮೇಷ್ಟ್ರು ಕುರಿತು ನಾಟದವರಿಗೆ ಇಂಟ್ರೊಡ್ಯೂಸ್ ಮಾಡುವ ಸಂಭಾಷಣೆ ನಡುವೆ ಈ ದೃಶ್ಯ ಪ್ರಾರಂಭವಾಗುತ್ತದೆ , ನಂತರದಲ್ಲಿ ಉಳಿದ ಸಂಭಾಷಣೆ ಮುಂದುವರೆಯುತ್ತದೆ. ಮೇಷ್ಟ್ರು ಅಪೂರ್ವನ ಪಕ್ಕದಲ್ಲೇ ನಡೆದು ಬರುತ್ತಾರೆ , ಎಲ್ಲರಿಗು ಪರಿಚಯ ಆಗುತ್ತದೆ , ಅವರ ನಿಷ್ಕಲ್ಮಶ ನಗು ಎಲ್ಲರನ್ನು ಕಾಡುತ್ತದೆ.

CUT TO:

EXT. BENGALURU ROADS , NIGHT

ಅಪೂರ್ವ , ಸ್ವಪ್ನ ಗಾಡಿಯಲ್ಲಿ ಟ್ರಾವೆಲ್ ಆಗುತ್ತಿದ್ದರೆ , ಗಾಡಿಯಲ್ಲಿ ಹೋಗುತ್ತಿರುವಾಗ ಮೇಷ್ಟ್ರು ಕುರಿತು ಮಾತನಾಡಿಕೊಳ್ಳುತ್ತಿದ್ದಾರೆ.

SWAPNA

ಕ್ರೇಜಿ ಮನುಷ್ಯ ಅಲ್ವ ಮೇಷ್ಟ್ರು , ಕಮಿಟ್ಮೆಂಟ್ ಇಲ್ಲ ,
ಆಸೆಗಳಿಲ್ಲ , ನಾಳೆ ಬಗ್ಗೆ ಚಿಂತೆ ಇಲ್ಲ

SWA SCREENWRITERS ASSOCIATION

APOORVA

ನಾನೇ ಹಾಗಿರ್ತಿನಿ ಅಂದ್ರೆ ಒಪ್ಕೊಳ್ತಿದ್ಯ ನೀನು , ಇವೆಲ್ಲ ಮಾತಾಡಕ್ ಸರಿ ಸ್ವಪ್ನ . ಹುಚ್ಚು ಅಂತಾರೆ ಅದನ್ನ . ಅವ್ರನ್ನ ನಂಬ್ಕೊಂಡ್ ಇದ್ದ ಫ್ಯಾಮಿಲಿ ಕಥೆ ಏನು ? ( ನೆನಪಾಗುತ್ತದೆ ) ಲೋ ಅಮ್ಮ ಕೆಲಸ ಆಯಿತು ಕಣೋ , ನೆಕ್ಸ್ಟ್ ವೀಕ್ ಜಾಯ್ನಿಂಗ್ ಆಗಿ ಅಂದ್ರು..

SWAPNA

( ಅತೀವ ಆನಂದ ) ಸಕತ್ ಕಣೋ , ಮೊದ್ಲು ಎರಡು ಶರ್ಟ್ ತಗೋಬೇಕ್ ನೀನು , ಎಲ್ಲಾದ್ರೂ ಹೊರಗ್ ಹೋಗೋದಿದ್ರೆ ಇದೊಂದೇ ಹಾಕ್ತಿರ್ತ್ಯ ಯಾವಾಗ್ಲೂ . ನಾನೇ ಕೊಡುಸ್ತೀನಿ ಬಿಡು

ಗಾಡಿ ಅಪೂರ್ವನ ಮನೆ ಸಮೀಪದ ರಸ್ತೆಯ ಬದಿ ನಿಲ್ಲುತ್ತದೆ , ಅಪೂರ್ವ ಗಾಡಿಯಿಂದ ಇಳಿಯುತ್ತಾನೆ , ಸ್ವಪ್ನ ಹಗ್ ಮಾಡುತ್ತಾಳೆ . ಹಾಗು ನೆನಪು ಮಾಡಿಕೊಂಡು ನಾಲ್ಕು ಸಾವಿರ ದುಡ್ಡು ಕೊಡುತ್ತಾಳೆ

SWAPNA (CONT'D)

ಮರ್ತಿದ್ದೆ ಇರು ( ಹಣ ನೀಡುತ್ತಾಳೆ ) ಲವ್ ಯು ಅಪ್ಪು , ಬೈ

APOORVA

ರೀಚ್ ಆದ್ಮೇಲೆ ಒಂದ್ ಮೆಸೇಜ್ ಹಾಕು , ಬೈ

CUT TO:

EXT/INT: APOORVA HOUSE , NIGHT

MONTAGES

೧. ಅಪೂರ್ವ ಮನೆಯ ಬಾಗಿಲನ್ನು ತೆರೆಯುತ್ತಾನೆ. ಲೈಟ್ ಹಾಕುತ್ತಾನೆ
೨. ಫ್ರೆಶ್ ಅಪ್ ಆಗುತ್ತಾನೆ , ಮೊಬೈಲ್ ಚಾರ್ಜಿಗೆ ಇಡುತ್ತಾನೆ , ಹಂಸಲೇಖ ಹಾಡುಗಳ ಪ್ಲೇಲಿಸ್ಟ್ ಹಾಕಿಕೊಳ್ಳುತ್ತಾನೆ.
೩. ಮನೆ ವಿಪರೀತ ಗಲೀಜಿದೆ , ಅದರಲ್ಲೇ ಕೂತಿರುತ್ತಾನೆ.
೪. ಉಳಿದಿರುವ ಅನ್ನಕ್ಕೆ ಒಗ್ಗರಣೆ ಮಾಡಿಕೊಂಡು , ಈರುಳ್ಳಿ ಹೆಚ್ಚಿಕೊಂಡು ಮಹಡಿಯ ಹೊರಕ್ಕೆ , ತಿನ್ನಲು ಬರುತ್ತಾನೆ.
೫. ಅಮ್ಮನಿಗೆ ಕರೆ ಮಾಡುತ್ತಾನೆ.

APOORVA

ಅಮ್ಮ ಕೆಲಸ ಸಿಕ್ತು ಕಣೆ . ಮುಂದಿನ್ ವಾರ ಸೇರ್ಕೊಳ್ತಿದ್ದೀನಿ

(MORE)

SWA SCREENWRITERS ASSOCIATION

APOORVA

ಈಗ ಮೂರೂ ತಿಂಗಳು ಟ್ರೇನಿಂಗ್ ಪಿರಿಯಡ್ ಅಂತೇ
ಹತ್ತು ಸಾವಿರ ಕೊಡ್ತೀನಿ ಅಂದಿದ್ದಾರೆ , ಆಮೇಲೆ ೨೫
ಮೇಲೆ ಕೊಡಬೋದು

AMMA

( ಕರೆಯಲ್ಲಿ ) ಒಳ್ಳೇದಾಗ್ಲಿ ಮಗನೆ , ನಿಧಾನ , ನಿಧಾನ
( ಅಮ್ಮ ನೋವಾದವರಂತೆ ರಾಗ ಎಳೆಯುತ್ತಾರೆ )

APOORVA

ಏನಾಯ್ತೆ , ‼

AMMA

ಯಾಕೋ ಕಾಲು ವಿಪರೀತ ನೋಯ್ತಿತ್ ಅಪ್ಪು ,
ದೇವಯ್ಯ ಸ್ಪ್ರೇ ಮಾಡ್ತಿದ್ದಾನೆ
( ಯಾರೊಂದಿಗೋ ಮಾತನಾಡುತ್ತಿದ್ದಾರೆ ) ರತ್ನ ಮಗಂಗೆ
ಬೆಂಗಳೂರಲ್ಲಿ ಕೆಲಸ ಅಯ್ತಂತೆ
( ದೂರದಲ್ಲಿ ರತ್ನಳ ಮಾತುಗಳು ಕೇಳುತ್ತವೆ , ಅಮ್ಮ
ಅದಕ್ಕೆ ಉತ್ತರಿಸುತ್ತಾಳೆ ) ಪಾಯ್ಸ ಏನು ಮಟನ್ ಊಟ
ಹಾಕಿಸ್ತೀನಿ ಬಿಡು ( ನಗುವಳು )
ಹಬ್ಬಕ್ಕಾದ್ರು ಬರ್ತೀಯೋ ಇಲ್ವೋ !

ಅದೇ ಸಮಯದಲ್ಲಿ ಅಪೂರ್ವನಿಗೆ ಸ್ವಪ್ನ ವಾಟ್ಸಾಪ್ ಅಲ್ಲಿ ಎರಡು ಶರ್ಟ್ ತಂದಿರುವ ಫೋಟೋಸ್ ಕಳಿಸುತ್ತಾಳೆ , ಆ ಟೆಕ್ಸ್ಟ್ ಮೇಲೆ ರೀಚ್ಡ್ ಎಂಬ ಟೆಕ್ಸ್ಟ್ ಇರುತ್ತದೆ , ಹಾಗು , ಶರ್ಟ್ ಕೈಲಿ ಹಿಡಿದು ಕಣ್ಣು ಮಿಟುಕಿಸುತ್ತಿರುವ ಗಿಫ್ ಕಳಿಸಿರ್ತಾಳೆ. ಅಪೂರ್ವ ಲವ್ ಯು ಎಂದು ಮೆಸೇಜ್ ಕಳಿಸುತ್ತಾನೆ. ಅಷ್ಟರಲ್ಲಿ ಬೇರೆಯವರೊಂದಿಗೆ ಮಾತಾಡುತ್ತಿರುವ ಅಮ್ಮ ಇವನ ಬಳಿ ಮಾತನಾಡಲು ಆರಂಭಿಸುತ್ತಾಳೆ.

AMMA (CONT'D)

ಹಬ್ಬಕ್ಕಾದ್ರು ಊರಿಗೆ ಬರ್ತೀಯೋ ಇಲ್ವೋ !

APOORVA

ಟ್ರೈನಿಂಗ್ ಪಿರಿಯಡ್ ಅಲ್ಲಿ ರಜ ಸಿಗೋದ್ ಕಷ್ಟ ಅಮ್ಮ ,
ನೋಡಣ . ನಿಂದ್ ಊಟ ಆಯ್ತಾ ⁉

AMMA

ಮಾಡ್ಬೇಕೀಗ ,
( ಬೇರೆ ಕಡೆ ಏನನ್ನೋ ಮಾತನಾಡುತ್ತಿದ್ದಾಳೆ ) ಸರಿ ನಾಳೆ
ಫೋನ್ ಮಾಡ್ತೀನಪ್ಪ , ಸರಿನ ಬೇಗ್ ಮಲ್ಕೋ

SWA SCREENWRITERS ASSOCIATION

APOORVA

ಆಯ್ತ್ ಕಣೆ , ಬೈ , ಹುಷಾರು

ಊಟ ಮಾಡುವುದು ಮುಂದುವರೆಸುತ್ತಾನೆ.

MATCH CUT TO:

INT.RANGAMANDIRA STAGE , DREAMY

ಅಪೂರ್ವ ಬೈಕ್ ಮೇಲೆ ಕುಳಿತು ಊಟ ಮಾಡುತ್ತಿದ್ದಾನೆ , ಗಾಡಿಯ ಹ್ಯಾಂಡಲ್ ಅಲ್ಲಿ ಪುಸ್ತಕದ ಬ್ಯಾಗ್ ಇದೆ , ಹಗಲು ವೇಷದವರು ಅವನೆದುರು ಮೂವ್ ಆಗುತ್ತಾರೆ , ಅವರ ಹಿಂದೆ ಮುದುಕ ನಿಂತು ಅಪೂರ್ವನನ್ನೇ ನೋಡುತ್ತಿದ್ದಾನೆ , ಬೆಳಕು ಬದಲಾಗುತ್ತದೆ , ಮಿಂಚು ಹೊಡೆಯುತ್ತದೆ , ಮಳೆ ಬರಲು ಆರಂಭವಾಗುತ್ತದೆ. ಯಾವುದೊ ವ್ಯಕ್ತಿ ಮಾತನಾಡುತ್ತಿರುವುದು ದೂರದಲ್ಲಿ ಕೇಳುತ್ತದೆ. (ಆಡಿಯೋ ಪುಸ್ತಕದ ನರೇಷನ್)

MATCH CUT TO:

INT. APOORVA HOUSE , NIGHT

ಅಪೂರ್ವನ ಮೊಬೈಲ್ ಅಲ್ಲಿ ಯಾವುದೊ ಆಡಿಯೋ ಪುಸ್ತಕ ಪ್ಲೆ ಆಗುತ್ತಿದೆ , ಹೊರಗಡೆ ಜೋರಾಗಿ ಮಳೆ ಬರುತ್ತಿದೆ , ಕಿಟಕಿಯಿಂದ ಮಳೆಯ ನೀರು ಮನೆ ಒಳಕ್ಕೆ ನುಗ್ಗಿದೆ. ಅಪೂರ್ವ ಲೈಟ್ ಹಾಕಿದವನೇ , ಮಳೆ ನೀರು ಒಳಕ್ಕೆ ನುಗ್ಗದಂತೆ ಮಾಡಲು ಕಿಟಕಿ ಮುಚ್ಚಲು ಮುಂದಾಗುತ್ತಾನೆ , ಕಿಟಕಿ ಹೊರಗಡೆ , ಯಾರೋ ನಿಂತು ಅಪೂರ್ವನನ್ನು ವಿಚಿತ್ರವಾಗಿ ನೋಡುತ್ತಿದ್ದಾರೆ , ಮೊದಲಿಗೆ ಅಸ್ಪಷ್ಟವಾದ ರೀತಿಯಲ್ಲಿ ಕಾಣುತ್ತದೆ , ಅಪೂರ್ವ ಮಹಡಿಯ ಲೈಟ್ ಆನ್ ಮಾಡುತ್ತಾನೆ , ಕಿಟಕಿ ಗಾಳಿಗೆ ಅರ್ಧ ಮುಚ್ಚಿಕೊಳ್ಳುತ್ತದೆ , ಹೊರಕ್ಕೆ , ಅಪೂರ್ವನದ್ದೇ ಮುಖವನ್ನು ಹೋಲುವ ವ್ಯಕ್ತಿಯೊಬ್ಬ ನಿಂತಿರುವುದು ಕಾಣುತ್ತದೆ , ಅಪೂರ್ವ ತನ್ನನ್ನೇ ಕಿಟಕಿಯ ಹೊರಕ್ಕೆ ನೋಡುತ್ತಿರುತ್ತಾನೆ , ಆಡಿಯೋ ಪುಸ್ತಕದಲ್ಲಿ ಏನೋ ಭಯಾನಕ ಘಟನೆಯೊಂದು ವಿವರಣೆಯಲ್ಲಿರುತ್ತದೆ , ಶಬ್ದ ತಾರಕ್ಕಕ್ಕೇರುತ್ತದೆ , ದೃಶ್ಯ ಇಂಟೆನ್ಸ್ ಆಗುತ್ತದೆ ಅಪೂರ್ವ ಬಾಗಿಲು ತೆರೆದು ಹೊರ ನೋಡುತ್ತಾನೆ , ಹೊರಕ್ಕೆ ಯಾರೂ ಇರುವುದಿಲ್ಲ.

ಮೊಬೈಲ್ ಅಲ್ಲಿ ಬರುತಿದ್ದ ಆಡಿಯೋವನ್ನು ಮ್ಯೂಟ್ ಮಾಡುತ್ತಾನೆ . ಮಳೆ ಸದ್ದು ಬಿಟ್ಟರೆ ಎಲ್ಲೆಡೆ ನಿಶಬ್ದ ಆವರಿಸಿಕೊಳ್ಳುತ್ತದೆ , ಗೋಡೆಗೆ ಒರಗಿ ಕುಳಿತುಕೊಳ್ಳುತ್ತಾನೆ , ಕಿಟಕಿಯನ್ನೇ ನೋಡುತ್ತಾನೆ. ಭಯವಾಗುತ್ತದೆ.

( ವಯ್ಡ್ ಶಾಟ್ ಅಲ್ಲಿ ಮನೆಯನ್ನು ಹೊರಗಿನಿಂದ ತೋರಿಸಲಾಗುತ್ತದೆ )

ತುಸುಹೊತ್ತು ಹೊರಕ್ಕೆ ನೋಡಿದವ , ಕಿಟಕಿ ಹಾಗು ಬಾಗಿಲನ್ನು ಮುಚ್ಚುತ್ತಾನೆ , ಲೈಟ್ ಆಫ್ ಮಾಡುತ್ತಾನೆ.

CUT TO:

EXT. APOORVA HOUSE , DAY

**September 4 . 2022**

ಬೆಳಕು ಮೂಡಿದೆ , ಅಪೂರ್ವ ಬಾಗಿಲು ತೆರೆಯುತ್ತಾನೆ , ರಾತ್ರಿ ಬಿದ್ದ ಮಳೆಗೆ ನೆಲವೆಲ್ಲ ಒದ್ದೆಯಾಗಿದೆ ಮನೆಯ ಹೊರಕ್ಕೆ ಬಂದವನೇ ಫ್ರೆಶ್ ಅಪ್ ಆಗುತ್ತಾನೆ , ಮಳೆಗೆ ಒಣಗಿ ಹಾಕಿದ್ದ ಆತನ ಅಂಡರ್ವೇರ್ ಒಣಗಿರುವುದಿಲ್ಲ , ಅಡಿಗೆ ಮನೆಗೆ ಹೋಗಿ , ಅನ್ನಕ್ಕೆ ಇಟ್ಟಿದ್ದ ಪಾತ್ರೆಯ ಮೇಲೆ ಅಂಡರ್ವೇರ್ ಅನ್ನು ಒಣ ಹಾಕುತ್ತಾನೆ. ಸಿಂಕ್ ಅಲ್ಲಿ ತೊಳಿಯದೆ ಇಟ್ಟಿರುವ ಹಿಂದಿನ ದಿನದ ತಟ್ಟೆ ಹಾಗೇ ಇರುತ್ತದೆ , ಮತ್ತೆ ಮಹಡಿಯ ಮೇಲೆ ಕುಳಿತು ಹಲ್ಲು ಉಜ್ಜುತ್ತಿರುತ್ತಾನೆ . ಕೆಳಗಡೆ ರಸ್ತೆಯಲ್ಲಿ ಆ ವಿಚಿತ್ರ ಮುದುಕ ನಿಂತು ಇವನನ್ನೇ ನೋಡುತ್ತಿರುತ್ತಾನೆ , ಅಪೂರ್ವ ಶಾಕ್ ಆಗುತ್ತಾನೆ , ಮೆಟ್ಟಿಲು ಇಳಿದು ಓಡಿ ರಸ್ತೆಯ ಆಸು ಪಾಸು ನೋಡುತ್ತಾನೆ. ಮುದುಕ ಎಲ್ಲೂ ಕಾಣುವುದಿಲ್ಲ.

APOORVA

(ಸ್ವಗತ) , ಯಾರ್ ಗುರು ಇವ್ನು . ತ್ತು

ಅಪೂರ್ವ ಗೊಣಗುತ್ತ ಮೆಟ್ಟಿಲೇರುತ್ತಿರುತ್ತಾನೆ , ರೂಮಿನಿಂದ ಹೊಗೆ ಬರುತ್ತಿರುವುದು ಕಾಣುತ್ತದೆ , ರೂಮ್ ಕಡೆಗೆ ಓಡುತ್ತಾನೆ , ತಾನು ಅಂಡರ್ವೇರ್ ಇಟ್ಟಿದ್ದು ನೆನಪಾಗುತ್ತದೆ ,

APOORVA
(CONT'D)

ಓ ಶಿಟ್ !

ರೂಮ್ ಒಳಗೆ ಓಡಿ ಹೋಗುತ್ತಾನೆ. ರೂಮ್ ಒಳಗೆ ಹೊಗೆ ಆವರಿಸಿಕೊಂಡಿದೆ , ಅಡುಗೆ ಮನೆಗೆ ಹಾಕಿದ್ದ ಕರ್ಟನ್ ಗೆ ಬೆಂಕಿ ತಗುಲಿದೆ , ಅಂಡರ್ವೇರ್ ಸುಟ್ಟು ಕರಕಲಾಗಿದೆ , ಗಾಬರಿಯಲ್ಲಿ , ಗ್ಯಾಸ್ ಆರಿಸುತ್ತಾನೆ , ಕರ್ಟನ್ ಹರಿದು ಸಿಂಕ್ ಅಲ್ಲಿ ನೀರು ಬಿಟ್ಟು ಅಲ್ಲಿಗೆ ಹಾಕುತ್ತಾನೆ , ಟೆನ್ಷನ್ ಅಲ್ಲಿ ಗೋಡೆಗೆ ಜೋರಾಗಿ ಗುದ್ದುತ್ತಾನೆ. ಅಡುಗೆಮನೆಯೆಲ್ಲ ಕರಕಲಾಗಿಹೋಗಿರುತ್ತದೆ. ವಿಪರೀತ ಹೊಗೆ ಆವರಿಸಿಕೊಂಡಿದೆ.

CUT TO:

SWA SCREENWRITERS ASSOCIATION

EXT. BOOK STORE , DAY

ಅಪೂರ್ವ ಹಾಗೂ ಕಿಟ್ಟಿ ಮಾತನಾಡಿಕೊಂಡು ಹೋಗುತ್ತಿದ್ದಾರೆ , ಪುಸ್ತಕದ ಅಂಗಡಿ ನಾಲ್ಕೈದು ಹೆಜ್ಜೆಗಳಲ್ಲಿ ಸಿಗಲಿದೆ . ಕಿಟ್ಟಿ ಯಾರಿಗೋ ಕಾಲ್ ಮಾಡುತ್ತಾ ಮಾತನಾಡುತ್ತಿದ್ದಾನೆ , ಅಪೂರ್ವ ಹೆಡ್ ಫೋನ್ ತೆಗೆದು ಜೇಬಿನಲ್ಲಿ ಇಟ್ಟುಕೊಳ್ಳುತ್ತಿದ್ದಾನೆ.

KITTI

( ನಗುತ್ತ ) ನಿಂಗ್ಯಾವ್ ಬೋಳಿಮಗ ಕಾಚಾನ ಗ್ಯಾಸ್ ಸ್ಟೋವ್ ಮೇಲೆ ಒಣಗಿಸಕ್ ಹೇಳಿದ್ದಪ್ಪ.

APOORVA

ಮಳೆಗೆ ಒದ್ದೆಯಾಗಿತ್ತು ಗುರು , ಬಿಸಿ ಪಾತ್ರೆಮೇಲೆ ಇಟ್ರೆ ಬೇಗ ಒಣಗತ್ತೆ ಅನ್ಕೊಂಡೆ

KITTI

ನಿನ್ ಸುಟ್ಟೋಗಿದ್ ಕಾಚ ವಾಟ್ಸಾಪ್ ಅಲ್ಲಿ ಹೆವಿ ಸೌಂಡ್ ಮಾಡ್ತಿದೆ ನೋಡು. ಟ್ವಿಟರ್ ಟ್ರೆಂಡ್ ಮಾಡ್ಬಿಡ್ಲಾ , ಹ್ಯಾಷ್ ಟ್ಯಾಗ್ ಕಪ್ಪಾದ ಕಾಚ ( ನಗುವನು )

ಮೊಬೈಲ್ ತೋರಿಸಲು ಮುಂದಾಗುವನು ಕಿಟ್ಟಿಗೆ ಕಾಲ್ ಕನೆಕ್ಟ್ ಆಗುತ್ತದೆ. ಮಾತನಾಡುತ್ತ ಪಕ್ಕಕ್ಕೆ ಹೋಗುವನು , ಅಷ್ಟರಲ್ಲಿ ಅಪೂರ್ವ ಪುಸ್ತಕದ ಅಂಗಡಿಗೆ ತೆರಳಿರುತ್ತಾನೆ.

KITTI (CONT'D)

ಕಾಚ ಸುಟ್ಕೊಂಡ್ರೈತೆ ಕೂಸು
( ನಗುತ್ತ ಮಾತನಾಡುತ್ತ ಪಕ್ಕ ತೆರಳುವನು )

ಅಪೂರ್ವ ಪುಸ್ತಕ ಪಡೆಯುತ್ತಾನೆ , ಮಿಕ್ಕ ಹಣವನ್ನು ನೀಡುತ್ತಾನೆ , ಫಕೀರರೊಬ್ಬರು ದೂರದಿಂದ ಹೊಗೆ ಆಡಿಸುತ್ತಾ ಬಂದವರೇ ಅಪೂರ್ವನ ಮುಂದೆ ಸಾಗುತ್ತಾರೆ , ಅಷ್ಟರಲ್ಲಿ ಅಪೂರ್ವ ಪುಸ್ತಕವನ್ನು ಪಡೆದಿರುತ್ತಾನೆ , ಆ ಹೊಗೆ ಮರೆಯಾಗುತ್ತಿದ್ದಂತೆ , ದೂರದಲ್ಲಿ ಅದೇ ಮುದುಕ ನಿಂತು ಅಪೂರ್ವನನ್ನೇ ನೋಡುತ್ತಿರುವುದು ಕಾಣುತ್ತದೆ. ಅಪೂರ್ವ ಈ ಬಾರಿ ಆ ಮುದುಕನನ್ನು ನೋಡಿದ್ದೇ , ಅವನ ಸಮೀಪಕ್ಕೆ ತೆರಳುತ್ತಾನೆ, ಆ ಮುದುಕ ಮುಂದುವರೆಯುತ್ತಾನೆ

CUT TO:

MONTAGES

ಮುದುಕನನ್ನು ಅವೆನ್ಯೂ ರಸ್ತೆಯ ವಿವಿಧ ಜಾಗಗಳಲ್ಲಿ ಅಪೂರ್ವ ಫಾಲೋ ಮಾಡುವುದು.

೧. ಜನಗಳ ಮಧ್ಯೆ ಅಪೂರ್ವ ಮುದುಕನನ್ನು ಫಾಲೋ ಮಾಡುವುದು.
೨. ಮುದುಕ ಕಿರು ರಸ್ತೆಗಳಲ್ಲಿ ತೆರಳುವುದು
೩. ಅವೆನ್ಯೂ ರೋಡ್ ಅಲ್ಲಿ ನಡೆಯುತ್ತಿರುವ ವಹಿವಾಟು , ಜನರ ಗದ್ದಲ , ಅಲ್ಲಿ ಸಿಗುವ ಟಾಯ್ಸ್ ಇವುಗಳೇ ಅಂಬಿಯನ್ ಸಂಗೀತಕ್ಕೆ ಪ್ರದಾನ ವಸ್ತುಗಳಾಗಿರುತ್ತವೆ.

CUT TO:

EXT. UNDERPASS , DAY

ಮುದುಕನನ್ನೇ ಫಾಲೋ ಮಾಡುತ್ತಾ ಕೆ.ಆರ್ ಮಾರ್ಕೆಟ್ ಬಳಿಗೆ ಬರುತ್ತಾನೆ. ಮುದುಕ ಅಂಡರ್ ಪಾಸ್ ಒಳಕ್ಕೆ ನಡೆಯುತ್ತಾರೆ. ಅಪೂರ್ವ ಕೂಡ ಅಂಡರ್ಪಾಸ್ ಒಳಕ್ಕೆ ನುಗ್ಗುತ್ತಾನೆ. ಮುದುಕ ಅಂಡರ್ ಪಾಸ್ ಅಲ್ಲಿ ತುಸು ದೂರ ನಡೆದವರೇ ಅಲ್ಲೇ ಸ್ತಬ್ಧರಾಗಿ ನಿಲ್ಲುತ್ತಾರೆ , ಅಪೂರ್ವ ಕೂಡ ಅವರ ಬಳಿ ತುಸು ದೂರದಲ್ಲೇ ನಿಲ್ಲುತ್ತಾನೆ.

MUDUKA

ನನ್ನ ಫಾಲೋ ಮಾಡಿ ಏನು ಉಪಯೋಗ ಇಲ್ಲ ಅಪೂರ್ವ.
ನಾನ್ ಈಗ್ಲೇ ನಿನ್ ಕೈಗ್ ಸಿಗೋದಿಲ್ಲ

APOORVA

ನಾನಲ್ಲ , ನೀವ್ ನನ್ನ ಫಾಲೋ ಮಾಡ್ತಿರೋದು ,
ಯಾರ್ ನೀವು ?

MUDUKA

ಟೈಮ್ ಬಂದಾಗ ಎಲ್ಲ ಗೊತ್ತಾಗತ್ತೆ , ಈಗ
ತಲೆಕೆಡಿಸ್ಕೊಂಡು ಏನೂ ಪ್ರಯೋಜನ ಇಲ್ಲ.

APOORVA

ನನ್ ಹೆಸರು , ಅಮ್ಮನ ಹೆಸರೆಲ್ಲ ಹೇಗ್ ಗೊತ್ತು ನಿಮಗೆ ?

MUDUKA

ನಾನೇ ನಿನ್ನ ಮೀಟ್ ಮಾಡ್ತೀನಿ , ಎಲ್ಲಾ ಹೇಳ್ತಿನಿ ,
ಅಲ್ಲಿವರ್ಗು ನನ್ನ ಹಿಂಬಾಲಿಸೋ ವ್ಯರ್ಥ ಪ್ರಯತ್ನ
ಮಾಡ್ಬೇಡ , ನಾನ್ ನಿನಗೆ ಸಿಗೋಲ್ಲ.

APOORVA

ನಂಗೇನು ಅರ್ಥ ಆಗ್ತಿಲ್ಲ ಸರ್ , ನೀವ್ ನನ್ನ ಹಿಂದೆ
ಯಾಕ್ ಬಿದ್ದಿದ್ದಿರಾ. !? , ಏನ್ ಬೇಕು ನಿಮಗೆ !?

MUDUKA

( ಉಸಿರಿನ ಸಮಸ್ಯೆಯಾಗುತ್ತದೆ ಟ್ಯೂಬ್ ಮೂಲಕ
ಉಸಿರೆಳೆದುಕೊಳ್ಳುತ್ತಾರೆ ) ನಂಗ್ ಸ್ವಲ್ಪ ಟೈಮ್ ಬೇಕು ,
ಹೇಳಿದಷ್ಟ್ ಕೇಳು ಅಪೂರ್ವ , ಈಗ್ ಹೊರಟ್ ಬಿಡು
ಇಲ್ಲಿಂದ.

ಮುದುಕ ಅಪೂರ್ವನಿಂದ ತಪ್ಪಿಸೋಕೊಂಡು ಹೊರಟುಹೋಗುತ್ತಾರೆ , ಇವನು ಒಂದು ಕ್ಷಣ ಬ್ಲಾಂಕ್ ಆಗಿ ನಿಲ್ಲುತ್ತಾನೆ , ತಕ್ಷಣ ಮುದುಕ ಹೊರಟ ದಾರಿಯಲ್ಲೇ ಓಡುತ್ತಾನೆ , ಅಂಡರ್ ಪಾಸ್ ಹೊರಕ್ಕೆ ಬರುತ್ತಾನೆ , ಮುದುಕ ಎಲ್ಲೂ ಕಾಣುವುದಿಲ್ಲ

CUT TO:

EXT. KR MARKET , OPPOSITE TO DARGA , DAY

ಒಬ್ಬ ಕನ್ನಡಿ ಮಾರಾಟಗಾರ ಅಪೂರ್ವನ ಎದುರು ಇರುತ್ತಾನೆ , ಅಲ್ಲಿರುವ ಕನ್ನಡಿಗಳಲ್ಲಿ ಅವನ ಪ್ರತಿರೂಪ ಕಾಣುತ್ತದೆ , ಅದೇ ಸಮಯಕ್ಕೆ ಕರೆ ಬರುತ್ತದೆ. ಕಿಟ್ಟಿ ಕರೆ ಮಾಡುತ್ತಾನೆ. ಅಪೂರ್ವ ಕರೆ ಸ್ವೀಕರಿಸುವುದು ಕನ್ನಡಿಯಲ್ಲಿ ಕಾಣುತ್ತದೆ.

SWA SCREENWRITERS ASSOCIATION

KITTI

( ಕರೆಯಲ್ಲಿ ) ಎಲ್ಲಿದ್ಯೋ ?

CUT TO:

EXT. SLUM , KITTI HOUSE , DAY

ಅಪೂರ್ವ ಕಿಟ್ಟಿಯೊಂದಿಗೆ ಮಾತನಾಡುತ್ತ ಮೂವ್ ಆಗುತ್ತಿದ್ದಾನೆ , ಸ್ಲಮ್ ಒಂದರಲ್ಲಿ ಕಿಟ್ಟಿಯ ಮನೆ ಸಮೀಪಕ್ಕೆ ಇಬ್ಬರೂ ನಡೆದು ಹೋಗುತ್ತಿದ್ದಾರೆ. ಅಷ್ಟರಲ್ಲಿ , ವೀರಗಾಸೆ , ಪಟ್ಟ ಕುಣಿತ , ಹಾಗೂ ಕಂಸಾಳೆ ಕಲೆಯ ಬಟ್ಟೆಗಳನ್ನು ಧರಿಸಿಕೊಂಡು ಸಾಗುತ್ತಿದ್ದ ಕೆಲವರು ಇವರಿಗೆ ದಾರಿಯಲ್ಲಿ ಸಿಗುತ್ತಾರೆ.

APOORVA

ನಾನ್ ಅವತ್ತು ಹೇಳ್ದಾಗ ನೀವು ನಂಬಲೇ ಇಲ್ಲ ,
ಮೈಂಡ್ ಫಕ್ಡ್ ಅಪ್ ಆಗ್ತಿದೆ ಕಿಟ್ಟಿ

ಅಷ್ಟರಲ್ಲಿ ವೀರಭದ್ರ ವೇಷ ಧರಿಸಿರುವ, ಕಿಟ್ಟಿಯ ತಂದೆ ಕೂಡ ಮೂವ್ ಆಗುತ್ತಾರೆ. ಕಿಟ್ಟಿ ಅವರನ್ನು ಮಾತನಾಡಿಸಲು ಮುಂದಾಗುತ್ತಾನೆ.

KITTI

ಅಯ್ಯ , ಏನ್ ಈಗ್ ಓಯ್ತಿದ್ದೀರಿ

KITTI FATHER

ಎಮ್.ಎಲ್.ಎ ಬರೋದು ತಡ ಆಯ್ತದೆ ಅಂದೋವ್ರೆ ,
ಇಕ್ಕೋ ಬೀಗ , ಎಲ್ಲಾದ್ರೂ ವೊಗಂಗಿದ್ರೆ , ಸತೀಶನಿಗೆ
ಕೋಟ್ಟು ವೋಗಿರು.

KITTI

ಅಂಗಂದ್ರೆ ರಾತ್ರಿ ಇರಕಿಲ್ಲ ಇವತ್ತು. ( ನಗುವನು ) ಒಳ್ಳೆ
ಕಲೆಕ್ಷನ್ನು ವೋಗ್ ವೊಗು. ಅವ್ವೆಲೌವ್ಳೆ ?

KITTI FATHER

ದೇವಸ್ಥಾನದ ಅತ್ರ ಕಲಶ ಇಟ್ಕೊಂಡ್ ನಿಂತವಳೇ ,
ಎಂಗಸರೆಲ್ಲ ಆಗ್ಲೇ ವೊಂಟಾದ್ರೂ

KITTI

ಅಯ್ತಾಯ್ತು , ನಂಗೂ ಏನಾದ್ರೂ ಗಿಟ್ಟಿಸ್ಕೊಂಡ್ ಬಾ

SWA SCREENWRITERS ASSOCIATION

KITTI FATHER

ನೋಡುಮ

CUT TO:

INT. KITTI HOUSE , DAY

MONTAGES

೧. ಅಪೂರ್ವ ಮತ್ತು ಕಿಟ್ಟಿ ಮನೆಯ ಒಳಗೆ ಹೋಗುವುದು
೨. ಕಿಟ್ಟಿ ದೇವಸ್ಥಾನದ ಬ್ಯಾಗ್ ಗಳ ಮೇಲೆ ಸ್ಟಿಕರ್ ಅಂಟಿಸುತ್ತಿರುವುದು
೩. ಆ ಬ್ಯಾಗ್ ಗಳನ್ನು  ನಂಬರ್ ವೈಸ್ ಜೋಡಿಸುತ್ತ ಪಕ್ಕಕ್ಕೆ ಇಡುತ್ತ ಕಿಟ್ಟಿ ಮಾತನಾಡುತ್ತಿರವುದು.
೪. ಅಪೂರ್ವ ಮಡಿಕೆಯಲ್ಲಿದ್ದ ನೀರು ಕುಡಿಯುತ್ತ ಮಾತನಾಡುತ್ತಾನೆ.

KITTI

ಈಗೇನಪ್ಪಾ ನಿನ್ ಪ್ರಾಬ್ಲಮ್ಮು

APOORVA

ಸಕತ್ ತಲೆ ಕೆಡ್ಸಿದೆ ಗುರು , ನಿನ್ನೆ ಮಧ್ಯರಾತ್ರಿ ಮಳೆ ಬರ್ತಿದೆ ಅಂತ ಕಿಟಕಿ ಮುಚ್ಚಕ್ಕೋದ್ನ , ಅಲ್ಲಿ ಸೇಮ್ ನನ್ ಥರನೇ ಇರೋ ವ್ಯಕ್ತಿ ನಿಂತಿದ್ದು ನೋಡಿದೆ. ಮತ್ತೆ ಸ್ವಲ್ಪ ಹೊತ್ತಲ್ಲಿ ಮಾಯಾ. ಓಕೆ ಅದನ್ನೇನೋ ಭ್ರಮೆ ಆನ್ ಬೋದು , ನನ್ನ ಕಲ್ಪನೆ ಅಂತ ಹೇಳಬೋದು ಆದ್ರೆ ಆ ಮುದ್ಕ ಅಂತೂ ಭ್ರಮೆ ಅಲ್ಲ ಗುರು , ನಾನೇ ಮಾತಾಡಿದ್ದೀನಿ ಅವನ ಹತ್ರ ಇವತ್ತು , ಏನೋ ಮಿಸ್ ಹೊಡಿತಾಯಿದೆ ಕಿಟ್ಟಿ ಮನಸೇ ಸರಿಗಿಲ್ಲ ಮಗ.

KITTI

ನಿಂನ್ಯವೊನ್ ಫಾಲೋ ಮಾಡ್ತಾನೋ , ಯಾರ್ ತಂಟೆಗೂ ಹೋಗೋವನಲ್ಲ ನೀನು , ನಮಗಂದ್ರೆ ಒಂದಿಷ್ಟು ದುಶ್ಮನಿಗಳಿರ್ತವೆ ನಮನ್ನೇನೋ ಫಾಲೋ ಮಾಡ್ತಾರೆ ಸ್ಕೆಚ್ ಹಾಕ್ತಾರೆ ಅಂದ್ರೆ ನಂಬೋದು ನಿನ್ನನ್ ಫಾಲೋ ಮಾಡೋದ್ರಿಂದ ಅವ್ರಿಗೇನೋ ಸಿಗತ್ತೆ . ಅದೂ ಯಾರೋ ತಾತಾ ಅಂತ್ಯ , ಮುಂಚೆ ಎಲ್ಲೂ ನೋಡಿಲ್ಲ ಅಂತ್ಯ

APOORVA

ಪೊಲೀಸ್ ಕಂಪ್ಲೇಂಟ್ ಕೊಟ್ ಬಿಡ್ಲಾ !?

SWA SCREENWRITERS ASSOCIATION

KITTI

ತಿಕ್ ಬಡ್ಕೊಂಡ್ ನಗ್ತಾರೆ , ಯಾರೂ ತಾತಾ ಫಾಲೋ ಮಾಡ್ತವ್ನೆ ಅಂದ್ರೆ ಇದು ಹಿಂಗೆಲ್ಲ ಸರಿಹೋಗೋ ಮ್ಯಾಟ್ರಲ್ಲ ರಾತ್ರಿ ಹಂಗೂ ನಮ್ ಮನೇಲಿ ಯಾರೂ ಇರಲ್ಲ ನಾಲಕ್ ಜನ ಎಕ್ಸ್ ಪಟ್ಸ್ ನ ಸೇರಿಸಿ ಸಿಟ್ಟಿಂಗ್ ಹಾಕ್ಬಿಡನ . ಕುಂತ್ರೆ ಎಲ್ಲಾ ಕ್ಲಿಯರ್ ಆಗ್ಬಿಡುತ್ತೆ.

ಅಷ್ಟರಲ್ಲಿ ಅಪೂರ್ವನಿಗೆ ಸ್ವಪ್ನ ಕರೆಮಾಡುತ್ತಾಳೆ , ಕರೆ ಸ್ವೀಕರಿಸುವ ಅಪೂರ್ವ ಎದ್ದು ತುಸು ದೂರ ನಡೆಡಯುತ್ತಾನೆ.

APOORVA

ಹೇಳ್ ಸಪ್ಪೆ

CUT TO:

INT. SWAPNA OFFICE , DAY

ಸ್ವಪ್ನ ತನ್ನ ಕ್ಯಾಬಿನ್ ಅಲ್ಲಿ ಕುಳಿತ್ತಿದ್ದಾಳೆ , ಪಿಸು ಧ್ವನಿಯಲ್ಲಿ ಮಾತನಾಡುತ್ತಾಳೆ.

SWAPNA

( ಪಿಸುದನಿಯಲ್ಲಿ ) ಅಪ್ಪು ನಾಲಕ್ ಗಂಟೆ ಅಷ್ಟರಲ್ಲೇ ಸಿಗೋ , ಆಫೀಸಲ್ಲಿ ಅಷ್ಟೊಂದ್ ವರ್ಕ್ ಇಲ್ಲ ಬೇಗ್ ಸಿಗಬೋದು ಇವತ್ತು . ಆಮೇಲೆ ನಿಂಗೇನೋ ತೋರಿಸ್ಬೇಕು ನಾನು , ತುಂಬಾ ಸ್ಪೆಷಲ್ ಥಿಂಗ್ , ನಂಗೆ ಅಮ್ಮ ಇಷ್ಟ್ ದಿನ ಆ ವಿಷ್ಯ ಹೇಳೆಯಿರಲಿಲ್ಲ ಗೊತ್ತ !!

APOORVA

( ವಾಯ್ಸ್ ಓವರ್ ) ಏನೇ ಅದು !

SWAPNA

ಎ ಸಿಕ್ಕಾಗ ತೋರಿಸ್ತೀನೋ , ಸರ್ಪ್ರೈಸ್

CUT TO:

INT. SLUM , KITTI HOUSE , DAY

APOORVA

ಸರಿ ಕಣೆ , ತಿನ್ನಕ್ ಏನಾದ್ರೂ ತರ್ಬೇಕಾ !

SWAPNA

( ವಾಯ್ಸ್  ಓವರ್ ) ( ಪಿಸುದನಿಯಲ್ಲಿ ) ಬೇಡ ಬೇಡ ,
ನಾವೇ ಎಲ್ಲಾದ್ರೂ ಹೋಗಣ ಟೈಮ್ ಸಿಗತ್ತೆ ಹೇಗೂ , ಬೈ
ಬೈ

ಅಪೂರ್ವ ಕಾಲ್ ಕಟ್ ಮಾಡುತ್ತಾನೆ

KITTI

ಆ ತಾತಾನ್ ವಿಷ್ಯ ಸ್ವಪ್ನಾ ಗೆ ಹೇಳಿಲ್ಲ ತಾನೇ !

ಅಪೂರ್ವ ಇಲ್ಲ ಎಂದು ತಲೆಯಾಡಿಸುತ್ತಾನೆ

KITTI (CONT'D)

ಹೇಳಕ್ ಹೋಗ್ಬೇಡ ಮಗ, ಸುಮ್ನೆ ಟೆನ್ಸನ್ ಆಗ್ತಾಳೆ.

CUT TO:

EXT. NEAR SWAPNA OFFICE , DAY

ಅಪೂರ್ವ ಸ್ವಪ್ನ ಆಫೀಸ್ ಸಮೀಪದ ರೋಡ್ ಸೈಡ್ ಗಾಡಿಯಲ್ಲಿ ಪಾನಿ ಪೂರಿ ತಿನ್ನುತ್ತಾ ಸ್ವಪ್ನಾಳ ಬರುವಿಕೆಗಾಗಿ ಕಾಯುತ್ತ ನಿಂತಿರುತ್ತಾನೆ. ಅಷ್ಟರಲ್ಲಿ ಭವಿಷ್ಯ ಹೇಳುವ ವಿಚಿತ್ರ ಹೆಂಗಸರ ಪ್ರವೇಶವಾಗುತ್ತದೆ. ಭವಿಷ್ಯ ಹೇಳುವ ಹೆಂಗಸೊಬ್ಬಳು ತನ್ನ ಸೊಂಟಕ್ಕೆ ಕಟ್ಟಿರುವ ವಾದ್ಯದಲ್ಲಿ ವಿಚಿತ್ರ ಸದ್ದು ಹೊರಡಿಸುತ್ತಾಳೆ , ಅಪೂರ್ವನ ಹತ್ತಿರ ಬಂದು ಹಣ ಕೊಟ್ಟು ಭವಿಷ್ಯ ಕೇಳುವಂತೆ ಕೇಳಿಕೊಳ್ಳುತ್ತಾಳೆ.

BHAVISHYA HELUVA HENGASU

ಭವಿಷ್ಯ ಹೇಳ್ತಿನಿ ಕೇಳು ತಮ್ಮ
( ವಾದ್ಯದಲ್ಲಿ ಸದ್ದು ಮಾಡುತ್ತಾ ) ಅಮ್ಮನವರ ಆಶೀರ್ವಾದ
ಇದ್ರೆ , ಆನಿ ಬಂದ್ರು ನೀ ಅಂಜನಿಗಿಲ್ಲ ಆಕಿ
ಮುನಿಸ್ಕೊಂಡ್ರ ಇರುವಿ ಕಚ್ಚಿದ್ರು ಉಸಿರು ನಿಲ್ಲದ
ಆಕಿ ನುಡಿದಾಂಗ ನಾ ನುಡಿತೀನಿ , ಆಕಿ ಹೇಳೋದ್ನೆ  ನಾ
ಹೇಳ್ತಿನಿ , ದೇವವಾಣಿ ಕೇಳು ತಮ್ಮ , ಅಂಜಿಕಿ ಬ್ಯಾಡ.

ಆ ಹೆಂಗಸು ಅಪೂರ್ವನ ಹತ್ತಿರದಲ್ಲೇ ವಾದ್ಯ ನುಡಿಸುತ್ತ ಅಪೂರ್ವನನ್ನು ಹಿಂಸಿಸುತ್ತಾಳೆ , ಅಪೂರ್ವ ಸಿಟ್ಟಾಗುತ್ತಾನೆ , ಇರಿಟೇಟ್ ಆಗುತ್ತಾನೆ.

APOORVA

ಏನು ಬೇಡ ಹೋಗಮ್ಮ.

ಆಕೆ ವಾದ್ಯವನ್ನು ಇನ್ನೂ  ಜೋರಾಗಿ ನುಡಿಸುತ್ತಾ ಮಾತಿಗಿಳಿಯುತ್ತಾಳೆ.

SWA SCREENWRITERS ASSOCIATION

BHAVISHYA HELUVA HENGASU

ಆಕಿ ಈ ವಿಚಾರ ನಿನಗ ತಿಳಿಸು ಅಂದಾಳಾ , ತಾಯಿ
ಮಾತಾ ಕೇಳದೆ ಮುಂದಡಿ ಇಡಬ್ಯಾಡ ತಮ್ಮ , ಒಳಿತು
ಆಗುವಲ್ದು

ಅಪೂರ್ವನಿಗೆ ತಲೆಕೆಟ್ಟುಹೋಗುತ್ತದೆ ಮತ್ತಿಬ್ಬರು ಹೆಂಗಸರು ಅವನೆದುರು ಬಂದು ವಾದ್ಯದಲ್ಲಿ ಸದ್ದು ಮಾಡಲು ಆರಂಭಿಸುತ್ತಾರೆ. ಅಷ್ಟರಲ್ಲಿ ಅದೇ ರಸ್ತೆಯ ಇನ್ನೊಂದು ಬದಿಯಿಂದ ಅಪೂರ್ವನ ಪ್ರತಿರೂಪಿ ವ್ಯಕ್ತಿ ಹಾಗೂ ಸ್ವಪ್ನ ಗಾಡಿಯಲ್ಲಿ ಹೋಗುತ್ತಿರುವುದನ್ನು ಅಪೂರ್ವ ನೋಡುತ್ತಾನೆ , ಸ್ಪಷ್ಟವಾಗಿ ಕಾಣುತ್ತದೆ , ಅವನ ಕಣ್ಣಿಗೆ ಅದನ್ನು ನಂಬಲು ಸಾಧ್ಯವಾಗುವುದಿಲ್ಲ. ಆದರೂ ಸ್ಪಷ್ಟವಾಗಿ ಅವರು ಸಿಗ್ನಲ್ ಅಲ್ಲಿ ನಿಲ್ಲುತ್ತಾರೆ , ಕೆಲವೇ ಕ್ಷಣಕ್ಕೆ ಆ ರಸ್ತೆಯಿಂದ ಬಲತಿರುವು ತಗೆದುಕೊಳ್ಳುತ್ತಾರೆ , ಆ ಹೆಂಗಸರು ಇರಿಟೇಟ್ ಮಾಡುತ್ತಲೇ ಇರುತ್ತಾರೆ. ಅಪೂರ್ವ ಮೊಬೈಲ್ ತಗೆದುಕೊಂಡು ಸ್ವಪ್ನಾಗೆ ಕರೆ ಮಾಡುತ್ತಾನೆ.

APOORVA

ಹೋಗ್ರಮ್ಮ ಸುಮ್ನೆ , ಮಕ್ಕನ್ನೆಲ್ಲ ಕರ್ಕೊಂಡ್ ಬಂದು ಬ್ಲಾಕ್
ಮೆಲ್ ಮಾಡ್ತಾರೆ..

ಎಂದು ರೇಗುತ್ತಾನೆ , ಸ್ವಪ್ನ ಫೋನ್ ಕನೆಕ್ಟ್  ಆಗುವುದಿಲ್ಲ , ಮತ್ತೂ ನಾಲ್ಕೈದು ಭವಿಷ್ಯ ಹೇಳುವ ಹೆಂಗಸರು ಅವನ ಸುತ್ತುವರೆಯುತ್ತಾರೆ , ಆ ವಾದ್ಯದಿಂದ ಸದ್ದು ಮಾಡಲು ಆರಂಭಿಸುತ್ತಾರೆ , ಇವನು ಲೆಕ್ಕಿಸದಂತೆ ಅಂಗಡಿಯವರಿಗೆ ಹಣ ನೀಡಿ ಅಲ್ಲಿಂದ ಹೊರಡಲು ಮುಂದಾಗುತ್ತಾನೆ. ವಿಚಿತ್ರ ಹೆಂಗಸು ಅವನ ಮೇಲೆ ಏನೋ ಎರಚಿ ಇಟ್ಟಿಗೆ ಕಲ್ಲು ಹೊಡೆದು ಇಬ್ಬಾಗ ಮಾಡುತ್ತಾಳೆ.

BHAVISHYA HELUVA HENGASU

ಆಕಿ ಮುನಿದಾಳ ,ದೇವಾವಾಣಿ ಮೀರಿ ಬದುಕ್ಲಿಕ್
ಆಗುವಲ್ದು , ಸರ್ವನಾಶ ಆಗ್ತಿ ನಿನ್ನ ನೇರಳೆ ನಿನ್ನ ಕೊಲ್ತದ
( ಎಂಜಲು ಉಗಿಯುತ್ತಾಳೆ ) ಸರ್ವನಾಶ ಆಗ್ತಿ

ಅಂಗಡಿಯವನು ಹೊರಡುವಂತೆ ಆಕೆಗೆ ಗದರುತ್ತಾನೆ. ಆ ಹೆಂಗಸು ಭಯಾನಕವಾಗಿರುತ್ತಾಳೆ. ಅಪೂರ್ವ ಅಲ್ಲಿಂದ ಹೊರಡುತ್ತಾನೆ. ಅಷ್ಟರಲ್ಲಾಗಲೇ ಅಪೂರ್ವ ಸ್ವಪ್ನಾಳಿಗೆ ಎರಡು ಬಾರಿ ಕರೆ ಮಾಡಿರುತ್ತಾನೆ. ಮೊದಲಿಗೆ ರಿಂಗ್ ಆಗಿ ಕಟ್ ಆಗುತ್ತದೆ , ಅನಂತರ ಸ್ವಿಚ್ ಆಫ್ ಎಂದು ಬರುತ್ತದೆ.

ನಂತರ ಕಿಟ್ಟಿಗೆ ಕರೆಮಾಡುತ್ತಾನೆ.

CUT TO:

EXT. BENGALURU ROADS , DAY

ಕಿಟ್ಟಿ ದೇವಸ್ಥಾನದ ಓಮಿನಿ ಗಾಡಿಯಲ್ಲಿ ಕುಳಿತಿದ್ದಾನೆ , ಅವನ ಗಾಡಿಪೂರಾ ಬ್ಯಾಗ್ ಗಳು , ತರಕಾರಿ ಚೀಲಗಳೇ ತುಂಬಿವೆ , ಗಾಡಿಯ ಎರಡೂ ಬದಿಗಳಲ್ಲೂ ದೇವಸ್ಥಾನದ ಬ್ಯಾನರ್ ಇದೆ , ಕಿಟ್ಟಿ ಓಮಿನಿ ಡ್ರೈವ್ ಮಾಡುತ್ತಿರುವುದರಿಂದ , ಪಕ್ಕದಲ್ಲಿದ್ದ ಮೈಕಲ್ ಕರೆಯನ್ನು ಸ್ವೀಕರಿಸುತ್ತಾನೆ.

MICHAEL

ಭೈ ಏನ್ ಮ್ಯಾಟ್ರು

APOORVA

( ವಾಯ್ಸ್ ಓವರ್ ) ಮೈಕಲ್ ಕಿಟ್ಟಿ ಇಲ್ವಾ !?

MICHAEL

ಅಪ್ಪಾಜಿ ಗಾಡಿ ವೊಡುಸ್ತಾವ್ರೆ , ಇರಿ ಸ್ಪೀಕರ್ ಅಕ್ತಿನಿ
( ಕಿಟ್ಟಿಗೆ ) ಕಿಟ್ಟಿ ಭೈ ಅಪ್ಪು ಅವ್ರು

KITTI

( ಪಕ್ಕದ ಗಾಡಿಯವನಿಗೆ ) ಲೆಫ್ಟ್ ಇಂಡಿಕೇಟರು ಹಾಕಿ
ರೈಟ್ ಬರ್ತಿದ್ಯಲ್ಲ ಗುರು ಇದು ನ್ಯಾಯಾನಾ , ತ್ತು
ಎಲ್ಲೆಲ್ಲಿಂದ ಬರ್ತಾರೋ ( ಅಪೂರ್ವನಿಗೆ ) ಹೇಳ್ ಮಗ !?

CUT TO:

EXT. NEAR SWAPNA OFFICE , DAY

ಅಪೂರ್ವ ಫುಟ್ ಪಾತ್ ಅಲ್ಲಿ ಮೂವ್ ಆಗುತ್ತಿದ್ದಾನೆ

APOORVA

ಮಗ ಎಲ್ಲಿದ್ಯಾ , ಅರ್ಜೆಂಟ್ ಆಗಿ ಗಾಡಿ ಬೇಕಿತ್ತು .

CUT TO:

EXT. BENGALURU ROADS , DAY

KITTI

ಸಿಟ್ಟಿಂಗ್ ಗೆ ಅಮೌಂಟ್ ಮಾಡ್ಕೊಳಕ್ಕೆ ಬಂದಿದ್ದೀನಿ ಗುರು
ನನ್ ಗಾಡಿ ಸತೀಶ ತಗೊಂಡವನೇ , ಏನ್ ವಿಷ್ಯ !?

CUT TO:

EXT. NEAR SWAPNA OFFICE , DAY

APOORVA

ಓ ಶಿಟ್ , ಏನಿಲ್ಲ ಬಿಡು , ಇವತ್ ರಿಹರ್ಸಲ್ ಇಲ್ವೇನೋ

SWA SCREENWRITERS ASSOCIATION

KITTI

ಇಷ್ಟ್  ಬೇಗ ಹೋಗಿ ಏನೋ ಮಾಡದು , ಮ್ಯೂಸಿಕ್ ರನ್ ಇರತ್ತೆ ಅಂದೊರೆ ಡೈರೆಕ್ಟ್ರು , ಅವ್ರು ಮುಕ್ಕಾಲ್ ಪಾಲ್ ಬರೋದ್ ಡೌಟ್ , ನೋಡಣ ಬಾ

CUT TO:

EXT. BENGALURU ROADS , DAY

ಅಪೂರ್ವ ಬಸ್ ಅಲ್ಲಿ ಕುಳಿತಿದ್ದಾನೆ , ಅಪೂರ್ವನ ತಲೆಯಲ್ಲಿ ನೂರೆಂಟು ಪ್ರಶ್ನೆಗಳು ಓಡುತ್ತಿವೆ.

APOORVA

( ಮೈಂಡ್ ವಾಯ್ಸ್  ) ನಾನ್ ನೋಡ್ತಿರೋದೆಲ್ಲ ಪ್ರಪಂಚದಲ್ಲಿ ನಿಜವಾಗ್ಲೂ ನಡಿತಿತ್ತೋ , ಅಥವಾ ನನ್ನ ಪ್ರಪಂಚದಲ್ಲಿ ನಡೀತಿರೋದನ್ನಷ್ಟೇ ನಾನ್ ನೋಡ್ತಿದ್ನೋ ಗೊತ್ತಾಗ್ಲಿಲ್ಲ. ಮೊದಲನೇ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕೆಯಿರ್ಲಿಲ್ಲ , ಆಗ಼್ಲೇ ಎರಡನೇ ಪ್ರಶ್ನೆ ನನ್ನೆದೆಗೆ ಅಪ್ಪಳಿಸಿತ್ತು. ಏನಾಗ್ತಿದೆ ನನ್ನಲ್ಲಿ !!?

DIALOGUE CUT

MONTAGES

EXT. BENGALURU ROADS , DAY

EXT. REHEARSAL PLACE , EVENING

**ಸಂಭಾಷಣೆಯ** ಮೇಲಿನ ದೃಶ್ಯಗಳು

೧. ಖಾಲಿಯಾದ ಬಸ್ , ಬಸ್ ಅಲ್ಲಿರುವ ನಾಲ್ಕೈದು ಜನ ಅತ್ತಿತ್ತ ನೋಡುತ್ತಿದ್ದಾರೆ , ಆದರೆ ಅಪೂರ್ವ ನೇರವಾಗಿ ಕ್ಯಾಮೆರ ಕಡೆಗೆ ನೋಡುತ್ತಿದ್ದಾನೆ.
೨. ಅಪೂರ್ವ ರಿಹರ್ಸಲ್ ಜಾಗದಲ್ಲಿ ಇಯರ್ ಫೋನ್ ಹಾಕಿಕೊಂಡು ಮಲಗಿದ್ದಾನೆ ಕಣ್ಣು ಮುಚ್ಚಿಲ್ಲ , ಜಾಗ ಖಾಲಿಯಿದೆ , ಇನ್ನೂ ಯಾರು ಬಂದಿಲ್ಲ
೩. ಅಷ್ಟರಲ್ಲಿ ಅಪೂರ್ವನಿಗೆ ಕಿಟ್ಟಿಯ ಕಾಲ್ ಬರುತ್ತದೆ. ಕಾಲ್ ಪಿಕ್ ಮಾಡುತ್ತಾನೆ

CUT TO:

INT. SLUM , KITTI HOUSE , EVENING

ಕಿಟ್ಟಿ ಕೈ ತೊಳೆದು ಅಲ್ಲಿಂದ ಸ್ನೇಹಿತರು ಕುಳಿತಿರುವ ಜಾಗಕ್ಕೆ ನಡೆದುಕೊಂಡು ಹೋಗುತ್ತಾ ಕರೆಯಲ್ಲಿ ಮಾತನಾಡುತ್ತಿದ್ದಾನೆ , ಮೈಕಲ್ , ಸತ್ಯ ಹಾಗೂ ಇನ್ನಿಬ್ಬರು ಗೆಳೆಯರು ಬಂದಿದ್ದಾರೆ. ಚಾಪೆ ಹಾಸಿ ಎಲ್ಲ ಐಟೆಮ್ಸ್ ಸಿದ್ಧಗೊಳಿಸಿದ್ದಾರೆ.

SWA SCREENWRITERS ASSOCIATION

KITTI

ಮಗ ಪ್ಲಾನ್ ಸ್ವಲ್ಪ ಚೇಂಜ್ ಆಗಿದೆ , ಸರ್ ಅರ್ಜೆಂಟ್ ಆಗಿ
ಹೆಗ್ಗೋಡಿಗೆ ಹೊರಟೋರಂತೆ , ರಿಹರ್ಸಲ್ ಕ್ಯಾನ್ಸಲ್
ಮಾಡವ್ರೆ , ಹುಡಗುರೆಲ್ಲ ಕಣ್ಣಳ್ ಒಳಗೆಲ್ಲ ನಿರ್ಗುಳ್
ಹಾಕೊಂಡು ಬಾಟ್ಲು ಏರ್ಸಕ್ಕೆ ಬಂದ್ಬಿಟ್ಟವ್ರೆ ಆಗ್ಲೇ , ಎಲ್ಲೇ
ಇದ್ರೂ ಮೂವತ್ತು ನಿಮಿಷದಲ್ಲಿ ನನ್ ಮನೆಗ್ ಬಂದ್ಬಿಡು
ಆಯ್ತಾ , ಬಟ್ಟೆಗೂಳ್ ಹರ್ಕೋಳ್ತಾವ್ರೆ ! ಇವತ್ ನಿನ್
ಮ್ಯಾಟ್ರು ಕ್ಲಿಯರ್ ಮಾಡೋಣ
( ನಗುತ್ತ ಸ್ನೇಹಿತರೊಂದಿಗೆ ಮಾತನಾಡಲು
ಮುಂದಾಗುವನು )

CUT TO:

EXT. REHEARSAL PLACE , EVENING

ಅಪೂರ್ವ ಬೇಸರದಲ್ಲಿ ಮಲಗಿದ್ದಾನೆ ,

APOORVA

ಆಗಲ್ಲ ಮಗ , ಅರ್ಜೆಂಟ್ ಆಗಿ ಕೆಲಸ ಬಂದ್ಬಿಡ್ತು , ನೀವ್
ಎಂಜಾಯ್ ಮಾಡಿ !

KITTI

( ಕರೆಯಲ್ಲಿ ) ಏನೋ ನೋಡಪ್ಪ ಬಾಟ್ಲು ಏರಿಸಿದ್ರೆ ನಿನ್
ಪ್ರಾಬ್ಲಮ್ ಗೆ ಸೊಲ್ಯೂಶನ್ ಆದ್ರೂ ಸಿಕ್ಕಿರದು !

APOORVA

ಸಾರಿ ಮಗ , ಇವತ್ತಾಗಲ್ಲ , ನೀವ್ ಎಂಜಾಯ್ ಮಾಡಿ

CUT TO:

EXT. APOORVA HOUSE , NIGHT

ಅಪೂರ್ವ ಒಬ್ಬನೇ ಕುಡಿಯುತ್ತ ಕುಳಿತಿದ್ದಾನೆ , ಅಮ್ಮನೊಂದಿಗೆ ಕರೆಯಲ್ಲಿ ಮಾತನಾಡುತ್ತಿದ್ದಾನೆ !

APOORVA

ಅಮ್ಮ ಕಾಲು ನೋವು ಹೇಗಿದ್ಯೇ !

(CONT'D)

AMMA

ದೇವಯ್ಯ ಆಸ್ಪತ್ರೆಗೆ ಕರ್ಕೊಂಡ್ ಹೋಗಿದ್ದ ಅಪ್ಪು , ಮಾತ್ರೆ
ಕೊಟ್ಟಿದ್ದಾರೆ , ಮುಂದಿನ ವಾರ ಮತ್ತೆ ಹೋಗ್ಬೇಕಂತೆ !
ಶುಗರ್ ಜಾಸ್ತಿ ಆಗ್ಬಿಟ್ಟಿದೆ ಅಂತಿದ್ರು
ಏನ್ ಕತೆನೊ ನೋಡ್ಬೇಕು

ಮಾತನಾಡುತ್ತ ಇದ್ದವನು ಮಹಡಿಯಿಂದ ಕೆಳಕ್ಕೆ ನೋಡುತ್ತಾನೆ , ಸ್ವಪ್ನಾಳ ಗಾಡಿ ಬಂದು ರಸ್ತೆಯ ತುದಿಯಲ್ಲಿ ನಿಲ್ಲುತ್ತದೆ , ಗಾಡಿಯನ್ನು ಅಪೂರ್ವನ ಪ್ರತಿರೂಪಿ ಓಡಿಸುತ್ತಿರುತ್ತಾನೆ , ಗಾಡಿಯಿಂದ ಅಪೂರ್ವ ಪ್ರತಿರೂಪಿ ಇಳಿಯುತ್ತಾನೆ , ಹೆಲ್ಮೆಟ್ ತಗೆದು ಡಿಕ್ಕಿಗೆ ಹಾಕುತ್ತಾನೆ , ಕರೆಯಲ್ಲಿ ಅಪೂರ್ವನ ಅಮ್ಮ ಮಾತನಾಡುತ್ತಿರುತ್ತಾರೆ , ಆದರೆ ಅಪೂರ್ವನ ಗಮನ ರಸ್ತೆಯ ಕಡೆ ಇರುತ್ತದೆ , ಅಪೂರ್ವ ಪ್ರತಿರೂಪಿ ಹಾಗೂ ಸ್ವಪ್ನ ಹಗ್ ಮಾಡುತ್ತಾರೆ , ಸ್ವಪ್ನ ಹೊರಡುತ್ತಾಳೆ , ಅಪೂರ್ವ ಪ್ರತಿರೂಪಿ , ಅಪೂರ್ವನ ಮನೆಯ ಕಡೆಗೆ ನಡೆದು ಬರುತ್ತಿರುತ್ತಾನೆ , ಅದನ್ನು ನೋಡಿದ ಅಪೂರ್ವ ಮೆಟ್ಟಿಲ ಕಡೆಗೆ ಬರಲು ಮುಂದಡಿಯಿಡುತ್ತಾನೆ , ಮೆಟ್ಟಿಲ ಬಳಿ ಬಂದ ಅಪೂರ್ವನಿಗೆ , ಅಪೂರ್ವ ಪ್ರತಿರೂಪಿ ಕಾಣುವುದಿಲ್ಲ , ಮೆಟ್ಟಿಲು ಇಳಿಯುತ್ತಾನೆ , ರಸ್ತೆಯ ಆಚೆ ಈಚೆಗೂ ಯಾರೂ ಇರುವುದಿಲ್ಲ ‼ ಅಪೂರ್ವನಿಗೆ ಏನೂ ಅರ್ಥವಾಗುವುದಿಲ್ಲ

CUT TO:

INT. APOORVA HOUSE , NIGHT

ಅಪೂರ್ವ ಮತ್ತೊಮ್ಮೆ ಸ್ವಪ್ನಾಗೆ ಕರೆಮಾಡುತ್ತಾನೆ , ಸ್ವಿಚ್ ಆಫ್ ಬರುತ್ತದೆ ! , ಫಾಸ್ಟ್ ಕಟ್ಸ್ ಅಲ್ಲಿ , ಮನೆಯೆಲ್ಲ ಓಡಾಡುತ್ತಿದ್ದಾನೆ , ತಲೆಕೆಟ್ಟುಹೋಗಿದೆ . ತಟ್ಟೆಯಲ್ಲಿರುವ ಅನ್ನ ಒಣಗುತ್ತಿದೆ , ಸಿಂಕ್ ಗೆ ಬಿಟ್ಟಿರುವ ನೀರು ನಿಂತಿಲ್ಲ , ಲೈಟ್ ಆನ್ ಆಗಿಯೆಯಿದೆ ಫ್ಯಾನ್ ಓಡುತ್ತಿದೆ ಅಪೂರ್ವ ಗೋಡೆಗೆ ಒರಗಿ ಚಿಂತಿಸುತ್ತಿದ್ದಾನೆ.

ಕಣ್ಣು ಮುಚ್ಚುತ್ತಾನೆ

MATCH CUT TO:

INT.RANGAMANDIRA STAGE , DREAMY

ಕಣ್ಣು ಬಿಡುತ್ತಾನೆ.

ಅಪೂರ್ವ ವೇದಿಕೆಯ ಮಧ್ಯ ಕುಳಿತಿದ್ದಾನೆ , ಅವನ ಎದುರುಗಡೆ , ನಾಟಕದ ಪಾತ್ರದಾರಿಗಳು , ಅವರ ಮುಂದೆ ಹಗಲು ವೇಷದವರು , ಫಕೀರ , ಅಜ್ಜ , ಭವಿಷ್ಯ ನುಡಿದ ಹೆಂಗಸರು ನಿಂತಿದ್ದಾರೆ , ಒಬ್ಬೊಬ್ಬರೇ ಅಪೂರ್ವನ ಕಡೆಗೆ ಅನುಮಾನಾಸ್ಪದವಾಗಿ ನೋಡುತ್ತಿದ್ದಾರೆ.

ಕಣ್ಣು ಮುಚ್ಚುತ್ತಾನೆ.

MATCH CUT TO:

INT. APOORVA HOUSE , NIGHT

ಕಣ್ಣು ಬಿಡುತ್ತಾನೆ.

ಕಿಟಕಿ ನೇರವಾಗಿ ಕಾಣುತ್ತಿದೆ , ಕಿಟಕಿಯ ಆಚೆ ಯಾರೂ ಇಲ್ಲ , ಫ್ಯಾನ್ ಕರ್ಕಶ ಸದ್ದು ಮಾಡುತ್ತಿದೆ ಸಿಂಕ್ ಬ್ಲಾಕ್ ಆಗಿ ಮುಕ್ಕಾಲು ಸಿಂಕ್ ತುಂಬಿಹೋಗಿದೆ ಆದರೆ ಅಪೂರ್ವನ ಗಮನ ಅಲ್ಲಿಲ್ಲ ಯೋಚಿಸುತ್ತಿದ್ದಾನೆ.

ಕಣ್ಣು ಮುಚ್ಚುತ್ತಾನೆ

MATCH CUT TO:

INT.RANGAMANDIRA STAGE , DREAMY

ಕಣ್ಣು ಬಿಡುತ್ತಾನೆ

ಅಪೂರ್ವ ಕುಳಿತಿದ್ದಾನೆ , ಅವನ ಎದುರುಗಡೆ , ನಾಟಕದ ಪಾತ್ರದಾರಿಗಳು , ಅವರ ಮುಂದೆ ಹಗಲು ವೇಷದವರು , ಫಕೀರ , ಅಜ್ಜ , ವೀರಗಾಸೆಯವರು , ಭವಿಷ್ಯ ನುಡಿದ ಹೆಂಗಸರು ನಿಂತಿದ್ದಾರೆ , ಒಬ್ಬೊಬ್ಬರೇ ಅಪೂರ್ವನ ಕಡೆಗೆ ನೋಡುತ್ತಿದ್ದಾರೆ.

ಭವಿಷ್ಯ ನುಡಿದ ಹೆಂಗಸು , ಇಟ್ಟಿಗೆ ಕಲ್ಲನ್ನು ಇಬ್ಬಾಗ ಮಾಡುತ್ತಾಳೆ, ಅಪೂರ್ವ ಅದನ್ನೇ ನೋಡುತ್ತಿದ್ದಾನೆ

BHAVISHYA HELUVA HENGASU

ದೇವಾವಾಣಿ ಮೀರಿ ಬದುಕ್ಲಿಕ್ ಆಗುವಲ್ಲು , ಸರ್ವನಾಶ ಆಗ್ತಿ , ನಿನ್ನ ನೆರಳೆ ನಿನ್ನ ಕೊಲ್ತದ
( ಎಂದು ಎಂಜಿಲು ಉಗಿಯುತ್ತಾಳೆ )

ಕಣ್ಣು ಮುಚ್ಚುತ್ತಾನೆ

MATCH CUT TO:

SWA SCREENWRITERS ASSOCIATION

INT. APOORVA HOUSE , NIGHT

ಕಣ್ಣು ಬಿಡುತ್ತಾನೆ

ಅಪೂರ್ವನ ಮನೆಯೊಳಕ್ಕೆ ವಿಪರೀತ ಹೊಗೆ ತುಂಬಿದೆ , ಮನೆಯ ಬೆಳಕು ಬದಲಾಗಿದೆ , ಕನಸಿನಲ್ಲಿದ್ದ ಎಲ್ಲಾ ಪಾತ್ರಗಳೂ ಅಪೂರ್ವನ ಮನೆಯನ್ನು ಆವರಿಸಿಕೊಂಡಿವೆ , ಎಲ್ಲರು ಅಪೂರ್ವನನ್ನು ವಿಚಿತ್ರವಾಗಿ ನೋಡುತ್ತಿದ್ದಾರೆ . ಎಲ್ಲರ ಮೊಖಗಳು ಗ್ಲಿಚ್ ಆಗುತ್ತಿವೆ , ಯಾರ ಮುಖವು ಸರಿಯಾಗಿ ಕಾಣುತ್ತಿಲ್ಲ , ಅಪೂರ್ವನ ಕಣ್ಣಿಗೆ ವಿಪರೀತ ಬೆಳಕು ಮೂಡುತ್ತದೆ ಜೋರು ಗಾಳಿ ಬೀಸುತ್ತದೆ , ಮನೆಯ ಒಳಕ್ಕೆ ಮಳೆ ಬರುತ್ತದೆ ಕಿಟಕಿಯ ಹೊರಕ್ಕೆ ಅಪೂರ್ವನ ಪ್ರತಿರೂಪಿ ನಿಂತಿರುವಂತೆ ಕಾಣುತ್ತದೆ

ಅಪೂರ್ವ ಕಣ್ಣು ಮುಚ್ಚುತ್ತಾನೆ.

MATCH CUT TO:

INT. APOORVA HOUSE , DAY

**September 5 . 2022**

ಕಣ್ಣು ಬಿಡುತ್ತಾನೆ

ಅಪೂರ್ವ ಕಣ್ಣು ಬಿಡುತ್ತಾನೆ , ಮನೆಯೊಳಗೆ ನೀರು ತುಂಬಿರುತ್ತದೆ , ಕಿಟಕಿಯಿಂದ ಸೂರ್ಯನ ಬೆಳಕು ಆವರಿಸಿದೆ , ಎದ್ದವನೇ ಸಿಂಕ್ ಅಲ್ಲಿ ಬಿಟ್ಟಿರುವ ನೀರನ್ನು ನಿಲ್ಲಿಸುತ್ತಾನೆ , ಯಾವ ಯಾವ ವಸ್ತುಗಳು ನೀರಲ್ಲಿ ತೊಯ್ದುಕೊಂಡಿರುತ್ತವೋ ಅದನ್ನು ಎತ್ತಿ ಪಕ್ಕಕ್ಕಿಡುತ್ತಾನೆ . ವಿಪರೀತ ಇರಿಟೇಟ್ ಆಗುತ್ತದೆ , ತಲೆ ಕೆಟ್ಟುಹೋಗುತ್ತದೆ ಸಿಂಕ್ ಗೆ ಕಟ್ಟಿಕೊಂಡಿದ್ದ ಕಸ ತಗೆಯುತ್ತಾನೆ , ನೀರು ಕ್ಲಿಯರ್ ಆಗುತ್ತದೆ.

CUT TO:

INT. APOORVA HOUSE , DAY

ನೆಲದ ಮೇಲಿರುವ ನೀರು ಬಟ್ಟೆಯಲ್ಲಿ ದೂಡುತ್ತಾನೆ , ಇರಿಟೇಟ್ ಆಗಿ ಬಟ್ಟೆ ಹಾಗೂ ಆ ಬಕೆಟ್ ಎರಡನ್ನು ಎಸೆಯುತ್ತಾನೆ , ಅರ್ಧ ಕ್ಲಿನ್ ಆಗಿರುವ ರೂಮಿನಲ್ಲೇ ಕುಳಿತುಬಿಡುತ್ತಾನೆ , ಸಿಗರೇಟ್ ಹಚ್ಚಿಕೊಂಡು ಮೊಬೈಲ್ ತಗೆಯುತ್ತಾನೆ , ಮೊಬೈಲ್ ಸ್ಕ್ರೀನ್ ಗಾರ್ಡ್ ಒಡೆದಿರುತ್ತದೆ , ಅದನ್ನು ನೋಡುತ್ತಾನೆ , ಮೊಬೈಲ್ ಸ್ಕ್ರೀನ್ ಕಿತ್ತು ಎಸೆಯುತ್ತಾನೆ , ಮೊಬೈಲ್ ಆನ್ ಮಾಡಿದ್ದೆ ಸ್ವಪ್ನಾಳ ಟೆಕ್ಸ್ಟ್ ಬರುತ್ತದೆ , ವಾಟ್ಸಾಪ್ ತೆರೆಯುತ್ತಾನೆ , ಡ್ರಾಮಾ ಗ್ರೂಪ್ ಅಲ್ಲಿ ನೈಟ್ ಚಾಟ್ ಆಗಿರುತ್ತದೆ, ಕಿಟ್ಟಿ ಕೂಡ ಟೆಕ್ಸ್ಟ್ ಮಾಡಿರುತ್ತಾನೆ , ಮೇಲೆ ಪಿನ್ ಮಾಡಿರುವ ಕಾಂಟ್ಯಾಕ್ಟ್ ಅಲ್ಲಿ ಸ್ವಪ್ನಾಳ ೩೬ ಮೆಸೇಜ್ ಗಳು ಕಾಣುತ್ತವೆ , ಏನೆಂದು ತೆರೆಯುತ್ತಾನೆ , ಗುಡ್ ಮಾರ್ನಿಂಗ್ ಟೆಕ್ಸ್ಟ್ ಇರುತ್ತದೆ , ಅದರ ಹಿಂದೆ ವಾಯ್ಸ್ ನೋಟ್ ಇರುತ್ತವೆ. ಅದರ ಹಿಂದೆ ಫೋಟೋಸ್ ಬಂದಿರುತ್ತವೆ , ಡೌನ್ಲೋಡ್ ಮಾಡುತ್ತಾನೆ , ಒಂದೊಂದೇ ಫೋಟೋಸ್ ಕ್ಲಿಯರ್ ಆಗಿ ಕಾಣಲು , ಸ್ವಪ್ನ ಅಪೂರ್ವನ ಜತೆಗೆ ಹಿಂದಿನ ದಿನ ಕೆಫೆಗೆ ಹೋಗಿರುವ ವಿಚಾರ ತಿಳಿಯುತ್ತದೆ , ಕಣ್ಣು ಅಗಲವಾಗುತ್ತದೆ , ಅವರಿಬ್ಬರ ಸೆಲ್ಫಿಗಳು ಕಾಣುತ್ತದೆ , ಅದನ್ನು ಜೂಮ್ ಮಾಡಿ ನೋಡುತ್ತಾನೆ , ಅದು ನಿಜವಾದ ಫೋಟೋಗಳು ಎನ್ನುವುದು ಖಾತ್ರಿಯಾಗುತ್ತದೆ , ಒಂದು ವಿಡಿಯೋ ಕೂಡ ಬಂದಿರುತ್ತದೆ ಅದನ್ನು ಪ್ಲೆ ಮಾಡುತ್ತಾನೆ

CUT TO:

SWA SCREENWRITERS ASSOCIATION


©Srinidhi S
SWA Membership Number:54490

INT. CAFE , NIGHT

ಮೊಬೈಲ್ ವಿಡಿಯೊ ರೆಕಾರ್ಡಿಂಗ್ ಅಲ್ಲಿ ಮೂಡಿಬರುವ ದೃಶ್ಯ

SWAPNA

ನಾನು ಸ್ವಲ್ಪ ದಿನ ಟೈಮ್ ಬೇಕು ಅಂದಾಗ ಏನ್ ಅನ್ಸಿತ್ ನಿಂಗೆ !?

APOORVA

ನಿಂಗೂ ನಾನ್ ಇಷ್ಟ ಇದೀನಿ ಅಂತ ಕನ್ಫರ್ಮ್ ಆಯ್ತು ಅಷ್ಟೇ

SWAPNA

ವಾಟ್ , ಕನ್ಫರ್ಮ್ ಆಗ್ಬಿಡ್ತಾ !? , ಸುಳ್ಳು ( ನಗುತ್ತ )

APOORVA

ನಿನ್ ಹೇಗೆ ಅಂತ ನಂಗೊತ್ತಿತ್ತು , ಪ್ರಪೋಸಲ್ ಇಷ್ಟ ಆಗ್ದೇ ಇದ್ದಿದ್ರೆ ಸ್ಟ್ರೇಟ್ ಆಗೇ ಹೇಳ್ಬಿಡ್ತಿದ್ದೆ ನೀನು , ಯಾವಾಗ ಟೈಮ್ ತಗೋಂತಿನಿ ಅಂದ್ಯೋ , 80% ಒಪ್ಪಿಕೊಂಡ ಹಾಗೇನೇ ಅಂತ ಫಿಕ್ಸ್ ಆಗೋದೇ

ಸ್ವಪ್ನ ಅದಕ್ಕೆ ಪ್ರತ್ಯುತ್ತರವಾಗಿ ಏನನ್ನೋ ಹೇಳಲು ಮುಂದಾಗುತ್ತಾಳೆ ಅಷ್ಟರಲ್ಲೇ ಕ್ಯಾಮೆರಾ ಸ್ವಲ್ಪ ಶೇಕ್ ಆಗಿ ವಿಡಿಯೋ ಕಟ್ ಆಗುತ್ತದೆ.

CUT TO:

INT. APOORVA HOUSE , DAY

ಅಪೂರ್ವ ಕನ್ಫ್ಯೂಸ್ ಆಗಿದ್ದಾನೆ , ಶಾಕ್ ಅಲ್ಲಿದ್ದಾನೆ , ವಿಡಿಯೊ ಕೆಳಗಿದ್ದ ವಾಯ್ಸ್ ಮೆಸೇಜ್ ಕ್ಲಿಕ್ ಮಾಡುತ್ತಾನೆ

(CONT'D)

SWA SCREENWRITERS ASSOCIATION

SWAPNA

( ವಾಯ್ಸ್ ಮೆಸೇಜ್ ) ಥ್ಯಾಂಕ್ಸ್ ಕಣೋ , ಇಟ್ ವಾಸ್ ಒನ್ ಒಫ್ ದಿ ಬೆಸ್ಟ್ ಡೇಸ್ ಇನ್ ಅವರ್ ರಿಲೇಷನ್ಶಿಪ್ , ಇಟ್ ವಿಲ್ ಬಿ ರೀಮೆಮ್ಬರ್ಡ್ ಫಾರೆವರ್ , ನೀನು ಇಷ್ಟ್ ಓಪನ್ ಆಗಿ , ಇಷ್ಟ್ ಮುದ್ದಾಗಿ ಯಾವತ್ತೂ ಮಾತಾಡಿರ್ಲಿಲ ಅಪ್ಪು , ಐ ನೋ ಇಟ್ ವಿಲ್ ಬಿ ಟೂ ಫಿಲ್ಮಿ , ಬಟ್ ಇವತ್ತಿನ ಡೇಟ್ , ನಮ್ಮ ಫಸ್ಟ್ ಡೇಟ್ ನ ನೆನಪಿಸ್ತು , ಫಸ್ಟ್ ಟೈಮ್ ನಿನ್ ಕೈ ಹಿಡಿದಿದ್ದು , ಫಸ್ಟ್ ಟೈಮ್ ನಿನ್ ನನ್ನ ಕೂದ್ಲು ಸರಿ ಮಾಡಿದ್ದು ಫಸ್ಟ್ ಟೈಮ್ ನಾವು ಹಗ್ ಮಾಡಿದ್ದು , ಕಿಸ್ ಮಾಡಿದ್ದು , ಎಲ್ಲ ನೆನಪಾಯ್ತು , ಐ ಡೋಂಟ್ ನೋ ವೈ , ತುಂಬಾ ಕಣ್ಣೀರ್ ಬರ್ತಿದೆ , ನನ್ ಬಿಟ್ಹೋಗ್ಬೇಡ ಅಪ್ಪು , ಪ್ಲೀಸ್ ಎಲ್ಲ ಸರಿಯಾಗತ್ತೆ , ಬೇಗ ಸೆಟಲ್ ಆಗ್ಯಾ , ನಂಗ್ ನಿನ್ ಮೇಲೆ ನಂಬಿಕೆ ಇದೆ ..

ಅಪೂರ್ವ ನ ಕಣ್ಣು ತುಂಬುತ್ತದೆ , ಜೋರಾಗಿ ಉಸಿರು ಎಳೆದು ಬಿಡುತ್ತಾನೆ , ಮತ್ತೊಂದು ವಾಯ್ಸ್ ನೋಟ್ ಇರುತ್ತದೆ , ಅದನ್ನೂ ಪ್ಲೆ ಮಾಡುತ್ತಾನೆ

SWAPNA (CONT'D)

( ವಾಯ್ಸ್ ನೋಟ್ ) ಕೆಫೆಲಿ ಹಾಡು ಅಂತಿದ್ಯಲ್ಲ , ಕೇಳು ನಿಂಗಿಷ್ಟವಾದ ಹಾಡು ,

ವಿವಶವಾಯಿತು ಪ್ರಾಣ - ಹಾ!!
ವಿವಶವಾಯಿತು ಪ್ರಾಣ ಹಾ
ಪರವಶವು ನಿನ್ನೀ ಚೇತನ
ವಿವಶವಾಯಿತು ಪ್ರಾಣ - ಹಾ!!
ಪರವಶವು ನಿನ್ನೀ ಚೇತನ
ಇರುವುದೆಲ್ಲವ ಬಿಟ್ಟು
ಇರದುದರೆಡೆಗೆ ತುಡಿವುದೇ ಜೀವನ

ಯಾವ ಮೋಹನ ಮುರಳಿ ಕರೆಯಿತು
ದೂರ ತೀರಕೆ ನಿನ್ನನು
ಯಾವ ಬೃಂದಾವನವು ಸೆಳೆಯಿತು
ನಿನ್ನ ಮಣ್ಣಿನ ಕಣ್ಣನು

ಸ್ವಪ್ನಾಳ ಧ್ವನಿಯಲ್ಲಿ ಹಾಡು ಕೇಳುತ್ತಿದೆ , ಅಪೂರ್ವ ವಿಪರೀತ ಕನ್ಫ್ಯೂಸ್ ಆಗಿದ್ದಾನೆ , **ಹಾಡಿನ ಕೊನೆ ಸಾಲು ಬರುವುದರೊಳಗೆ ಕೆಳಗಿನ ದೃಶ್ಯ ಪ್ರಾರಂಭವಾಗುತ್ತದೆ**

ತಕ್ಷಣಕ್ಕೆ ಸ್ವಪ್ನಾಗೆ ಕರೆ ಮಾಡುತ್ತಾನೆ , ಕರೆ ಮಾಡಿ ರೂಮ್ ಇಂದ ಹೊರಕ್ಕೆ , ಮಹಡಿಯ ಕಡೆಗೆ ಬರುತ್ತಾನೆ. ಅಗ್ರೆಸಿವ್ ಆಗಿದ್ದಾನೆ , ಕನ್ಫ್ಯೂಸ್ ಆಗಿದ್ದಾನೆ , ಕಾಲ್ ರಿಂಗ್ ಆಗುತ್ತದೆ ,

(CONT'D)

(CONT'D)

APOORVA

ಪಿಕ್ ಮಾಡೇ , ಪಿಕ್ ಮಾಡೇ

CUT TO:

INT. SWAPNA HOUSE , ROOM , DAY

ಕಾಲ್ ರಿಂಗ್ ಆಗುತ್ತದೆ , ಮೊದಲ ಸರ್ತಿ ಸ್ವಪ್ನ ಕಾಲ್ ಪಿಕ್ ಮಾಡುವುದಿಲ್ಲ

CUT TO:

EXT. APOORVA HOUSE , DAY

ಅಪೂರ್ವ ಮತ್ತೊಮ್ಮೆ ಕರೆ ಮಾಡಿ ಅತ್ತಿತ್ತ ಮೂವ್ ಆಗುತ್ತಿದ್ದಾನೆ , ಟೆನ್ಷನ್ ಆಗಿದ್ದಾನೆ

CUT TO:

INT. SWAPNA HOUSE , ROOM , DAY

ಸ್ವಪ್ನ ಮೊಬೈಲ್ ವೈಬ್ರೇಟ್ ಆಗುತ್ತಿದೆ , ಸ್ವಪ್ನ ಟವೆಲ್ ಹೆಗಲಿಗೆ ಹಾಕಿಕೊಂಡು ಬಟ್ಟೆಗಳನ್ನು ತಗೆದುಕೊಂಡು ಸ್ನಾನಕ್ಕೆ ಹೋಗಲು ಮುಂದಾಗಿದ್ದಾಳೆ , ಅಷ್ಟರಲ್ಲೇ ಅಪೂರ್ವನ ಕರೆ ಬರುತ್ತಿರುವುದು ಕಾಣುತ್ತದೆ ಪಿಕ್ ಮಾಡುತ್ತಾಳೆ.

SWAPNA

ಗುಡ್ ಮಾರ್ನಿಂಗ್ ಅಪ್ಪು , ಏನಿವತ್ತು ಬೆಳಗ್ಬೆಳಗೆ ಕಾಲ್ ಮಾಡಿದ್ದಾರೆ ಸಾಹೇಬ್ರು , ನಿನ್ನೆ ಫೀಲ್ ಇಂದ ಹೊರಗ್ ಬಂದಿಲ್ವ ಇನ್ನು ..

CUT TO:

EXT. APOORVA HOUSE , DAY

ಅಪೂರ್ವ ಇರಿಟೇಷನ್ , ಟೆನ್ಷನ್ ಹಾಗೂ ಕನ್ಫ್ಯೂಶನ್ ಅಲ್ಲಿ ಕರೆಯಲ್ಲಿ ಮಾತನಾಡುತ್ತಿದ್ದಾನೆ.

APOORVA

ಸ್ವಪ್ನ .. ಪ್ಲೀಸ್ ಆದಷ್ಟ್  ಬೇಗ ನನ್ ರೂಮ್ ಹತ್ರ ಬಾರೆ , ಏನೋ ಮಾತಾಡ್ಬೇಕು ನಿನ್ಹತ್ರ !!

(CONT'D)

SCREENWRITERS ASSOCIATION

(CONT'D)

SWAPNA

( ವಾಯ್ಸ್ ಓವರ್ ) ಆಫೀಸ್ ಇದ್ಯಲ್ಲೋ , ಸಂಜೆ ಸಿಗ್ತೀವಲ್ಲ ಹೇಗೂ ಮಾತಾಡೋಣ ಬಿಡು

APOORVA

( ಇರಿಟೇಷನ್ ) ನಾನ್ ಅರ್ಜೆಂಟ್ ಆಗಿ ಮಾತಾಡ್ಬೇಕು ಸ್ವಪ್ನ , ನಂಗೇನು ರೀಸನ್ ಹೇಳ್ಬೇಡ , ಪ್ಲೀಸ್ ಬಾ , ಪ್ಲೀಸ್ ಸ್ವಪ್ನ

CUT TO:

INT. SWAPNA HOUSE , ROOM , DAY

ಸ್ವಪ್ನ ಬಾತ್ ರೂಮ್ ಒಳಗೆ ಹೋಗುತ್ತಾಳೆ , ಬಕೆಟ್ ಗೆ ನೀರು ಬಿಡುತ್ತಾಳೆ ಮೆಲುದನಿಯಲ್ಲಿ ಮಾತನಾಡುತ್ತಾಯಿದ್ದಾಳೆ

SWAPNA

ಸಡನ್ ಆಗಿ ಬಾ ಅಂದ್ರೆ ಹೇಗೋ , ಹೋಗ್ಲಿ ಏನ್ ವಿಷ್ಯ ಅದನ್ ಆದರು ಹೇಳು

CUT TO:

EXT. APOORVA HOUSE , DAY

ಅಪೂರ್ವ ಸಿಟ್ಟಾಗುವನು , ಸಿಟ್ಟಿನಲ್ಲಿ ಏರುಧ್ವನಿಯಲ್ಲಿ ಮಾತನಾಡಲು ಮುಂದಾಗುವನು

APOORVA

ಫೋನ್ ಅಲ್ಲಿ ಹೇಳಕ್ಕಾಗಲ್ಲ ಕಣೋ ಇಂಪಾರ್ಟೆಂಟ್ ವಿಷ್ಯ ಅಂತ ಹೇಳ್ತಿದ್ದೀನಲ್ಲ , ಅರ್ಥಮಾಡ್ಕೊ , ಪ್ಲೀಸ್ ಬಾ

CUT TO:

INT. SWAPNA HOUSE , ROOM , DAY

SWAPNA

ಸಡನ್ ಆಗಿ ಹೇಳಿದ್ರೆ ಕಷ್ಟ ಕಣೋ ಕೂಗಾಡ್ಬೇಡ ಸರಿ ಬರ್ತೀನಿರು

SWA SCREENWRITERS ASSOCIATION

ಸ್ವಪ್ನ ನೀರನ್ನು ನಿಲ್ಲಿಸಲು ಟ್ಯಾಪ್ ತಿರುಗಿಸುತ್ತಾಳೆ

J CUT:

INT. APOORVA HOUSE , DAY

ಅಪೂರ್ವ ನ ರೂಮ್ ಗೆ ಸ್ವಪ್ನ ಬರುತ್ತಾಳೆ , ಬ್ಯಾಗ್ ಇಡುತ್ತಾಳೆ , ಅಷ್ಟರಲ್ಲೇ ಸಂಭಾಷಣೆ ಪ್ರಾರಂಭವಾಗಿರುತ್ತದೆ. ( ಈ ಮಾಂಟೇಜಸ್ ಮೇಲೆಯೇ ದೃಶ್ಯ ನಡೆಯಲು ಪ್ರಾರಂಭವಾಗುತ್ತದೆ ) ಮನೆ ಕ್ಲೀನ್ ಆಗಿದೆ , ಕ್ಲೀನ್ ಮಾಡಿರುವ ಬಕೆಟ್ ಮತ್ತು ಕ್ಲಿನಿಂಗ್ ಟೂಲ್ ಅಲ್ಲೇ ದೂರದಲ್ಲಿ ಗೋಡೆಗೆ ಒರಗಿಸಿದ್ದಾನೆ.

SWAPNA

ನಿನ್ನೆ ಸಿಕ್ಕಿದ್ ನೀನಲ್ಲ ಅಂದ್ರೆ ಅರ್ಥ ಏನೋ ⁉ , ಅಷ್ಟ್ ಚನ್ನಾಗಿ ಟೈಮ್ ಸ್ಪೆಂಡ್ ಮಾಡಿದ್ವಿ , ಆಫ್ಟರ್ ಲಾಂಗ್ ಟೈಮ್ ಎಷ್ಟ್ ಖುಷಿಯಾಗಿತ್ತು ಗೊತ್ತ , ಈಗ ನೋಡಿದ್ರೆ ಬೇರೆ ಏನೋ ಹೇಳ್ತಾಯಿದ್ಯ ‼

APOORVA

ನಾನ್ ಸುಳ್ ಹೇಳ್ತಾಯಿಲ್ಲ ಸ್ವಪ್ನ , ನಿನ್ನೆ ರಾತ್ರಿ ನಾನ್ ಮನೆಲೆಯಿದ್ದೆ , ಅಕ್ಚುಲಿ , ಆಫೀಸ್ ಹತ್ರ ನಿಮ್ಮಿಬ್ಬರನ್ನ ನೋಡಿದೆ , ಆಮೇಲೆ ಸುಮಾರ್ ಸರ್ತಿ ಕಾಲ್ ಮಾಡಿದೆ , ಮೊದ್ಲು ಒಂದು ಸರ್ತಿ ರಿಂಗ್ ಆಯಿತು ಆಮೇಲೆ ಸ್ವಿಚ್ ಆಫ್ ಬಂತು !

SWAPNA

ಹೇ , ಏನೋ ಹೇಳ್ತಿದ್ಯ ( ನಗುವಳು ) ಸ್ಟಾಪ್ ಕಿಡಿಂಗ್ ಅಪ್ಪು , ಹೀಗೆ ಏನೇನೋ ಮಾತಾಡಕ್ಕೆ ಆಫೀಸ್ ರಜ ಹಾಕಿಸಿದ್ಯಾ ನಂಗೆ ⁉

APOORVA

ನಾನ್ಯಾಕೆ ನಿಂಗ್ ಸುಳ್ ಹೇಳ್ಲಿ ⁉ , ಅಂಡ್ ರಾತ್ರಿ ಅವನ್ನ ಡ್ರಾಪ್ ಮಾಡಕ್ಕೆ ರೋಡ್ ಎಂಡ್ ಗೆ ಬಂದಿದ್ದು ಮಹಡಿಮೇಲಿಂದ ನೋಡಿದೆ ನಾನು , ಅವನ್ನ ಫಾಲೋ ಮಾಡಕ್ಕೆ ಟ್ರೈ ಮಾಡಿದೆ ಬಟ್ ಎಲ್ಲೋ ಮಿಸ್ ಆಗ್ಬಿಟ್ಟ

SWAPNA

ಓಕೇ ನಿನ್ ಥರನೇ ಕಾಣೋ ಇನ್ನೊಬ್ಬ ವ್ಯಕ್ತಿನೆ ಇರ್ಬೋದು ಅನ್ಕೋ , ಬಟ್ ನಮ್ಮಿಬ್ರ ಪರ್ಸನಲ್ ವಿಷಯಗಳು ಅವನಿಗೆ ಹೇಗೋ ಗೊತ್ತಿರತ್ತೆ ⁉ , ಅದು ಅಷ್ಟ್  ಅಕ್ಯುರೇಟ್ ಆಗಿ

SWA SCREENWRITERS ASSOCIATION

APOORVA

ಅದೇ ನಂಗು ಅರ್ಥ ಆಗ್ತಿಲ್ಲ  ಸ್ವಪ್ನ , ವಿಡಿಯೋ ನೋಡಿದ್ಮೇಲಂತು ತಲೆಕೆಟ್ ಹೋಯಿತು , ಮೊದ್ಲು ನನ್ ಭ್ರಮೆ ಇರ್ಬೋದು ಅನ್ಕೊಂಡೆ , ಬಟ್ ಇಟ್ಸ್ ಕ್ಲಿಯರ್ ನೌ ಆ ಮುದುಕ , ಇವ್ನು , ನನ್ ಲೈಫ್ ಅಲ್ಲಿ ಏನೋ ವಿಚಿತ್ರವಾಗಿದ್ದೆಲ್ಲ ನಡೀತಿದೆ ಕಣೆ . ( ಕಣ್ಣು ತುಂಬುತ್ತದೆ )

SWAPNA

ಹುಚ್ಚನ ಥರ ಮಾತಾಡ್ತಿದ್ಯ ಅಪ್ಪು , ಸೀರಿಯಸ್ಲಿ

ಅಪೂರ್ವ ನೆಲಕ್ಕೆ ಜೋರಾಗಿ ಹೊಡೆಯುತ್ತಾನೆ. ಅಗ್ರೆಸಿವ್ ಆಗುತ್ತಾನೆ

APOORVA

ನಿಜ ಹೇಳಿದ್ರೆ ಹುಚ್ಚ ಅನ್ನು , ನನ್ ಪ್ರಾಬ್ಲಮ್ ಇಲ್ಲಿ ಯಾರಿಗೂ ಅರ್ಥ ಆಗಲ್ಲ , ಪ್ರೀತಿಸಿದ್ ಹುಡುಗಿನೇ ಅರ್ಥ ಮಾಡ್ಕೊಂತಿಲ್ಲ  , ಹೊರಗಿನವರಿಗೆ ಹೇಗೆ ಅರ್ಥ ಮಾಡಿಸ್ಲಿ ನಾನು.

SWAPNA

( ಇರಿಟೇಟ್ ಆಗುತ್ತದೆ ) ಅರ್ಥ ಇಲ್ದೇಯಿರೋದ್ ಏನೇನೋ ಮಾತಾಡ್ತಿರೋದು ನೀನು

APOORVA

( ಮತ್ತಷ್ಟು ಅಗ್ರೆಸಿವ್ ಆಗಿ ) ಹೌದೇ , ನಂಗ್ ಏನು ಕೆಲಸ ಇಲ್ಲ ನೋಡು , ಸುಮ್ನೆ ಸುಳ್ ಹೇಳ್ಕೊಂಡ್ ಟೈಮ್ ಪಾಸ್ ಮಾಡ್ತಿದ್ದೀನಿ , ನೀವ್ ಜೀವನದಲ್ಲಿ ಬಿಸಿಯಾಗಿರೋರ್ ತಾನೇ , ಹೋಗಿ ಕೆಲಸ ನೋಡ್ಕೊಳಿ

SWAPNA

ನಿನ್ನೆ ಎಷ್ಟ್ ಚನ್ನಾಗ್ ಇದ್ದೆ , ಸಡನ್ ಆಗಿ ಏನಾಯಿತೋ ನಿಂಗೆ !?

APOORVA

ನಿನ್ನೆ ನಿನ್ ಜತೆ ಇದ್ದಿದ್ದು ನಾನಲ್ಲ ಸ್ವಪ್ನ , ನಾನ್ ನಿನ್ನೆ ನಿನ್ನ ಮೀಟ್ ಮಾಡೇಯಿಲ್ಲ ಕಣೆ ,

SWAPNA

ಸ್ಟಾಪ್ ಇರಿಟೇಟಿಂಗ್ ಅಪ್ಪು , ಹುಚ್ಚನ್ ಥರ ಏನೇನೋ ಹೇಳ್ತಿದ್ಯ ನೀನು

APOORVA

ಹೌದೇ ನಾನ್ ಇರಿಟೇಷನ್ ಎಲ್ಲರಿಗು , ನನ್ ಹುಚ್ಚ ಅಲ್ವ
ನನ್ ಜೊತೆ ಮಾತಾಡಿ ಏನು ಪ್ರಯೋಜನ ಇಲ್ಲ ತಾನೇ
ಮತ್ಯಕ್ಕಿಲ್ಲೆ ಇದ್ದೀಯ ಹೋಗಾಯ್ತು , ನನ್ ಪ್ರಾಬ್ಲಮ್ ಗೆ
ನಾನೇ ಸೊಲ್ಯೂಶನ್ ಹುಡುಕ್ಕೊಳ್ತೀನಿ

SWAPNA

ಆಯಿತು ಹೋಗ್ತೀನಿ , ಪದೇ ಪದೇ ಅದನ್ನೇ ಹೇಳೋ
ಅವಶ್ಯಕತೆಯಿಲ್ಲ !

APOORVA

ಬಾಗಿಲು ತೆಗ್ದಿದೆ !

SWAPNA

ಓಕೇ !!

ಕೋಪದಲ್ಲಿ ಬ್ಯಾಗ್ ತಗೆದುಕೊಳ್ಳುತ್ತಾಳೆ , ಹೊರಡಲು ಮುಂದಾಗುತ್ತಾಳೆ , ಅಪೂರ್ವ ಸ್ವಪ್ನಾಳ ಕಾಲನ್ನು ಗಟ್ಟಿಯಾಗಿ ಹಿಡಿಯುತ್ತಾನೆ , ಭಿಕ್ಕಿ ಭಿಕ್ಕಿ ಅಳುವುದಕ್ಕೆ ಮುಂದಾಗುತ್ತಾನೆ

APOORVA

ನಂಗೇನು ಅರ್ಥ ಆಗ್ತಿಲ್ಲ , ಪ್ಲಿಸ್ ಹೆಲ್ಪ್ ಮೀ , ನಾನ್
ಸುಳ್ ಹೇಳ್ತಿಲ್ಲ ಸ್ವಪ್ನ , ನನ್ನ ನಂಬು ಪ್ಲೀಸ್ !

SWAPNA

ಆಯಿತು ಅಳ್ಬೇಡ , ಕಣ್ ಒರ್ಸ್ಕೊ

ಅಪೂರ್ವ ಕಣ್ಣೀರನ್ನು ಒರೆಸಿಕೊಳ್ಳುತ್ತಾನೆ , ಜೋರಾಗಿ ಉಸಿರು ಬಿಡುತ್ತಾನೆ.

APOORVA

ಎರಡ್ ಮೂರ್ ದಿನದಿಂದ , ಏನೇನೋ ನಡೀತಿದೆ .
ತಲೆಕೆಟ್ಟೋಗ್ತಿದೆ ಸಪ್ಪೆ

SWAPNA

ಸರಿ ಮೊದ್ಲು ಫ್ರೆಶ್ ಅಪ್ ಆಗು , ಇಲ್ಲಿಂದ ಹೊರಡೋಣ

SWA SCREENWRITERS ASSOCIATION

ಅಪೂರ್ವ ಸ್ವಪ್ನಾಳ ಹೆಗಲ ಮೇಲೆ ತಲೆಯಿಡುತ್ತಾನೆ , ಇಬ್ಬರು ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾರೆ . ಸ್ವಪ್ನ ಅಪೂರ್ವನ ಕೈ ಅನ್ನು ಗಟ್ಟಿಯಾಗಿ ಹಿಡಿಯುತ್ತಾಳೆ

CUT TO:

EXT. RAYADURGA VILLAGE . DAY

**September 5 . 1996**

ಅಮೇರಿಕ ಅಮೇರಿಕ ಚಿತ್ರದ ಪೋಸ್ಟರ್ , ಅಮೋಘವರ್ಷ ನೃಪತುಂಗನ ಸಾಹಿತ್ಯ ಕೊಡುಗೆ ಕುರಿತಾದ ಕಾರ್ಯಕ್ರಮದ ಪೋಸ್ಟರ್ ಹಾಗೂ ಒಂದು ಮೂಲೆಯಲ್ಲಿ ನಾಗಮಂಡಲ ಸಿನೆಮಾದ ಪೋಸ್ಟರ್ ಅಂಟಿಸಿರುವ ಬಸ್ ಸ್ಟಾಪ್ ಗೋಡೆಯ ಮುಂದೆ ಕೈನಲ್ಲಿ ಒಂದು ಸೂಟ್ಕೇಸ್ ಮತ್ತೊಂದು ಕೈಲಿ ಪಾಮ್ಪ್ಲೇಟ್ ಹಿಡಿದು ಅರಿವು ಅವನ ಎದುರಿಗೆ ನಿಂತಿರುವ ಪ್ರೀಮಿಯರ್ ಪದ್ಮಿನಿ ಕಾರ್ ಸಮೀಪ ನಡೆದು ಬರುತ್ತಿದ್ದಾನೆ , ಕಾರ್ ಒಳಕ್ಕೆ ಗೋಪಾಲ್ ಕೃಷ್ಣ ಅರಸ್ ಕುಳಿತಿರುತ್ತಾರೆ , ಅರಿವು ತನ್ನ ಕೈಲಿ ಇರುವ ಕಾರ್ಯಕ್ರಮದ ಪಾಮ್ಪ್ಲೇಟ್ ನೋಡುತ್ತಾ ಅವರನ್ನು ಮಾತನಾಡಿಸಲು ಮುಂದಾಗುತ್ತಾನೆ

ARIVU

ಸರ್ ನಮಸ್ಕಾರ

GOPAL KRISHNA URS

( ಕಡಲೆಕಾಳು ತಿನ್ನುತ್ತಿರುತ್ತಾನೆ ) ತಾವ್ಯಾರು ಅಂತ ಗೊತ್ತಾಗಿಲ್ಲ

ARIVU

ಅರಿವು ಅಂತ ಮೈಸೂರ್ ಇಂದ ಬಂದಿದ್ದೀನಿ ,

GOPAL KRISHNA URS

ಅರಿವು , ತುಂಬಾ ಚನ್ನಾಗಿದೆ ರೀ ನಿಮ್ ಹೆಸರು
( ನಸು ನಗು ) ಏನಾಗ್ಬೇಕಿತ್ತು !?

APOORVA

( ನಸು ನಗು ) ಆ.. ಕುವೆಂಪು ಭವನದಲ್ಲಿ ರತ್ನಾಕರ ಶಾಸ್ತ್ರಿಗಳ ಸೆಮಿನಾರ್ ಇತ್ತಲ್ಲ ಅದಕ್ಕಂತ ಬಂದಿದ್ದೆ , ಆದ್ರೆ ಅಡ್ರೆಸ್ ಗೊತ್ತಾಗ್ತಾಯಿಲ್ಲ. ಇಲ್ಲಿ ಬಸ್ ಬರತ್ತೆ ಅಂದಿದ್ರು , ಸುಮಾರ್ ಒಂದು ಗಂಟೆ ಆಯ್ತು ಯಾವ ಬಸ್ ಕೂಡ ಇಲ್ಲ ಅದಕ್ಕೆ .....

ಅಷ್ಟರಲ್ಲಿ ರತ್ನಾಕರ ಶಾಸ್ತ್ರಿಗಳು ರಸ್ತೆಯಲ್ಲೇ ಗಡಿಬಿಡಿಯಲ್ಲಿ ಶರ್ಟ್ ಸರಿಪಡಿಸಿಕೊಳ್ಳುತ್ತ ನಡೆದುಬಂದು ಕಾರ್ ಒಳಕ್ಕೆ ಕೂರುತ್ತಾರೆ. ಅರಿವು ಅವರನ್ನೇ ಗಮನಿಸುತ್ತಾನೆ.

SWA SCREENWRITERS ASSOCIATION

RATNAKARA SHASTRI

ಗೋಪಾಲ್ , ಸಮಯ ಕೈಮೀರಿ ಹೋಗಿಲ್ಲ ತಾನೇ , ರಸ್ತೆ
ಬೇರೆ ಸರಿಗಿಲ್ಲ , ಅರ್ಧ ಗಂಟೆಯಾದ್ರೂ ಹಿಡಿಯತ್ತೆ
( ಕಾರ್ ಒಳಗೆ ಕೂರುತ್ತಾರೆ )

GOPAL KRISHNA URS

ಸಮಸ್ಯೆಯಿಲ್ಲ ಶಾಸ್ತ್ರಿಗಳೇ ಹೋಗಬೋದು
( ಹೊರಡಲು ಸಜ್ಜಾಗುತ್ತಾರೆ ) ಆ.. ಇವ್ರು ಮೈಸೂರಿಂದ
ನಿಮ್ಮ ಮಾತುಗಳನ್ನ ಕೇಳೋಕ್ ಇಷ್ಟ್ ದೂರ ಬಂದಿದ್ದಾರೆ

ರತ್ನಾಕರ ಶಾಸ್ತ್ರಿಗಳು ಅರಿವು ಅನ್ನು ನೋಡುತ್ತಾರೆ ನಸುನಗುತ್ತಾರೆ. ಅರಿವು ಕೂಡ ಅವರನ್ನು ನೋಡಿ ಸ್ಮೈಲ್ ಮಾಡುತ್ತಾನೆ.

GOPAL KRISHNA URS (CONT'D)

ಇವ್ರು ನಮ್ಮೊಟ್ಟಿಗೆ ಬರ್ಲಿ , ಹಿಂದಿನ ಸೀಟಿಗೂ ಜತೆಗಾರ
ಸಿಕ್ಕಹಾಗೆ ಆಗತ್ತೆ !

RATNAKARA SHASTRI

ಯಾವ ವಸ್ತೂನೂ ಒಂಟಿಯಾಗಿರಬಾರ್ದು ನೋಡಿ ನಿಮಗೆ
( ಸಣ್ಣ ನಗು ) ಬಾಪ್ಪಾ ಕುತ್ಕೋ.

ARIVU

ನಿಮ್ಮನ್ನ ಇಷ್ಟ್ ಹತ್ತಿರದಿಂದ ನೋಡ್ತೀನಿ ಅಂತ
ಅನ್ಕೊಂಡಿರ್ಲಿಲ್ಲ ಸರ್ ತುಂಬಾ ಖುಷಿಯಾಗ್ತಿದೆ !

ಮಾತನಾಡುತ್ತ ಒಳಕ್ಕೆ ಬಂದು ಕೂರುತ್ತಾನೆ , ಗಾಡಿ ಮೂವ್ ಆಗುತ್ತದೆ

CUT TO:

MONTAGES

EXT. RAYADURGA ROADS , DAY

೧. ಗಾಡಿ ಒಂದೆರಡು ರಸ್ತೆಗಳಲ್ಲಿ ಪಾಸ್ ಆಗುತ್ತದೆ.
೨. ರಾಯದುರ್ಗ ಊರಿನ ಮನಮೋಹಕ ಸ್ಥಳಗಳಲ್ಲಿ ಗಾಡಿ ಪಾಸ್ ಆಗುತ್ತದೆ
೩. ಗಾಡಿ ಪಾಸ್ ಆಗುತ್ತಿರುವ ದೃಶ್ಯಗಳ ಮೇಲೆಯೇ ಸಂಭಾಷಣೆ ಮೂಡಿಬರುತ್ತದೆ.

ವಾಯ್ಸ್ ಓವರ್ ಸಂಭಾಷಣೆ

RATNAKARA SHASTRI

ಅರಿವು ನೈಸ್ ನೇಮ್ , ಮೈಸೂರಲ್ಲಿ ಏನ್
ಮಾಡ್ಕೊಂಡಿದಿದ್ದೀರಿ ತಾವು

ARIVU

ಸ್ವಂತ ಬಿಸಿನೆಸ್ ನೋಡ್ಕೊಳ್ತಿದ್ದೀನಿ ಸರ್ , ಕಲೆ , ಸಾಹಿತ್ಯ
, ಇತಿಹಾಸ ಅಂದ್ರೆ ಆಸಕ್ತಿ ಜಾಸ್ತಿ , ಅಮೋಘವರ್ಷನ
ಮೇಲೆ ನೀವು ಬರೆದ ಪುಸ್ತಕ ಓದಿ ಇಲ್ಲಿವರ್ಗು ಬಂದೆ
ಸರ್.

RATNAKARA SHASTRI

ಖುಷಿಯಾಯ್ತು ನೀವ್ ಬಂದಿದ್ದು . ಇತಿಹಾಸನ
ಮರಿತಿರೋ ಈ ಕಾಲದಲ್ಲಿ , ಇತಿಹಾಸಕ್ಕೋಸ್ಕರ ಇಷ್ಟು
ದೂರ ಬಂದಿದ್ದಿರಲ್ಲ ಸಂತೋಷ

**ಜೆ ಕಟ್ ಅಲ್ಲಿ ಆಡಿಟೋರಿಯಂ ಅಲ್ಲಿ ಮೂಡಿಬರುತ್ತಿರುವ ಹಾಡು ಪ್ರಾರಂಭವಾಗುತ್ತದೆ**.

SECOND SONG

J CUT :

MONTAGES

ಪ್ಯಾರಲಲ್ ಆಗಿ ಅಪೂರ್ವ ಹಾಗೂ ಸ್ವಪ್ನಾಳ ಮಾಂಟೇಜಸ್ ಹಾಗೂ ಅರಿವು ಮಾಂಟೇಜಸ್ ರನ್
ಆಗುತ್ತದೆ.

EXT. RAYADURGA ROADS , DAY

EXT. BENGALURU ROADS , DAY

INT. SOWMYA COUNCILING CENTRE , DAY

SWA SCREENWRITERS ASSOCIATION

INT. KUVEMPU BAVANA . DAY

೧. ಆಡಿಟೋರಿಯಂ ಸಮೀಪ ಗಾಡಿ ನಿಲ್ಲುತ್ತದೆ
೨. ಆಡಿಟೋರಿಯಂ ಒಳಕ್ಕೆ ರತ್ನಾಕರರ ಆಗಮನ ಆಗಿದ್ದೆ ಒಂದಿಬ್ಬರು ಅವರಿಗೆ ಹ್ಯಾಂಡ್ ಶೇಕ್ ಮಾಡುತ್ತಾರೆ
೩. ಅರಿವು ಹಾಗೂ ಗೋಪಾಲ್ ಹಿಂದಿನ ಸಾಲಿನ ಖುರ್ಚಿಯಲ್ಲಿ ಕೂರುತ್ತಾರೆ.
೪. ರತ್ನಾಕರ ಶಾಸ್ತ್ರಿಗಳು ಮುಂದಿನ ಸೀಟ್ ಅಲ್ಲಿ ಕೂತು ಸಂಗೀತ ಕಾರ್ಯಕ್ರಮವನ್ನು ನೋಡುತ್ತಿರುತ್ತಾರೆ.
೫. ಅಪೂರ್ವ ಸ್ವಪ್ನ ದೇವಸ್ಥಾನಕ್ಕೆ ಹೋಗಿದ್ದಾರೆ , ಇಬ್ಬರು ದೊನ್ನೆಯಲ್ಲಿ ಪ್ರಸಾಧ ತಿನ್ನುತ್ತಿದ್ದಾರೆ
೬. ಅದೇ ದೇವಸ್ಥಾನದ ಮತ್ತೊಂದು ಮೂಲೆಯಲ್ಲಿ ಮುದುಕ ಕುಳಿತು ಅಪೂರ್ವನನ್ನೇ ಗಮನಿಸುತ್ತಿದ್ದಾನೆ , ಆದರೆ ಅಪೂರ್ವನಿಗೆ ಅವರು ಕಾಣುವುದಿಲ್ಲ.
೭. ಸ್ವಪ್ನ ಹಾಗೂ ಅಪೂರ್ವ ಅಲ್ಲಿಂದ ಹೊರಡುತ್ತಾರೆ , ಬೆಂಗಳೂರಿನ ವಿವಿಧ ರಸ್ತೆಗಳಲ್ಲಿ ಗಾಡಿ ಮೂವ್ ಆಗುತ್ತದೆ.
೮. ಅರಿವು ಹಾಗೂ ಗೋಪಾಲ್ ಕೃಷ್ಣ ಸಭೆಯಲ್ಲಿ ಮಾತನಾಡುತ್ತಿದ್ದಾರೆ ಒಬ್ಬರಿಗೊಬ್ಬರು ಬಹಳ ಹತ್ತಿರ ಆಗುತ್ತಿರುವುದು ಕಾಣುತ್ತದೆ , ರತ್ನಾಕರ ಶಾಸ್ತ್ರಿಗಳು ಸಭೆಯನ್ನುದ್ದೇಶಿಸಿ ವೇದಿಕೆಯ ಮೇಲೆ ಮಾತನಾಡುತ್ತಾರೆ.
೯. ಸ್ವಪ್ನ ಸಣ್ಣ ರಸ್ತೆಯೊಂದರಲ್ಲಿ ಗಾಡಿ ನಿಲ್ಲಿಸುತ್ತಾಳೆ
೧೦. ಆಡಿಟೋರಿಯಂ ಹೊರಕ್ಕೆ ಸಿಗರೇಟ್ ಸೇದುತ್ತ ಟಿ ಕುಡಿಯುತ್ತ ಗೋಪಾಲ್ ಹಾಗು ಅರಿವು ಮಾತನಾಡುತ್ತಿದ್ದಾರೆ.
೧೧. ಅಪೂರ್ವನನ್ನು ಸ್ವಪ್ನ ತನ್ನ ಸ್ನೇಹಿತೆಯಾದ ಸೌಮ್ಯಾಳ ಕೋನ್ಸಿಲಿಂಗ್ ಸೆಂಟರ್ ಗೆ ಕರೆದುಕೊಂಡು ಬಂದಿದ್ದಾಳೆ.

ಹಾಡು ಮುಕ್ತಾಯ

APOORVA

ಕೌನ್ಸಿಲಿಂಗ್ ಅವಶ್ಯಕತೆ ಇಲ್ಲ ಸ್ವಪ್ನ , ನಂಗೇನು ಆಗಿಲ್ಲ

SWAPNA

ನನ್ ಫ್ರೆಂಡ್ ಸೌಮ್ಯ ಗೊತ್ತಿಲ್ವೇನೋ , ಇದು ಅವ್ಳದೆ
ಕೌನ್ಸಿಲಿಂಗ್ ಸೆಂಟರ್, ನಿನ್ ಮನಸಲ್ಲಿ ಏನೇನ್ ಆಗ್ತಿದೆ
ಎಲ್ಲ ಹೇಳು , ಅವಳ ಹತ್ರ ಸೊಲ್ಯೂಶನ್ ಇದ್ದೆ ಇರತ್ತೆ ,

CUT TO:

INT. SOWMYA COUNCILING CENTRE

ಸೌಮ್ಯ ಅಪೂರ್ವನ ಜತೆಗೆ ಮಾತನಾಡುತ್ತಿದ್ದಾಳೆ

SWA SCREENWRITERS ASSOCIATION

SOWMYA

ಕೆಲವೊಂದ್ ಸಲ , ಡಿಪ್ರೆಶನ್ ಮತ್ತೆ ಅಂಗ್ಸೈಟಿ
ಇಂದಾನು ಶರ್ಟ್ ಟರ್ಮ್ ಮೆಮೊರಿ ಲಾಸ್ ಆಗಿರತ್ತೆ ,
ನಿನ್ನೆ ನೀವು ಸ್ವಪ್ನ ಜತೆ ಟೈಮ್ ಸ್ಪೆಂಡ್ ಮಾಡಿರೋ
ಮೆಮೊರಿ ಎರೇಸ್ ಅಗಿರ್ಲುಬೋದು . ಡೋಂಟ್ ವರಿ ,
ನಾ ಹೇಳೋದನ್ನ ಫಾಲೋ ಮಾಡಿ , ಟೈಮ್ ವಿಲ್ ಹೀಲ್
ಎವೆರಿತಿಂಗ್

**ಹಾಡು ಪುನರಾರಂಭ**

CUT TO:

MONTAGES

INT. SOWMYA COUNCILING CENTRE

EXT. KUVEMPU BAVANA . DAY

೧೨. ಸ್ವಪ್ನ ಹಾಗೂ ಅಪೂರ್ವನ ಜತೆಗೆ ಸೌಮ್ಯ ಟೈಮ್ ಸ್ಪೆಂಡ್ ಮಾಡುವ ದೃಶ್ಯಗಳು ಮೂವ್ ಆಗುತ್ತದೆ.
೧೩. ಸೌಮ್ಯ , ಸ್ವಪ್ನ ಹಾಗೂ ಅಪೂರ್ವ ಕ್ಯಾಶುಯಲ್ ಆಗಿ ಕಾರಿಡಾರ್ ಅಲ್ಲಿ ಮಾತನಾಡುತ್ತಿದ್ದಾರೆ.
೧೪. ಕಾರ್ಯಕ್ರಮ ಮುಗಿದು ಬ್ಯಾನೆರ್ ಎಲ್ಲ ತಗೆಯುತ್ತಿದ್ದಾರೆ , ಅರಿವು , ಗೋಪಾಲ್ ಹಾಗೂ ರತ್ನಾಕರ ಶಾಸ್ತ್ರಿಗಳು ಖುರ್ಚಿಗಳನ್ನು ಸೆಮಿ ಸರ್ಕಲ್ ನಲ್ಲಿ ಹಾಕಿಕೊಂಡುಮಾತನಾಡುತ್ತಿದ್ದಾರೆ.
ರತ್ನಾಕರ ಹೊರಡಲು ಸಜ್ಜಾಗುತ್ತಾರೆ

RATNAKARA SHASTRI

ಬರ್ತೀನಿ ಗೋಪಾಲ್ , ( ಅರಿವು ಕಡೆಗೆ ನೋಡಿ )
ಬರ್ತೀನಪ್ಪ ಅರಿವು ಮತ್ ಸಿಗನ

GOPAL KRISHNA URS

ನಮ್ಮೂರಿಗ್ ಬಂದು ನಮ್ಮನೇಲಿ ಊಟ ಮಾಡದೇ ಹಾಗೆ
ಹೋಗ್ತಿದ್ದೀರಲ್ಲ ಶಾಸ್ತ್ರಿಗಳೇ, ನಮ್ಮೊಳಿಗೆ ಬೆಳಗ್ಗೆನೆ ಹೇಳಿ
ಹೋಳಿಗೆ ಊಟ ರೆಡಿ ಮಾಡ್ಸಿದ್ದೀನಿ , ಇಲ್ಲಿಂದ್ ಹತ್ತು
ನಿಮಿಷ ಅಷ್ಟೇ ಊಟ ಮಾಡ್ಕೊಂಡ್ ಹೋಗಿ

RATNAKARA SHASTRI

ವಿವೇಕಾನಂದ ಕಾಲೇಜ್ ಅಲ್ಲಿ ನನ್ನ ಸ್ನೇಹಿತ ಪ್ರಿನ್ಸಿಪಲ್
ಆಗಿದ್ದಾನೆ , ಅವ್ನ್ ಮನೆಗ್ ಊಟಕ್ ಬರ್ತೀನಿ ಅಂತ
ಮಾತ್ ಕೊಟ್ಬಿದ್ದೀನಿ ನಾನೇನಾದ್ರೂ ಅಲ್ಲಿಗೆ ಹೋಗದೆಯಿದ್ರೆ
ಪ್ರಳಯ ಆಗ್ಬಿಡತ್ತೆ ಅಷ್ಟೇ , ಇನ್ನೊಮ್ಮೆ ಬರ್ತೀನಿ ಕ್ಷಮೆ
ಇರ್ಲಿ !

SWA SCREENWRITERS ASSOCIATION

GOPAL KRISHNA URS

ನಮ್ಮನೆ ಗೋಡೆಗಳು ನೀವ್ ಬರ್ತೀರಾ ಅಂತ ಕಾಯ್ತಿದ್ವು

ಈ ಸಂಭಾಷಣೆ ಮೇಲೆಯೇ ಗಾಡಿ ಮೂವ್ ಆಗಿ ರತ್ನಾಕರ ಶಾಸ್ತ್ರಿಗಳನ್ನ ಡ್ರಾಪ್ ಮಾಡಿ , ಅಲ್ಲಿಂದ ಗೋಪಾಲರ ಮನೆ ಕಡೆಗೆ ಗಾಡಿ ಹೋಗುತ್ತಿರುವ ಮಾಂಟೇಜಸ್.

L CUT :

MONTAGES

EXT. RAYADURGA ROADS , DAY

INT. HOTEL , BENGALURU , DAY

INT. GOPAL KRISHNA HOUSE , DAY

ಗೋಪಾಲರ ಮನೆ ಕಡೆಗೆ ಗಾಡಿ ಹೋಗುತ್ತಿರುವ ಮಾಂಟೇಜಸ್.
ವಾಯ್ಸ್ ಓವರ್

RATNAKARA SHASTRI

ಒಂದ್ ಕೆಲಸ ಮಾಡಿ , ಈ ಹುಡುಗನ್ನ ಕರ್ಕೊಂಡ್ ಹೋಗಿ ತುಂಬಿದ್ ಹೊಟ್ಟೆಗಿನ್ನ ಹಸಿದ ಹೊಟ್ಟೆಗೆ ಊಟ ಹಾಕಿದ್ರೆ ಪುಣ್ಯ ದುಪ್ಪಟ್ಟಾಗತ್ತೆ . ಅಷ್ಟು ದೂರದಿಂದ ಬಂದಿದ್ದಾರೆ ಪಾಪ , ಯಾವುದೊ ಹೋಟೆಲ್ ಅಲ್ಲಿ ತಿನ್ನೋದರ ಬದಲು ಆರೋಗ್ಯಕರ ಮನೆ ಊಟ ಮಾಡ್ಲಿ !

೧೫. ಅಪೂರ್ವ ಹಾಗೂ ಸ್ವಪ್ನ ಕೌನ್ಸಿಲಿಂಗ್ ಸೆಂಟರ್ ಇಂದ ಹೊರಡುತ್ತಾರೆ ,
೧೬. ಅಪೂರ್ವ ಸ್ವಪ್ನ ಒಂದು ಹೋಟೆಲ್ ಗೆ ಊಟಕ್ಕೆ ಹೋಗಿದ್ದಾರೆ.
೧೭. ಅರಿವು ಗೋಪಾಲ್ ಮನೆಯ ಒಳಕ್ಕೆ ಪ್ರವೇಶಿಸುತ್ತಾನೆ , ಗೋಪಾಲ್ ತನ್ನ ಹೆಂಡತಿ ಯಶೋಧ ಹಾಗೂ ಆಕೆಯ ತಂಗಿ ದೇವಕಿಯ ಪರಿಚಯ ಮಾಡಿಕೊಡುತ್ತಾನೆ.
೧೮. ಅಪೂರ್ವ ಹಾಗೂ ಸ್ವಪ್ನ ಊಟಕ್ಕೆ ಬಂದಿದ್ದಾರೆ , ಟೇಬಲ್ ಮೇಲೆ ಅವರು ಆರ್ಡರ್ ಮಾಡಿದ ಖಾದ್ಯ ಬರುತ್ತದೆ.
೧೯. ಕೈ , ಕಾಲುಗಳನ್ನು ತೊಳೆದು ಅರಿವು , ಗೋಪಾಲ್ ಊಟಕ್ಕೆ ನೆಲದಲ್ಲಿ ಕೂರುತ್ತಾರೆ. ಅರಿವು ಮಾತನಾಡುತ್ತಿರುವುದನ್ನು ದೇವಕಿ ದಿಟ್ಟ ಕಣ್ಣಲ್ಲಿ ನೋಡುತ್ತಿದ್ದಾಳೆ.

ಎರಡು ಕಡೆಗಳಲ್ಲೂ ಹ್ಯಾಪಿಯಾಗಿ ಮಾತನಾಡುತ್ತಿರುವುದು ಕಾಣುತ್ತದೆ. ಅಪೂರ್ವ ತುಸು ಸಮಾಧಾನವಾಗಿದ್ದಾನೆ. ಅರಿವು ಹಾಗೂ ಗೋಪಾಲ್ ಕೃಷ್ಣ ಮತ್ತು ದೇವಕಿ , ಯಶೋಧ ಊಟ ಆದವರೇ ಕುಳಿತು ಮಾತನಾಡುತ್ತಿದ್ದಾರೆ. ಅಪೂರ್ವ ಹಾಗೂ ಸ್ವಪ್ನ ಊಟ ಮಾಡಿ ಹೊರಡುತ್ತಾರೆ

CUT TO:

SWA SCREENWRITERS ASSOCIATION

INT. GOPAL KRISHNA HOUSE , DAY

ಗೋಪಾಲ್ ಕೃಷ್ಣ ತಮ್ಮ ಹಿಸ್ಟಾರಿಕ್ ಕಾಯಿನ್ ಕಲೆಕ್ಷನ್ ಗಳನ್ನು ತೋರಿಸುತ್ತಿದ್ದಾರೆ , ಮತ್ತು ಕೆಲವು ರಾಜಮನೆತನಗಳ ಆಯುಧಗಳನ್ನು ತೋರಿಸುತ್ತಿದ್ದಾರೆ.

GOPAL KRISHNA URS

ಇವು ಮೈಸೂರು ಸಂಸ್ಥಾನದ ಆಯುಧಗಳು , ಸ್ವಲ್ಪ ಹಣ ಕಮ್ಮಿಯಿದೆ , ಶ್ರೀರಂಗಪಟ್ಟಣದಿಂದ ಗುಪ್ತವಾಗಿ ಸೈನ್ಯಾಧಿಕಾರಿ ಖಡ್ಗ ತರಿಸಬೇಕು ಅಂತಿದ್ದೀನಿ.

ಹಿಸ್ಟಾರಿಕಲ್ ಕಾಯಿನ್ ಗಳನ್ನು ತೋರಿಸುತ್ತಾನೆ

GOPAL KRISHNA URS (CONT'D)

ಇವು ವಿಜಯನಗರದ್ ಕಾಲದ ಕಾಯಿನ್ ಗಳು , ಇದು ಹೈದ್ರಾಬಾದ್ ನಿಜಾಮನ ಕಾಲದ ಬೆಳ್ಳಿ ಕಾಯಿನ್ , ಅರಿವು ನನ್ನ ಸಂಪಾದನೆಯಲ್ಲಿ ಅರ್ಧ ಇವುಗಳಿಗೆ ಅಂತಾನೆ ಇನ್ವೆಸ್ಟ್ ಮಾಡಿದ್ದೀನಿ , ಐ ಲವ್ ಕಲೆಕ್ಟಿಂಗ್ ಹಿಸ್ಟಾರಿಕ್ ಸ್ಟಫ್ಸ್

YASHODHA

ಒಂದ್ ಸರ್ತಿ ಅಂತೂ ಅದ್ಯಾವುದೋ ಚಂಬು ತಗೋಬೇಕು ಅಂತ ತಿಂಗಳ ಸಂಪಾದನೆಯೆಲ್ಲ ಹಾಳ್ ಮಾಡ್ಕೊಂಡಿದ್ರು . ನಮ್ಮನ್ನ ಉಪವಾಸ ಇಡೋದೊಂದು ಬಾಕಿ ! ( ನಗು )

DEVAKI

ಅಕ್ಕ ಅದು ಮಾಮೂಲಿ ಚೊಂಬಲ್ಲ , ಅದಕ್ಕಿರೋ ಇತಿಹಾಸಾದ್ ಮುಂದೆ ಭಾವ ಕೊಟ್ಟ ದುಡ್ಡು ಕಮ್ಮಿನೆ ಗೊತ್ತ

ARIVU

( ನಸುನಗುತ್ತಾ ) ಅಮ್ಮ ಈ ಹುಚ್ಚು ನಮ್ಮ ಕೈಲಿ ಏನ್ ಬೇಕಿದ್ರೂ ಮಾಡ್ಸತ್ತೆ , ಕಾಯಿನ್ ಕಲೆಕ್ಷನ್ ಚಾಳಿ ನಂಗುಯಿದೆ , ರಾಷ್ಟ್ರಕೂಟರ ಕಾಲದ ಕೆಲವು ಕಾಯಿನ್ ಗಳು ಕಲೆಕ್ಟ್ ಮಾಡಿದ್ದೀನಿ ಸರ್...

GOPAL KRISHNA URS

ನಮ್ಮೂರಿಂದ ಐದ್ ಕಿಲೋಮೀಟರ್ ದೊರದಲ್ಲಿ ಕಲ್ಲಯ್ಯ ಅನ್ನೋರು ಕಾಯಿನ್ ಲೈಬ್ರರಿ ಮಾಡ್ಕೊಂಡಿದ್ದಾರೆ , ನಿಮಗೆ ಮನೆಗೆ ಹೊರಡೋ ಆತುರ ಇಲ್ಲ ಅಂದ್ರೆ , ಅವ್ರನ್ನ ಭೇಟಿ ಮಾಡಿಸ್ತೀನಿ ಅಪರೂಪದ ಕಾಯಿನ್ ಗಳು ಸಿಕ್ತಾವೆ..


©Srinidhi S
SWA Membership Number:54490

ARIVU

ದಯವಿಟ್ಟು ಸರ್ , ತುಂಬಾ ಖುಷಿಯಾಗತ್ತೆ !

GOPAL KRISHNA URS

ದೇವು ( ದೇವಕಿಗೆ ) ಕಲ್ಲಯ್ಯನ್ ಮನೆ ದಾರಿ ನಿಂಗ್ ನೆನ್ಪಿದ್ಯಲ್ಲ !

ದೇವಕಿ ಹೂ ಎಂದು ತಲೆ ಆಡಿಸುತ್ತಾಳೆ

GOPAL KRISHNA URS (CONT'D)

ನೀನೂ ನಮ್ ಜತೆಗ್ ಬಂದ್ಬಿಡು , ನಂಗ್ ಅಷ್ಟು ಸ್ಪಷ್ಟವಾಗಿ ದಾರಿ ಗೊತ್ತಿಲ್ಲ !

ದೇವಕಿ ಅರಿವು ಅನ್ನು ನೋಡು ಸ್ಮೈಲ್ ಮಾಡುವಳು , ಗುಡುಗಲು ಪ್ರಾರಂಭವಾಗುತ್ತದೆ

J CUT :

EXT. REHEARSAL PLACE , EVENING

ರಿಹರ್ಸಲ್ ನಡೆಯುತ್ತಿದೆ , ಒಂದು ಕಡೆ ಬ್ಲಾಕಿಂಗ್ ಮಾಡುತ್ತಿದ್ದಾರೆ , ಮತ್ತೊಂದುಕಡೆ ಕಿಟ್ಟಿ , ಮೈಕಲ್ , ಅಪೂರ್ವ ಸೆಟ್ ವರ್ಕ್ ಮಾಡುತ್ತಿದ್ದಾರೆ , ಸಂಗೀತದ ಪ್ರಾಕ್ಟೀಸ್ ಕೂಡ ಮತ್ತೊಂದು ಕಡೆ ನಡೆಯುತ್ತಿದೆ , ಮೇಷ್ಟ್ರು ಮುಖವಾಡಗಳಿಗೆ ಪೇಂಟಿಂಗ್ ಮಾಡುತ್ತಿದ್ದಾರೆ, ಸೈಡ್ ಅಲ್ಲಿ ಸ್ವಪ್ನ ಬಟ್ಟೆಗಳನ್ನು ಹೊಲಿಯುತಿದ್ದಾಳೆ. ಸತ್ಯ ಅವಳ ಎದುರು ನಿಂತು ಅವಳನ್ನು ಇಂಪ್ರೆಸ್ ಮಾಡಲು ಜೋಕ್ ಮಾಡುತ್ತಿದ್ದಾನೆ

CREON

ದೇಶಕ್ಕೆ ಒಂದು ಕೊಲೆಯಿಂದ ಅಂಟಿಕೊಂಡ ಪಾಪ ಅದು

OEDIPUS

ಯಾರ ಕೊಲೆ , ದೇವರು ಅವನ ಹೆಸರು ಹೇಳಲಿಲ್ಲವೇ !?

ಸ್ವಪ್ನ ಹಾಗು ಸತ್ಯ ಮಾತನಾಡುತ್ತಿರುವುದನ್ನು ಅಪೂರ್ವ ಕೆಲಸ ಮಾಡುತ್ತಲೇ ಗಮನಿಸುತ್ತಿದ್ದಾನೆ.

APOORVA

ಲೋಫರ್ ನನ್ ಮಗ ಸತ್ಯನ್ಗ್ ಸರಿಯಾಗ್ ಬೀಳ್ತಾವ್ ಗುರು , ಸ್ವಪ್ನನ್ ಸುತ್ತ ನೇ ಸುತ್ತಿರ್ತಾನೆ ಯಾವಾಗ್ಲೂ.

ಮೈಕಲ್ ಏನೋ ಹೇಳಲು ಮುಂದಾಗುತ್ತಾನೆ , ಕಿಟ್ಟಿ ಬೇಡ ಎಂದು ತಲೆ ಆಡಿಸುತ್ತಾನೆ , ಇಬ್ಬರು ಮುಖ ಮುಖ ನೋಡಿಕೊಳ್ಳುತ್ತಾರೆ , ಅಪೂರ್ವ ಅದನ್ನು ಗಮನಿಸುತ್ತಾನೆ.

APOORVA
(CONT'D)
ಯಾಕ್ರೋ , ಏನಾಯಿತು !?

MICHAEL

ಏನಿಲ್ಲ ಭೈ , ಹೇಳ್ಬಿಟ್ರೆ ಸುಮ್ನೆ ಸೈಕ್ ಆಗ್ತೀರಾ , ಯಾಕ್ ಬೇಕು

APOORVA

ಹೇಳ್ದೆ ಇದ್ರೆ ನಿಜವಾಗ್ಲೂ ಸೈಕ್ ಆಗ್ತೀನಿ ,

KITTI

ಬೇಡ ಬಿಡಪ್ಪ , ಮೊದ್ಲೇ ಮೆಂಟ್ಲು ನೀನು

APOORVA

ಕಿಟ್ಟಿ , ಅಷ್ಟೇ ಇವಾಗ !!

KITTI

ನಿನ್ನೆ ಸಿಟ್ಟಿಂಗ್ ಅಲ್ಲಿ ಮೂರ್ ಬಟ್ಲು ಹಾಟ್ ಇಳಿಸವ್ರೆ ಬಾಸು ( ಸತ್ಯನ ಕಡೆ ನೋಡುತ್ತಾ ) ಆಗ ಒಂದೊಂದೇ ಮ್ಯಾಟ್ರು ಹೊರಗ್ ಬಂದ್ವು , ಅವನಿಗೇನೋ ಸ್ವಪ್ನನ್ ಬಾಡಿ ಸ್ಮೆಲ್ ಅಂದ್ರೆ ತುಂಬಾ ಇಷ್ಟ ಅಂತೇ ಗುರು , ಶೋ ಆದ್ಮೇಲೆ ಅವಳ ಕಾಸ್ಟ್ಯೂಮ್ಸ್ ಮನೆಗ್ ತಗೊಂಡ್ ಹೋಗಿದ್ದ , ರಾತ್ರಿ ಮಲಗೋವಾಗ ಅವನ್ ಜತೆ ಅವಳ್ ಬಟ್ಟೆಗಳನ್ನ ಇಟ್ಕೊಂಡಿದ್ದನಂತೆ..

ಅಪೂರ್ವನ ರಿಯಾಕ್ಷನ್ , ನಾಟಕದ ಪ್ರಾಕ್ಟೀಸ್ ಅಲ್ಲಿ ಸಂಭಾಷಣೆಯೊಂದು ಮೂಡುತ್ತದೆ.

OEDIPUS

ಆಗಬೇಕಾದ್ದು ಆಗುವುದೇ ನಿಜವಾದರೆ , ನೀನು ಹೇಳಬೇಕಾದ್ದನ್ನು ಹೇಳಲೇಬೇಕು

ಅಪೂರ್ವನಿಗೆ ಸಿಟ್ಟೇರುತ್ತದೆ , ಸತ್ಯ ಸ್ವಪ್ನಾಳೊಂದಿಗೆ ಮಾತನಾಡುತ್ತಿರುತ್ತಾನೆ , ಬಟ್ಟೆ ಹೊಲಿಯುತ್ತಿರುವ ಸ್ವಪ್ನಾಳ ಹೆಗಲ ಮೇಲೆ ತನ್ನ ಕೈ ಇಟ್ಟಿರುತ್ತಾನೆ.

MICHAEL

ಲೈಫ್ ಅಲ್ಲಿ ಒಂದ್ ಸರ್ತಿ ಆದ್ರೂ ಸ್ವಪ್ನನ್ ಜತೆ...

SWA SCREENWRITERS ASSOCIATION

KITTI

ಮೈಕಲ್ ( ಬೇಡ ಎಂದು ತಲೆ ಆಡಿಸುತ್ತಾನೆ ) , ಮಗ
ಈಗೇನು ರಿಯಾಕ್ಟ್ ಆಗ್ಬೇಡ , ರಿಹರ್ಸಲ್ ಆಗ್ಲಿ ಕೂತು
ಕ್ಲಿಯರ್ ಮಾಡ್ಕೊಳ್ಳೋಣ

ಅಪೂರ್ವ ಮಾಡುತ್ತಿರುವ ಕೆಲಸ ಬಿಟ್ಟು ಎದ್ದು ನಿಲ್ಲುವನು, ಜೋರಾಗಿ ಸತ್ಯ ಎಂದು ಕೂಗುವನು. ಕಿಟ್ಟಿ ಹಾಗೂ ಮೈಕಲ್ ಅಪೂರ್ವನನ್ನು ತಡಿಯಲು ಮುಂದಾಗುತ್ತಾರೆ , ಅದೇ ಸಮಯಕ್ಕೆ ರಿಹರ್ಸಲ್ ಸ್ಥಳಕ್ಕೆ ಮುದುಕನ ಪ್ರವೇಶವಾಗುತ್ತದೆ , ಮುದುಕ ಬರುವುದು ಮತ್ತೊಂದು ಬದಿಯಲ್ಲಿದ್ದ ಇವರಿಗೆ ಕಾಣುವುದಿಲ್ಲ.

KITTI (CONT'D)

ಈಗ್ ಬೇಡ ಮಗ

APOORVA

ನಾನೇನು ಮಾಡಲ್ಲ ಗುರು !

ಸತ್ಯ ಅಪೂರ್ವನ ಬಳಿ ಬರುತ್ತಾನೆ , ಅಪೂರ್ವ ಸತ್ಯನ ಹೆಗಲ ಮೇಲೆ ಕೈ ಹಾಕಿಕೊಂಡು ಮಾತನಾಡಲು ಮುಂದಾಗುತ್ತಾನೆ. ಅಷ್ಟರಲ್ಲೇ ಮುದುಕ ಡೈರೆಕ್ಟರ್ ಜತೆ ಏನನ್ನೋ ಮಾತನಾಡಲು ಮುಂದಾಗುತ್ತಾನೆ ಅದನ್ನು ಅಪೂರ್ವ ಆಗಲಿ ಆತನ ಸ್ನೇಹಿತರಾಗಲಿ ನೋಡುವುದಿಲ್ಲ.

APOORVA
(CONT'D)

ನಾನು ಸ್ವಪ್ನ ಕಮಿಟ್ ಆಗಿದಿವಿ ಗುರು , ( ಸ್ಮೈಲ್)

SATHYA

ಗೊತ್ತು ಭೈ , ಏನೋ ಹೊಸ ವಿಷ್ಯ ಅನ್ನೋಥರ
ಹೇಳ್ತಿದ್ದೀರಲ್ಲ

APOORVA

ಸತ್ಯ ಪ್ಲೀಸ್ , ಅವಳ್ ಹಿಂದೆ ಬಿದ್ದು ಟೈಮ್ ವೇಸ್ಟ್
ಮಾಡ್ಬೇಡ !

SATHYA

ಹೇ ಹಾಗೆಲ್ಲ ಏನೂ ಇಲ್ಲ ಭೈ , ಸ್ವಪ್ನ ನಾನು ಕಾಲೇಜ್
ಡೇಸ್ ಇಂದ ಫ್ರೆಂಡ್ಸ್ ಅಲ್ವ ಅದಿಕ್ಕೆ ಸ್ವಲ್ಪ ಕ್ಲೋಸ್ ಆಗಿ
ಮಾತಾಡ್ತೀವಿ ಅಷ್ಟೇ , ನಿಮ್ ರಿಲೇಷನ್ಶಿಪ್ ಮದ್ಯೆ ನಾನ್
ಯಾಕ್ ಬರ್ಲಿ ಭೈ.
( ಸತ್ಯ ಮಾತನಾಡುತ್ತ ಕಿಟ್ಟಿ ಹಾಗೂ ಮೈಕಲ್ ಅನ್ನು
ನೋಡುತ್ತಾನೆ , ಅವರು ಕೆಲಸ ಮಾಡುತ್ತಿರುವಂತೆ
ಇವನನ್ನೇ ನೋಡುತ್ತಾರೆ )


©Srinidhi S
SWA Membership Number:54490

APOORVA

ಹೇಳ್ಬೇಕು ಅನ್ನಿಸ್ತು ಮಗ , ಸುಮ್ನೆ ಮುಂದೆ ಕಾಂಪ್ಲಿಕೇಷನ್ಸ್ ಆಗೋದ್ ನಂಗ್ ಇಷ್ಟ ಇಲ್ಲ ,

SATHYA

ಗೊತ್ತಿಲ್ದೆ ನಾನ್ ತಪ್ ಮಾಡಿದ್ರೆ ..

APOORVA

ಸತ್ಯ ಚಿಲ್ , ನೀನೇನು ತಪ್ ಮಾಡಿಲ್ಲ , ಮುಂದೇನೂ ಆಗೋದ್ ಬೇಡ ಅಂತ ಹೇಳ್ದೆ ಅಷ್ಟೇ , ತಪ್ ತಿಳಿಬೇಡ ಗುರು.

ಸತ್ಯನ ಮುಖ ಸಣ್ಣಗಾಗುತ್ತದೆ , ನಡೆದುಹೋಗುತ್ತ ಮೈಕಲ್ ಹಾಗೂ ಕಿಟ್ಟಿಯನ್ನೇ ಗುರಾಯಿಸುತ್ತ ಹೋಗುತ್ತಾನೆ. ಮುದುಕ ಡೈರೆಕ್ಟರ್ ಕೈಗೆ ಒಂದು ಚೀಟಿಯನ್ನು ಕೊಡುತ್ತಾನೆ. ದೂರದಿಂದ ಅಪೂರ್ವನನ್ನು ಗಮನಿಸುತ್ತಾನೆ. ಅಪೂರ್ವ ಮುಖವಾಡಗಳ ಮರದ ಮುಂದೆ ನಿಂತು ಮೈಕಲ್ ಹಾಗೂ ಕಿಟ್ಟಿಯ ಜತೆ ಮಾತನಾಡುತ್ತಿರುತ್ತಾನೆ.

CUT TO:

INT. GOPAL KRISHNA HOUSE , EVENING

ಹೊರಗಡೆ ಜೋರಾಗಿ ಮಳೆ ಬರುತ್ತಿದೆ , ದೇವಕಿ ಬಟ್ಟೆ ಬದಲಿಸಿದ್ದಾಳೆ , ಅರಿವು , ಗೋಪಾಲ್ ಹಾಗೂ ದೇವಕಿ ಕಾಯುತ್ತ ಕಾಫಿ ಕುಡಿಯುತ್ತ ಕುಳಿತಿದ್ದಾರೆ , ಯಶೋಧ ಬಟ್ಟೆಗಳಿಗೆ ಸ್ಟಿಚ್ ಮಾಡುತ್ತಾ ದೂರದರ್ಶನ ನೋಡುತ್ತಿದ್ದಾರೆ

GOPAL KRISHNA URS

ಇತಿಹಾಸ ಕೆದುಕೊದು ಮಳೆಗ್ ಇಷ್ಟ ಇಲ್ಲ ಅನ್ಸತ್ತೆ .

DEVAKI

ಇದು ಬೇಗ ನಿಲ್ಲೋಹಾಗೆಂತು ಕಂತಿಲ್ಲ , ಮಲೆನಾಡ್ ಮಳೆ ಕಡಿಮೆ ಅಂದ್ರು ಏಳ್ ತಾಸ್ ಬಿಳತ್ತೆ.

GOPAL KRISHNA URS

ಅರಿವು , ನೀವ್ ಇವತ್ ರಾತ್ರಿ ಇಲ್ಲೇ ಉಳ್ಕೊಳಿ , ಬೆಳಿಗ್ಗೆ ತಿಂಡಿ ಮುಗ್ಸಿ ಕಲ್ಲಯ್ಯನ್ ಮನೆಗ್ ಹೋಗಣ , ಹನ್ನೊಂದು ಇಪ್ಪತ್ತಕ್ಕೆ ಟ್ರೈನ್ ಇದೆ , ಅಲ್ಲಿಂದ ಹಾಗೆ ರೈಲ್ವೆ ಸ್ಟೇಷನ್ಗ್ ಬಿಡ್ತೀನಿ.

SWA SCREENWRITERS ASSOCIATION

ಅರಿವು ಕಾಫಿ ಕುಡಿಯುತ್ತ ಅಕಸ್ಮಾತಾಗಿ ದೇವಕಿಯನ್ನು ನೋಡುತ್ತಾನೆ , ದೇವಕಿ ಆತನನ್ನೇ ನೋಡುತ್ತಿರುವುದು ಗಮನಕ್ಕೆ ಬರುತ್ತದೆ , ಅರಿವು ನೋಡುತ್ತಿದ್ದಹಾಗೆ ದೇವಕಿ ದೃಷ್ಟಿ ಬೇರೆಡೆಗೆ ತಿರುಗಿಸುತ್ತಾಳೆ.

CUT TO:

EXT. REHEARSAL PLACE , NIGHT

ಎಲ್ಲರೂ ಸರ್ಕಲ್ ಅಲ್ಲಿ ನಿಂತಿದ್ದಾರೆ , ಅಪೂರ್ವ ಸರ್ಕಲ್ ಇಂದ ಹೊರಕ್ಕೆ ತುಸು ದೂರದಲ್ಲಿ ಕುಳಿತಿದ್ದಾನೆ , ನಿರ್ದೇಶಕರು ಮಾತನಾಡುತ್ತಿದ್ದಾರೆ.

NIRDESHAKA

ನಿನ್ನೆ ಹೆಗ್ಗೋಡಲ್ಲಿ ರಾಜಾರಾಮ್ ಅವರ ಪರಿಚಯ ಆಯ್ತು , ನಾಳೆ ನಾಡಿದ್ರಲ್ಲಿ ಕನ್ಫರ್ಮ್ ಆಗತ್ತಂತೆ , ( ಖುಷಿ ) ಎಲ್ಲ ಸರಿ ಬಂದ್ರೆ ೨೪ನೇ ತಾರೀಕು ಇಷ್ಟೊತ್ತಿಗೆ ನಾವೆಲ್ರು ಬಾಂಬೆಯಲ್ಲಿ ಷೋ ಕೊಡ್ತಿರ್ತೀವಿ. ನಮ್ಮ ಟೀಮ್ ಕನಸು . ( ಖುಷಿ )

ಎಲ್ಲರು ಸಕತ್ ಥ್ರಿಲ್ ಆಗುತ್ತಾರೆ , ಜೋರಾಗಿ ಕೂಗಿ ಕೇಕೆಹಾಕುತ್ತಾರೆ , ಎಲ್ಲರ ಮುಖದಲ್ಲಿ ಸಂತೋಷ ಸಡಗರ ಮನೆ ಮಾಡಿದೆ.

NIRDESHAKA (CONT'D)

ನಾಳೆ ಹೇಗೂ ರಜೆ ಇದೆ , ಎಲ್ರು ಬೆಳಗ್ಗೆನೇ ಸೇರೋಣ , ತುಂಬಾ ದೊಡ್ಡ ವೇದಿಕೆ , ನಮ್ಮಿಂದ ಸಣ್ಣ ತಪ್ಪು ಕೂಡ ಆಗ್ಬಾರ್ದು ಸ್ವಲ್ಪ ಬ್ಲಾಕಿಂಗ್ ಚೇಂಜ್ ಮಾಡ್ಬೇಕಂತ ಇದ್ದೀನಿ ನೋಡಣ !

CUT TO:

EXT. OUTSIDE OF REHERSAL SPACE , NIGHT

ಎಲ್ಲರು ಹೊರಡಲು ಮುಂದಾಗಿದ್ದಾರೆ , ಅಷ್ಟರಲ್ಲಿ ನಿರ್ದೇಶಕರು ಕಿಟ್ಟಿಯೊಡನೆ ಮಾತನಾಡುತ್ತಿದ್ದ ಅಪೂರ್ವನನ್ನು ಕರೆಯುತ್ತಾರೆ.

KITTI

ಬೆಳ್ಗೆ ಎಂಟ್ ಗಂಟೆಗೆ ಬಂದ್ಬಿಡ್ತೀನಿ ಮಗ , ಹಳೆ ಸೆಟ್ ರೂಮ್ ಅಲ್ಲಿ ಒಂದಿಷ್ಟ್ ಪ್ರಾಪರ್ಟೀಸ್ ಇವೆ ತಂದ್ಬಿಡೋಣ

ನಿರ್ದೇಶಕರು ಅಪೂರ್ವನನ್ನು ಕರೆಯುತ್ತಾರೆ , ಅಪೂರ್ವ ಅವರ ಬಳಿ ನಡೆದು ಬರುತ್ತಾನೆ.

SWA SCREENWRITERS ASSOCIATION

NIRDESHAKA

ಯಾರೋ ಕನ್ನಡ ಪ್ರೊಫೆಸರ್ ಒಬ್ರು ನನ್ನ ಮೀಟ್ ಮಾಡಿ ಈ ಚೀಟಿ ಕೊಟ್ರು , ಅವರ್ದು ಏನೋ ಸಣ್ಣ ಎಡಿಟಿಂಗ್ ಪ್ರಾಜೆಕ್ಟ್ ಅಂತೇ , ೨ ತಿಂಗ್ಳು ಕೆಲಸ , ತಿಂಗಳಿಗೆ ೩೦ ರಿಂದ ೪೦ ಸಾವಿರ ತಂಕ ಕೊಡ್ತೀನಿ ಅಂದ್ರು . ನೀನ್ ಪಾರ್ಟ್ ಟೈಮ್ ಕೆಲಸ ಹುಡುಕೋವಾಗ ನಾನು ನಾಲ್ಕೈದ್ ಜನಕ್ ಕೇಳಿದ್ದೆ , ಯಾರೋ ನಿನ್ ಹೆಸರು ರೆಕಮೆಂಡ್ ಮಾಡಿರ್ಬೇಕು , ನಾಳೆ ೧೦:೩೦ ಅಷ್ಟಲ್ಲಿ ( ಅಡ್ರೆಸ್ ಚೀಟಿ ಕೊಡುತ್ತ ) ಈ ಅಡ್ರೆಸ್ ಅಲ್ಲಿ ಮೀಟ್ ಆಗ್ಬೇಕಂತೆ , ನೋಡ್ಕೊಂಡ್ ಬಾ , ನಿಂಗ್ ಒಪ್ಪಿಗೆ ಆಗೋಹಾಗಿದ್ರೆ ಪ್ರಾಜೆಕ್ಟ್  ಮಾಡು.

ಅಪೂರ್ವ ಸ್ಮೈಲ್ ಮಾಡುತ್ತಾನೆ.

DIALOGUE CUT

EXT. NEAR APOORVA HOUSE , NIGHT

ಅಪೂರ್ವ ಗಾಡಿಯಿಂದ ಇಳಿಯುತ್ತಿದ್ದಾನೆ ಹಾಗೂ ಸ್ವಪ್ನ ಗಾಡಿಯಲ್ಲೇ ಕುಳಿತಿದ್ದಾಳೆ ಅಪೂರ್ವ ಸ್ವಪ್ನ ಜತೆಗೆ ಮಾತನಾಡುತ್ತಿದ್ದಾನೆ

APOORVA

ನಂಗ್ ಬರೋದು ಬೇಸಿಕ್ ಎಡಿಟಿಂಗ್ ಅಷ್ಟೇ ಕಣೆ , ೩೦ , ೪೦ ಸಾವಿರ ಕೊಡ್ತಾರೆ ಅಂದ್ರೆ ಎಕ್ಸ್ಪೆಕ್ಟೇಶನ್ನು ಹಾಗೆ ಇರುತ್ತೆ ಅಲ್ವ !

SWAPNA

ನೀನೆ ಎಲ್ಲ ಕಲ್ಪನೆ ಮಾಡ್ಕೋಬೇಡ , ಆ ಕಂಪನಿಯವರು ಇನ್ನೂ ಕಾಲ್ ಮಾಡಿಲ್ಲ ತಾನೇ !

APOORVA

ಇಲ್ಲ  , ನೆಕ್ಸ್ಟ್ ವೀಕ್ ಜಾಯಿನ್ ಆಗಿ ಅಂದಿದ್ರು

SWAPNA

ನಾಳೆ ಹೋಗ್ಬಾ ಅಪ್ಪು , ಏನಾದ್ರೂ ಓಕೇ ಆಯಿತು ಅಂದ್ರೆ ನಿನ್ ಅಲ್ಲಿ ೧೦ ತಿಂಗಳಲ್ಲಿ ದುಡಿಯದು ಇಲ್ಲಿ ೨ ತಿಂಗಳಲ್ಲೇ ದುಡೀಬೋದು , ಆಮೇಲೆ ಬೇರೇನೂ ಟೆನ್ಷನ್ ಇಲ್ಲದೆ ಸ್ಟಡಿಸ್ ಮೇಲೆ ಕಾನ್ಸನ್ಟ್ರೇಟ್ ಮಾಡಬೋದು ನೀನು.

SWA SCREENWRITERS ASSOCIATION

ಅಪೂರ್ವನ ರಿಯಾಕ್ಷನ್ ಮೇಲೆ ಕಟ್ ಆಗುತ್ತದೆ

CUT TO:

INT. GOPAL KRISHNA HOUSE , ROOM , NIGHT

ಹೊರಗಡೆ ಮಳೆ ಸುರಿಯುತ್ತಿರುವ ಸದ್ದು ಕೇಳಿಬರುತ್ತಿದೆ , ಅರಿವು ಪುಸ್ತಕ ಓದುತ್ತ ಹಾಸಿಗೆಯ ಮೇಲೆ ದಿಂಬಿಗೆ ಒರಗಿ ಕುಳಿತುಕೊಂಡಿದ್ದಾನೆ , ಅಷ್ಟರಲ್ಲಿ ಬಾಗಿಲು ತಟ್ಟುತ್ತ , ಹೊರಗಿನಿಂದ ದೇವಕಿ ಮಾತನಾಡುತ್ತಾಳೆ

DEVAKI

ಒಳಗ್ ಬರ್ಬೋದ ⁉

ಅರಿವು ಸರಿಯಾಗಿ ಕುಳಿತು

ARIVU

ಹಾ ಬನ್ನಿ.

ದೇವಕಿ ಹಣ್ಣು ಹಾಗೂ ಪಂಚೆ ತಂದಿರುತ್ತಾಳೆ , ಟೀಪಾಯ್ ಮೇಲೆ ಹಣ್ಣು ಹಾಗೂ ಪಂಚೆ ಇಡುತ್ತಾಳೆ

DEVAKI

ಭಾವ ಕೊಡ್ಲಿಕ್ ಹೇಳಿದ್ರು , ಮಲಗ್ಲಿಕ್ ಪ್ಯಾಂಟ್ ಏ ಕಂಫರ್ಟಬಲ್ ಇದ್ರೆ ಸಮಸ್ಯೆಯಿಲ್ಲ , ಯಾವ್ ಪುಸ್ತಕ ಇದು ⁉ ( ಪುಸ್ತಕದ ಹೆಸರು ಕಾಣುತ್ತದೆ ) ಶಿಕಾರಿ , ನಂಗು ಚಿತ್ತಾಲರ ಬರವಣಿಗೆ ತುಂಬಾ ಇಷ್ಟ ಈಗ್ ಓದುತ್ತಿದ್ದಿರಾ

ARIVU

ಇಲ್ಲ ಈಗಾಗ್ಲೇ ಓದಿದ್ದಿನಿ , ಬುಕ್ ರಾಕ್ ಅಲ್ಲಿತ್ತು , ಸುಮ್ನೆ ನೋಡ್ತಿದ್ದೆ ! ( ಹಣ್ಣು ತಿನ್ನುತ್ತಾ ) ನೀವು ಇಲ್ಲೇ ಇರೋದ ⁉

DEVAKI

ಅಕ್ಕ ನಾನು ಚಿಕ್ಕಪ್ಪನ್ ಮನೇಲಿ ಬೆಳ್ದಿದ್ದು , ಅಲ್ಲಿ ಕಿರಿಕಿರಿ ಜಾಸ್ತಿ ಮರ್ರೆ, ಅದಿಕ್ಕೆ ಅಕ್ಕನ್ಗ್ ಮದುವೆ ಆಗಿದ್ದೆ ಹಠ ಮಾಡಿ ಅವಳೊಟ್ಟಿಗೇನೇ ಬಂದ್ಬಿಟ್ಟೆ ! ಪಾಪ ಭಾವ ಸಂಪಾದಿಸೋ ನಾಲಕ್ ಕಾಸಲ್ಲಿ ನನ್ ಹೊಟ್ಟೆನೂ ತುಂಬಿಸಬೇಕು. ನೀವ್ ಮೈಸೂರೊರಂತೆ ⁉

SWA SCREENWRITERS ASSOCIATION

ಅರಿವು ಹೌದು ಎನ್ನುವಂತೆ ತಲೆಯಾಡಿಸುತ್ತಾನೆ

DEVAKI (CONT'D)

ನಾನ್ ಮೈಸೂರ್ ನೋಡೆಯಿಲ್ಲ , ಬರಿ ಫೋಟೋಲಿ , ದೂರದರ್ಶನದಲ್ಲಿ ನೋಡಿದ್ದಷ್ಟೇ , ತುಂಬಾ ಜನ ಬರ್ತಾರೆ ಅಂತ ಕಾಣತ್ತಲ್ವಾ !? ಅರಮನೆ , ಚಾಮುಂಡಿ ಬೆಟ್ಟ ಎಲ್ಲ ನೋಡ್ಬೇಕ್ ನಾನು !

ARIVU

ಈ ಸರ್ತಿ ದಸರಾಗೆ ಬನ್ನಿ , ನಮ್ಮಲ್ಲೇ ಉಳ್ಕೊಬೋದು

DEVAKI

ಖಂಡಿತ ಬರ್ತೀನಿ , ಈ ಊರ್ ಬಿಟ್ಟು ಎಲ್ಲೂ ಹೋಗಿಲ್ಲ ನಾನು

ಆಸೆಯ ಕಂಗಳಿಂದ ಅರಿವುವನ್ನೇ ನೋಡುತ್ತಾಳೆ , ಅರಿವು ಹಣ್ಣು ತಿನ್ನುತ್ತಾ ಪುಸ್ತಕದ ಹಾಳೆಗಳನ್ನು ತಿರುಚುತ್ತಿರುತ್ತಾನೆ . ಅರಿವು ಕೂಡ ತುಸುಹೊತ್ತಲ್ಲೆ ದೇವಕಿಯನ್ನು ನೋಡುತ್ತಾನೆ , ಇಬ್ಬರು ಎದುರುಬದಿರು ಕುಳಿತಿದ್ದಾರೆ. ಇಬ್ಬರ ಕಣ್ಣುಗಳು ಸೇರುತ್ತವೆ

J CUT :

EXT. OUTSIDE OF REHERSAL SPACE , DAY

EXT. REHEARSAL PLACE , DAY

**September 6 . 2022**

ಮೈಕಲ್ , ಕಿಟ್ಟಿ , ಅಪೂರ್ವ , ಹಾಗು ಇನ್ನಿಬ್ಬರು ಸ್ನೇಹಿತರು ಓಮಿನಿಯಿಂದ ಪ್ರಾಪರ್ಟೀಸ್ ಇಳಿಸುತ್ತಿದ್ದಾರೆ . ಮೈಕಲ್ ಪ್ರಾಪರ್ಟಿ ಕೆಳಗೆ ಬೀಳಿಸುತ್ತಾನೆ , ಕಿಟ್ಟಿ ಬಯ್ಯುತ್ತಾನೆ.

KITTI

ಮಗ ಹುಷಾರು !

MONTAGES

೧. ಪ್ರಾಪರ್ಟೀಸ್ ಇಳಿಸುತ್ತಾರೆ , ಸಮಯ ಸರಿಯುತ್ತದೆ , ಒಬ್ಬೊಬ್ಬರೇ ಟೀಮ್ ಮೇಟ್ಸ್ ಬರುತ್ತಾರೆ
೨. ಎಲ್ಲರು ಸರ್ಕಲ್ ಅಲ್ಲಿ ಕುಳಿತು ತಿಂಡಿ ಮಾಡುತ್ತಾರೆ

SWA SCREENWRITERS ASSOCIATION

KITTI

ಮಗ ನೀನೀಗ ಯಾವ್ ಕಡೆ ಹೋಗ್ಬೇಕೆಳು

APOORVA

ಬಸವನಗುಡಿ ಹತ್ರ ಮಗ

KITTI

ಒಂದ್ ಕೆಲಸ ಮಾಡು , ನೀನ್ ಓಮಿನಿ ಎತ್ಕೊಂಡ್
ಹೋಗು , ಇಲ್ಲಿ ಟೂ ವಿಲರ್ಸ್ ಬೇಕಾಗತ್ತೆ , ಮದ್ಯಾನ
ಹೇಗಿದ್ರು ನಾವು ಅದೇ ರೂಟ್ ಮೇಲೆ ಬರ್ಬೇಕು ,
ಅಲ್ಲಿಂದ ಮಾರ್ಕೆಟ್ ಗೆ ಒಟ್ಟಿಗೆ ಹೋಗಣ

ಃ. ಸ್ವಪ್ನ ತಾನು ತಂದಿದ್ದ ಶರ್ಟ್ ಗಳನ್ನು ಅಪೂರ್ವನಿಗೆ ಕೊಡುತ್ತಾಳೆ.
ಳ. ಅಪೂರ್ವ ಬಟ್ಟೆ ಚೇಂಜ್ ಮಾಡಿಕೊಳ್ಳುತ್ತಾನೆ , ಸ್ವಪ್ನ ಅವನ ಕೂದಲು ಸರಿ ಮಾಡುತ್ತಾಳೆ , ಹಗ್ ಮಾಡಿ ಆಲ್ ದಿ ಬೆಸ್ಟ್ ಹೇಳುತ್ತಾಳೆ.
ೞ. ಗಾಡಿಯ ಮಿರರ್ ಅಲ್ಲಿ ಮುಖ ನೋಡಿಕೊಂಡು ತಲೆ ಕೂದಲನ್ನು ಸರಿಪಡಿಸಿಕೊಂಡು ಕೂರುತ್ತಾನೆ

MATCH CUT TO:

EXT. GOPAL KRISHNA HOUSE , DAY

**September 6 . 1996**

ಅರಿವು ಗಾಡಿಯ ಮುಂದಿನ ಸೀಟ್ ಅಲ್ಲಿ ಕೂರುತ್ತಾನೆ , ಡ್ರೈವಿಂಗ್ ಸೀಟ್ ಅಲ್ಲಿ ದೇವಕಿ ಕುಳಿತಿರುತ್ತಾಳೆ , ಆಶ್ಚರ್ಯ ಚಕಿತನಾಗಿ ನೋಡುತ್ತಾನೆ.

ARIVU

ನೀವ್ ಓಡುಸ್ತೀರಾ

DEVAKI

ಹೂ , ನಾವಿಬ್ರೇ ಹೋಗ್ಬರಬೇಕೀಗ , ಅಕ್ಕ ಭಾವಂಗೆ
ಯಾವ್ದೋ ಕೆಲಸ ಬಂದಿದೆ ಅವ್ರು ಅಲ್ಲಿಗ್ ಹೋಗ್ಬೇಕಂತೆ

ARIVU

ದೂರ ಇದ್ರೆ ಹೇಳಿ ನಾನೇ ಓಡಿಸ್ತಿನಿ

DEVAKI

ಸಮಸ್ಯೆಯಿಲ್ಲ , ನಾ ಚನ್ನಾಗೇ ಓಡುಸ್ತೀನಿ , ನೀವೇನು
ಮರ್ತಿಲ್ಲ ತಾನೇ ‼

ಇಲ್ಲ ಎನ್ನುವಂತೆ ತಲೆಯಾಡಿಸುತ್ತಾನೆ ,

DEVAKI (CONT'D)

ಹೊರಡೋಣ್ವ ಹಾಗಿದ್ರೆ

ಯಶೋಧ ಹಾಗೂ ಗೋಪಾಲ್ ಗೆ  ಅರಿವು ಬೈ ಮಾಡುತ್ತಾನೆ , ಗಾಡಿ ಮೂವ್ ಆಗುತ್ತದೆ.

INTRCUT:

EXT. BENGALURU ROADS , DAY

ಅಪೂರ್ವ ಗಾಡಿಯಲ್ಲಿ ಮೂವ್ ಆಗುತ್ತಿದ್ದಾನೆ , ಬೆಂಗಳೂರಿನ ರಸ್ತೆಗಳಲ್ಲಿ ಗಾಡಿ ಸಾಗುತ್ತದೆ.

INTRCUT:

EXT. RAYADURGA ROADS , DAY

ದೇವಕಿ ಗಾಡಿ ಓಡಿಸುತ್ತ ಮಾತನಾಡುತ್ತಿರುತ್ತಾಳೆ , ಅರಿವು ಕೂಡ ಆಕೆಯ ಮಾತಿಗೆ ತಲೆಯಾಡಿಸುತ್ತಿದ್ದಾನೆ. ಮಾತಿನ ಮಧ್ಯೆ ಅರಿವು ಸೂಟ್ಕೇಸ್ ನೋಡುತ್ತಾಳೆ , ಆಕೆಗೆ ಅದು ವಿಚಿತ್ರವಾಗಿರುವಂತೆ ಕಾಣುತ್ತದೆ.

DEVAKI

ಬಂದಾಗಿಂದ ನೋಡ್ತಿದ್ದೇನೆ , ಆ ಸೂಟ್ಕೇಸ್ ಬಿಟ್ಟು ಒಂದ್
ಕ್ಷಣ ಸಾ ಇರ್ತಿಲ್ಲ ನೀವು , ಅದ್ರಲ್ಲಿ ಅಂತದ್ದೇನಿದೆ ಮರ್ರೆ

ಅರಿವು ಯಾವುದೊ ಯೋಚನೆಯಲ್ಲಿದ್ದವನು , ಏನಿಲ್ಲ ಎಂಬಂತೆ ಸ್ಮೈಲ್ ಮಾಡುತ್ತಾನೆ.

INTRCUT:

EXT. BENGALURU ROADS , DAY

ಅಪೂರ್ವನ ಗಾಡಿ ನಿರ್ಜನ ಪ್ರದೇಶದಲ್ಲಿ ಸಾಗುತಿದೆ , ಅದೇ ಸಮಯಕ್ಕೆ ಅವನ ಎದುರು ರಸ್ತೆಯ ನಡುವಿನಲ್ಲಿ ಹಠಾತ್ತನೆ ಅಪೂರ್ವನ ಪ್ರತಿರೂಪಿ ನಿಂತಿರುವುದು ಕಾಣುತ್ತದೆ , ಅಪೂರ್ವ ಗಾಭರಿಯಲ್ಲಿ ಗಾಡಿಯನ್ನು ತಿರುಗಿಸುತ್ತಾನೆ , ಸಡನ್ ಆಗಿ ಬ್ರೇಕ್ ಪ್ರೆಸ್ ಮಾಡುತ್ತಾನೆ , ಅಪೂರ್ವ ಶಾಕ್ ಆಗಿದ್ದಾನೆ ಅತ್ತಿತ್ತ ನೋಡುತ್ತಾನೆ , ಆ ಪ್ರತಿರೂಪಿ ಎಲ್ಲೂ ಕಾಣುವುದಿಲ್ಲ.

INTRCUT:

EXT. RAYADURGA ROADS , DAY

ಕಾರ್ ರಾಯದುರ್ಗದ ವಿವಿಧ ರಸ್ತೆಗಳಲ್ಲಿ ಮೂವ್ ಆಗುತ್ತದೆ. ಅರಿವು ಪೇಪರ್ ನೋಡುತ್ತಾ ಕುಳಿತಿದ್ದಾನೆ , ದೇವಕಿ ಕಾರ್ ಓಡಿಸುತ್ತಾ ಒಂದೆರಡು ಸರ್ತಿ ಅರಿವುನನ್ನೇ ನೋಡುತ್ತಾಳೆ.

INTRCUT:

EXT. BENGALURU ROADS , DAY

ಅಪೂರ್ವ ಗಾಡಿ ನಿಲ್ಲಿಸಿ ಉಸಿರೆಳೆದುಕೊಳ್ಳುತ್ತಿದ್ದಾನೆ , ಅತ್ತಿತ್ತ ನೋಡುತ್ತಾನೆ , ತನ್ನ ಪ್ರತಿರೂಪಿ ಕಾಣುವುದಿಲ್ಲ , ನಂತರ ಗಾಡಿ ಸರಿ ಮಾಡಿಕೊಳ್ಳಲ್ಲು ಮುಂದಾಗಿದ್ದೆ ತನ್ನ ಪಕ್ಕದಲ್ಲೇ ಅಪೂರ್ವನ ಪ್ರತಿರೂಪಿ ಕುಳಿತಿರುವುದು ಗಮಕ್ಕೆ ಬರುತ್ತದೆ. ವಿಪರೀತ ಶಾಕ್ ಆಗುತ್ತದೆ.

APOORVA 2

ಹೆದರ್ಬೇಡಾ , ನಾನಿಂಗ್ ಏನು ಮಾಡಲ್ಲ

INTRCUT:

INT. SOWMYA COUNCILING CENTRE

ಸೌಮ್ಯ ಅಪೂರ್ವನ ಜತೆಗೆ ಮಾತನಾಡುತ್ತಿದ್ದಾಳೆ

SOWMYA

ಕೆಲವೊಂದ್ ಸರ್ತಿ ತಲೇಲಿ ಸೃಷ್ಟಿಯಾಗಿರೋ ಪಾತ್ರಗಳು
ಕೂಡ ನಿಜ ಅನ್ನಿಸುವಷ್ಟು ಅಕ್ಯುರೇಟ್ ಆಗಿರ್ತವೆ ,
ಕಲ್ಪನೆಗೂ ಸತ್ಯಕ್ಕೂ ನಡುವೆ ಇರೋ ಥಿನ್ ಲೈನ್
ಅಳಿಸಿಹೋಗಿರತ್ತೆ. ಡೋಂಟ್ ಬಿಲೀವ್ ವಾಟ್ ಯು ಸೀ ,
ಸೆನ್ಸ್ ಇಟ್ ತ್ರು ಸೆಕಂಡರಿ ಮೀಡಿಯಂ , ಐ ಮೀನ್
ಕ್ಯಾಮೆರಾ ಮಿರರ್ , ಎಸ್ಟ್ರೀಮ್ ಎಮೋಷನಲ್ ಆಗಿದ್ರೆ
ಫಸ್ಟ್ ಟ್ರೈ ಟು ಬಿ ನಾರ್ಮಲ್ !

INTRCUT:

EXT. BENGALURU ROADS , DAY

APOORVA

( ಸ್ವಾಗತ ) ಕಾಮ್ ಡೌನ್ ಅಪೂರ್ವ , ಭ್ರಮೆ ಇರ್ಬೇಕು

ಕಾರ್ ಶುರುಮಾಡುತ್ತಾನೆ , ಪಕ್ಕದಲ್ಲಿ ಅಪೂರ್ವನ ಪ್ರತಿರೂಪವಿದ್ದರೂ ಲೆಕ್ಕಿಸದೆ ಗಾಡಿ ಓಡಿಸುತ್ತಿರುತ್ತಾನೆ.

APOORVA 2

ನಾನ್ ನಿನ್ನ ಭ್ರಮೆಯಲ್ಲ  ಅಪೂರ್ವ , ಬಿಲೀವ್ ಮೀ ,
ನಾನಿಲ್ಲೇ ಇದೀನಿ , ನಿನ್ನ ಪಕ್ಕದಲ್ಲೇ

ಮಿರರ್ ಅಲ್ಲಿ ಅಪೂರ್ವನ ಪ್ರತಿರೂಪ ಮಾತನಾಡುತ್ತಿರುವುದು ಕಾಣಿಸುತ್ತದೆ , ಅಪೂರ್ವ ಗಾಡಿ ನಿಲ್ಲಿಸುತ್ತಾನೆ

APOORVA 2
(CONT'D)
ದುಡ್ಡಿನಾಸೆಗೆ ಎಡಿಟಿಂಗ್ ಕೆಲ್ಸಕ್ಕೆ ಹೋಗ್ಬೇಡ ಅಪೂರ್ವ ,
ಇಟ್ಸ್  ಎ ಟ್ರ್ಯಾಪ್ , ತುಂಬಾ ಸಫರ್ ಮಾಡ್ಬೇಕಾಗತ್ತೆ .

ಅಪೂರ್ವ ಹೆದರಿದ್ದಾನೆ , ಕನ್ಫ್ಯೂಸ್ ಆಗಿದ್ದಾನೆ , ವಿಚಿತ್ರವಾಗಿ ತನ್ನ ಪ್ರತಿರೂಪಿಯನ್ನೇ , ನೋಡುತ್ತಿದ್ದಾನೆ

APOORVA

ಯಾರ್ ನೀನು !?

APOORVA 2

ಅದನ್ನ ಹೇಳ್ . ನಾನ್ ಹೇಳ್ದಷ್ಟ್ ಮಾಡು , ಹೋಗ್ಬೇಡ
ಪ್ಲೀಸ್ ( ಗ್ಲಿಚ್ )

ಭಯಂಕರವಾದ ಬೆಳಕು ಆವರಿಸಿಕೊಳ್ಳುತ್ತದೆ , ಬೆಳಕು ಸಾಮಾನ್ಯವಾಗುತ್ತಿದ್ದಂತೆ ಅಪೂರ್ವನ ಪ್ರತಿರೂಪಿ ಮರೆಯಾಗಿರುತ್ತಾನೆ. ಅಪೂರ್ವ ಶಾಕ್ ಅಲ್ಲಿದ್ದಾನೆ

INTRCUT:

SWA SCREENWRITERS ASSOCIATION

EXT. KALLAYYA HOUSE , DAY

ಗಾಡಿ ಕಲ್ಲಯ್ಯನ ಮನೆ ಮುಂದೆ ನಿಲ್ಲುತ್ತದೆ , ಅರಿವು ಹಾಗೂ ದೇವಕಿ ಗಾಡಿಯಿಂದ ಇಳಿಯುತ್ತಾರೆ , ಎರಡು ಮೂರು ಮನೆ ನೋಡುತ್ತಾ ಸ್ವಲ್ಪ ಕನ್ಫ್ಯೂಶನ್ ಅಲ್ಲಿ ದೇವಕಿ ಮೂವ್ ಆಗುತ್ತಾಳೆ.

INTRCUT:

EXT. MUDUKA HOUSE , DAY

ಅಪೂರ್ವನ ಗಾಡಿ ಮುದುಕನ ಮನೆ ಇರುವ ರಸ್ತೆಯ ಬಳಿ ಬರುತ್ತದೆ , ಆ ರಸ್ತೆಯಲ್ಲಿ ಒನ್ ವೆ ಬೋರ್ಡ್ ಇರುತ್ತದೆ. ಅಪೂರ್ವ ಗಾಡಿಯನ್ನು ರಸ್ತೆಯ ತುದಿಯಲ್ಲಿ ನಿಲ್ಲಿಸುತ್ತಾನೆ.

INTRCUT:

EXT. KALLAYYA HOUSE , DAY

ದೇವಕಿಗೆ ಮನೆ ಸಿಗುತ್ತದೆ.

INTRCUT:

EXT. MUDUKA HOUSE , DAY

ಅಪೂರ್ವನ ಕಾರ್ ಮುದುಕನ ಮನೆ ಸಮೀಪ ನಿಂತಿದೆ , ಅಪೂರ್ವ ಮನೆಯ ಅಡ್ರೆಸ್ ಹುಡುಕುತ್ತಿದ್ದಾನೆ , ಒಂದು ಹಳೆಯ ಮನೆ ಎದುರು ನಿಲ್ಲುತ್ತಾನೆ , ಅಡ್ರೆಸ್ ಸಿಗುತ್ತದೆ.

INTRCUT:

EXT. KALLAYYA HOUSE , DAY

ದೇವಕಿ ಮನೆಯ ಬಾಗಿಲನ್ನು ತಟ್ಟುತ್ತಾಳೆ

INTRCUT:

EXT. MUDUKA HOUSE , DAY

ಮುದುಕ ಬಾಗಿಲನ್ನು ತೆರೆಯುತ್ತಾರೆ , ಅಪೂರ್ವನಿಗೆ ಶಾಕ್ ಆಗುತ್ತದೆ , ಅಪೂರ್ವ ಮುದುಕನನ್ನೇ ನೋಡುತ್ತಾನೆ , ಮುದುಕ ಸ್ಮೈಲ್ ಮಾಡುತ್ತಾ ಅಪೂರ್ವನನ್ನೇ ನೋಡುತ್ತಾರೆ.

INTRCUT:

SWA SCREENWRITERS ASSOCIATION

INT. KALLAYYA HOUSE , DAY

ಕಲ್ಲಯ್ಯ ಬಾಗಿಲನ್ನು ತೆರೆದು ಒಳ ಬರುವಂತೆ ಹೇಳುತ್ತಾನೆ , ದೇವಕಿಯೊಡನೆ ನಗುನಗುತ್ತಾ ಮಾತನಾಡುತ್ತಾನೆ , ಕಲ್ಲಯ್ಯ ನೋಡಲು ಸ್ವಲ್ಪ ವಿಚಿತ್ರವಾಗಿದ್ದಾನೆ , ಅರಿವು ಕಲ್ಲಯ್ಯನನ್ನು ಗಮನಿಸುತ್ತಾನೆ , ಕಲ್ಲಯ್ಯ ಕೂಡ ಅರಿವನ್ನು ನೋಡಿ ಸ್ಮೈಲ್ ಮಾಡುತ್ತಾನೆ

INTRCUT:

I/E. MUDUKA HOUSE , DAY

ಮುದುಕ ಅಪೂರ್ವನನ್ನು ಬರಮಾಡಿಕೊಳ್ಳುತ್ತಾನೆ , ಮುಖದಲ್ಲಿ ಸ್ಮೈಲ್ ಇರುತ್ತದೆ , ಅಪೂರ್ವ ವಿಚಿತ್ರವಾಗಿ ಮುದುಕನನ್ನೇ ನೋಡುತ್ತಾನೆ. ಸಮಾಧಾನಪಡಿಸುತ್ತ ಒಳ ಬರಮಾಡಿಕೊಳ್ಳುತ್ತಾನೆ.

MUDUKA

ಅಪೂರ್ವ ವೆಲ್ಕಮ್ , ಇದೇ ನನ್ನ ಪುಟ್ಟ ಗೂಡು , ಒಳಗ್ ಬಾ , ಪರ್ವಾಗಿಲ್ಲ ಟೈಮ್ ಗೆ ಸರಿಯಾಗೇ ಬಂದಿದ್ಯ , ತಿಂಡಿ ಆಯ್ತಾ ⁉

APOORVA

ಯಾರ್ ನೀವು ?

MUDUKA

ಮಾತಾಡಕ್ಕೆ , ಕೆಲವ್ ವಿಚಾರಗಳನ್ನ ತಿಳಿಸೋಕೆ ಅಂತಾನೆ ಕರ್ದಿರೋದು , ತಿಂಡಿ ಆಯ್ತಾ ⁉

APOORVA

ನನ್ ಹಿಂದೆ ಯಾಕ್ ಬಿದ್ದಿದ್ದಿರಾ ⁉

MUDUKA

ಎಲ್ಲಾ ಹೇಳ್ತಿನಿ , ಮೊದ್ಲು ಒಳಗ್ ಬಂದ್ ಕುತ್ಕೋ ,

ಮುದುಕ ಅಪೂರ್ವನನ್ನು ಒಳ ಕರೆದು ಬಾಗಿಲು ಹಾಕುತ್ತಾನೆ.

MUDUKA (CONT'D)

ಕಾಫಿ ಕುಡಿಯೋ ಅಭ್ಯಾಸ ಇದೆ ತಾನೇ ⁉ ,
ಹ್ಮ್ , ಹಾಲಿಲ್ಲ , ಲೇಮನ್ ಟಿ ಆಗಬೋದ ⁉

APOORVA

ಏನ್ ಬೇಕು ನಿಮಗೆ ⁉

SWA SCREENWRITERS ASSOCIATION

MUDUKA

ಬಾಯಾರಿಕೆ ಆಗಿದ್ರೆ , ಅಲ್ಲೇ ಟೇಬಲ್ ಮೇಲೆ ನೀರಿಟ್ಟಿದ್ದೀನಿ
ಕುಡಿ , ಎರಡ್ ನಿಮಿಷ ಬಂದೆ

ಅಜ್ಜ ಲೇಮನ್ ಟಿ ಮಾಡಲು ಮುಂದಾಗುತ್ತಾನೆ , ಅದೇ ಸಮಯದಲ್ಲಿ ಅಪೂರ್ವ ಮನೆಯನ್ನು ಗಮನಿಸುತ್ತಿರುತ್ತಾನೆ. ತಲೆಯಲ್ಲಿ ವಿಚಿತ್ರವಾಗಿದ್ದೆಲ್ಲ ನಡೆಯುತ್ತಿರುತ್ತದೆ.

APOORVA 2

( ವಾ .ಓ ) ದುಡ್ಡಿನಾಸೆಗೆ ಎಡಿಟಿಂಗ್ ಕೆಲ್ಸಕ್ಕೆ ಹೋಗ್ಬೇಡ
ಇಟ್ಸ್ ಎ ಟ್ರ್ಯಾಪ್ , ತುಂಬಾ ಸಫರ್ ಮಾಡ್ಬೇಕಾಗತ್ತೆ .

ಯೋಚನೆಗಳಲ್ಲಿ ಕಳೆದುಹೋಗಿರುವ ಅಪೂರ್ವನನ್ನು ಮುದುಕ ಎಚ್ಚರಿಸುತ್ತಾರೆ , ಆತನಿಗೆ ಲೈಮ್ ಟಿ ನೀಡುತ್ತಾರೆ.

INTRCUT:

INT. KALLAYYA HOUSE , DAY

ಕಲ್ಲಯ್ಯನ ಮನೆಯಲ್ಲಿ ಅರಿವು ಹಾಗೂ ದೇವಕಿ ನಿಂತು ಕಾಯಿನ್ ಗಳನ್ನೂ , ಐತಿಹಾಸಿಕ ವಸ್ತುಗಳನ್ನೂ ವೀಕ್ಷಿಸುತ್ತಿದ್ದಾರೆ, ಕಲ್ಲಯ್ಯ ಇಬ್ಬರಿಗೂ ಕುಡಿಯಲು ಕಾಫಿ ಕೊಡುತ್ತಾನೆ. ಕಾಫಿ ಕೊಡುತ್ತ ಅರಿವನ್ನು ನೋಡಿ ಮಾತಿಗಿಳಿಯುತ್ತಾನೆ.

KALLAYYA

ಎಷ್ಟ್ ವರ್ಷದಿಂದ ನಾಣ್ಯಗಳನ್ನ ಸಂಗ್ರಹಿಸ್ತಿದ್ದೀರಾ

ARIVU

ಇತ್ತೀಚಿಗೆ ಶುರುಮಾಡಿದ್ದು

KALLAYYA

( ವಿಚಿತ್ರವಾಗಿ ಅರಿವನ್ನು ನೋಡುತ್ತಾ )
ಯಾವೂರಿನೋರ್ ಅಂದ್ರಿ !?

(CONT'D)

(CONT'D)

(CONT'D)

SWA SCREENWRITERS ASSOCIATION

ARIVU

ಮೈಸೂರು

ಕಲ್ಲಯ್ಯ ಅರಿವನ್ನು ವಿಚಿತ್ರವಾಗಿ ನೋಡುತ್ತಾನೆ

KALLAYYA

ಮೈಸೂರಾ !

INTRCUT:

INT. MUDUKA HOUSE , DAY

ಮುದುಕ ಅಪೂರ್ವನ ಎದುರಿಗೆ ಕುಳಿತ್ತಿದ್ದಾರೆ , ಅಪೂರ್ವ ಕೈಲಿ ಲೈಮ್ ಟಿ ಹಿಡಿದಿದ್ದಾನೆ , ಕೈ ನಡಗುತ್ತಿದೆ. ಅಜ್ಜ ಒಂದು ಸಿಪ್ ಲೈಮ್ ಟೀ ಕುಡಿದು ಅದನ್ನು ಎಂಜಾಯ್ ಮಾಡುತ್ತಾನೆ.

MUDUKA

ಇಷ್ಟು ದಿನಕ್ಕೆ ಇವತ್ತೇ ಹದವಾಗಿ ಬಂದಿರೋದು ಅನ್ಸತ್ತೆ ,
ಆರೋಕೆ ಮುಂಚೆ ರುಚಿ ನೋಡು ,

ಅಪೂರ್ವ ಟಿ ಕುಡಿಯುವುದಿಲ್ಲ , ಅದನ್ನು ಪಕ್ಕದಲ್ಲೇ ಇಡುತ್ತಾನೆ. ಅದನ್ನು ಮುದುಕ ಗಮನಿಸುತ್ತಾರೆ.

MUDUKA (CONT'D)

ಅಮ್ಮನ ಕಾಲ್ ನೋವು ಹೇಗಿದೆ ಈಗ . ಸ್ವಪ್ನ
ಚನ್ನಗಿದ್ದಾಳಾ ⁉

APOORVA

ನಂಗೇನೂ ಅರ್ಥ ಆಗ್ತಿಲ್ಲ ಸರ್ , ಏನ್ ಬೇಕು ನಿಮಗೆ ⁉

MUDUKA

ನೀನು ⁉ ( ನಗು )

ಎದ್ದು ಡೈನಿಂಗ್ ಟೇಬಲ್ ಬಳಿ ನಡೆದುಹೋಗುತ್ತಾರೆ , ಅಲ್ಲೇ ಹತ್ತಿರದ ಡ್ರಾಯರ್ ಇಂದ ಒಂದು ಸೂಟ್ಕೇಸ್ ಹೊರ ತಗೆಯುತ್ತಾರೆ.

MUDUKA (CONT'D)

ಅಪೂರ್ವ ಹೆದರ್ಬೇಡಾ ಬಾ ಇಲ್ಲಿ !

ಅಪೂರ್ವ ನಿಧಾನಕ್ಕೆ ಎದ್ದು ಟೇಬಲ್ ಕಡೆಗೆ ನಡೆಯುತ್ತಾನೆ. ಟೇಬಲ್ ಮೇಲಿದ್ದ ಗಲೀಜನ್ನು ಸರಿಸಿ , ಮುದುಕ ಆ ಸೂಟ್ಕೇಸ್ ಅನ್ನು ಅಲ್ಲಿ ಇಡುತ್ತಾರೆ.

INTRCUT:

SWA SCREENWRITERS ASSOCIATION

INT. KALLAYYA HOUSE , DAY

ಕಲ್ಲಯ್ಯ ಟೇಬಲ್ ಮೇಲೆ ಮತ್ತೊಂದಿಷ್ಟು ಕಾಯಿನ್ ಗಳನ್ನು ಹರಡಿದ್ದಾನೆ , ಅರಿವು ದೇವಕಿ ಅದನ್ನೇ ನೋಡುತ್ತಿದ್ದಾರೆ. ಹಾಗೂ ಇಬ್ಬರೂ ಕಾಯಿನ್ ಗಳ ಕುರಿತು ಮಾತನಾಡುತ್ತಿದ್ದಾರೆ. ಕಲ್ಲಯ್ಯ ಅರಿವನ್ನೇ ನೋಡುತ್ತಿದ್ದಾರೆ.

KALLAYYA

ಯಾವುರ್ ಅಂದ್ರಿ ⁉

ಅರಿವು ಕಾಯಿನ್ ಗಳನ್ನು ನೋಡುವುದರಲ್ಲಿ ಮಗ್ನನಾಗಿದ್ದವನು ತಲೆಯೆತ್ತಿ ಕಲ್ಲಯ್ಯನನ್ನು ನೋಡುತ್ತಾನೆ. ಅಷ್ಟರಲ್ಲಿ ದೇವಕಿಯೇ ಉತ್ತರಿಸುತ್ತಾಳೆ.

DEVAKI

ಮೈಸೂರಿನೋರು ಕಲ್ಲಯ್ಯ , ಎಷ್ಟ್ ಸರ್ತಿ ಕೇಳ್ತಿರಾ !

KALLAYYA

ಮೈಸೂರಲ್ಲೆಲ್ಲಿ ⁉

ARIVU

( ಯೋಚಿಸಿ ) ಕು.. ಕುವೆಂಪುನಗರ

ಕಲ್ಲಯ್ಯ ಸರಿಯೆಂದು ತಲೆಯಾಡಿಸುತ್ತಾರೆ

INTRCUT:

INT. MUDUKA HOUSE , DAY

ಮುದುಕ ತನ್ನ ಕೈಲಿದ್ದ ಸೂಟ್ಕೇಸ್ ಟೇಬಲ್ ಮೇಲೆ ಇಟ್ಟು ಮಾತನಾಡಲು ಮುಂದಾಗುತ್ತಾರೆ

MUDUKA

ಅವತ್ ಟೈಮ್ ಬರ್ಲಿ ನಾನೇ ಸಿಕ್ತಿನಿ ಅಂದಿದ್ದೆ , ಸೊ ಹಿಯರ್ ಐ ಯಾಮ್ , ನಿನ್ನೊಳಗೆ ತುಂಬಾ ಪ್ರಶ್ನೆಗಳಿವೆ ಅಂತ ಗೊತ್ತು ಉತ್ತರಿಸೋ ಪ್ರಯತ್ನ ಮಾಡ್ತೀನಿ , ನನ್ ಹೆಸರು ಅರಿವು ಮೈಸೂರೊನು ನಿನ್ನಿಲ್ಲಿ ಕರಿಸ್ಕೊಂಡಿರೋದ್ರಲ್ಲಿ ನನ್ ಸ್ವಾರ್ಥಾನೂ ಇದೆ , ನಿಂಗೂ ಇದ್ರಿಂದ ಉಪಯೋಗ ಆಗತ್ತೆ ‼ , ಹೇಗ್ ಹೇಳೋದು , ! ಒಂದು ಎಕ್ಸ್ಪರಿಮೆಂಟ್ ಮಾಡೋಕ್ಕೆ ಇಲ್ಲಿವರ್ಗು ಬರ್ಬೇಕಾಯ್ತು ಅಪೂರ್ವ ಆ ಎಕ್ಸ್ಪರಿಮೆಂಟ್ ಗೆ ಸರಿಯಾದ ಸಬ್ಜೆಕ್ಟ್ ನ ಹುಡುಕ್ತಿದ್ದೆ

(MORE)

SWA SCREENWRITERS ASSOCIATION

MUDUKA (CONT'D)

ಆ ಹುಡುಕಾಟದಲ್ಲಿ ನನಗೆ ನಿನ್ನ ವಿಚಾರ ತಿಳೀತು. ಹೇಗೆ , ಏನು ಅನ್ನೋದೆಲ್ಲ ಟೈಮ್ ಬಂದಾಗ ಹೇಳ್ತಿನಿ.

APOORVA

ನೀವ್ ಹೇಳ್ತಿರೋದೇನು ಗೊತ್ತಾಗ್ತಿಲ್ಲ ಸರ್, ಎಡಿಟಿಂಗ್ ಕೆಲಸ ಅಂತ ಬಂದೆ , ಪರವಾಗಿಲ್ಲ ನಾನ್ ಹೊರಡ್ತೀನಿ.

MUDUKA

ಪೂರ್ತಿ ಮುಗಿಸೋಕೆ ಅವಕಾಶ ಕೊಡ್ತ್ಯ !?

APOORVA

ಸರ್ ನಾ ಹೊರಡ್ಬೇಕು

MUDUKA

ತಿಂಗಳಿಗೆ ನಲ್ವತ್ತು ಸಾವಿರ ಅಂದಿದ್ದೆ , ಒಂದ್ ಲಕ್ಷ ಕೊಡ್ತೀನಿ , ನಿನ್ ಬಿಟ್ರೆ ಇನ್ನ್ಯಾರ ಕೈಲೂ ಇದು ಸಾಧ್ಯ ಇಲ್ಲ ಅಪೂರ್ವ , ನಾನ್ ಹೇಳಿ ಮುಗಿಸೋತನಕ ಸ್ವಲ್ಪ ತಾಳ್ಮೆಯಿಂದಯಿರು. ಆಮೇಲೂ ಇದೆ ನಿನ್ನ ಉತ್ರ ಆಗಿದ್ರೆ ನಿನ್ ಹೊರಡಬೋದು ! … ನಿನ್ನಲ್ಲಿ ಒಂದು ವಿಚಿತ್ರವಾದ ಶಕ್ತಿಯಿದೆ , ಒಬ್ಬ ಸಾಮಾನ್ಯ ಮನುಷ್ಯ ೨ , ೩ ನಿಮಿಷ ಬ್ಲಿಂಕ್ ಕಂಟ್ರೋಲ್ ಮಾಡೋದೇ ಕಷ್ಟ , ಆದ್ರೆ ನೀನು ಅರ್ಧ ಗಂಟೆಗಳವರೆಗೂ ಸಲೀಸಾಗಿ ಬ್ಲಿಂಕ್ ಮಾಡದೇ ಒಂದೇ ಕಡೆ ದೃಷ್ಟಿ ಇಟ್ಟು ನೋಡ್ತ್ಯ !

INTRCUT:

SCREENWRITERS ASSOCIATION

EXT. KALLAYYA HOUSE , DAY

ಅರಿವು ಹಣ ನೀಡಲು ಜೇಬಿಗೆ ಕೈ ಹಾಕುತ್ತಾನೆ , ಜೇಬಿನಲ್ಲಿ ಪರ್ಸ್ ಇರುವುದಿಲ್ಲ , ಅದೇ ಸಮಯಕ್ಕೆ ಕಲ್ಲಯ್ಯ ರೂಮ್ ಕಡೆಗೆ ನಡೆದು ಹೋಗುತ್ತಾನೆ.

DEVAKI

ಏನಾಯಿತು ⁉

ARIVU

ಪರ್ಸ್ ಕಾಣ್ತಿಲ್ಲ ( ಯೋಚಿಸಿ ) ಒಂದ್ ನಿಮಿಷ

ತಾನು ತಂದಿದ್ದ ಸೂಟ್ಕೇಸ್ ತಗೆಯುತ್ತಾನೆ

MATCH CUT TO:

INT. MUDUKA HOUSE , DAY

ಸೂಟ್ಕೇಸ್ ಓಪನ್ ಮ್ಯಾಚ್ ಕಟ್ , ಮುದುಕ ಸೂಟ್ಕೇಸ್ ಇಂದ ವ್ರೇಮ್ಯ ಬಾಕ್ಸ್ ಒಂದನ್ನು ಹೊರ ತಗೆಯುತ್ತಾನೆ.

MUDUKA

ಇದು ವ್ರೇಮ್ಯ ( время vremya ) ( ಐ ಡ್ರಾಪ್ ಬಾಕ್ಸ್ ತೋರಿಸಿ ) , ಸುಮಾರ್ ವರ್ಷಗಳನ್ನ ಈ ಐ ಡ್ರಾಪ್ ತಯಾರಿಸೋದಕ್ಕೆ ಇನ್ವೆಸ್ಟ್ ಮಾಡಿದ್ದೀನಿ

INTRCUT:

INT. KALLAYYA HOUSE , DAY

ಸೂಟ್ ಕೇಸ್ ಅಲ್ಲಿ ವ್ರೇಮ್ಯ ಬಾಕ್ಸ್ ಇರುತ್ತದೆ , ಅದು ಎಸ್ಟೇಬಲಿಷ್ ಆಗುತ್ತದೆ , ಅದರ ಬದಿಯಲ್ಲಿ ಇದ್ದ ಪಾಕೆಟ್ ನಲ್ಲಿ ಏನಾದರೂ ಪರ್ಸ್ ಇದೆಯೋ ಎಂದು ನೋಡುತ್ತಾನೆ

DEVAKI

ಮನೇಲೆ ಏನಾದ್ರು ಮರೆತು ಬಂದ್ರ !

ARIVU

ಗೊತ್ತಿಲ್ಲ

SWA SCREENWRITERS ASSOCIATION

DEVAKI

ಇಲ್ಲಿ ನಾನ್ ಕೊಟ್ಟಿರ್ತೀನಿ ಮನೆಗ್ ಹೋಗಿ ನೋಡಣ
ಸಿಗತ್ತೆ

ARIVU

ಮುಂದಿನ ಸರ್ತಿ ಬಂದಾಗ ತಗೋಳ್ತೀನಿ ಪರವಾಗಿಲ್ಲ

DEVAKI

ಮುಂದಿನ್ ಸರ್ತಿ ನೀವ್ ಬರೋವರ್ಗು ಕಲ್ಲಯ್ಯ
ಕಾಯ್ಬೇಕಲ್ಲ , ನಿಮ್ಮೊಬ್ಬರಿಗೆ ಈ ಕಾಯಿನ್ ಕಲೆಕ್ಷನ್
ಹುಚ್ಚಿರೋದು ಅನ್ಕೊಂಡ್ರಾ !?

ದೇವಕಿ ಹಣ ಎಣಿಸುತ್ತಾಳೆ , ಕಲ್ಲಯ್ಯನನ್ನು ಕರೆಯುತ್ತಾಳೆ , ಕಲ್ಲಯ್ಯ ರೂಮ್ ಒಳಕ್ಕೆ ಹೋದವನು ಹೊರಕ್ಕೆ ಬಂದಿರುವುದಿಲ್ಲ

DEVAKI (CONT'D)

ಕಲ್ಲಯ್ಯ !??

ದೂರದಿಂದ ಕಲ್ಲಯ್ಯನ ದನಿ

KALLAYYA

ಎರಡ್ ನಿಮಿಷ ಬಂದೆ !

ಅರಿವು ಸೂಟ್ಕೇಸ್ ಮುಚ್ಚುತ್ತಾನೆ.

MATCH CUT TO:

INT. MUDUKA HOUSE , DAY

ಸೂಟ್ಕೇಸ್ ಕ್ಲೋಸ್ ಮ್ಯಾಚ್ ಕಟ್

ಮುದುಕ ಸೂಟ್ಕೇಸ್ ಮುಚ್ಚುತ್ತಾನೆ. ಹಾಗೂ ಒಂದು ಬಾಕ್ಸ್ ಒಳಗಿದ್ದ ಐ ಡ್ರಾಪ್ ಹೊರ ತಗೆಯುತ್ತಾನೆ. ಮತ್ತೊಂದು ಬಾಕ್ಸ್ ಟೇಬಲ್ ಮೇಲೆ ಇಡುತ್ತಾನೆ

MUDUKA

ಈ ಐ ಡ್ರಾಪ್ ಹಾಕಿ ಒಂದ್ ಸರ್ತಿ ಕಣ್ಣ್ ಬ್ಲಿಂಕ್ ಮಾಡಿದ್ರೆ ಸಾಕು , ಮೂವತ್ತು ವರ್ಷ ಪಾಸ್ಟ್ ಅಥವಾ ಫ್ಯೂಚರ್ ಅಲ್ಲಿ ಯಾವ ಟೈಮ್ ಗೆ ಬೇಕಿದ್ರೂ ಟ್ರಾವೆಲ್ ಮಾಡಬೋದು ! , ಮತ್ತೆ ಎಷ್ಟೊತ್ತು ಬ್ಲಿಂಕ್ ಮಾಡದೇ ಕಂಟ್ರೋಲ್ ಮಾಡ್ಕೊಂಡಿರ್ತೀವೋ ಅಷ್ಟೊತ್ತು ಅದೇ ಟೈಮ್ ಲೈನ್ ಅಲ್ಲಿ ಇರ್ಬೋದು, ಈ ಐ ಡ್ರಾಪ್ ಟೈಮ್ ಟ್ರಾವೆಲ್ ಗೆ ಅಂತ ಡಿಸೈನ್ ಆಗಿದೆ ಅಪೂರ್ವ , ಇದರ ಸಹಾಯದಿಂದ ನಾನ್ ಒಂದು ವಿಚಾರ ತಿಳ್ಕೊಳ್ಬೇಕು ಅಂತ ಇದಿನಿ , ಆದ್ರೆ ನಂಗೆ ತುಂಬಾ ಹೊತ್ತು ಬ್ಲಿಂಕ್ ಕಂಟ್ರೋಲ್ ಮಾಡ್ಕೊಳಕ್ಕೆ ಆಗ್ತಿಲ್ಲ , ಅದಕ್ಕೆ ನಿನ್ ಹತ್ರ ಬಂದೆ ( ನಗುವನು ) ಅರ್ಥ ಆಗ್ತಿಲ್ಲ ಅಲ್ಲ .

APOORVA

ಅರ್ಥ ಆಗಿಲ್ಲ , ಆಗದು ಬೇಡ , ನಂಗಿದ್ರುಲೆಲ್ಲ ಇಂಟ್ರೆಸ್ಟ್ ಇಲ್ಲ. ಬೇರೆ ಯಾರನ್ನಾದ್ರೂ ನೋಡ್ಕೊಳಿ ಸರ್. ನಾನ್ ಬರ್ತೀನಿ.

MUDUKA

ನಿಮ್ಮಪ್ಪ ಇನ್ನೂ ಬದುಕಿದ್ದಾರೆ ಅಂದಿದ್ದೆ ನೆನಪಿದ್ಯಾ , ಅವ್ರನ್ನ ನೋಡೋ ಇಂಟ್ರೆಷ್ಟು ಇಲ್ವಾ (ನಗುವನು ) ಅಪೂರ್ವ ನಿಂಗಿದ್ರಿಂದ ಏನೂ ತೊಂದ್ರೆಯಾಗಲ್ಲ ಬಿಲೀವ್ ಮೀ

APOORVA

ನಾನೀ ಟ್ರ್ಯಾಪ್ ಅಲ್ಲಿ ಸಿಕ್ಕಾಕೊಳಲ್ಲ

MUDUKA

ಅಮ್ಮ ಹೇಳಿದೆಲ್ಲ ಬ್ಲೈಂಡ್ ಆಗಿ ಬಿಲೀವ್ ಮಾಡಿದ್ಯಾ

APOORVA

ನಂಗ್ ಅವಳೇ ಪ್ರಪಂಚ !

MUDUKA

ನಿಮ್ಮಪ್ಪಂಗೆ ಮನೆ ಬಿಟ್ಟು ಹೋಗೋವಂತದ್ದು ಏನಾಗಿತ್ತು !! ಅದನ್ನಾದ್ರೂ ಕೇಳಿದ್ಯಾ !?

APOORVA

ತೀಟೆಗೆ ಹುಟ್ಸಿ ಓಡೋಗಿರೋ ಆ ವ್ಯಕ್ತಿ ಬಗ್ಗೆ ತಿಳ್ಕೊಳೋ ಆಸಕ್ತಿಯಿಲ್ಲ

SWA SCREENWRITERS ASSOCIATION

MUDUKA

ಆದ್ರೆ ಸತ್ಯ ಅದಲ್ಲ

APOORVA

ನಂಗೀಗದ್ರು ಅವಶ್ಯಕಥೆ ಇಲ್ಲ

MUDUKA

ರಿಯಾಲಿಟಿ ನೋಡೋ ಧೈರ್ಯ ಇಲ್ಲ ಅನ್ನು

APOORVA

ಅಷ್ಟಕ್ಕೂ ನೀವ್ಯಾರು ಸರ್ , ನನ್ ಬಗ್ಗೆ , ಅಪ್ಪ ಅಮ್ಮನ ಬಗ್ಗೆ ಹೇಗ್ ಗೊತ್ತು ನಿಮಗೆ !?

MUDUKA

ನಿಮ್ಮಪ್ಪನಿಗೆ ತುಂಬಾ ಬೇಕಾದೋನು !! , ನೀನ್ ತಿಳ್ಕೊಂಡಹಾಗೆ ನಿಮ್ಮಪ್ಪ ಹೇಡಿಯಲ್ಲ ಅಪೂರ್ವ , ತುಂಬಾ ಪ್ರಯತ್ನ ಪಟ್ಟ ಆದ್ರೆ ಆಗ್ಲಿಲ್ಲ ( ಉಸಿರು ಬಿಡುತ್ತಾನೆ ) ಸರಿ ನಿಂಗೆ ಒಂದ್ ಅವಕಾಶ ಕೊಡ್ತೀನಿ ನಿಮ್ಮಪ್ಪನ್ನ ಎದುರಿಗೆ ತಂದು ನಿಲ್ಲಿಸ್ತೀನಿ, ಇಷ್ಟೇ ಧೈರ್ಯವಾಗಿ ನಿಂತ್ಕೊಂಡು ನಿನ್ನ ಎಲ್ಲ ಪ್ರಶ್ನೆಗಳನ್ನ ಅವರಿಗೆ ಕೇಳೋಕ್ಕಾಗತ್ತಾ?

ಅಪೂರ್ವ ಉತ್ತರಿಸುವುದಿಲ್ಲ , ಸಂಪೂರ್ಣ ಮೌನ , ತಲೆ ತಗ್ಗಿಸುತ್ತಾನೆ

INTRCUT:

INT. KALLAYYA HOUSE , DAY

ಅರಿವು ಹಾಗೂ ದೇವಕಿ ಕಲ್ಲಯ್ಯನ ಬರುವಿಕೆಗೆ ಕಾಯುತ್ತ ಕುಳಿತ್ತಿದ್ದಾರೆ , ಕಲ್ಲಯ್ಯ ಇನ್ನೂ ಬಂದಿಲ್ಲ ,

DEVAKI

ಕಲ್ಲಯ್ಯ , ಹೊತ್ತಾಗ್ತಿದೆ , ಬೇಗ ಇವ್ರಿನ್ನೂ ಮೈಸೂರಿಗ್ ಹೋಗ್ಬೇಕು !!

ರೂಮ್ ಅಲ್ಲಿ ಏನೋ ಬಿದ್ದ ಶಬ್ದವಾಗುತ್ತದೆ

ದೇವಕಿ ಹಾಗೂ ಅಪೂರ್ವ ಎದ್ದು ರೂಮ್ ಕಡೆಗೆ ಹೊರಡುತ್ತಾರೆ , ಕಲ್ಲಯ್ಯ ಸುತ್ತ ಫೋಟೋಸ್ ಹರಡಿಕೊಂಡು ನಿಂತಿದ್ದಾನೆ , ಗೋಧಿ ಡಬ್ಬ ಬಿದ್ದು ಮೈಯಲ್ಲ ಗೋಧಿಯಾಗಿರುತ್ತದೆ. ಫೋಟೋ ನೋಡುತ್ತಾ ಕಲ್ಲಯ್ಯ ಕಳೆದುಹೋಗಿರುತ್ತಾನೆ.

SCREENWRITERS ASSOCIATION

DEVAKI (CONT'D)

ಕಲ್ಲಯ್ಯ !!

INTRCUT:

INT. MUDUKA HOUSE , DAY

ಮುದುಕ ಒಂದು ಡ್ರಾಯರ್ ತೆರೆಯುತ್ತಾನೆ , ಅದರಲ್ಲಿ ಸಾಕಷ್ಟು ಫೋಟೋಸ್ ಇರುತ್ತದೆ , ಒಂದೊಂದೇ ಫೋಟೋಸ್ ತಗೆದು ಪಕ್ಕಕ್ಕೆ ಇಡುತ್ತಾನೆ , ಒಂದು ಫೋಟೋದಲ್ಲಿ ಅಪೂರ್ವ ತಂದೆ ತಾಯಿ ಅವನು ನಿಂತಿರುವುದು ಕಾಣುತ್ತದೆ , ಆ ಫೋಟೋ ಹೊರತೆಗೆಯುತ್ತಾನೆ. ಅಪೂರ್ವ ಮುದುಕನ ಪಕ್ಕದಲ್ಲೇ ನಿಂತಿರುತ್ತಾನೆ. ಮುದುಕ ಅಪೂರ್ವನಿಗೆ ಫೋಟೋ ತೋರಿಸುತ್ತಾನೆ

ಅಪೂರ್ವ ಶಾಕ್ ಆಗುತ್ತಾನೆ , ಆ ಫೋಟೋದಲ್ಲಿ ಇರುವುದು ಅಪೂರ್ವನ ತಂದೆ ಗೋಪಾಲ್ ಕೃಷ್ಣ ಅರಸ್ ಹಾಗೂ ತಾಯಿ ಯಶೋಧ !!

MUDUKA

ಈಗಲಾದ್ರೂ ನಂಬಿಕೆ ಬಂತ !!

APOORVA

( ಶಾಕ್ ) ಈ ಫೋಟೋ ನಿಮಗೆ ಹೇಗ್ ಸಿಕ್ತು !!

INTRCUT:

INT. KALLAYYA HOUSE , DAY

ಕಲ್ಲಯ್ಯ ಕೈಯಲ್ಲಿ ಫೋಟೋ ಇಟ್ಟುಕೊಂಡಿದ್ದಾನೆ , ಆ ಫೋಟೋವನ್ನು ಅರಿವುವಿಗೆ ತೋರಿಸುತ್ತಾನೆ ,

KALLAYYA

ನನ್ ಮಗ್ಳು ರೇವತಿ , ಐದು ವರ್ಷದ್ ಹಿಂದೆ ಮೈಸೂರಿಗೆ
ಟ್ರಿಪ್ ಅಂತ ಹೋದೋಳು ಮತ್ ಬರ್ಲೇಯಿಲ್ಲ , ಈ
ಫೋಟೋ ತಗೋಳಿ,

ಕಲ್ಲಯ್ಯ ನಡೆದುಬಂದು ಅರಿವು ಕೈ ಹಿಡಿಯುತ್ತಾನೆ ,

KALLAYYA (CONT'D)

ಒಂದ್ ಸರ್ತಿ ಇವಳನ್ನ ನೋಡ್ಬೇಕು ನಾನು , ನೂರಾರ್
ವರ್ಷದ್ ವಸ್ತುಗಳು ಎಲ್ಲೆಯಿದ್ರು ಹುಡುಕಿ ತರ್ತೀನಿ ಆದ್ರೆ ,
ನನ್ ಮಗಳನ್ನ ಹುಡುಕೋಕ್ಕಾಗ್ಲಿಲ್ಲ , ಮೈಸೂರೋರಂತಿರ ,
ನನ್ ಮಗಳನ್ನ ಎಲ್ಲಾದ್ರೂ ನೋಡಿದಿರಾ ಅಂತ !!

SWA SCREENWRITERS ASSOCIATION

ಅರಿವು ರೇವತಿಯ ಫೋಟೋ ನೋಡುತ್ತಾನೆ , ಇಲ್ಲ ಎಂದು ತಲೆಯಾಡಿಸುತ್ತಾನೆ. ಕಲ್ಲಯ್ಯ ಜೋರಾಗಿ ಅಳಲು ಆರಂಭಿಸುತ್ತಾನೆ.

INTRCUT:

INT. MUDUKA HOUSE , DAY

MUDUKA

ನನ್ ಹೇಳೋ ಕೆಲ್ಸ ಮಾಡಿಕೊಟ್ಟರೆ , ನಿನಗೆ ಅನಿವಾರ್ಯ ಇರೋ ಹಣ , ನಿನ್ನಲ್ ಉಳಿದಿರೋ ಪ್ರಶ್ನೆಗಳಿಗೆ ಉತ್ತರ , ಎರಡು ಸಿಗತ್ತೆ ‼ , ಯೋಚನೆ ಮಾಡು.

APOORVA

ಯಾರ್ ನೀವು ‼ ( ಕಣ್ಣು ತುಂಬಿದೆ )

ಮುದುಕ ಅಪೂರ್ವನ ಹೆಗಲ ಮೇಲೆ ಕೈ ಇಡುತ್ತಾನೆ.

MUDUKA

ನಿಧಾನಕ್ಕೆಲ್ಲ ಅರ್ಥ ಆಗತ್ತೆ , ನನ್ ಜತೆ ಕೈ ಜೋಡಿಸು ‼

ಅಪೂರ್ವನಿಗೆ ದಿಕ್ಕೇ ತೋರುವುದಿಲ್ಲ , ನಿರ್ಲಿಪ್ತನಾಗುತ್ತಾನೆ.

INTRCUT:

INT. KALLAYYA HOUSE , DAY

ಕಲ್ಲಯ್ಯ ಖುರ್ಚಿಯ ಮೇಲೆ ಕುಳಿತು ಬಿಕ್ಕಿ ಬಿಕ್ಕಿ ಅಳುತಿದ್ದಾನೆ

DEVAKI

ಕಲ್ಲಯ್ಯ ಮತ್ ಶುರು ಮಾಡಿದ್ರ , ಅಷ್ಟ್ ಹುಡುಕಿದ್ರೂ ಸಿಗ್ಲಿಲ್ಲ ಅಂದ್ರೆ , ಅವಳು ಇಲ್ಲ ಅಂತ ಅರ್ಥ ‼ , ಅವ್ಳು ನಿಂಗಿನ್ನೂ ಸಿಗಲ್ಲ ಕಲ್ಲಯ್ಯ , ರೇವತಿ ಆಸೆ ಬಿಟ್ಬಿಡು ‼

ಕಲ್ಲಯ್ಯನ ಎದುರುಗಡೆ ಹದಿನೆಂಟು ವರ್ಷದ ರೇವತಿ ಕುಳಿತು ಊಟ ಮಾಡುತ್ತಾ ಬಿಕ್ಕಳಿಸುತ್ತಿರುತ್ತಾಳೆ , ಕಲ್ಲಯ್ಯ ಮಗಳಿಗೆ ನೀರು ಕೊಡಲು ಏಳುತ್ತಾನೆ. ಬಿಕ್ಕಳಿಕೆಯ ಸದ್ದು ಕಲ್ಲಯ್ಯನನ್ನು ಆವರಿಸಿಕೊಳ್ಳುತ್ತದೆ.

KALLAYYA

( ಕೂಗುವನು ) ರೇವತಿ

INTRCUT:

INT. MUDUKA HOUSE , DAY

MUDUKA

ಅಮ್ಮ ಡೇಯಬೆಟೆಕ್ , ಆಗೀಗ ಕಾಲ್ ನೋವು ಅಂತಾಳೆ
ಗ್ಯಾನ್ಗ್ರಿನ್ ಅಂತ ಡಾಕ್ಟ್ರು ಕಾಲ್ ತೆಗೆಯೋದಿಕ್ಕೆ
ಹೇಳ್ಬೋದು , ಸತ್ಯಂಗೆ ಸ್ವಪ್ನ ಅಂದ್ರೆ ಇಷ್ಟ , ಒಳ್ಳೆ ಸ್ಟೇಟಸ್
ಅಲ್ಲೂ ಇದಾನೆ , ಸ್ವಪ್ನ ನಿನ್ ಕೈತಪ್ಪಿ ಹೋಗಬೋದು ,
ಮುಂದೇನಾಗತ್ತೆ ಅಂತ ನಿಂಗೊತ್ತಿಲ್ಲ ಅಪೂರ್ವ ,
ಗೊತ್ತಾದ್ರೆ ಸರಿ ಪಡಿಸೋಕೆ ಪ್ರಯತ್ನ ಮಾಡಬೋದು ‼

INTRCUT:

INT. KALLAYYA HOUSE , DAY

ಕಲ್ಲಯ್ಯ ಮಡಿಕೆಯಲ್ಲಿ ನೀರು ಹಿಡಿದು ರೇವತಿಗೆ ಕೊಡಲು ಮುಂದಾಗುತ್ತಾನೆ , ತಟ್ಟೆಯಲ್ಲಿ ಅರ್ಧ ಅನ್ನ ಹಾಗೆ ಉಳಿದುಕೊಂಡಿರುತ್ತದೆ , ರೇವತಿ ಬ್ಯಾಗ್ ಧರಿಸಿದವಳೇ ವಿಪರೀತ ಬೆಳಕಿರುವ ಬಾಗಿಲ ಬಳಿ ಬಿಕ್ಕಳಿಸುತ್ತಲೇ ಹೊರಡುತ್ತಾಳೆ.

REVATI

ಅಪ್ಪಯ್ಯ  ಟ್ರೈನ್ ಗೆ ಹೊತ್ತಾಯ್ತು , ಬರ್ತೀನಿ

KALLAYYA

ಬಿಕ್ಕಳಿಸ್ತಿದ್ದಿ ನೀರಾದ್ರು ಕುಡಿದುಹೋಗು ಕೂಸೇ

ರೇವತಿಯಿಂದ ಉತ್ತರ ಬರುವುದಿಲ್ಲ , ರೇವತಿ ಮರೆಯಾಗಿರುತ್ತಾಳೆ

INTRCUT:

INT. MUDUKA HOUSE , DAY

MUDUKA

ಟೈಮ್ ನ ಹಿಡಿದು ನಿಲ್ಲಿಸೋಕೆ ಆಗೋಲ್ಲ ಅಪೂರ್ವ ,
ಆದ್ರೆ ನಿಂಗಾಶಕ್ತಿ ಇದೆ ‼

INTRCUT:

SWA SCREENWRITERS ASSOCIATION

INT. KALLAYYA HOUSE , DAY

ಕಲ್ಲಯ್ಯನ್ನ ಕೈ ಅಲ್ಲಾಡಿಸುತ್ತ ದೇವಕಿ ಮಾತನಾಡಲು ಪ್ರಾರಂಭಿಸುತ್ತಾಳೆ

DEVAKI

ತಗೋ ದುಡ್ಡು , ಹೊತ್ತಾಯ್ತು ಬರ್ತೀವಿ , ನಿನ್ ಹುಚ್ಚಾಟ
ಸಾಕ್ಮಾಡು ಕಲ್ಲಯ್ಯ , ರೇವತಿ ನಿಂಗ್ ಸಿಗೋಲ್ಲ ,
ಸತ್ತಿರ್ತಾಳೆ ( ಅರಿವಿಗೆ ) ಹೊರಡೋಣ್ವ !!

ಅರಿವು ಸ್ತಬ್ಧನಾಗಿ ಎಲ್ಲವನ್ನು ನೋಡುತ್ತಿರುತ್ತಾನೆ , ಅವನಿಗೇನು ಅರ್ಥವಾಗುತ್ತಿಲ್ಲ !! ಆ ಕಾರಣ ದೇವಕಿಯೇ ಆತನ ಕೈ ಎಳೆಯುತ್ತಾಳೆ . ಇಬ್ಬರೂ ಹೊರಡುತ್ತಾರೆ.

INTRCUT:

INT. MUDUKA HOUSE , DAY

ಅಪೂರ್ವನ ಎದುರು ಮುದುಕ , ಹಗಲು ವೇಷದವರು , ಜ್ಯೋತಿಷಿ , ನಾಟಕದ ಪಾತ್ರಗಳು , ಎಲ್ಲರೂ ನಿಂತು ಇವನನ್ನೇ ನೋಡುತ್ತಿರುವ ಭಾವನೆ ಮೂಡುತ್ತದೆ , ಅಪೂರ್ವನಿಗೆ ಏನು ಹೇಳಬೇಕೆಂಬುದೇ ತಿಳಿಯುತ್ತಿಲ್ಲ ಸಂಗೀತ ತಾರಕಕ್ಕೇರುತ್ತದೆ.

ಮಧ್ಯದಲ್ಲಿ ಮೊಬೈಲ್ ವೈಬ್ರೇಟ್ ಆಗುತ್ತದೆ , ಅಪೂರ್ವ ಮೊಬೈಲ್ ನೋಡುತ್ತಾನೆ.

J CUT :

INT. KALLAYYA HOUSE , DAY

ಬಿಕ್ಕಳಿಕೆ ಸದ್ದು ಆವರಿಸಿದೆ , ತನ್ನ ಮಗಳು ರೇವತಿಯೇ ಅರಿವು ಜತೆಗೆ ಹೋಗುತ್ತಿರುವಂತೆ ಕಲ್ಲಯ್ಯನಿಗೆ ಅನ್ನಿಸುತ್ತದೆ , ಅರಿವು ಕಲ್ಲಯ್ಯನ ಕಡೆಗೆ ಒಮ್ಮೆ ತಿರುಗಿ ನೋಡುತ್ತಾನೆ . ರೇವತಿ ಬಾಗಿಲಿನಿಂದ ಮರೆಯಾದದ್ದೇ ಅರಿವು ಕಾಯಿನ್ ಕೈತಪ್ಪಿ ಕೆಳಕ್ಕೆ ಬೀಳುತ್ತದೆ , ಕಾಯಿನ್ ತಗೆದುಕೊಳ್ಳಲು ಮುಂದಾಗುತ್ತಾನೆ. ಅಷ್ಟರಲ್ಲಿ ಕಲ್ಲಯ್ಯ , ದೊಡ್ಡ ರಾಡ್ ಒಂದನ್ನು ತಗೆದುಕೊಂಡು ಜೋರಾಗಿ ಅರಿವುವಿಗೆ ಹೊಡೆಯುತ್ತಾನೆ. ಅರಿವು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದೆ .

KALLAYYA

ರೇವತಿ ಎಲ್ಲಿ !!

ಬಟ್ಟೆ ಹಿಡಿದು ಎಳೆದು , ಜೋರಾಗಿ ಹೊಡೆಯಲು ಆರಂಭಿಸುತ್ತಾನೆ , ಅಷ್ಟರಲ್ಲಿ ದೇವಕಿ ನಡುವೆ ಪ್ರವೇಶಿಸಿ , ಹೊಡೆದಾಟ ಬಿಡಿಸಲು ಮುಂದಾಗುತ್ತಾಳೆ.

INTRCUT:

SWA SCREENWRITERS ASSOCIATION

INT. MUDUKA HOUSE , DAY

ಅಪೂರ್ವ ಕರೆಯನ್ನು ಸ್ವೀಕರಿಸುತ್ತಾನೆ ,

KITTI

(ವಿ.ಓ) ಮಗ ಎಲ್ಲಿದ್ಯೋ , ಆಗ್ಲಿಂದ ಟ್ರೈ ಮಾಡ್ತಿದ್ದೀನಿ ಕಾಲ್ ಕನೆಕ್ಟ್ ಆಗ್ತಿರಲಿಲ್ಲ , ಸರಿ ನೀನ್ ಹೇಳಿದ್ ಜಾಗದಲ್ಲೇ ವೆಯ್ಟ್ ಮಾಡ್ತಾಯಿದ್ದೀವಿ , ಬೇಗ್ ಬಾರೋ ಹೆವಿ ಕೆಲಸ ಇದೆ ಇವತ್ತು.

APOORVA

ಬಂದೆ ‼ ( ಕಾಲ್ ಕಟ್ ಮಾಡಿ ) ನಾ ಹೊರಡ್ಬೇಕು

MUDUKA

ಪ್ರಶ್ನೆಗಳು ನಿನ್ನ ಸುಮ್ನೆ ಬಿಡಲ್ಲ , ಮತ್ತೆ ಬರಲೇಬೇಕು , ಹೋಗ್ಬಿಟ್ ಬಾ

INTRCUT:

I/E. KALLAYYA HOUSE , DAY

ಕಲ್ಲಯ್ಯನಿಂದ ಅರಿವನ್ನು ಬಿಡಿಸಿ , ಆತನನ್ನು ಎಳೆದು ಕಾರ್ ನಲ್ಲಿ ಕೂರಿಸುತ್ತಾಳೆ , ಕಲ್ಲಯ್ಯನನ್ನು ಜೋರಾಗಿ ದೂಡುತ್ತಾಳೆ , ಅರಿವುವಿಗೆ ವಿಪರೀತ ಗಾಯಗಳಾಗಿವೆ. ಒದ್ದಾಡುತ್ತಿದ್ದಾನೆ.

INTRCUT:

I/E. MUDUKA HOUSE , DAY

ಅಜ್ಜನ ಮನೆಯಿಂದ ಅಪೂರ್ವ ಹೊರಟಿದ್ದಾನೆ , ಫೋಟೋದಲ್ಲಿ ಇದ್ದಹಾಗೆ ಅವನ ಅಮ್ಮ ಮತ್ತು ಅಪ್ಪ ನಿರ್ಲಿಪ್ತಭಾವದಲ್ಲಿ ಅಪೂರ್ವನನ್ನು ಹಿಂಬಾಲಿಸುತ್ತಿದ್ದಾರೆ. ಅಪೂರ್ವ ಕಾರಿನಲ್ಲಿ ಕೂರುತ್ತಾನೆ , ಆತನ ಅಪ್ಪ ಅಮ್ಮನು ಹಿಂದಿನ ಸೀಟ್ ಅಲ್ಲಿ ಕೂರುತ್ತಾರೆ.

**“ಎರಡೂಕಡೆ ಕಾರ್ ಮೂವ್ ಆಗುತ್ತಿದ್ದಂತೆ ಅಪೂರ್ವ ಕಣ್ಣು ಮಿಟುಕಿಸುತ್ತಾನೆ ಎರಡೂ ಫ್ರೇಮ್ ಫ್ರೀಜ್ ಆಗುತ್ತದೆ”**

# ಮ ಧ್ಯಂ ತ ರ



SWA SCREENWRITERS ASSOCIATION

EXT. BENGALURU ROADS , NIGHT

ಅಪೂರ್ವ ಕಿಟ್ಟಿಯ ಗಾಡಿಯಲ್ಲಿ ಬೆಂಗಳೂರಿನ ವಿವಿಧ ರಸ್ತೆಗಳಲ್ಲಿ ಟ್ರಾವೆಲ್ ಆಗುತ್ತಿದ್ದಾನೆ .. ಟ್ರಾವೆಲಿಂಗ್ ಮಾಂಟೇಜ್ ಗಳು

೧. ಅಪೂರ್ವನ ಮುಖದಲ್ಲಿ ಸಾವಿರಾರು ಪ್ರಶ್ನೆಗಳು ಓಡುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ
೨. ಬೆಂಗಳೂರಿನ ರಸ್ತೆಗಳು ಖಾಲಿಖಾಲಿಯಾಗಿವೆ , ಅಪೂರ್ವ ಇಡೀ ಊರಿನಲ್ಲಿ ಒಬ್ಬನೇ ಇರುವಂತೆ ತೋರುತ್ತದೆ.

INTRCUT:

EXT. APOORVA HOUSE , NIGHT

ಅಪೂರ್ವ ತನ್ನ ತಾಯಿಗೆ ಕರೆ ಮಾಡುತ್ತಿದ್ದಾನೆ , ಕಾಲ್ ಕನೆಕ್ಟ್ ಆಗುವುದಿಲ್ಲ "ನೀವು ಕರೆ ಮಾಡಿದ ಚಂದಾದಾರರು ವ್ಯಾಪ್ತಿಪ್ರದೇಶದ ಹೊರಗಿದ್ದಾರೆ" ಎಂದು ಬರುತ್ತಿದೆ

INTRCUT:

EXT. BENGALURU ROADS , NIGHT

ಬೆಂಗಳೂರಿನ ವಿವಿಧ ರಸ್ತೆಗಳಲ್ಲಿ ಅಪೂರ್ವ ಟ್ರಾವೆಲ್ ಆಗುತ್ತಿದ್ದಾನೆ ಟ್ರಾವೆಲಿಂಗ್ ಮಾಂಟೇಜ್ ಗಳು

INTRCUT:

INT. APOORVA HOUSE , NIGHT

ಅಪೂರ್ವ ತನ್ನ ರೂಮಿನಲ್ಲಿರುವ ಸಣ್ಣ ಬ್ಯಾಗ್ ತಗೆಯುತ್ತಾನೆ , ಅದರಲ್ಲಿ ಅಪ್ಪ , ಅಮ್ಮ ಹಾಗೂ ಅಪೂರ್ವ ನಿಂತಿರುವ ಫೋಟೋ ಇರುತ್ತದೆ.

ಅಪೂರ್ವ ಅದನ್ನೇ ಗಮನವಹಿಸಿ ನೋಡುತ್ತಾನೆ. ಕಣ್ಣು ತುಂಬಿದೆ , ಆ ಫೋಟೋವನ್ನು ಮೊಬೈಲ್ ಅಲ್ಲಿ ಕ್ಯಾಪ್ಚರ್ ಮಾಡಿಕೊಳ್ಳುತ್ತಾನೆ , ಅಷ್ಟರಲ್ಲಿ ಅಮ್ಮ ಅವೈಲೆಬಲ್ ಟು ಕಾಲ್ ಎಂಬ ಸಂದೇಶ ಬರುತ್ತದೆ

INTRCUT:

EXT. BENGALURU ROADS , NIGHT

ಬೆಂಗಳೂರಿನ ವಿವಿಧ ರಸ್ತೆಗಳಲ್ಲಿ ಅಪೂರ್ವ ಟ್ರಾವೆಲ್ ಆಗುತ್ತಿದ್ದಾನೆ . ನಡುರಸ್ತೆಯೊಂದರಲ್ಲಿ ಗಾಡಿ ನಿಲ್ಲಿಸುತ್ತಾನೆ , ಆರೆಂಜ್ ಟ್ರಾಫಿಕ್ ಲೈಟ್ ಬ್ಲಿಂಕ್ ಆಗುತ್ತಿರುತ್ತದೆ , ಅಪೂರ್ವನೂ ನಿಟ್ಟುಸಿರಿಟ್ಟು ತನ್ನ ಕಣ್ಣನ್ನು ಬ್ಲಿಂಕ್ ಮಾಡುತ್ತಾನೆ.

INTRCUT:


©Srinidhi S
SWA Membership Number:54490

EXT. APOORVA HOUSE , NIGHT

ಅಪೂರ್ವ ತನ್ನ ತಾಯಿಗೆ ಕರೆಮಾಡಿದ್ದಾನೆ , ಕಾಲ್ ರಿಂಗಣಿಸುತ್ತಿದೆ . ಕಾಲ್ ಪಿಕ್ ಮಾಡುತ್ತಾರೆ , ಅಪೂರ್ವ ಮಾತನಾಡಲು ಮುಂದಾಗುತ್ತಾನೆ , ಅಷ್ಟರಲ್ಲಿ ಆ ಕಡೆಯಿಂದ ದೇವಯ್ಯನ ದನಿ ಮೂಡುತ್ತದೆ.

DEVVAYYA

( ವಾ.ಓ ) ಅಮ್ಮ ಮಲಗಿದ್ದಾಳೆ ಅಪ್ಪಿ , ಕಾಲ್ ವಿಪರೀತ ನೊವ್ವಂತಿದ್ಲು , ಆಸ್ಪತ್ರೆಗ್ ಹೋಗಿದ್ವಿ , ಒಂದಿಷ್ಟ್ ಮಾತ್ರೆ ಕೊಟ್ಟಿದ್ದಾರೆ , ಸೋಮವಾರ ದೊಡ್ ಡಾಕ್ಟ್ರು ಬರ್ತಾರೆ ಬನ್ನಿ ಅಂದಿದ್ದಾರೆ ನೋಡ್ಬೇಕು.

APOORVA

ದೇವಯ್ಯ ಅರ್ಜೆಂಟಾಗಿ ಮಾತಾಡ್ಬೇಕಿತ್ತು , ಅಮ್ಮ ನಿದ್ದೆಮಾಡಿಲ್ಲ ಅಂದ್ರೆ ಫೋನ್ ಕೊಡ್ತ್ಯ ⁉

DEVVAYYA

(ವಾ.ಓ) ಆಯಿತಿರು , ಯಶು , ನಿನ್ ಮಗ ಫೋನ್ ಮಾಡವ್ನೆ , ಏನೋ ಅರ್ಜೆಂಟ್ ಅಂತೇ ..

AMMA

ಹೇಳೋ ‼

APOORVA

ಅಪ್ಪ ನಮ್ಮನ್ ಬಿಟ್ಹೋಗಿದ್ ಯಾವಗಮ್ಮ ⁉

AMMA

ಏನಾಯ್ತೋ ನಿಂಗೆ !

APOORVA

ಅಮ್ಮ ಹೇಳು ಪ್ಲೀಸ್ ..

AMMA

ನಿನ್ ಐದ್ನೇ ವರ್ಷದ್ ಹುಟ್ಟಿದ್ದಬ್ಬದ್ ದಿನ , ಅಲ್ಲ ಏನಾಯ್ತೋ ‼

APOORVA

ಬಿಟ್ಹೋಗಕ್ ಕಾರಣ ‼

SWA SCREENWRITERS ASSOCIATION

AMMA

ನಂಗದಿನ್ನು ಪ್ರಶ್ನೆಯಾಗೇ ಉಳಿದಿದೆ ಅಪ್ಪು , ಮನೆ ಬಿಟ್ಟು
ಹೋಗೋ ದಿನಾನೂ ಆರಾಮಾಗೇಯಿದ್ರು  , ಆದ್ರೆ ಅವ್ರ್
ತಲೇಲಿ ಏನ್ ಓಡ್ತಿತ್ತೋ ಯಾರಿಗ್ ಗೊತ್ತು !!
ಯಾವತ್ತೂ ಕೆಳ್ದೆಯಿರೋನು... ಏನಾಯಿತೋ !!

APOORVA

ನನ್ ದೃಷ್ಟಿಲಿ ಅಪ್ಪ ಯಾವಾಗ್ಲೂ ವಿಲನ್ ಥರ ಕಾಣಿಸ್ತಾನೆ
ಈ ಫಿಲಂ ಗಳಲ್ಲಿ ತೋರಿಸ್ತಾರಲ್ಲ ಬೇರೆ ಸಂಬಂಧ ಇದ್ದು

AMMA

ಅಪೂರ್ವ ನಿಂಗಾ ದೃಷ್ಟಿ ಬರಕ್ಕೆ ಕಾರಣ ನಾನೇ ಕಣೋ
ಅವ್ರ್ ಬಗ್ಗೆ ಏನೂ ಹೇಳ್ಲಿಲ್ಲ ನಿಂಗೆ !! ಜವಾಬ್ದಾರಿ

,

ಭಯ , ನೋವು , ನಂಗೆ ಮಾತಾಡಕ್ ಅವಕಾಶಾನೇ
ಕೊಡ್ಲಿಲ್ಲ , ಯಾವುದೊ ಬುಡಕಟ್ಟು ಸಮುಧಾಯದ್
ಡಾಕ್ಯುಮೆಂಟರಿ ಮಮಾಡ್ಬೇಕು ಅಂತ ಹೇಳ್ ಹೋಗಿದ್
ನೆನಪು , ತುಂಬಾ ದಿನ ಕಾದೆ , ಮಿಸಿಂಗ್ ಕಂಪ್ಲೇಂಟ್
ಕೊಟ್ಟೆ , ಏನೂ ಪ್ರಯೋಜನ ಆಗ್ಲಿಲ್ಲ , ಅವರ ಕಾರ್
ಶಾಂತಲಾ ನದಿ ಬ್ರಿಡ್ಜ್ ಹತ್ರ ಸಿಕ್ತು , ನದೀಲೇನಾದ್ರೂ
ಕೊಚ್ಕೊಂಡ್ ಹೋಗಿಬ್ಬೋದು ಅಂತ ನದೀಲೂ ಹುಡುಕಿದ್ವಿ
ಏನು ಗೊತ್ತಾಗ್ಲಿಲ್ಲ.. ( ನಿಟ್ಟುಸಿರು ) ಯಾವತ್ತೂ ಇಲ್ದೋನು
ಇವತ್ ಯಾಕಿವೆಲ್ಲ ಕೇಳ್ತಿದ್ಯಾ  , ಏನಾಯ್ತು !?

APOORVA

ಅಪ್ಪ ಬದುಕಿರಲುಬೋದಲ್ವಾ !!

INTRCUT:

SWA SCREENWRITERS ASSOCIATION

EXT. BENGALURU ROADS , NIGHT

ಅಪೂರ್ವ ರಸ್ತೆಯಲ್ಲಿ ನಿಂತಿದ್ದಾನೆ , ಚಿಂತೆಯಲ್ಲಿ ಮುಳುಗಿದ್ದಾನೆ. ಎರಡುಮೂರು ಫ್ಲ್ಯಾಶ್ಲೈಟ್ ಅವನ ಮುಖಕ್ಕೆ ಬೀಳುತ್ತದೆ.

INTRCUT:

INT. DREAMY , PHOTO STUDIO

ಮುದುಕ ತೋರಿಸಿದ್ದ ಫೋಟೋದಲ್ಲಿ ಇರುವಹಾಗೆ ಸ್ಟುಡಿಯೋದಲ್ಲಿ ಅಪೂರ್ವನ ತಂದೆ ತಾಯಿ ಚಿಕ್ಕ ಅಪೂರ್ವ ನಿಂತಿದ್ದಾರೆ , ಅಪೂರ್ವನ ಕೈನಲ್ಲಿ ಕ್ಯಾಮೆರಾ ಇದೇ , ಸ್ಮೈಲ್ ಎಂದು ತೋರಿಸಿ , ಫೋಟೋ ಕ್ಲಿಕ್ ಮಾಡುತ್ತಾನೆ. ಫೋಟೋ ಫ್ಲಾಶ್ ಆಗುತ್ತದೆ.

AMMA

( ವಾ.ಓ ) ನಂಗ್ ಬದುಕಿರ್ತಾರೆ ಅನ್ನೋ ನಂಬಿಕೆ ಇಲ್ಲ
( ಬಿಕ್ಕಳಿಸುತ್ತಾಳೆ ) ಹಳೆದೆಲ್ಲ ಯಾಕ್ ನೆಂಪಿಸ್ತ್ಯ ಅಪ್ಪು ,
( ಉಸಿರುಬಿಡುತ್ತಾಳೆ ) ತುಂಬಾ ಸುಸ್ತು ಕಣೋ , ಆಗ್ತಿಲ್ಲ ,
ನಾಳೆ ಮಾತಾಡೋಣ್ವ !!

ಫೋಟೋ ಫ್ಲಾಶ್ ಆಗುತ್ತದೆ.

MATCH CUT TO:

INT. GOPAL KRISHNA HOUSE , ROOM , NIGHT

ಮಿಂಚುತ್ತಿದೆ , ಮಳೆ ವಿಪರೀತ ಜೋರಾಗಿ ಸುರಿಯುತ್ತಿದೆ , ಆಗೀಗ ಗುಡುಗುತ್ತಿದೆ , ಅರಿವು ಮಂಚದ ಮೇಲೆ ಕುಳಿತಿದ್ದಾರೆ , ಅವನ ಸುತ್ತು , ಗೋಪಾಲ್ , ಯಶೋಧ , ದೇವಕಿ ಇದ್ದಾರೆ . ಕಲ್ಲಯ್ಯ ಅರಿವು ಮೇಲೆ ಮಾಡಿದ ಹಲ್ಲೆಯ ಕುರಿತು ಚರ್ಚೆಯಾಗುತ್ತಿದೆ.

GOPAL KRISHNA URS

ನೀವು ಮೈಸೂರೋರು ಅಂದಿದ್ದೆ ಮಗಳು ಬಿಟ್ಟೋಗಿದ್
ನೆನಪಾಗಿ ಹಾಗ್ ರಿಯಾಕ್ಟ್ ಮಾಡಿದ್ದಾನೆ , ಅವನ್ ಹತ್ರ
ಮಾತಾಡಿದೆ , ತಲೆ ತಲೆ ಜಜ್ಕೊಳ್ತಿದ್ದಾನೆ , ಪಾಪಾ ಅವನಿಗೆ
ಕಾನ್ಷಿಯಸ್ ಇರಲಿಲ್ಲವಂತೆ , ನಾನೂ ನಿಮ್ ಜತೆ
ಬರ್ಬೇಕಿತ್ತು ಅರಿವು .. ಕ್ಷಮೆ ಇರ್ಲಿ !!

ARIVU

ಪರವಾಗಿಲ್ಲ ಸರ್ , ಹೀಗೆಲ್ಲ ಆಗತ್ತೆ ಅಂತ ಯಾರಿಗ್
ಗೊತ್ತಿತ್ತು , ದೇವಕಿಯವರಿಗೆ ಥ್ಯಾಂಕ್ಸ್ ಹೇಳ್ಬೇಕು , ಅವ್ರು
ಇಲ್ದಿದ್ರೆ ಕಲ್ಲಯ್ಯ ಕೊಲೆನೆ ಮಾಡ್ಬಿಡ್ತಿದ್ದ ಅನ್ಸತ್ತೆ !!!

YASHODHA

ನೀವ್ ಸುಧಾರಿಸ್ಕೊಳಿ ಬೆಳಿಗ್ಗೆ ಮಾತಾಡನ !!

SWA SCREENWRITERS ASSOCIATION

ಅರಿವು ಮಲಗಿರುವ ಹಾಸಿಗೆಯ ಮೇಲೆ ಇನ್ನೊಂದು ದಿಂಬು ಹಾಗೂ ರೊಗ್ಗು ಇಡುತ್ತ ಗೋಪಾಲಕೃಷ್ಣ ಮಾತನಾಡಲು ಮುಂದಾಗುತ್ತಾರೆ.

GOPAL KRISHNA URS

ನಿಮಗೂ ಈ ಊರಿಗೂ ಯಾವುದೊ ಜನುಮದ್
ನಂಟಿರಬೇಕು , ಈ ಊರು ವಾಪಸ್ ಹೋಗೋದಕ್ಕೆ
ಅವಕಾಶನೇ ಕೊಡ್ತಿಲ್ಲ ನಿಮಗೆ. ( ಸ್ಮೈಲ್ )

ಅರಿವು ಸ್ಮೈಲ್ ಮಾಡುತ್ತಾನೆ , ಎಲ್ಲರೂ ಹೊರ ನಡೆಯುತ್ತಾರೆ , ದೇವಕಿ ಅರಿವನ್ನೇ ನೋಡುತ್ತಾಳೆ ಅರಿವು ದೇವಕಿಯನ್ನು ನೋಡುತ್ತಾನೆ. ನೋವಿನಲ್ಲೇ ಸ್ಮೈಲ್ ಮಾಡುತ್ತಾನೆ.

ARIVU

ಥಾಂಕ್ ಯು ( ಸ್ಮೈಲ್ )

ದೇವಕಿ ಅರಿವನ್ನೇ ನೋಡುತ್ತಿದ್ದಾಳೆ , ಅವಳು ಕೂಡ ಸ್ಮೈಲ್ ಮಾಡುತ್ತಾಳೆ

MATCH CUT TO:

EXT. MUDUKA HOUSE , DAY

**September 7 . 2022**

ಬೆಳ್ಳಂಬೆಳಗ್ಗೆ ಅಪೂರ್ವ ನಿರ್ಲಿಪ್ತ ಭಾವದಲ್ಲಿ ಮುದುಕನ ಮನೆಯ ಮುಂದೆ ಹಿಂದಿನ ದಿನದ ಬಟ್ಟೆಯಲ್ಲೇ ನಿಂತಿದ್ದಾನೆ , ಆತನ ಎದುರು ಬಾಗಿಲು ತೆರೆದಿರುವ ಮುದುಕ ನಿಂತಿದ್ದಾನೆ. ಮುದುಕ ಸ್ಮೈಲ್ ಮಾಡುತ್ತಾನೆ

J CUT :

INT. MUDUKA HOUSE , DAY

ಅಪೂರ್ವನ ಎದುರು ಬಿಸಿಯಾಗಿ ಹೊಗೆ ಹೊರಸೂಸುತ್ತಿರುವ ಲೈಮ್ ಟಿ ಇದೆ , ಮುದುಕ ಟಿ ಸೇವಿಸುತ್ತಾ ಮಾತನಾಡುತ್ತಿದ್ದಾರೆ. ಅಪೂರ್ವ ಮುದುಕನ ಪಕ್ಕ ನಿಂತಿದ್ದಾನೆ.

MUDUKA

ಅಪೂರ್ವ ನೀನ್ ಹೇಳೋವಷ್ಟು ಈಸಿಯಲ್ಲ , ಅಷ್ಟ್
ದೂರ ಟ್ರಾವೆಲ್ ಮಾಡೋದು , ಬಿಗಿನರ್ ಗೆ ತುಂಬಾನೇ
ಕಷ್ಟ ಆಗತ್ತೆ , ಹಂತಹಂತವಾಗಿ ಹೋಗೋದು ಒಳ್ಳೇದು .
ವ್ರೇಮ್ಯ ಮೂಲಕ ಮಾಡೋ ಟೈಮ್ ಟ್ರಾವೆಲ್ ಗೆ
ಒಂದಿಷ್ಟು ರೂಲ್ಸ್ ಅಂಡ್ ಗೈಡೆನ್ಸ್ ಇವೆ.

ಸೂಟ್ಕೇಸ್ ಇಂದ ವ್ರೇಮ್ಯ ಐ ಡ್ರಾಪ್ ತಗೆಯುತ್ತಾನೆ , ಹಾಗೆ ಮತ್ತೊಂದು ಬಾಕ್ಸ್ ಅಲ್ಲಿರುವ ಸ್ಮಾರ್ಟ್ ವಾಚ್ ಒಂದನ್ನು ತಗೆದು ಅಪೂರ್ವನ ಮುಂದೆ ಇಡುತ್ತಾನೆ.

MUDUKA (CONT'D)

ಈ ವಾಚ್ ಅಲ್ಲಿ ನೀನು ಟ್ರಾವೆಲ್ ಮಾಡೋದಕ್ಕೆ ಇಷ್ಟ ಪಡೋ ಜಾಗ , ಟೈಮ್ ಮತ್ತೆ ಡೇಟ್ ನ ಸೆಟ್ ಮಾಡ್ಬೇಕು ವಾಚ್ ಮತ್ತೆ ಐ ಡ್ರಾಪ್ ಎರಡರ ಮೇಲೂ ಗ್ರೀನ್ ಲೈಟ್ ಬಂದ್ರೆ ಮಾತ್ರ ನಿಂಗೆ ಟ್ರಾವೆಲ್ ಮಾಡೋಕ್ಕಾಗದು , ಈ ಡಿವೈಸ್ ನಿನ್ ಫೀಡ್ ಮಾಡಿದ್ ಇನ್ಫೋರ್ಮೇಷನ್ ಆಧಾರದ ಮೇಲೆ ಜನ ಅತ್ಯಂತ ಕಡಿಮೆ ಇರೋ ನಿಯರ್ ಬೈ ಸ್ಪಾಟ್ ಅಲ್ಲಿ ನಿನ್ನ ಲೋಕೇಟ್ ಮಾಡೋಕೆ ಟ್ರೈ ಮಾಡತ್ತೆ , ಇಫ್ ರೆಡ್ ಲೈಟ್ ಬಂತು ಅಂದ್ರೆ , ನಿನ್ ಫೀಡ್ ಮಾಡಿರೋ ಜಾಗದ ನೂರು ಮೀಟರ್ ರೆಡಿಯಾಸ್ ಅಲ್ಲಿ ತುಂಬಾನೆ ಜನ ಇದ್ದಾರೆ ಅಂಡ್ ಹಾರ್ಡ್ ಟು ಅಕ್ಸೆಸ್ ನೋ ಪೀಪಲ್ ಝೋನ್ ಅಂತ ಅರ್ಥ , ನೀನು ವಾಪಸ್ ಈ ಟೈಮ್ ಲೈನ್ ಗೆ ಬರಬೇಕಾದ್ರೂ ವಾಚ್ ಗ್ರೀನ್ ಲೈಟ್ ತೋರಿಸೋ ಜಾಗನ ಹುಡುಕ್ಕೊಂಡು ಹೋಗಬೇಕು , ಇಲ್ಲ ಅಂದ್ರೆ ಕಾಂಪ್ಲಿಕೇಷನ್ಸ್ ಆಗತ್ತೆ. ಅನಿವಾರ್ಯತೆ ಬಂದ್ರೆ ನಿನ್ ರೆಡ್ ಝೋನ್ ಅಲ್ಲೂ ಬ್ಲಿಂಕ್ ಮಾಡಬೋದು , ಬಟ್ ನಾನ್ ಅದನ್ನ ಸಜೆಸ್ಟ್ ಮಾಡಲ್ಲ, ಹೋಗ್ತಾ ಹೋಗ್ತಾ ನಿಂಗೆ ಎಲ್ಲಾ ಅರ್ಥ ಆಗತ್ತೆ ‼ , ಬಾ ಒಂದು ಟ್ರಯಲ್ ಮಾಡಣ

ಸ್ಲೋ ಶಾಟ್ಸ್ ( ಇನ್ಸೆರ್ಟ್ಸ್ ) ಅಪೂರ್ವ ಹಾಗೂ ಮುದುಕ ವಾಚ್ ಹಾಕಿಕೊಳ್ಳುತ್ತಾರೆ

MUDUKA (CONT'D)

( ವಾ.ಓ ) ರಾಂಡಮ್ ಆಗಿ ಒಂದು ಟೈಮ್ , ಡೇಟ್ ಮತ್ತೆ ಲೊಕೇಶನ್ ಫೀಡ್ ಮಾಡು

ಅಪೂರ್ವ ಫೀಡ್ ಮಾಡಿದ್ ಲೊಕೇಶನ್ , ಟೈಮ್ , ಮತ್ತು ಡೇಟ್ ಅನ್ನೇ ಮುದುಕ ತನ್ನ ವಾಚ್ ಅಲ್ಲೂ ಫೀಡ್ ಮಾಡುತ್ತಾನೆ , ಹಾಗೂ ವ್ರೇಮ್ಯ ಐ ಡ್ರಾಪ್ ಹೊರ ತಗೆಯುತ್ತಾನೆ , ಮುದುಕ ತಾನು ಮಾಡಿದ ಹಾಗೆ ಫಾಲೋ ಮಾಡುವಂತೆ ಅಪೂರ್ವನಿಗೆ ಸೂಚನೆ ನೀಡುತ್ತಾನೆ

MUDUKA (CONT'D)

( ವಾ.ಓ ) ಎರಡೂ ಕಣ್ಣಿಗೆ ಐ ಡ್ರಾಪ್ ಹಾಕಿದ್ಮೇಲೆ ಗ್ರೀನ್ ಲೈಟ್ ಆನ್ ಆಗಿದ್ದೆ ಯು ಶುಡ್ ಬ್ಲಿಂಕ್ ( ಅಪೂರ್ವನ ಹೆಗಲ ಮೇಲೆ ಕೈ ಇಟ್ಟು ) ಸ್ವಲ್ಪ ಭಯ ಆಗತ್ತೆ , ಮೊದಲ್ನೇ ಸರ್ತಿ ಬ್ಲಿಂಕ್ ಮಾಡಿದ್ಮೇಲೆ ಮುಗಿತು ಮತ್ತೆ ಇನ್ನೊಂದು ಟೈಮ್ ಲೈನ್ ಗೆ ಹೋಗೋತನಕ ಮಧ್ಯ ಎಲ್ಲೂ ಕಣ್ ಮಿಟುಕಿಸಬೇಡ

ಅಪೂರ್ವ ಮ್ಮತ್ತು ಮುದುಕ ಒಟ್ಟಿಗೆ ಎರಡೂ ಕಣ್ಣಿಗೂ ಐ ಡ್ರಾಪ್ ಹಾಕಿಕೊಳ್ಳುತ್ತಾರೆ , ಐ ಡ್ರಾಪ್ ಕಣ್ಣಿಗೆ ಬಿದ್ದಿದ್ದೆ , ಇಬ್ಬರೂ ಕಣ್ಣು ಮುಚ್ಚಿ ಬಿಡುತ್ತಾರೆ , ವಿಪರೀತ ಬೆಳಕು ಆವರಿಸುತ್ತದೆ. ಕಣ್ಣು ಬಿಟ್ಟಿದ್ದೆ ೨೦೦೧ ಸ್ಪೇಸ್ ಒಡೆಸಿ ರೀತಿ ಸಾಕಷ್ಟು ಬಣ್ಣಗಳು ಮೂವ್ ಆಗುತ್ತವೆ. ನಂತರದಲ್ಲಿ ಮತ್ತೆ ಬ್ರೈಟ್ ಲೈಟ್ ಆವರಿಸುತ್ತದೆ. ಅಪೂರ್ವ ಮತ್ತೆ ಮುದುಕ , ಬೆಳಕು ಎಷ್ಟೇ ತೀವ್ರವಾದರೂ ಕಣ್ಣು ಮಿಟುಕಿಸುವುದಿಲ್ಲ

CUT TO:

EXT. REHEARSAL PLACE , EVENING

**September 3 . 2022**

ಅಪೂರ್ವ ಹಾಗೂ ಮುದುಕ , ಜನ ಇಲ್ಲದ ಒಂದು ಟಾಯ್ಲೆಟ್ ಒಳಗೆ ನಿಂತಿದ್ದಾರೆ , ಅಪೂರ್ವನಿಗೆ ಶಾಕ್ ಆಗುತ್ತದೆ , ಅತ್ತಿತ್ತ ನೋಡುತ್ತಾನೆ , ವಾಚ್ ಅಲ್ಲಿ ಟೈಮ್ ಓಡುತ್ತಿರುತ್ತದೆ , ನಿಧಾನಕ್ಕೆ ಇಬ್ಬರೂ ಟಾಯ್ಲೆಟ್ ಇಂದ ಹೊರಕ್ಕೆ ನಡೆದುಬರುತ್ತಾರೆ , ಅಪೂರ್ವ ಒಂದೆರಡು ಹೆಜ್ಜೆ ಇಟ್ಟವನೇ ತುಸು ದೂರ ಕಣ್ಣು ಹಾಯಿಸುತ್ತ ಸ್ತಬ್ಧವಾಗಿ ನಿಲ್ಲುತ್ತಾನೆ , ದೂರದಲ್ಲಿ ಅಪೂರ್ವ , ಸ್ವಪ್ನ ಹಾಗೂ ಗೆಳೆಯರು ಕುಳಿತಿದ್ದಾರೆ , ಅಪೂರ್ವ ಹಾಗೂ ಸ್ವಪ್ನ ಕಣ್ಣಲ್ಲಿ ಕಣ್ಣಿಟ್ಟು ನೋಡುವ ಆಟ ಆಡುತ್ತಿದ್ದಾರೆ , ಅಪೂರ್ವ ಸ್ವಪ್ನನನ್ನೇ ನೋಡುತ್ತಾನೆ , ಸ್ವಪ್ನ ಹಾಗೂ ಗೆಳೆಯರು ಅಪೂರ್ವ ಕಣ್ಣು ಮಿಟುಕಿಸಬೇಕು ಎನ್ನುವಂತೆ ವಿಪರೀತ ಇರಿಟೇಟ್ ಮಾಡುತ್ತಿದ್ದಾರೆ. ದೂರದಲ್ಲಿ ಮಾತನಾಡುವ ಶಬ್ದ ಕೇಳಿಬರುತ್ತಿದೆ. ಅಜ್ಜ ಕೂಡ ಅಪೂರ್ವನ ಪಕ್ಕ ನಿಂತಿದ್ದಾರೆ. ಇಬ್ಬರೂ ಆ ಘಟನೆಯನ್ನು ನೋಡುತ್ತಿದ್ದಾರೆ. ವಾಚ್ ಅಲ್ಲಿ ರೆಡ್ ಲೈಟ್ ಉರಿಯುತ್ತದೆ , ಕಣ್ಣಲ್ಲಿ ಕಣ್ಣಿಟ್ಟು ಆಟವಾಡುತ್ತಿದ್ದ ಅಪೂರ್ವ ಇವರಿಬ್ಬರು ನಿಂತಿರುವುದನ್ನು ನೋಡುತ್ತಾನೆ ಶಾಕ್ ಆಗುತ್ತಾನೆ , ಇಲ್ಲಿರುವ ಅಪೂರ್ವ ಕೂಡಾ ಗಾಭರಿಯಾಗಿ ಕಣ್ಣು ಮಿಟುಕಿಸುತ್ತಾನೆ. ಅಜ್ಜ ಅಪೂರ್ವನನ್ನು ನೋಡಿ ತಾವೂ ಕೂಡ ಕಣ್ಣು ಮಿಟುಕಿಸುತ್ತಾರೆ. ಮ್ಯೂಸಿಕ್ ಇಂಟೆನ್ಸ್ ಆಗುತ್ತದೆ

ಕಣ್ಣು ಬಿಡುತ್ತಾರೆ ೨೦೦೧ ಸ್ಪೇಸ್ ಒಡೆಸಿ ರೀತಿ ಸಾಕಷ್ಟು ಬಣ್ಣದ ಬೆಳಕುಗಳು ಮೂವ್ ಆಗುತ್ತವೆ ನಂತರದಲ್ಲಿ ಮತ್ತೆ ಬ್ರೈಟ್ ಲೈಟ್ ಆವರಿಸುತ್ತದೆ. ಅಪೂರ್ವ ಮತ್ತೆ ಮುದುಕ, ಬೆಳಕು ಎಷ್ಟೇ ತೀವ್ರವಾದರೂ ಕಣ್ಣು ಮಿಟುಕಿಸುವುದಿಲ್ಲ

CUT TO:

INT. MUDUKA HOUSE , DAY

**September 7 . 2022**

ಇಬ್ಬರೂ ಎಥಾಸ್ಥಿತಿಯಲ್ಲಿ ಅಜ್ಜನ ಮನೆಯಲ್ಲಿರುತ್ತಾರೆ !! , ಅಪೂರ್ವ ಜೋರಾಗಿ ಉಸಿರಾಡುತ್ತಿದ್ದಾನೆ , ತಲೆ ಗಿರಕಿ ಹೊಡೆಯುತ್ತದೆ , ವಾಚ್ ಆಫ್ ಆಗುತ್ತದೆ , ಅತ್ತಿತ್ತ ನೋಡುತ್ತಾನೆ, ವಾಮಿಟಿಂಗ್ ಸೆನ್ಸೇಷನ್ ಉಂಟಾಗುತ್ತದೆ  ವಾಶ್ ಬೇಸಿನ್ ಬಳಿ ತೆರಳಿ ವಾಮಿಟ್ ಮಾಡುತ್ತಾನೆ , ನಂತರದಲ್ಲಿ ಮುಖ ತೊಳೆದು ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತಾನೆ , ವಿಚಿತ್ರತೆ ಆವರಿಸಿಕೊಂಡಿದೆ ..

MUDUKA

(ವಾ.ಓ) ಗ್ರೀನ್ ಲೈಟ್ ಗೆ ವಯ್ಟ್ ಮಾಡ್ಬೇಕು ಅಪೂರ್ವ ,
ಇಲ್ಲ ಆ ಟೈಮ್ ಲೈನ್ ಅಲ್ಲಿ ನಿನ್ ಜತೆ ಕಾಂಟ್ಯಾಕ್ಟ್
ಅಲ್ಲಿದ್ದ ವ್ಯಕ್ತಿಗೆ ತೊಂದ್ರೆ ಆಗತ್ತೆ ( ನಗುವನು )
ಹೋಗ್ಲಿ ಈಗ್ಲಾದ್ರೂ ನಂಬಿಕೆ ಬಂತಾ !!

ಅಪೂರ್ವ ಡೈನಿಂಗ್ ಟೇಬಲ್ ಸಮೀಪ ದಿಗ್ಭ್ರಾಂತನಾಗಿ ಕುಳಿತಿದ್ದಾನೆ , ಕಣ್ಣಲ್ಲಿ ನೀರು ಸುರಿಯುತ್ತಿದೆ ಕೈ ಬೆರಳುಗಳು ನಡಗುತ್ತಿವೆ.

APOORVA

ಸರ್ ಕುಡಿಯಕ್ ಸ್ವಲ್ಪ ನೀರ್ ಕೊಡ್ತೀರಾ !!

MATCH CUT TO:

INT. APOORVA HOUSE , DAY

ಅಪೂರ್ವ ಎಣ್ಣೆ ಹೊಡೆಯುತ್ತಿದ್ದಾನೆ , ಕಂಟ್ರೋಲ್ ಮಾಡಲಾರದೆ ನಗುತ್ತಿದ್ದಾನೆ , ಅತ್ತಿತ್ತ ನೋಡುತ್ತಿದ್ದಾನೆ , ಕೈಕಾಲು ನಿಲ್ಲುತ್ತಿಲ್ಲ , ಸ್ವಪ್ನಳಾ ಎರಡು ಮಿಸ್ ಕಾಲ್ ಇರುತ್ತದೆ ಮತ್ತು ಹೆಚ್. ಆರ್ ಕರೆಮಾಡಿರುತ್ತಾರೆ , ಅಪೂರ್ವನ ಮೊಬೈಲ್ ವೈಬ್ರೇಟ್ ಆಗುತ್ತಿದ್ದರೂ ಅವನಿಗೆ ಗಮನ ಇರುವುದಿಲ್ಲ

APOORVA

ಫಕ್ !! ಏನ್ ಗುರು ಇದು

ಫಾಸ್ಟ್ ಕಟ್ಸ್ ಆಗುತ್ತದೆ.

APOORVA
(CONT'D)
(ವಾ.ಓ) ಅಪ್ಪ ನಮ್ಮನ್ ಬಿಟ್ಟೋಗಿದ್ ಯಾವಗಮ್ಮ !?

೧. ಅಪೂರ್ವ ಮೊಬೈಲ್ ಅಲ್ಲಿ ಬಂದ ಕರೆಗಳನ್ನು ನೋಡುತ್ತಾನೆ , ನೋಟಿಫಿಕೇಶನ್ ಕ್ಲಿಯರ್ ಮಾಡುತ್ತಾನೆ , ೧೯೯೬ ಎಂದು ಮೊಬೈಲ್ ಕಾಲೆಂಡರ್ ಅಲ್ಲಿ ಹಾಕುತ್ತಾನೆ , ವರ್ಷಗಳು ಮುಂದೆಯಾಗುತ್ತದೆ ೫ ವರ್ಷ ಮುಂದಕ್ಕೆ ಹಾಕುತ್ತಾನೆ , ೨೦೦೧ ಬರುತ್ತದೆ. ಆಗಷ್ಟ್ ೨೮ ಡೇಟ್ ನಲ್ಲಿ ನಿಲ್ಲಿಸುತ್ತಾನೆ.
೨. ಮೊಬೈಲ್ ಕಾಲೆಂಡರ್ ಅಲ್ಲಿ ತಿಂಗಳುಗಳನ್ನು ಹಿಂದೆ ಮುಂದೆ ಮಾಡುತ್ತಾನೆ. ತನ್ನ ಬ್ಯಾಗ್ ಅನ್ನು ಎಳೆಯುತ್ತಾನೆ.

MATCH CUT TO:

SWA SCREENWRITERS ASSOCIATION

INT. MUDUKA HOUSE , DAY

ಅಜ್ಜ ನೀರು ತರಲು ಹೋಗಿದ್ದಾರೆ , ಅಪೂರ್ವ ತನ್ನ ಬ್ಯಾಗ್ ಜಿಪ್ ತೆರೆಯುತ್ತಾನೆ , ಸೂಟ್ ಕೇಸ್ ಪಕ್ಕದಲ್ಲಿರುವ ವ್ರೇಮ್ಯ ಐ ಡ್ರಾಪ್ ಹಾಗೂ ವಾಚನ್ನು ತನ್ನ ಬ್ಯಾಗಿಗೆ ಹಾಕಿಕೊಳ್ಳುತ್ತಾನೆ. ಇನ್ನೇನು ಜಿಪ್ ಹಾಕಬೇಕು ಅಜ್ಜ ಲೋಟ ಇಡುತ್ತಾರೆ , ಅಪೂರ್ವ ಗಾಬರಿಯಲ್ಲೇ ನೀರುಕೊಡಿಯುತ್ತಾನೆ , ಹಾಗೂ ಏನೂ ಆಗದವನ ಹಾಗೆ ಜಿಪ್ ಹಾಕಲು ಮುಂದಾಗುತ್ತಾನೆ

MATCH CUT TO:

INT. APOORVA HOUSE , DAY

ಜಿಪ್ ಸಂಪೂರ್ಣ ತೆರೆಯುತ್ತಾನೆ , ಅದರಿಂದ ವ್ರೇಮ್ಯ ಐ ಡ್ರಾಪ್ ಹಾಗೂ ಸ್ಮಾರ್ಟ್ ವಾಚ್ ಅನ್ನು ಹೊರತೆಗೆಯುತ್ತಾನೆ

ಫ್ಯಾಂಸಿ ಕಟ್ಸ್ ( ಇನ್ಸೆರ್ಟ್ಸ್ )

೧. ವಾಚ್ ಹಾಕಿಕೊಳ್ಳುತ್ತಾನೆ , ಡೇಟ್ , ಟೈಮ್ , ಪ್ಲೇಸ್ ಸೆಟ್ ಮಾಡುತ್ತಾನೆ , ಗ್ರೀನ್ಲೈಟ್ ಬರುತ್ತದೆ.
೨. ಕಣ್ಣಿಗೆ ಐ ಡ್ರಾಪ್ ಹಾಕಿಕೊಳ್ಳುತ್ತಾನೆ.
೩. ಕಣ್ಣು ಮುಚ್ಚುತ್ತಾನೆ

CUT TO:

EXT. RAYADURGA ROADS , DAY

**August 28 . 2001 , Time : 12:48 P.M**

ಅಪೂರ್ವ ಕಣ್ಣು ಬಿಡುತ್ತಾನೆ , ಕ್ಲೋಸ್ ಶಾಟ್ ಇಂದ ವಯ್ಡ್ ಶಾಟ್ ಅಲ್ಲಿ ರಸ್ತೆ ರಿವೀಲ್ ಆಗುತ್ತದೆ. ಖಾಲಿ ರಸ್ತೆಯೊಂದರಲ್ಲಿ ನಿಂತಿದ್ದಾನೆ , ಒಂದೆರಡು ನಿಮಿಷ ಅಲ್ಲೇ ಅತ್ತಿತ್ತ ನೋಡುತ್ತ ನಿಂತಿರುತ್ತಾನೆ ಅವನ ಬೆನ್ನ ಹಿಂದೆ ದೂರದಿಂದ ಪ್ರೀಮಿಯರ್ ಪದ್ಮಿನಿ ಕಾರ್ ವೇಗವಾಗಿ ಬರುತ್ತಿದೆ , ಕಾರ್ ಹಾರನ್ ಮಾಡುತ್ತದೆ , ಅಪೂರ್ವ ಗಾಭರಿಯಾಗಿ ಎಡಕ್ಕೆ ಹೋದಂತೆ ಕಾರ್ ಕೂಡ ಡ್ರಿಫ್ಟ್ ಆಗಿ ಎಡಕ್ಕೆ ಬಂದು ಧಿಡೀರನೆ ಬ್ರೇಕ್ ಹಾಕುವುದರಿಂದ ಅಪೂರ್ವನ ಎದುರಿಗೆ ಸ್ಕಿಡ್ ಆಗಿ ನಿಲ್ಲುತ್ತದೆ. ಅಪೂರ್ವ ಕಾರ್ ಒಳಕ್ಕೆ ನೋಡುತ್ತಾನೆ ಕಾರ್ ಅಲ್ಲಿ ಅಪೂರ್ವನ ತಂದೆ ಗೋಪಾಲ್ ಕೃಷ್ಣ ಅರಸ್ ಕುಳಿತಿರುತ್ತಾರೆ , ಅವರು ಒಮ್ಮೆಗೆ ಅಪೂರ್ವನನ್ನು ನೋಡುತ್ತಾರೆ , ವಿಪರೀತ ಹೆದರಿರುತ್ತಾರೆ , ಅಪೂರ್ವ ಅವರನ್ನೇ ನೋಡುತ್ತಾನೆ , ಕಾರ್ ತುಸು ಹಿಂದಕ್ಕೆ ಸರಿದು ಅಪೂರ್ವನ ಪಕ್ಕದಿಂದ ವೇಗವಾಗಿ ಹೊರಟುಹೋಗುತ್ತದೆ. ರೆಡ್ ಇಂದ ವಾಚ್ ಗ್ರೀನ್ ಬಣ್ಣಕ್ಕೆ ತಿರುಗುತ್ತದೆ.

ಸಮಯ ೧೨:೪೮ ತೋರಿಸುತ್ತಿರುತ್ತದೆ , ಅಪೂರ್ವ ತುಸುದೂರ ನಡೆದು ಬಸ್ ಸ್ಟಾಪ್ ಸಮೀಪ ಬಂದು ನಿಲ್ಲುತ್ತಾನೆ , ಬಸ್ ಸ್ಟಾಪ್ ಅಲ್ಲಿ ಹುಚ್ಚ ಚಿತ್ರದ ಪೋಸ್ಟರ್ ಅಂಟಿಸಲಾಗಿದೆ , ಅದರ ಎದುರು ಕೂರುತ್ತಾನೆ , ರಸ್ತೆಯ ಮತ್ತೊಂದು ಬದಿಯಲ್ಲಿ ಗಡ್ಡ ಬಿಟ್ಟಿರುವ ವ್ಯಕ್ತಿಯೊಬ್ಬ ನಡೆದುಹೋಗುತ್ತಿರುತ್ತಾನೆ , ಅವನು ಪಾಸ್ ಆಗಿದ್ದೆ ಅಪೂರ್ವ ಕಣ್ಣು ಮುಚ್ಚುತ್ತಾನೆ

CUT TO:

INT. APOORVA HOUSE , DAY

**September 7 . 2022**

ಮೂಗಲ್ಲಿ ರಕ್ತ ಸೋರುತ್ತಿಯುತ್ತದೆ , ಮುಖ ತೊಳೆಯುತ್ತಾನೆ, ಐ ಡ್ರಾಪ್ , ವಾಚ್ , ಮತ್ತು ಮೊಬೈಲ್ ರೂಮ್ ಅಲ್ಲಿ ಅಕ್ಕ ಪಕ್ಕ ಇವೆ , ಸ್ವಪ್ನ ಕರೆಮಾಡಿದ್ದಾಳೆ , ಕಾಲ್ ವೈಬ್ರೇಟ್ ಆಗುತ್ತಿದೆ , ಅಪೂರ್ವನ ಗಮನದಲ್ಲಿಲ್ಲ . ಅಪೂರ್ವ ಮುಖವರೆಸಿಕೊಳ್ಳುತ್ತಾನೆ.

CUT TO:

EXT. GOPAL KRISHNA HOUSE , DAY

**September 7 . 1996**

ಗೋಪಾಲ್ ಕೃಷ್ಣ ಮನೆ ಹೊರಕ್ಕೆ ದೇವಕಿ , ಅರಿವು , ಹಾಗೂ ಕಲ್ಲಯ್ಯ ಕುಳಿತಿದ್ದಾರೆ. ಕಲ್ಲಯ್ಯನ ಮುಖ ಸಣ್ಣದಾಗಿದೆ , ಅವನು ಕ್ಷಮೆ ಕೇಳಲು ಬಂದಿದ್ದಾನೆ. ಟೈಲ್ರಿಂಗ್ ಮಷಿನ್ ಅಲ್ಲಿ ಯಶೋಧ ಬಟ್ಟೆಗಳನ್ನು ಸ್ಟಿಚ್ ಮಾಡುತ್ತಿದ್ದಾಳೆ

KALLAYYA

ನೋವ್ ಹೇಗಿದೆ . ಈಗ್ ಪರವಾಗಿಲ್ಲ ತಾನೇ !!

ಅರಿವು ಪರವಾಗಿಲ್ಲ ಎಂದು ತಲೆಯಾಡಿಸುತ್ತಾನೆ , ದೇವಕಿ ಮಾತನಾಡಲು ಪ್ರಾರಂಭಿಸುತ್ತಾಳೆ.

DEVAKI

ಹಾಗ್ ಹೊಡೆಯದ ಕಲ್ಲಯ್ಯ

KALLAYYA

ಮನ್ಸು ನನ್ ಹಿಡಿತದಲ್ಲಿ ಇರ್ಲಿಲ್ಲ ದೇವಕಿ , ನಾನೇನ್ ಮಾಡ್ಲಿ ಹಳೇದೆನೇನೋ ನೆನಪಾಗಿ ತಲೆ ಸಿಡಿದಂಗಾಯ್ತು , ನಾನ್ ಏನ್ ಮಾಡ್ತಿದ್ದೀನಿ ಅಂತಾನೂ ಗೊತ್ತಾಗ್ಲಿಲ್ಲ .., ರೇವತಿ ನೆನಪು..

ARIVU

ಕೆಲವ್ ನೆನಪುಗಳು ಹಾಗೇನೇ ಕಲ್ಲಯ್ಯ , ಅರ್ಥ ಆಗತ್ತೆ

KALLAYYA

ದಯವಿಟ್ಟು ನನ್ನ ಕ್ಷಮಿಸಿ ಅರಿವು , ನನ್ ಮಗಳು ನೆನಪಾಗಿ ...


©Srinidhi S
SWA Membership Number:54490

ARIVU

ಎಷ್ಟ್  ಸರ್ತಿ ಕ್ಷೇಮೆ ಕೇಳ್ತೀರಾ , ಸರಿ , ಅರ್ಥ ಆಯ್ತು ,
ನಂಗೇನೂ ಬೇಜಾರಿಲ್ಲ …

KALLAYYA

ನೀವ್ ಸುಧಾರಿಸ್ಕೊಳೋದಕ್ಕೆ ಹೇಗೂ ಎರಡ್ ದಿನ
ಬೇಕಾಗಬೋದು , ದುರ್ಘದಿಂದ ಅಪರೂಪದ ನಾಣ್ಯಗಳು
ಬರ್ತಿವೆ , ನಿಮಗೆ ಯಾವುದು ಬೇಕೋ ಅದನ್ನ ತಗೊಂಡ್
ಹೋಗ್ಬೋದು , ನೀವ್ ದುಡ್ ಕೊಡೊ ಹಾಗಿಲ್ಲ ಆಯ್ತಾ !!

DEVAKI

( ನಗುವಳು ) ನಿನ್ ಕೈಲಿ ಒದೆ ತಿಂದ್ರೆ ಹೀಗೆಲ್ಲ
ಉಡುಗೊರೆ ಸಿಗತ್ತಾ !!

J CUT :

EXT. GOPAL KRISHNA HOUSE , DAY

**August 28 . 2001 , Time : 1:00 P.M**

ಅಪೂರ್ವ ತನ್ನ ಮನೆ ಎದುರಿಗೆ ನಡೆದುಬರುತ್ತಿದ್ದಾನೆ , ಅವನ ತಾಯಿ ಯಶೋಧ ಮನೆಯ ಹೊರಕ್ಕೆ ಟೈಲರಿಂಗ್ ಕೆಲಸದಲ್ಲಿ ತೊಡಗಿದ್ದಾಳೆ , ಆಕೆಯನ್ನು ನೋಡಿ , ಅಮ್ಮ ಎಂದು ಕರೆದಿದ್ದಾನೆ  , ಟೈಲ್ರಿಂಗ್ ಮಷಿನ್ ಅಲ್ಲಿ ಯಶೋಧ ಬಟ್ಟೆಗಳನ್ನು ಸ್ಟಿಚ್ ಮಾಡುತ್ತಿದ್ದವಳು ಅಪೂರ್ವನನ್ನು ನೋಡುತ್ತಾಳೆ

SWA SCREENWRITERS ASSOCIATION

APOORVA

ಅಮ್ಮ !!

ಯಶೋಧ ಅಪೂರ್ವನನ್ನು ನೋಡುತ್ತಾಳೆ

YASHODHA

ಹೇಳಿ !!

APOORVA

( ಯೋಚಿಸಿ ) ಕುಡಿಯೋಕ್ ಸ್ವಲ್ಪ ನೀರ್ ಸಿಗಬೋದ !!

YASHODHA

ಒಂದ್ ನಿಮಿಷ

ಟೈಲರಿಂಗ್ ಕೆಲಸ ನಿಲ್ಲಿಸಿ ನೀರು ತರಲು ಹೊರಡುತ್ತಾಳೆ , ಅಪೂರ್ವನಿಗೆ ಹ್ಯಾಂಡ್ಸ್ ಅಪ್ ಎಂದು ಹೇಳುವ ಶಬ್ದ ಕೇಳುತ್ತದೆ. ಹಿಂತಿರುಗುತ್ತಾನೆ , ಐದು ವರ್ಷದ ಪುಟ್ಟ ಅಪೂರ್ವ , ಪ್ಲಾಸ್ಟಿಕ್ ಗನ್ ಹಿಡಿದು ಅಪೂರ್ವನಿಗೆ ಶೂಟ್ ಮಾಡುತ್ತಿದ್ದಾನೆ. ಅಪೂರ್ವ ಎದೆ ಹಿಡಿದು ಬುಲೆಟ್ ಬಿದ್ದವನಂತೆ ನಟಿಸುತ್ತಾನೆ , ಮಗುವನ್ನು ನಗಿಸುತ್ತಾನೆ , ಮಗು ನಗಲು ಆರಂಭಿಸುತ್ತದೆ , ಅಪೂರ್ವ ನೋಡಿ ಸ್ಮೈಲ್ ಮಾಡುತ್ತಾನೆ. ಅಷ್ಟರಲ್ಲಿ ಯಶೋಧ ನೀರು ತರುತ್ತಾಳೆ . ಹಾಗೂ ಅಪೂರ್ವನಿಗೆ ಕೊಟ್ಟು , ಟೈಲರಿಂಗ್ ಕೆಲಸದಲ್ಲಿ ತೊಡಗಿಕೊಳ್ಳುತ್ತಾಳೆ.

YASHODHA (CONT'D)

ಅಪ್ಪು ಸಾಕ್ ಒಳಗ್ ಹೋಗು , ( ನಗುತ್ತ ) ತುಂಬಾ ತೀಟೆ ಇವ್ನು ,

ಅಪೂರ್ವ ನೀರು ಕುಡಿಯುತ್ತ ತಲೆಯಾಡಿಸುತ್ತಾನೆ. ಅತ್ತಿತ್ತ ಗಮನಿಸುತ್ತಾನೆ.

YASHODHA (CONT'D)

ನಿಮ್ಮನ್ನ ನೋಡಿದ್ರೆ , ಸಿಟಿ ಅವ್ರು ಅನ್ಸುತ್ತೆ , ಬೆಂಗ್ಳುರಾ

APOORVA

ಹಾ !!

YASHODHA

ಅಮ್ಮನೋರ್ ದೇವಸ್ಥಾನಕ್ ಹೋರ್ಟಿದ್ರು !!

APOORVA

ಹೂ !!

ಅಪೂರ್ವ ಲೋಟ ನೆಲಕ್ಕೆ ಇಡುತ್ತಾನೆ. ಯಶೋಧ ತನ್ನ ಪರ್ಸ್ ಇಂದ ೧೦೦ ರೂಪಾಯಿ ನೋಟು ತೆಗೆಯುತ್ತಾಳೆ , ಅಪೂರ್ವನಿಗೆ ನೀಡುತ್ತಲೇ

YASHODHA

ನಂದೊಂದ್ ಹಳೇ ಹರಕೆ ಇತ್ತು , ನಾನ್ ದೇವಿ ಮೇಲೆ ಕೋಪ ಮಾಡ್ಕೊಂಡು ಮತ್ತೆ ಅವಳನ್ನ ನೋಡಬಾರ್ದು ಅಂತ ಪ್ರಮಾಣ ಮಾಡಿದ್ದೆ . ದೇವಸ್ಥಾನಕ್ ಹೋದಾಗ ಮರಿದೆ ಹುಂಡಿಗ್ ಹಾಕಿ ಆಯ್ತಾ , ಎಷ್ಟೇ ಆದರು ನಮ್ ತಾಯಲ್ವ ..

ಅಪೂರ್ವನ ಕೈಲಿ ಹಣ ಇಡುತ್ತಾಳೆ ( ಸ್ಲೋ ಶಾಟ್ )

APOORVA

ಸರಿ ಅಮ್ಮ , ಬರ್ತೇನೆ

ಅಪೂರ್ವ ಸ್ಮೈಲ್ ಮಾಡಿ ಅಲ್ಲಿಂದ ತುಸು ದೂರ ನಡೆಯುತ್ತಾನೆ . ದೂರದಿಂದ ಪ್ರೀಮಿಯರ್ ಪದ್ಮಿನಿ ಕಾರ್ ಬಂದು ಮನೆಯ ಮುಂದೆ ನಿಲ್ಲುತ್ತದೆ , ಅಪೂರ್ವ ಮರೆಯಲ್ಲಿ ನಿಂತು ಪ್ರತಿಯೊಂದನ್ನು ಗಮನಿಸುತ್ತಾನೆ. ಕಾರ್ ಇಂದ ಇಳಿದ ಗೋಪಾಲ್ , ತೀರಾ ಅರ್ಜೆನ್ಸಿ ಅಲ್ಲಿ ಇರುವಂತೆ ತೋರುತ್ತದೆ , ಏನೇನೋ ಮಾತನಾಡಿ , ಒಣಹಾಕಿದ್ದ  ನಾಲ್ಕೈದು ಬಟ್ಟೆಗಳನ್ನು ಬ್ಯಾಗ್ ಅಲ್ಲಿ ತುರುಕಿಕೊಳ್ಳುತ್ತಾನೆ . ಮಗುವಿನ ತಲೆ ಸವರಿ ಮುತ್ತಿಡುತ್ತಾನೆ , ಕಣ್ಣ್ ತುಂಬಿದೆ , ಆದರೂ ಸಹಿಸಿಕೊಂಡಿರುತ್ತಾನೆ

MONTAGES

೧. ಬ್ಯಾಗ್ ಪ್ಯಾಕ್ ಮಾಡಿಕೊಳ್ಳುತ್ತಾನೆ
೨. ಜೇಬಿನಲ್ಲಿ ಒಂದು ಫೋಟೋ ಇಟ್ಟುಕೊಳ್ಳುತ್ತಾನೆ.
೩. ಯಶೋಧೆಯನ್ನು ತಬ್ಬಿಕೊಂಡು , ತಲೆ ಸವರಿ ಅವಳೊಡನೆ ಪ್ರೀತಿಯಿಂದ ಮಾತನಾಡುತ್ತಾನೆ , ಸ್ಮೈಲ್ ಮಾಡುತ್ತಾನೆ , ಬೈ ಹೇಳುತ್ತಾನೆ
೪. ಯಶೋಧೆ ಟೈಲರಿಂಗ್ ಕೆಲಸದಲ್ಲೇ ತೊಡಗಿದ್ದಾಳೆ.
೫. ಕಾರ್ ಹತ್ತುವ ಮುನ್ನ ಮತ್ತೊಮ್ಮೆ ಮನೆಯನ್ನು ನೋಡುತ್ತಾನೆ.
೬. ಕಾರ್ ಹೊರಡುತ್ತದೆ.

ಅಪೂರ್ವ ಪ್ರತಿಯೊಂದನ್ನು ಗಮನಿಸುತ್ತಿದ್ದಾನೆ , ಕಣ್ಣು ತುಂಬಿದೆ.

CUT TO:

INT. APOORVA HOUSE , DAY

**September 7 . 2022**

MONTAGES

೧. ಅಪೂರ್ವ ಸಮಯವನ್ನು ೨ : ೩೦ ಕ್ಕೆ ಮಾಡಿಕೊಳ್ಳುತ್ತಾನೆ
೨. ಲೊಕೇಶನ್ ಅನ್ನು ಶಾಂತಲಾ ರಿವರ್ ಬ್ರಿಡ್ಜ್ ಎಂದು ಬದಲಾಯಿಸುತ್ತಾನೆ.
೩. ಗ್ರೀನ್ ಲೈಟ್ ಬ್ಲಿಂಕ್ ಆಗತ್ತೆ
೪. ಕಣ್ಣಿಗೆ ಐ ಡ್ರಾಪ್ ಹಾಕಿಕೊಳ್ಳುತ್ತಾನೆ. ಕಣ್ಣು ಮುಚ್ಚುತ್ತಾನೆ.

CUT TO:

EXT. SHANTHALA BRIDGE , DAY

**August 28 . 2001 , Time : 2:38 P.M**

ಅಪೂರ್ವ ಕಣ್ಣು ಬಿಡುತ್ತಾನೆ , ಬ್ರಿಜ್ ಮೇಲೆ ನಿಂತಿದ್ದಾನೆ. ಬ್ರಿಜ್ ಮೇಲೆ ಕೇವಲ ಗೋಪಾಲ್ ಕೃಷ್ಣ ಅವರ ಕಾರ್ ಮಾತ್ರ ನಿಂತಿದೆ , ಅದರ ಡೋರ್ ತೆರೆದಿದೆ , ಅಪೂರ್ವ ಅತ್ತಿತ್ತ ನೋಡುತ್ತಾ ಕಾರ್ ಸಮೀಪ ನಡೆಯುತ್ತಾನೆ , ಕಾರ್ ಹಿಂದಿನ ಸೀಟ್ ಅಲ್ಲಿ ಪತ್ರಿಕೆಗಳ ಕಟ್ಟುಗಳೆರಡು ಇರುತ್ತವೆ. ಮುಂದಿನ ಸೀಟ್ ಅಲ್ಲಿ ಒಂದು ಲಗೇಜ್ ಬ್ಯಾಗ್ ಇರುತ್ತದೆ , ಅಪೂರ್ವ ಅತ್ತಿತ್ತ ನೋಡುತ್ತಾನೆ. ಬ್ಯಾಗ್ ಒಳಗೆ ಬಟ್ಟೆಗಳನ್ನು ತುರುಕಿರುವುದು ಕಾಣುತ್ತದೆ , ಅದರ ಕೆಳಗೆ ಒಂದು ಡೈರಿ ಕೂಡ ಇರುತ್ತದೆ , ಅದನ್ನು ತಗೆಯುತ್ತಾನೆ , ಅದರಲ್ಲಿ , ಶಾರ್ಟ್ ಹ್ಯಾಂಡ್ ಅಲ್ಲಿ ಏನೇನೋ ಬರೆದಿರುವುದು ಕಾಣುತ್ತದೆ. ಒಂದೆರಡು ಪೇಜ್ ಗಳನ್ನು ತಿರುಗಿಸುತ್ತಾನೆ , ಅದರಲ್ಲಿ , ಲೀಡ್ ಗಳು , ಯಾವುದೊ ಡೇಟ್ ಗಳು ಇರುತ್ತದೆ. ನಂತರ ಒಂದು ಪೇಜ್ ತಿರುಗಿಸಿದ್ದೇ , ನಾಲ್ಕೈದು ಫೋಟೋಗಳು ಬೀಳುತ್ತವೆ , ಅದರಲ್ಲಿ , ಅಪೂರ್ವ ಮಗುವಾಗಿದ್ದಾಗಿನ ಫೋಟೋ , ಗೋಪಾಲ್ ಹಾಗೂ ಯಶೋಧ ಮದುವೆಯ ಫೋಟೋ ಇರುತ್ತದೆ , ನಂತರದಲ್ಲಿ ಮತ್ತೊಂದು ಮುದುಕ ತೋರಿಸಿದ್ದ ಫ್ಯಾಮಿಲಿ ಫೋಟೋ ಕೂಡ ಇರುತ್ತದೆ. ಎಲ್ಲವನ್ನು ನೋಡಿ ಆ ಡೈರಿಯನ್ನು ಅಲ್ಲೇ ಇಡುತ್ತಾನೆ , ಗ್ರೀನ್ ಇದ್ದ ವಾಚ್ ರೆಡ್ ಆಗತ್ತದೆ. ಕೂದಲು ಬಿಟ್ಟಿರುವ ಹುಚ್ಚ ( ಕಲ್ಲಯ್ಯ ) ಬ್ಯಾಗ್ ನೇತುಹಾಕಿಕೊಂಡು ಬಂದು ಬ್ರಿಡ್ಜ್ ಸಮೀಪ ನಿಲ್ಲುತ್ತಾನೆ. ಅಪೂರ್ವ ಅವರನ್ನು ನೋಡುತ್ತಾನೆ. ಕಲ್ಲಯ್ಯ ಅಪೂರ್ವನನ್ನು ನೋಡುತ್ತಾನೆ.

KALLAYYA

ನನ್ ಮಗಳು ರೇವತಿ , ಈ ಕಡೆಗೆ ಬಂದ್ಲು ಅಂತ
ಹೇಳಿದ್ರು , ನೀವೇನಾದ್ರೂ ನೋಡಿದ್ರ

ಅಪೂರ್ವ ಇಲ್ಲ ಎಂದು ತಲೆಯಾಡಿಸುತ್ತಾನೆ , ಕಲ್ಲಯ್ಯ ಅಲ್ಲೇ ಕೂರುತ್ತಾನೆ , ಅಪೂರ್ವ ಅಲ್ಲಿಂದ ತುಸುದೂರ ನಡೆಯುತ್ತಾನೆ. ದೃಶ್ಯ ಗ್ಲಿಚ್ ಆಗುತ್ತದೆ , ಓವರ್ ಎಕ್ಸ್ಪೋಸ್ಡ್ ಆಗುತ್ತದೆ. ಕಣ್ಣು ಉರಿಯಲು ಆರಂಭವಾಗುತ್ತದೆ , ಮೂಗಿನಲ್ಲಿ ನಿಧಾನವಾಗಿ ರಕ್ತ ಸುರಿಯುತ್ತದೆ , ಅಪೂರ್ವನಿಗೆ ಕಿವಿ ಕುಯ್ ಗುಡಲು ಆರಂಭವಾಗುತ್ತದೆ. ಅಪೂರ್ವ ಕಣ್ಣು ಮುಚ್ಚುತ್ತಾನೆ.

CUT TO:

SWA
SCREENWRITERS ASSOCIATION

INT. APOORVA HOUSE , DAY

**September 7 . 2022**

ಅಪೂರ್ವ ಮುಖ ತೊಳೆಯುತ್ತಾನೆ , ಕಣ್ಣು ವಿಪರೀತ ನೋಯ್ಯುತ್ತಿದೆ. ಯೋಚಿಸುತ್ತಿದ್ದಾನೆ.

APOORVA

( ಮೈಂಡ್ ವಾಯ್ಸ್ ) ಮನೆಯಿಂದ ಬ್ರಿಡ್ಜ್ ಗೆ ಹತ್ತು
ನಿಮಿಷದಲ್ಲಿ ಹೋಗಬಹುದು , ಅಪ್ಪ ಅಂದಾಜು
ಒಂದೂಮುಕ್ಕಾಲಿಗೆ ಮನೆ ಬಿಟ್ಟಿದ್ರು ಎರಡ್ ಗಂಟೆಗೆಲ್ಲ
ಬ್ರಿಡ್ಜ್ ರೀಚ್ ಆಗಿರ್ಬೋದು , ಎರಡ್ ಗಂಟೆ , ಎರಡ್
ಗಂಟೆ ಒಂದ್ ಸರ್ತಿ ಟ್ರೈ ಮಾಡಣ !!

CUT TO:

EXT. SHANTHALA BRIDGE , DAY

**August 28 . 2001 , Time : 2:00 P.M**

ಅಪೂರ್ವ ಬ್ರಿಡ್ಜ್  ಸಮೀಪ ನಡೆದು ಬರುತ್ತಿದ್ದಾನೆ , ಒಂದು ಮರದ ಕೆಳಗೆ , ಒಂದೆರಡು ಹೆಜ್ಜೆ ಇಡುತ್ತಲೂ , ಬ್ರಿಡ್ಜ್ ಅಪೋಸಿಟ್ ದಾರಿಯಿಂದ ಕಾರ್ ಪ್ರವೇಶ ಪಡೆಯುತ್ತದೆ .. ಸಂಗೀತ ನಿಧಾನಗತಿಯಲ್ಲಿ ತಾರಕಕ್ಕೇರುತ್ತದೆ. ಅಪೂರ್ವನಿಗೆ ಇಮೇಜ್ ಆಗೀಗ ಬ್ಲರ್ ಆಗುತ್ತಿರುತ್ತದೆ , ಕಣ್ಣು ನೋಯಲು ಪ್ರಾರಂಭವಾಗಿರುತ್ತದೆ.

MONTAGES

೧. ಗೋಪಾಲ್ ಕೃಷ್ಣ ಕಾರ್ ಇಂದ ಇಳಿಯುತ್ತಾರೆ
೨. ಅತ್ತಿತ್ತ ಓಡಾಡುತ್ತಾರೆ . ಒಂದು ಜಾಗದಲ್ಲಿ ಕುಳಿತು ರೋಧಿಸುತ್ತಾರೆ.
೩. ಡಿಕ್ಕಿಯಿಂದ ಒಂದು ರಾಡ್ ಹೊರಗಡೆ ತಗೆಯುತ್ತಾರೆ , ಅದನ್ನು ನದಿಗೆ ಎಸೆಯುತ್ತಾರೆ.
೪. ಗೋಪಾಲ್ ಬ್ರಿಡ್ಜ್ ಎಡ್ಜ್ ಅಲ್ಲಿ ನಿಂತು ನದಿಯ ಕಡೆ ನೋಡುತ್ತಾ ನಿಲ್ಲುತ್ತಾರೆ.
೫. ಅಪೂರ್ವನಿಗೆ ಬ್ಲರ್ ಆಗುವುದು ಹೆಚ್ಚಾಗುತ್ತದೆ. ಕಣ್ಣು ವಿಪರೀತವಾಗಿ ನೋಯಲು ಆರಂಭವಾಗುತ್ತದೆ. ಕಣ್ಣು ಎಳೆಯುತ್ತದೆ , ಕಲರ್ ಡಿ ಸ್ಯಾಚುರೇಟ್ ಆಗಲು ಆರಂಭವಾಗುತ್ತದೆ .
೬. ಗೋಪಾಲ್ ಬ್ರಿಡ್ಜ್ ಎಡ್ಜ್ ಅಲ್ಲಿ ನಿಂತು ಇನ್ನೇನು ಹಾರಬೇಕು ಎನ್ನುವಾಗ ಅಪೂರ್ವನಿಗೆ ಇಮೇಜ್ ಓವರ್ ಎಕ್ಸ್ಪೋಸ್ಡ್ ಆಗುತ್ತದೆ. ನದಿಯಲ್ಲಿ ಬಿದ್ದ ಸದ್ದುಕೇಳುತ್ತದೆ. ಅಪೂರ್ವನಿಗೆ ನಿಲ್ಲಲೂ ಸಾಧ್ಯವಾಗುತ್ತಿಲ್ಲ , ಕಣ್ಣು ಮುಚ್ಚಿಕೊಳ್ಳುತ್ತಾನೆ.

CUT TO:

INT. APOORVA HOUSE , DAY

**September 7 . 2022**

ಅಪೂರ್ವ ಜೋರಾಗಿ ರೋಧಿಸುತ್ತಿದ್ದಾನೆ , ಕಣ್ಣು ವಿಪರೀತ ಉರಿಯುತ್ತಿರುವುದರಿಂದ ಒದ್ದಾಡುತ್ತಿದ್ದಾನೆ ಸುಸ್ತಾಗಿದೆ , ಮೂಗಿನಿಂದ ರಕ್ತ ಸೋರಲು ಪ್ರಾರಂಭವಾಗುತ್ತಿದೆ. ಕಣ್ಣು ಮುಚ್ಚಿ ಬಿಟ್ಟಂತೆ ಎಲ್ಲವೂ ಬ್ಲರ್ ಆಗಿರುವಂತೆ ತೋರುತ್ತಿದೆ. ಜೋರಾಗಿ ಮುಖತೊಳೆಯುತ್ತಾನೆ. ಕಣ್ಣು ಬಿಡಲೂ ಸಾಧ್ಯವಾಗುತ್ತಿಲ್ಲ ಅಷ್ಟರಮಟ್ಟಿಗೆ ಕಣ್ಣು ನೋಯುತ್ತಿದೆ. ಸಂಪೂರ್ಣ ಬ್ಲಾಂಕ್ ಆಗಿಬಿಡುತ್ತದೆ. ಅಪೂರ್ವ ಒದ್ದಾಡುತ್ತಾ ಅತ್ತಿತ್ತ ನಡೆದು ಒಂದುಕಡೆ ಕೂರುತ್ತಾನೆ. ಅವನಿಗೆ ಏನೂ ಕಾಣುತ್ತಿಲ್ಲ ಆತನ ಕೈ ತಗುಲಿ ಏನೋ ಬಿದ್ದ ಸದ್ದು ಕೇಳುತ್ತದೆ.

CUT TO:

SWA SCREENWRITERS ASSOCIATION

INT. GOPAL KRISHNA HOUSE , ROOM , DAY

**September 7 . 1996**

ಅರಿವು ಎಚ್ಚರಗೊಳ್ಳುತ್ತಾನೆ , ಆತನ ಎದುರು ದೇವಕಿಯಿರುತ್ತಾಳೆ , ಇವನು ಎದ್ದಿದ್ದೆ ಆಕೆ ಗಾಭರಿಯಾಗಿ ಎರಡು ಹೆಜ್ಜೆ ಹಿಂದೆ ಇಡುತ್ತಾಳೆ.

DEVAKI

ಅಡಿಗೆ ತಯಾರಿದೆ ಅಂತ ಹೇಳ್ಲಿಕ್ ಬಂದಿದ್ದೆ !!
( ಅಮಾಯಕ ಸ್ಮೈಲ್ )

CUT TO:

INT. GOPAL KRISHNA HOUSE , DAY

ಅರಿವು ಹಾಗೂ ದೇವಕಿ ಊಟಕ್ಕೆ ಕುಳಿತಿದ್ದಾರೆ , ಗೋಪಾಲ್ ಹಾಗೂ ಯಶೋಧೆ ಮನೆಯಲ್ಲಿ ಇಲ್ಲದಿರುವುದನ್ನು ಅರಿವು ಗಮನಿಸುತ್ತಾನೆ.

ARIVU

ಪೇಟೆಗ್ ಹೋದ್ರು !!

DEVAKI

ಹೌದು , ಮಳೆ ಬಿಡುವು ಕೊಟ್ಟಿದ್ಯಲ್ಲ , ಅದಕ್ಕೆ , ಭಾವ ಆಸ್ಪತ್ರೆಗ್ ಹೋಗ್ಬೇಕು ಅಂತಿದ್ರು

ARIVU

ಯಾಕೇನಾಯ್ತು !?

DEVAKI

ಗೊತ್ತಿಲ್ಲ , ನಂಗಷ್ಟೇ ಹೇಳಿದ್ದು , ಆಗಾಗ ಆಸ್ಪತ್ರೆಗ್ ಹೋಗ್ತಿರ್ತಾರೆ , ರೆಗ್ಯುಲರ್ ಚೆಕ್ ಅಪ್ ಇರ್ಬೇಕು , ಈಗ ನೋವ್ ಪರವಾಗಿಲ್ಲ ತಾನೇ.

ARIVU

ಸುಧಾರಿಸ್ಕೊಳ್ತಿದ್ದೀನಿ , ಮಲಗಿ ಎದ್ದನಲ್ಲ , ಸ್ವಲ್ಪ ಅರಾಮ್ ಅನ್ನಿಸ್ತಿದೆ

ಅರಿವು ಕೈತೊಳೆಯಲು ಮುಂದಾಗುತ್ತಾನೆ

DEVAKI

ಇನ್ನೊಂದ್ ಸ್ವಲ್ಪ ಬಡಿಸ್ಕೊಳಿ !!

SWA SCREENWRITERS ASSOCIATION

ಅರಿವು ಬೇಡ ಎಂದು ತಲೆಯಾಡಿಸುತ್ತಾನೆ. ದೇವಕಿ ಅರಿವನ್ನೇ ಆಸೆಯ ಕಣ್ಣುಗಳಲ್ಲಿ ನೋಡುತ್ತಾಳೆ

CUT TO:

EXT. GOPAL KRISHNA HOUSE , DAY

ಅರಿವು ಕುಳಿತು ಪುಸ್ತಕ ಓದುತ್ತಿದ್ದಾನೆ , ದೇವಕಿ ಬಟ್ಟೆ ಹೊಲಿಯುತ್ತಿದ್ದಾಳೆ , ಅರಿವು ಗಮನ ಆಕೆಯ ಮೇಲೆಯೇ ಇದೆ , ಆಸೆಯ ಕಣ್ಣುಗಳಲ್ಲಿ ಆಕೆಯನ್ನೇ ನೋಡುತ್ತಾನೆ , ದೇವಕಿ ಬಾಯಲ್ಲಿ ದಾರವನ್ನು ಒದ್ದೆ ಮಾಡಿ ಸೂಜಿಗೆ ಹಾಕುತ್ತಿದ್ದಾಳೆ , ನಿಧಾನಕ್ಕೆ , ಕಾಲುಗಳನ್ನು ಒತ್ತುತ್ತಾ , ಬಟ್ಟೆ ಹೊಲಿಯುತ್ತಿದ್ದಾಳೆ. ಅಪೂರ್ವ ಪುಸ್ತಕ ಓದುತ್ತ ಮಗ್ನನಾಗಿರುವುದನ್ನು ನೋಡುತ್ತಾಳೆಅವನು ಸ್ಮೈಲ್ ಮಾಡುತ್ತಾನೆ. ಇವಳು ಸ್ಮೈಲ್ ಮಾಡುತ್ತಾಳೆ. ಇಬ್ಬರೂ ಒಮ್ಮೆಗೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾರೆ. ಬಟ್ಟೆಗೆ ಸೂಜಿ ಒಳಹೋಗಿ ಹೊರಬರುತ್ತದೆ.

CUT TO:

INT. APOORVA HOUSE , DAY

**September 7 . 2022**

ಮೊಬೈಲ್ ವೈಬ್ರೇಟ್ ಆಗುತ್ತದೆ , ಅಪೂರ್ವನಿಗೆ ಎಚ್ಚರವಾಗುತ್ತದೆ , ಮೊದಲಬಾರಿ ಬ್ಲಿಂಕ್ ಮಾಡಿದಾಗ ಎಲ್ಲವೂ ಓವರ್ ಟಿಂಟ್ ಆಗಿರುವಂತೆ ಕಾಣುತ್ತದೆ , ನಿಜಬಣ್ಣಗಳೇ ಬದಲಾಗಿರುವಂತೆ ಕಾಣುತ್ತದೆ , ಎರಡನೇ ಬಾರಿ ಬ್ಲಿಂಕ್ ಮಾಡುತ್ತಾನೆ , ಆತನ ತಂದೆ ನೀರಿಗೆ ಬಿದ್ದ ಬ್ಲರಿ ಇಮೇಜ್ ಕಾಣುತ್ತದೆ , ಮತ್ತೊಮ್ಮೆ ಬ್ಲಿಂಕ್ ಮಾಡಲು ಡಿ ಸ್ಯಾಚುರೇಟೆಡ್ ಆಗಿ ಕಾಣುತ್ತದೆ , ನಂತರದಲ್ಲಿ ನಿಧಾನಕ್ಕೆ ಬಣ್ಣಗಳು ಮೂಡತೊಡಗುತ್ತದೆ , ಸ್ವಪ್ನ ಕರೆಮಾಡಿರುತ್ತಾಳೆ. ಅತ್ತಿತ್ತ ನೋಡುತ್ತಾನೆ , ಅವನ ಮೈಯೆಲ್ಲಾ ತುಸು ಒದ್ದೆಯಾಗಿರುತ್ತದೆ , ಐ ಡ್ರಾಪ್ ಬಾಟಲ್ ಒಡೆದು ಹೋಗಿರುತ್ತದೆ. ಅಪೂರ್ವ ಬೇಸರಗೊಳ್ಳುತ್ತಾನೆ. ಎದ್ದವನೇ ಕಾಲು ನೋಡುತ್ತಾನೆ , ಕಾಲಿಗೆ ಗಾಜು ಚುಚ್ಚಿ ಗಾಯವಾಗಿರುತ್ತದೆ. ಸ್ವಲ್ಪ ರತ್ಕಸ್ರಾವವಾಗಿರುತ್ತದೆ.

APOORVA

ಫಕ್ !!

CUT TO:

EXT. APOORVA HOUSE , DAY

ಅಪೂರ್ವ ಕಾಲಿಗೆ ಆಗಿರುವ ಗಾಯವನ್ನು ಕ್ಲೀನ್ ಮಾಡಿಕೊಳ್ಳುತ್ತ ಬ್ಯಾಂಡೇಜ್ ಹಾಕಿಕೊಳ್ಳುತ್ತಿದ್ದಾನೆ , ಕಿವಿಗೆ ಇಯಾರ್ ಫೋನ್ ಸಿಕ್ಕಿಸಿಕೊಂಡಿದ್ದಾನೆ , ಸ್ವಪ್ನಾಳ ಜತೆಗೆ ಮಾತನಾಡುತ್ತಿದ್ದಾನೆ.

SWA SCREENWRITERS ASSOCIATION

SWAPNA

(ಕರೆಯಲ್ಲಿ) ಏನ್ ಸರ್ ಇಷ್ಟೊಂದ್ ಬ್ಯುಸಿ ಆಗೋದ್ರೆ ಹೇಗೆ ಫೋನ್ ಮಾಡೋದಿರ್ಲಿ , ಮೆಸೇಜ್ ಕೂಡ ನೋಡದೇಯಿರುವಷ್ಟು ಬ್ಯುಸಿ ಆಗೋದ್ರು , ನಿನ್ನೆ ರಿಹರ್ಸಲ್ ಗೆ ಬಂದೌನು ಒಂದ್ ಮಾತು ಆಡದೆ ಹಾಗೆ ಹೊರಟೋಗಿದ್ಯಾ ಏನ್ ಕಥೆ , ದೊಡ್ಡ್ ಅಮೌಂಟ್ ಬರ್ತಿರೋದ್ರಿಂದ , ನಮ್ಮಂತ ಸಣ್ಣೋರು ನೆನಪಾಗ್ತಿಲ್ಲ ಅನ್ಸತ್ತೆ ಅಲ್ವಾ , ಇರ್ಲಿ ಇರ್ಲಿ !!

APOORVA

ಹಾಗೇನಿಲ್ಲ ಸ್ವಪ್ನ , ಕೆಲ್ಸಕ್ ಜಾಯಿನ್ ಆದೆ ವರ್ಕ್ ಜಾಸ್ತಿ ಇತ್ತು ಕಣೋ , ನಿಂಗೆ ಗೊತ್ತಲ್ವಾ , ಅಷ್ಟೊಂದ್ ದುಡ್ ಕೊಡೋರು ಸುಮ್ನೆ ಕೂರ್ಸಿ ಕೊಡ್ತಾರಾ

SWAPNA

ನಿನ್ನೆ ಏನಾಯ್ತು , ಇಂಟರ್ವ್ಯೂ ಹೇಗಿತ್ತು , ಪ್ರೊಫೆಸರ್ ಏನಂದ್ರು , ಯಾವ್ ಥರ ಕೆಲಸ , ಏನಾದ್ರೂ ಹೇಳಿದ್ಯಾ ನಂಗೆ , ಇರ್ಲಿ ಅಪ್ಪು , ಆದ್ರೂ ಇಷ್ಟೊಂದ್ ಯಿಗ್ನೊರೆನ್ಸ್ ಒಳ್ಳೇದಲ್ಲ ಕಣೋ , ಹೋಗ್ಲಿ ಬ್ಯುಸಿ ಇದ್ರೆ , ಬ್ಯುಸಿ ಇದೀನಿ ಅಂತ ಮೆಸೇಜ್ ಆದ್ರೂ ಹಾಕ್ಬೇಕಲ್ವಾ , ಪರವಾಗಿಲ್ಲ ಬಿಡು

APOORVA

ಸಪ್ಪೆ , ಅರ್ಥಮಾಡ್ಕೊಳೋ

SWAPNA

ಮುಚ್ಕೊಂಡ್ ಇವತ್ ಪ್ರಾಕ್ಟೀಸ್ ಗೆ ಬಾ ಸೆಟ್ ವರ್ಕ್ ಜಾಸ್ತಿ ಇದೆ , ಪುರ್ಸೊತ್ ಮಾಡ್ಕೊಳಿ ಸರ್ ಏನಾಗೋದಿಲ್ಲ !!

APOORVA

ಆದಷ್ಟೂ ಟ್ರೈ ಮಾಡ್ತಿನೋ !!

SWAPNA

ಸರಿ , ಏನೋ ಮಾಡಪ್ಪ ನಿನ್ನಿಷ್ಟ (ಕಾಲ್ ಕಟ್ ಆಗುತ್ತದೆ)

ಅಪೂರ್ವ ಇನ್ನೂ ಫ್ರುಸ್ಟ್ರೇಟ್ ಆಗುತ್ತಾನೆ.

CUT TO:

SWA SCREENWRITERS ASSOCIATION

INT. MUDUKA HOUSE , EVENING

ಮುದುಕ ಸಿಗರೇಟ್ ಹಚ್ಚಿಕೊಳ್ಳುತ್ತಾನೆ , ಅಪೂರ್ವನ ಮುಖ ಸಣ್ಣದಾಗಿದೆ. ಅಜ್ಜನ ಕೈಯಲ್ಲಿ ಸ್ಮಾರ್ಟ್ ವಾಚ್ ಇದೆ , ಅದನ್ನು ಮತ್ತೊಂದು ಐ ಡ್ರಾಪ್ ಗೆ ಲಿಂಕ್ ಮಾಡುತ್ತಿರುತ್ತಾನೆ , ಐ ಡ್ರಾಪ್ ಮೇಲಿದ್ದ ಕ್ಯೂಆರ್ ಕೋಡ್ ಸ್ಕಾನ್ ಮಾಡುತ್ತಾ ಮಾತನಾಡುತ್ತಿದ್ದಾನೆ.

MUDUKA

ಒಂದ್ ಬಟ್ಲು ಹಾಳಾಯ್ತಲ್ಲ ಅಂತ ಬೇಜಾರಾಗ್ತಿಲ್ಲ , ನಿಂಗ್ ತಾಳ್ಮೆಯಿಲ್ಲ ಅಂತ ಬೇಜಾರಾಗ್ತಿದೆ. ಒಂದು ದಿನಕ್ಕೆ ಮ್ಯಾಕ್ಸಿಮಮ್ ಮೂರು ಸರ್ತಿ ಅಷ್ಟೇ ಟ್ರಾವೆಲ್ ಮಾಡಕ್ಕಾಗದು , ಬಾಟಲ್ ಒಡೆದೋಗಿ ಐ ಡ್ರಾಪ್ ವೇಸ್ಟ್ ಆಗಿದ್ರಿಂದ ಹೇಗೋ ಬಚಾವ್ ಆದೆ , ಮೊದ್ಲೇ ಎಕ್ಸೆಸ್ ಟ್ರಾವೆಲ್ ಮಾಡಿದ್ದೆ , ಮತ್ತೊಂದು ಸರ್ತಿ ಟ್ರಾವೆಲ್ ಮಾಡಿ ಹೆಚ್ಚುಕಮ್ಮಿಯಾಗಿದ್ರೆ ಕಣ್ ಕಳ್ಕೋಬೇಕಾಗಿತ್ ನೀನು

APOORVA

ಅಪ್ಪ ಬದುಕಿದ್ದರೆ ಅಂದಿದ್ರಿ ಸರ್ , ನನ್ ಕಣ್ಣೆದುರಿಗೆ ನದಿಗ್ ಬಿದ್ದು ಪ್ರಾಣ ಕಳ್ಕೊಂಡ್ರು ಅವ್ರು , ಈಗ ಇನ್ನೇನೋ ರೂಲ್ಸ್ ಅಂತ ಹೇಳ್ತಿದ್ದೀರಾ ‼

MUDUKA

ನನಿಗೆ ಸುಳ್ಳು ಹೇಳೋ ಅವಶ್ಯಕತೆ ಇಲ್ಲ ಅಪೂರ್ವ ‼

APOORVA

ಹಾಗಿದ್ರೆ ನಾನ್ ನೋಡಿದ್ ಸುಳ್ಳ ‼

MUDUKA

ನಿಂಗೀಗಿನ್ನು ಒಂದೊಂದೇ ಪರಿಚಯ ಆಗ್ತಿದೆ , ಹೋಗ್ತಾ ಹೋಗ್ತಾ ಎಲ್ಲ ಅರ್ಥ ಆಗತ್ತೆ.

APOORVA

ನಾನ್ ಮಾಡ್ಬೇಕಾಗಿರೋ ಕೆಲಸ ಆದ್ರೂ ಏನೂ ಸರ್ , ಅದನಾದ್ರು ಹೇಳಿ ‼

SWA SCREENWRITERS ASSOCIATION

MUDUKA

ನಾಳೆ ಬೆಳಿಗ್ಗೆ , ನಿಮ್ಮಪ್ಪ ಸಾಯಕ್ ಹೊರೆಟ ಜಾಗಕ್ಕೆ ನೀನು ಟ್ರಾವೆಲ್ ಮಾಡ್ಬೇಕು , ಅವರು ನದಿಗೆ ಬೀಳೋದನ್ನ ತಡೆಯೋದಕ್ಕಾಗಲ್ಲ , ತಡಿಯೊಹಾಗಿದ್ದಿದ್ರೆ ನಿನ್ನ ಮೊದಲನೇ ಪ್ರಯತ್ನದಲ್ಲೆ ತಡೀಬೇಕಿತ್ತು , ಆದ್ರೆ ನದಿಗ್ ಬಿದ್ದಮೇಲೆ ಅವರನ್ನ ಉಳಿಸೋ ಜವಾಬ್ದಾರಿ ನಿಂದು , ಅಪೂರ್ವ ನಿಂಗೆ ಒಂದೇ ಚಾನ್ಸ್ ಸಿಗದು , ಮೊದಲ್ನೇ ಸರ್ತಿ ಕಾಪಾಡಕ್ಕಾಗದೆಯಿದ್ರೆ , ನಿಮ್ಮಪ್ಪನ ಸಾವನ್ನ ಏನೇ ಮಾಡಿದ್ರೂ ತಡೆಯೋಕ್ಕಾಗಲ್ಲ ‼

ಅಪೂರ್ವ ಶಾಕ್ ಆಗುತ್ತಾನೆ , ಎಲ್ಲೆಡೆ ಸಂಪೂರ್ಣ ನಿಶಬ್ದತೆ ಆವರಿಸಿಕೊಳ್ಳುತ್ತದೆ.

APOORVA

ಸರ್ ಏನ್ ಹೇಳ್ತಿದ್ದೀರಾ ‼

MUDUKA

ಅಪ್ಪ ಉಳಿಬೇಕಿದ್ರೆ , ಮೊದಲ್ನೇ ಪ್ರಯತ್ನದಲ್ಲೇ ನಿನವರನ್ನ ಕಾಪಾಡ್ಬೇಕ್ ಅಪೂರ್ವ ‼

APOORVA

ಬಟ್ ಹೇಗೆ ( ಪ್ರಶ್ನೆ )

ಮುದುಕ ವಾಚ್ ಗೆ ಐ ಡ್ರಾಪ್ ಬಾಟಲ್ ಕನೆಕ್ಟ್ ಮಾಡಿ ಅಪೂರ್ವನ ಕೈಗೆ ಇಡುತ್ತಾನೆ

MUDUKA

ತಗೋ , ಮುಂದಿನ್ ಸರ್ತಿ ಕದ್ದು ತಗೊಂಡ್ ಹೋಗ್ಬೇಡ ಖಾಲಿ ಆದ್ರೆ ಹೇಳು , ನಾನೇ ಕೊಡ್ತೀನಿ , ಮುಖ್ಯವಾದ ವಿಚಾರ , ನಿನ್ ಟೈಮ್ ಟ್ರಾವೆಲ್ ಮಾಡ್ತಿರೋ ವಿಷ್ಯ ಸ್ವಪ್ನನ್ಗೆ ಗೊತ್ತಾಗ್ಬಾರ್ದು ನಿನ್ ಸರೌಂಡಿಂಗ್ ಗೆ ನೀನು ಎಡಿಟಿಂಗ್ ಕೆಲ್ಸಕ್ಕೆ ಬಂದಿದ್ಯ ಅಷ್ಟೇ , ನೆನಪಿರಲಿ ದಿನಕ್ಕೆ ಮೂರ್ ಸರ್ತಿ ಮಾತ್ರ ಟ್ರಾವೆಲ್ ಮಾಡೋಕ್ ಆಗೋದು... ಮತ್ತೆ , ಇನ್ನೊಂದ್ ಟೈಂಲೈನ್ ಅಲ್ಲಿ ನಿನ್ ೩ ಟು ೪ ಈ ಸಮಯಕ್ಕೆ ಟ್ರಾವೆಲ್ ಮಾಡೋಕ್ಕಾಗಲ್ಲ

APOORVA

ಹಗಲ ಅಥವಾ ..

MUDUKA

ಮೋರಿಂದ ನಾಲ್ಕು , ಬೆಳಗ್ಗೆ ಮತ್ತೆ ಮದ್ಯಹ್ನ, ಅಂದ್ರೆ ೨೪ ಗಂಟೇಲಿ , ಆ ಎರಡು ಗಂಟೆಗಳು ನಿಂಗೆ ಬೇರೆ ಟೈಮ್ ಲೈನ್ ಗೆ ಟ್ರಾವೆಲ್ ಮಾಡೋಕೆ ಆಗೋಲ್ಲ ‼

(MORE)

MUDUKA (CONT'D)
, ೩ ಟು ೪ , ಬ್ಲಾಂಕ್ ಅವರ್ಸ್ , ಆ ಎರಡು ಗಂಟೆಗಳ
ಕಾಲ ಯಾವುದೇ ಟೈಮ್ ಲೈನ್ ಅಲ್ಲಿ ಏನೇ ನಡೆದ್ರೂ ,
ಅದನ್ನ ಅಕ್ಸೆಸ್ ಮಾಡೋಕ್ಕಾಗಲ್ಲ ಅಪೂರ್ವ

ಉಸಿರು ಬಿಡುತ್ತಾನೆ

APOORVA

( ಹುಫ್ ) ತುಂಬಾ ಕಾಂಪ್ಲಿಕೇಷನ್ಸ್ ಇದೆ ಸರ್ ‼ ಬ್ಲಾಂಕ್
ಅವರ್ಸ್ ಅಲ್ಲಿ ಟ್ರಾವೆಲ್ ಮಾಡೋಕೆ ಆಗೋದೇ ಇಲ್ವಾ ‼

MUDUKA

ನಂಗ್ ತಿಳಿದಿರೋ ಮಟ್ಟಕ್ಕೆ ಆಗೋದಿಲ್ಲ ‼
( ಅಸಾಹಾಯಕ ಸ್ಮೈಲ್ )
ನಿನ್ ಇವತ್ತಿನ್ ಕೋಟಾ ಮುಗಿತು , ಟೈಮ್ ರಿಫ್ರೆಶ್
ಆಗೋತನಕ ವಯ್ಟ್ ಮಾಡು ‼ . ನಾಳೆ ಬೆಳಗ್ಗೆ ನಿನ್ನ ಫಸ್ಟ್
ಟ್ರಾವೆಲ್ ಅಲ್ಲೇ ಅಪ್ಪನ್ನ ಕಾಪಾಡು ಮುಂದೆ ಏನ್
ಮಾಡ್ಬೇಕು ಅಂತ ಆಮೇಲೆ ಹೇಳ್ತಿನಿ

ಅಪೂರ್ವ ಯೋಚಿಸುವನು , ಮುದುಕನ ಮುಖ ಸಣ್ಣದಾಗುತ್ತದೆ

J CUT :

EXT. REHEARSAL PLACE , EVENING

ನಾಟಕದ ತಾಲೀಮು ನಡೆಯುತ್ತಿದೆ , ಟೈರಿಷಿಯಸ್ ಆಗಮನದ ದೃಶ್ಯ , ಎಲ್ಲೆಡೆ , ವಿಚಿತ್ರವಾದ ಮೌನ ಆವರಿಸಿಕೊಂಡಿದೆ. ಸಂಗೀತ ತಾರಕಕ್ಕೇರುತ್ತಿದೆ , ಮೇಷ್ಟ್ರು ದೊಡ್ಡ ಮುಖವಾಡಕ್ಕೆ ಕಣ್ಣಿನ ಬಣ್ಣ ತುಂಬಿಸುತ್ತಿದ್ದಾರೆ , ಉಳಿದಂತೆ ಎಲ್ಲ ನಟರೂ ನಾಟಕದ ಪಾತ್ರಗಳ ವಸ್ತ್ರದಲ್ಲೇ ಇದ್ದಾರೆ. ಸ್ಟೇಜ್ ಕೆಳಕ್ಕೆ ಸ್ವಪ್ನ , ಅಪೂರ್ವ , ಮಿಕ್ಕವರು ಕುಳಿತಿದ್ದಾರೆ. ಒಂದಿಬ್ಬರು ನಾಟಕದ ಸ್ಕ್ರಿಪ್ಟ್ ಕೈಲಿ ಹಿಡಿದಿದ್ದಾರೆ.

MELADAVARU

ಈತನೇ ಜ್ಞಾನವೃದ್ಧ ಟೈರಿಷಿಯಸ್ ಈತನೇ ಪವಿತ್ರ
ಪ್ರವಾದಿ , ಎಲ್ಲರಂತಲ್ಲ , ಸತ್ಯ ಸ್ವರೂಪಿ ಈತ

TIRESIAS

ಜ್ಞಾನವೆಂಬುದು ಎಷ್ಟು ಭಯಂಕರ , ಅದರಿಂದ
ಉಪಯೋಗವಿಲ್ಲದಿದ್ದಾಗ , ಇದನ್ನು ಅರಿತಿದ್ದ ನಾನು ,
ಏಕೆ ಮರೆತೇ ? , ಯಾಕಾದರೂ ಇಲ್ಲಿಗೆ ಬಂದೆ. ‼

ದೃಶ್ಯ ಮುಂದುವರೆಯುತ್ತದೆ , ವೇದಿಕೆಯಿಂದ ತುಸುದೂರ ಕೊನೆಯ ಸಾಲಿನಲ್ಲಿ ಕುಳಿತಿದ್ದ ಸ್ವಪ್ನ ಹಾಗೂ ಅಪೂರ್ವ ಮಾತನಾಡುತ್ತಿದ್ದಾರೆ.

SCREENWRITERS ASSOCIATION

SWAPNA

ಸೊ , ಇನ್ನೆರಡ್ ತಿಂಗ್ಳು , ಸಾಹೇಬ್ರನ್ನ ಮಾತಾಡ್ಸಕ್ ಆಗಲ್ಲ .( ಬೇಸರದಿಂದ ) ಮುಂಬೈ ಷೋ ಗೂ ಬರಲ್ಲೇನೋ

APOORVA

ಗೊತ್ತಿಲ್ಲ ..

SWAPNA

ನನ್ ಖುಷಿಗೆ ಟ್ರೈ ಮಾಡ್ತೀನಿ ಅಂತನಾದ್ರೂ ಹೇಳೋ

APOORVA

ನನ್ ಸ್ಟೇಬಲ್ ಆಗೋಕ್ಕೆ ಅವಕಾಶ ಸಿಕ್ಕಿದೆ , ಎರಡ್ ತಿಂಗ್ಳು ಫೋಕಸ್ಡ್ ಆಗಿದ್ರೆ , ನಮ್ಗೆ ಒಳ್ಳೆದಲ್ಲೇನೋ

SWAPNA

ಅಪ್ಪು , ಇವತ್ ನಿನ್ ರೂಮಿಗ್ ಬರ್ಲಾ !! ಇಲ್ಲ ಅನ್ಬೇಡ ಪ್ಲೀಸ್ , ತುಂಬಾ ಬೇಕನ್ನಿಸ್ತಿದ್ದೀಯ

APOORVA

ಆಗಲ್ಲ ಕಣೋ , ( ಕಳೆದುಹೋಗಿರುವವನಂತೆ ) ಬೆಳಿಗ್ಗೆ ಬೇಗ ಹೋಗ್ಬೇಕು

SWAPNA

ಓಕೇ ಫೈನ್ ..

ಸ್ವಪ್ನ ಅಪೂರ್ವನ ಹೆಗಲ ಮೇಲೆ ತಲೆ ಇಟ್ಟು ಮಲಗುತ್ತಾಳೆ , ಅಪೂರ್ವನ ಕೈ ಹಿಡಿದು ಬೆರಳುಗಳಲ್ಲಿ ಆಟವಾಡುತ್ತಿರುತ್ತಾಳೆ. ಅಪೂರ್ವ ಚಿಂತೆಯಲ್ಲಿದ್ದಾನೆ. ವೇದಿಕೆಯ ಮೇಲೆ ತಾಲೀಮು ನಡೆಯುತ್ತಿದೆ

(CONT'D)

TIRESIAS

ನಿನಗೆ ಎರಡು ಕಣ್ಣಿದ್ದೂ ಕುರುಡನಾಗಿದ್ದಿ , ನಿನ್ನ ಬದುಕಿನ ಅಧೋಗತಿ ನಿನಗೆ ಕಾಣಿಸುತ್ತಿಲ್ಲ.

ಸಂಗೀತ ತಾರಕಕ್ಕೇರುತ್ತದೆ

CUT TO:

SWA SCREENWRITERS ASSOCIATION

EXT. SHANTHALA RIVER BANK , DAY

**August 28 . 2001 , Time : 2:10 P.M**

ಅಪೂರ್ವ ನದಿ ತೀರಕ್ಕೆ ಬಂದಿದ್ದಾನೆ ಹಿಂದಿನ ದಿನದ ಬಟ್ಟೆಯಲ್ಲೇ ಇದ್ದಾನೆ , ಅತ್ತಿತ್ತ ನೋಡುತ್ತಾನೆ , ತುಸುವೇ ದೂರದಲ್ಲಿ ಒಂದು ತೆಪ್ಪ ಉಲ್ಟಾ ಹಾಕಿಕೊಂಡು ಅದರ ಅಡಿಯಲ್ಲಿ ತೆಪ್ಪ ಓಡಿಸುವಾತ ಮಲಗಿರುತ್ತಾನೆ , ಅಪೂರ್ವ ಅವನ ಬಳಿ ನಡೆದು ಹೋಗಿ ಆತನನ್ನು ಎಬ್ಬಿಸುತ್ತಾನೆ.

APOORVA

ಅಣ್ಣ , ಬ್ರಿಡ್ಜ್ ದಾಟಿ , ಆ ಮೂಲೆಗ್ ಹೋಗ್ಬೇಕಿತ್ತು

AMBIGA

( ಕಣ್ಣು ಮುಚ್ಚಿಕೊಂಡು , ಅರೆ ನಿದ್ರೆಯಲ್ಲೇ )
ಸುಳಿಗಳಿದಾವಪ್ಪೋ , ಆ ಕಡೆಗೆಲ್ಲ ಬರಲ್ಲ !! , ಬೇಕಿದ್ರೆ ಒಂದ್ ರೌಂಡ್ ಹಾಕಿಸ್ಕೊಂಡ್ ಬರ್ತೀನಿ , ೨೦ ರುಪಾಯ್ ಆಗತ್ತೆ

APOORVA

ಅಣ್ಣ ಪ್ಲೀಸ್ , ಇಲ್ಲ ಅನ್ಬೇಡಿ

AMBIGA

ಅಲ್ಲೇನಿದೆ ಮಣ್ಣು , ಊರುಗಳೆಲ್ಲ ಈ ಕಡೆ ಇರೋದು , ಬೇಕಿದ್ರೆ ಈ ದಡದಲ್ಲಿ ಬಿಡ್ತೀನಿ ೩೦ ರುಪಾಯ್ ಆಗತ್ತೆ

ಅಪೂರ್ವ ತುಸು ದೂರದವರೆಗೂ ಕಣ್ಣು ಹಾಯಿಸಿ ನೋಡುತ್ತಾನೆ , ಯಾರೂ ಕಾಣುವುದಿಲ್ಲ , ಒಂದು ಮರದ ನೆರಳಲ್ಲಿ ಮುದುಕಿಯೊಬ್ಬಳು ಅಡಿಕೆ ಮೆಲ್ಲುತ್ತ ಕುಳಿತಿರುತ್ತಾಳೆ. ಅಪೂರ್ವ ಮತ್ತೊಮ್ಮೆ ಅಂಬಿಗನ ಬಳಿ ಬಂದು ಮನವಿ ಮಾಡಿಕೊಳ್ಳಲು ಮುಂದಾಗುತ್ತಾನೆ.

APOORVA

(ಸ್ವಗತ) ಹೇಗ್ ಹೇಳೋದಪ್ಪ , ಅಣ್ಣ ನಂಗ್ ತುಂಬಾ ಬೇಕಾದೋರು ಆತ್ಮಹತ್ಯೆ ಮಾಡ್ಕೋತಾರೆ , ಅವ್ರನ್ನ ಕಾಪಾಡ್ಕೋಬೇಕು , ಇಲ್ಲ ಅನ್ಬೇಡಿ ಪ್ಲೀಸ್

AMBIGA

ಹಾ !! ಏನು !? , ಎ ಇಲ್ಲ , ಆ ಕಡೆಗಂದ್ರೆ ಬರೋದಿಲ್ಲಪ್ಪಾ , ಒಂದ್ ರೌಂಡ್ ೨೦ ರುಪಾಯ್ , ಬೇಕಿದ್ರೆ ಹೇಳು

INTRCUT:

SWA SCREENWRITERS ASSOCIATION

INT. GOPAL KRISHNA HOUSE , DAY

**September 8 . 1996**

ಗೋಪಾಲ್ ಕೃಷ್ಣ ಶೇವ್ ಮಾಡಿಕೊಳ್ಳುತ್ತಿದ್ದಾರೆ , ಅರಿವು ತಯಾರಾಗಿ ಕೈಲಿ ಸೂಟ್ಕೇಸ್ ಹಿಡಿದು ಹೊರಡಲು ಸಜ್ಜಾಗಿದ್ದಾನೆ. ಕೈಗೆ ಕಟ್ಟಿರುವ ಬ್ಯಾಂಡೇಜ್ ಹಾಗೆಯಿದೆ.

GOPAL KRISHNA URS

ಇಷ್ಟ್ ಬೇಗ ಹೊರಟ್ರಾ. ನೀವಿನ್ನೂ ಆರಾಮಾಗಿಲ್ಲ ..
ಅರ್ಜೆಂಟ್ ಏನಿತ್ತು

DEVAKI

ಅದೇನೋ ಪೇಟೆಗ್ ಹೋಗ್ಬೇಕು ಅರ್ಜೆಂಟ್ ಟೆಲಿಗ್ರಾಂ
ಮಡ್ಬೇಕು ಅಂತಿದ್ರೂ , ಕಾರ್ ಕೀ ಕೊಡಿ ಇಬ್ರು
ಹೋಗ್ಬರ್ತೀವಿ

ಗೋಪಾಲ್ ಕೀ ಕೊಡುವನು

ARIVU

ದೇವಕಿ ಅವ್ರೆ ಬೇಡ , ಅರಾಮಿದ್ದಿನಿ ಒಬ್ನೇ ಹೋಗ್ತೀನಿ ,
ಮದ್ಯಾಹ್ನದ ಒಳಗೆ ಬಂದ್ಬಿಡ್ತೀನಿ ಸರ್

GOPAL KRISHNA URS

ರಾತ್ರಿ ಬೇಕಿದ್ರೂ ಬರ್ಬೋದು ಸಮಸ್ಯೆಯಿಲ್ಲ ( ಸ್ಮೈಲ್ ) ,
ಕಾರಲ್ಲಿ ದುಡಿದಿಟ್ಟಿದ್ದೀನಿ ನಮ್ಮೊನ್ ಹೊಟ್ಟೆ ತುಂಬಿಸ್ಬಿಡಿ
ಸಾಕು

ಸಂಭಾಷಣೆ ಮುಗಿಯುತ್ತಿದ್ದಂತೆ ಕಾರ್ ಶುರು ಮಾಡುವನು , ಅರಿವು ಹೋಗುವುದನ್ನೇ ನೋಡುತ್ತಾ ಬಾಗಿಲ ಬಳಿ ನಿಂತಿರುತ್ತಾಳೆ

CUT TO:

EXT. SHANTHALA RIVER BANK , DAY

**August 28 . 2001 , Time : 2:16 P.M**

APOORVA

ಅಣ್ಣ ಅರ್ಥ ಮಾಡ್ಕೊಳಿ , ಪ್ಲೀಸ್

SWA SCREENWRITERS ASSOCIATION

AMBIGA

ನೀನು ಅರ್ಥ ಮಾಡ್ಕೋ ಹುಡ್ಗ , ಸುಳಿಗಳಿವೆ , ಈಕಡೆ
ಯಾವುದಾದ್ರೂ ಊರಿಗ್ ಹೋಗ್ಬೇಕಾ ಹೇಳು ಬಿಡ್ತೀನಿ ,
ನೋಡೋಕೂ ಈ ಉರಿನೋನ್ ಥರ ಇಲ್ಲ , ಯಾವೂರು
ನಿಂದು ‼

ಅಪೂರ್ವ ತಬ್ಬಿಬ್ಬಾಗುತ್ತಾನೆ , ಅಷ್ಟರಲ್ಲಿ ದಡದಲ್ಲಿ ಮರದ ಕೆಳಗೆ ಕುಳಿತಿದ್ದ ಕುರುಡು ಮುದುಕಿ , ಎಲೆಗೆ ಸುಣ್ಣ ತಿಕ್ಕುತ್ತ ಮಾತನಾಡಲು ಮುಂದಾಗುತ್ತಾಳೆ.

MUDUKI

ಮೃತ್ಯುಂಜಯ , ಹುಡ್ಗ  ಹೇಳ್ತಿರೋದ್ರಲ್ಲಿ ನಿಜ
ಇರೋಹಾಗಿದೆ , ಹೋಗು

AMBIGA

ಆದಂಗಾಲ್ರವ್ವ ‼ , ಸುಳಿಗಳಿರ್ತಾವಂತ ಭಯ ಅಷ್ಟೇ

MUDUKI

ಪ್ರಾಣ ಉಳಿಸೋ ಭಾಗ್ಯ ಎಲರಿಗೂ ಸಿಗಲ್ಲ , ಆ ತಾಯಿ
ಆಶೀರ್ವಾದ ನಿನ್ ಮೇಲಿದೆ ಏನಾಗೋದಿಲ್ಲ ಹೋಗ್ಬಾ

ಅಂಬಿಗ ಹಾಗೂ ಅಪೂರ್ವನ ರಿಯಾಕ್ಷನ್

CUT TO:

EXT. RAYADURGA ROADS , DAY

**September 8 . 1996**

ಕಾರ್ ವೇಗವಾಗಿ ಮೂವ್ ಆಗುತ್ತಿದೆ , ಕಾರ್ ಒಳಗಿದ್ದ ಅರಿವು ಯೋಚಿಸುತ್ತಿದ್ದಾನೆ

INTRCUT:

EXT. GOPAL KRISHNA HOUSE , DAY

**September 7 . 1996**

ಗೋಪಾಲ್ ಕೃಷ್ಣ ಮನೆ ಹೊರಕ್ಕೆ ದೇವಕಿ , ಅರಿವು , ಹಾಗೂ ಕಲ್ಲಯ್ಯ ಕುಳಿತಿದ್ದಾರೆ. ಟೈಲ್ರಿಂಗ್ ಮಷಿನ್ ಅಲ್ಲಿ ಯಶೋಧ ಬಟ್ಟೆಗಳನ್ನು ಸ್ಟಿಚ್ ಮಾಡುತ್ತಿದ್ದಾಳೆ.

SWA SCREENWRITERS ASSOCIATION

ARIVU

ನಿಮ್ ಮಗ್ಳು ಯಾವಾಗ್ ಮನೆ ಬಿಟ್ಟಿದ್ದು ಅಂದ್ರಿ

DEVAKI

ಸುಮಾರ್ ವರ್ಷ ಆಗಿರ್ಬೋದು , ಹೇಗ್ ನೆನಪಿರತ್ತೆ ,
ಪಾಪ

KALLAYYA

ಅಕ್ಟೊಬರ್ ೧೪ , ೯೧ ನೇ ಇಸ್ವಿ , ಮದ್ಯಾಹ್ನ ೧ : ೨೦ ರ
ಸುಮಾರಿಗೆ ಮನೆ ಬಿಟ್ಟಿದ್ದು , ಮದ್ಯಾಹ್ನ ಮೂರಕ್ಕೆ ಟ್ರೈನ್
ಇದೆ , ಫ್ರೆಂಡ್ಸ್ ಜತೆ ಹೋಗ್ಬೇಕು ಅಂದಿದ್ಲು , ಆದ್ರೆ ,
ಊಟಾನೂ ಮಾಡದೇ ತುಂಬಾ ಅರ್ಜೆಂಟ್ ಆಗಿ ಹೊರಟ್ಲು
ಎಲ್ಲೇ ಹೋಗೋದಿದ್ರೂ ನಾನೇ ಬಿಡ್ತಿದ್ದೆ , ಆದ್ರೆ ಅವತ್ತು
ತುಂಬಾ ಕೆಲಸ ಬಂದಿತ್ತು

INTRCUT:

EXT. SHANTHALA BRIDGE , DAY

**September 8 . 1996**

ಅರಿವು ಶಾಂತಲಾ ಬ್ರಿಡ್ಜ್ ಸಮೀಪ ಗಾಡಿ ನಿಲ್ಲಿಸುತ್ತಾನೆ , ಕಾರಿನಲ್ಲಿರುವ ಹಣವನ್ನು ಜೇಬಿನಲ್ಲಿಟ್ಟುಕೊಳ್ಳುತ್ತಾನೆ , ಸೂಟ್ಕೇಸ್ ತೆರೆಯುತ್ತಾನೆ . ಪ್ರೇಮ್ಯ ಐ ಡ್ರಾಪ್ ಬಾಟೆಲ್ ಗೆ ವಾಚ್ ಕನೆಕ್ಟ್ ಮಾಡ್ತಾನೆ , ಟೈಮ್ ಮತ್ತೆ ಡೇಟ್ ಸೆಟ್ ಮಾಡ್ತಾನೆ , ಕಣ್ಣಿಗೆ ಐ ಡ್ರಾಪ್ ಹಾಕಿಕೊಳ್ಳುತ್ತಾನೆ. ಕಣ್ಣು ಮುಚ್ಚುತ್ತಾನೆ.

CUT TO:

SCREENWRITERS ASSOCIATION

EXT. KALLAYYA HOUSE , DAY

EXT. RAYADURGA ROADS , DAY

**October 14 . 1991 , Time 1:26 P.M**

ರೇವತಿ ಮನೆಯಿಂದ ಹೊರ ನಡೆದು ಒಂದು ಟಾಮ್ ಟಾಮ್ ಹತ್ತುವುದು ನೋಡುತ್ತಾನೆ , ತಾನೂ ಕೂಡ ಅದೇ ಟಾಮ್ ಟಾಮ್ ಹತ್ತುತ್ತಾನೆ . ಬಿಕ್ಕಳಿಸುತ್ತಿರುತ್ತಾಳೆ , ಮುಂದೆ ಕುಳಿತಿದ್ದ ಹೆಂಗಸೊಬ್ಬಳು ನೀರನ್ನು ಕೊಡುವಂತೆ ಅರಿವಿಗೆ ಹೇಳುತ್ತಾಳೆ , ಅರಿವು ನೀರನ್ನು ರೇವತಿಗೆ ಪಾಸ್ ಮಾಡುತ್ತಾನೆ. ಬಸ್ ಸ್ಟಾಪ್ ಸಮೀಪ ರೇವತಿ ಇಳಿಯುತ್ತಾಳೆ , ಅರಿವು ಕೂಡ ಇಳಿಯುತ್ತಾನೆ , ಆಟೋದವನಿಗೆ ಹಣ ನೀಡುತ್ತಾನೆ , ಅಷ್ಟರಲ್ಲಿ ಆಟೋ ಮೂವ್ ಆಗಿಬಿಡುತ್ತದೆ. ಬಸ್ ಸ್ಟಾಪ್ ಅಲ್ಲಿ ಅಜಗಜಾಂತರ ಚಿತ್ರದ ಪೋಸ್ಟರ್ ಇರುತ್ತದೆ , ಹಾಗೂ ಕುವೆಂಪು ಕಲಾಭವನದಲ್ಲಿ ಶಾಕುಂತಲೆ ನಾಟಕ ಪ್ರದರ್ಶನದ ಪೋಸ್ಟರ್ ಇರುತ್ತದೆ. ರೇವತಿ ಬಹಳ ಸಮಯ ಯಾರಿಗಾಗೋ ಕಾಯುತ್ತಾಳೆ. ಅರಿವು ಆಕೆಯನ್ನು ನೋಡುತ್ತಿರುತ್ತಾನೆ , ಕಣ್ಣು ಉರಿಯಲು ಆರಂಭವಾಗುತ್ತದೆ ಬ್ಲಿಂಕ್ ತಾಳಲಾರದೆ ಮರೆಗೆ ಹೋಗುತ್ತಾನೆ. ಕಣ್ಣು ಮುಚ್ಚುತ್ತಾನೆ

CUT TO:

EXT. SHANTHALA BRIDGE , DAY

**September 8 . 1996**

ಅರಿವು ಕಣ್ಣು ಬಿಡುತ್ತಾನೆ , ಸುಧಾರಿಸಿಕೊಂಡು ಮತ್ತೆ ಕಣ್ಣಿಗೆ ಐ ಡ್ರಾಪ್ ಹಾಕಿಕೊಳ್ಳುತ್ತಾನೆ.

CUT TO:

EXT. SHANTHALA BRIDGE , DAY

**October 14 . 1991 , Time 2:20 P.M**

ರೇವತಿ ನಡೆದು ಬೇಸರದಲ್ಲಿ ಸಾಗುತ್ತಿದ್ದಾಳೆ , ಆಕೆಯ ಹಿಂದೆ ಅರಿವು ಕೂಡ ಫಾಲೋ ಮಾಡುತ್ತಿದ್ದಾನೆ , ರೇವತಿ ಶಾಂತಲಾ ಬ್ರಿಡ್ಜ್ ಸಮೀಪ ನಡೆಯುತ್ತಿದ್ದಾಳೆ , ಬ್ರಿಡ್ಜ್ ಆಗ ತಾನೇ ಇನಾಗುರೇಟ್ ಆಗಿದ್ದು , ಬ್ಯಾನರ್ ಗಳನ್ನೂ ಹಾಕಲಾಗಿದೆ , ಒಂದೆರಡು ಕಡೆಗಳಲ್ಲಿ ಕಲ್ಲು , ಇಟ್ಟಿಗೆ , ಬಾಂಬುಗಳು ಇವೆ ರೇವತಿ ಯಾವುದೋ ಚೀಟಿಯನ್ನು ಹರಿದು ಅಳುತ್ತ ಬ್ರಿಡ್ಜ್ ಸಮೀಪ ನಡೆಯುತ್ತಿದ್ದಾಳೆ.

CUT TO:

SWA SCREENWRITERS ASSOCIATION

EXT. SHANTHALA RIVER BANK , DAY

**August 28 . 2001 , Time : 2:23 P.M**

ಅಂಬಿಗ ತೆಪ್ಪವನ್ನು ನದಿಗೆ ದೂಡುತ್ತಿದ್ದಾನೆ , ಹಾಗೂ ಅಪೂರ್ವನ ಬಳಿ ಹಣ ಕೇಳುತ್ತಾನೆ.

AMBIGA

ಹುಡ್ಗ , ಪ್ರಾಣ ಪಣಕ್ಕಿಟ್ಟು ಬರ್ತಿದ್ದೀನಿ , ದುಡ್ ಸ್ವಲ್ಪ
ಜಾಸ್ತಿನೇ ಕೊಡ್ಬೇಕು ಆಯ್ತಾ

APOORVA

ಸರಿ ಅಣ್ಣ

AMBIGA

ಸರಿ ಅಂದ್ರೆ ಆಗ್ತದ , ಅಡ್ವಾನ್ಸ್ ಒಂದ್ ಐವತ್ ರುಪಾಯ್
ಕೊಟ್ ಬಾ , ಹೊರಡೋಣ

ಅಪೂರ್ವ ಮುದುಕಿಯ ಬಳಿ ನಡೆದು ಹೋಗುತ್ತಿದ್ದಾನೆ , ಜೆಬೆಲ್ಲ ಕೈ ಹಾಕುತ್ತಾನೆ , ದುಡ್ಡು ಸಿಗುವುದಿಲ್ಲ , ಮುಖ ಸಣ್ಣದಾಗುತ್ತದೆ , ತಡಕಾಡುತ್ತಾನೆ , ಟೆನ್ಸ್ ಆಗುತ್ತಾನೆ ಅಂಬಿಗ ನದಿಯಲ್ಲಿ ತೆಪ್ಪ ಹಾಕಿಕೊಂಡು ಅಪೂರ್ವನಿಗೆ ಹಣ ಕೊಟ್ಟು ಬರುವಂತೆ ಸನ್ನೆ ಮಾಡುತ್ತಿದ್ದಾನೆ , ಅಪೂರ್ವನಿಗೆ ಏನು ಮಾಡುವುದು ತಿಳಿಯುವುದಿಲ್ಲ , ತಕ್ಷಣಕ್ಕೆ ಪ್ಯಾಂಟ್ ಹಿಂಬದಿಯ ಜೇಬಿನಲ್ಲಿ ಯಶೋಧ ಕೊಟ್ಟಿದ್ದ ನೂರು ರೂಪಾಯಿ ಸಿಗುತ್ತದೆ , ಸಂಗೀತ ತಾರಕಕ್ಕೇರುತ್ತದೆ , ಅದನ್ನು ಆ ಮುದುಕಿಯ ಕೈಲಿಡುತ್ತಾನೆ , ಮುದುಕಿ ಕೈಗೆ ಅಪೂರ್ವ ಹಣ ಕೊಡುವುದನ್ನು ನೋಡಿದ ಅಂಬಿಗ ಅಪೂರ್ವನನ್ನು ತೆಪ್ಪಕ್ಕೆ ಹತ್ತಿಸಿಕೊಳ್ಳುತ್ತಾನೆ

J CUT:

EXT. SHANTHALA RIVER , DAY

**August 28 . 2001 , Time : 2:30 P.M**

ಅಪೂರ್ವ ತೆಪ್ಪದಲ್ಲಿದ್ದಾನೆ , ತೆಪ್ಪ ಓಡಿಸುತ್ತಿರುವ ಅಂಬಿಗ ಏನನ್ನೋ ಹಾಡುತ್ತ , ಗುನುಗುತ್ತ ಸಾಗುತ್ತಿದ್ದಾನೆ. ಅಪೂರ್ವನಿಗೆ ಗಮನವೆಲ್ಲ ಬ್ರಿಡ್ಜ್ ಕಡೆಯಿದೆ , ಬ್ರಿಡ್ಜ್ ಡಿವಿಷನ್ ಕಡೆಗೆ ತೆಪ್ಪ ಸಾಗುತ್ತಿದೆ.

CUT TO:

SCREENWRITERS ASSOCIATION

EXT. SHANTHALA BRIDGE , DAY

**October 14 . 1991 , Time 2:42 P.M**

ರೇವತಿ ಬ್ರಿಡ್ಜ್ ಮೇಲೆ ನಿಂತಿದ್ದಾಳೆ . ನದಿಗೆ ಬ್ಯಾಗ್ ಎಸೆಯುತ್ತಾಳೆ , ಅರಿವು ನಿಧಾನಗತಿಯಲ್ಲಿ ರೇವತಿ ಸಮೀಪ ಸಾಗುತ್ತಾನೆ , ರೇವತಿ ಬ್ರಿಡ್ಜ್ ಹಾರಲು ತುದಿಗೆ ತೆರಳುತ್ತಾಳೆ. ಇನ್ನೇನು ರೇವತಿ ಹಾರಬೇಕು ಅಷ್ಟರಲ್ಲಿ ಅರಿವು ಕಣ್ಣು ಮುಚ್ಚುತ್ತಾನೆ

CUT TO:

EXT. SHANTHALA BRIDGE , DAY

**September 8 . 1996**

ಅರಿವು ಕಾರ್ ಒಳಕ್ಕೆ ಕುಳಿತು ಟೈಮ್ ನೋಡಿಕೊಳ್ಳುತ್ತಿದ್ದಾನೆ.

ARIVU

( ಮೈಂಡ್ ವಾಯ್ಸ್ ) ನಾನ್ ಹಿಂದಿನಿಂದ ಎಷ್ಟೇ ಕಂಪೋಸ್ಡ್ ಆಗಿ ಮೂವ್ ಆದ್ರೂ , ಅವಳನ್ನ ಉಳಿಸೋ ಚಾನ್ಸೆಸ್ ತುಂಬಾನೇ ಕಡಿಮೆಯಿದೆ. ಅವಳು ಹಾರಾಕ್ ಮುಂದಾಗಿದ್ ಟೈಮ್ ಹಾಕ್ಕೊಂಡು ಫ್ರಾಕ್ಷನ್ ಆಫ್ ಆ ಸೆಕಂಡ್ ಅಲ್ಲಿ ಅವಳನ್ನ ಕಾಪಾಡಬೇಕು , ಟ್ರೈ ಮಾಡ್ತೀನಿ , ಆಗಿದ್ ಆಗ್ಲಿ

CUT TO:

EXT. SHANTHALA RIVER , DAY

ಅಪೂರ್ವನಿಗೆ ಕಣ್ಣು ವಿಪರೀತ ನೋಯುತ್ತಿದೆ , ಕಣ್ಣು ಎಳೆಯಲು ಆರಂಭವಾಗುತ್ತಿದೆ , ಆತ ಕಂಟ್ರೋಲ್ ಮಾಡಿಕೊಳ್ಳುತ್ತಿದ್ದಾನೆ , ಬ್ರಿಡ್ಜ್ ಡಿವಿಷನ್ ದಾಟುತ್ತಾರೆ , ನಡುವಲ್ಲಿ ತೆಪ್ಪವನ್ನು ನಿಲ್ಲಿಸಲು ಹೇಳುತ್ತಾನೆ. ವಾಚ್ ನೋಡಿಕೊಳ್ಳುತ್ತಾನೆ.

## ಪ್ಯಾರಲೆಲ್ ಆಗಿ ಎರಡು ದೃಶ್ಯಗಳು ಸಾಗುತ್ತಿವೆ.

೧. ರೇವತಿ ಇನ್ನೇನೂ ನದಿಗೆ ಹಾರಬೇಕು ಎನ್ನುವಾಗ ಪ್ಯಾರಲಲ್ ಕಟ್ಸ್ ನಲ್ಲಿ ಗೋಪಾಲ್ ನದಿಗೆ ಬೀಳುತ್ತಾನೆ
೨. ರೇವತಿ ಹಾರಲು ಹೋಗಿದ್ದೆ , ಫ್ಲಾಶ್ ರೀತಿ ಬಂದು ಅರಿವು ಕಾಪಾಡುತ್ತಾನೆ , ಇಬ್ಬರೂ ನಡು ರಸ್ತೆಯಲ್ಲಿ ಬೀಳುತ್ತಾರೆ. ಒಂದು ರಿಂಗ್ ನೆಲಕ್ಕೆ ಬೀಳುತ್ತದೆ.
೩. ನದಿಯಲ್ಲಿ ಬಿದ್ದ ಗೋಪಾಲ್ ಅನ್ನು ಅಂಬಿಗ ಹಾಗೂ ಅಪೂರ್ವ ಸೇರಿ ಮೇಲಕ್ಕೇಳಿಸುತ್ತಾರೆ , ತೆಪ್ಪದ ಮೇಲೆ ಗೋಪಾಲ್ ಬಿದ್ದದ್ದೇ .. ಅಪೂರ್ವ ನದಿಯಲ್ಲಿ ಸಿಲುಕಿ ಒದ್ದಾಡಲು ಆರಂಭಿಸುತ್ತಾನೆ , ಕಣ್ಣು ಮುಚ್ಚದೇ ಇರುವುದು ಅಪೂರ್ವನಿಗೆ ಕಷ್ಟವಾಗುತ್ತದೆ , ಗೋಪಾಲ್ ಪ್ರಜ್ಞೆ ತಪ್ಪಿರುತ್ತಾರೆ. ಅಂಬಿಗ ಕಾಪಾಡಲು ಮುಂದಾಗುತ್ತಾನೆ.
೪. ಅರಿವು ರೇವತಿಯ ಕಪಾಳಕ್ಕೆ ಭಾರಿಸುತ್ತಾನೆ

ARIVU

ಸಾಯುವಂತದ್ ಏನಾಗಿದೆ ನಿಂಗೆ !

REVATI

ನಾನ್ ಅಪ್ಪಯ್ಯಂಗ್ ಮೋಸ ಮಾಡಿದೆ , ಅವ್ರ್
ನಂಬಿಕೇನಾ ಹಾಳ್ ಮಾಡಿದೆ , ನಾನ್ ಅವರಿಗೆ ಹೇಗ್
ಮುಖ ತೋರಿಸ್ಲಿ ( ರೋಧಿಸಲು ಮುಂದಾಗುತ್ತಾಳೆ )

ಅರಿವು ವಾಚ್ ಅಲ್ಲಿ ರೆಡ್ ಲೈಟ್ ಪಾಪ್ ಅಪ್ ಆಗುತ್ತದೆ. ಅರಿವು ಕಣ್ಣು ನೋಯ್ಯುತ್ತದೆ. ಕಣ್ಣು ಮುಚ್ಚುತ್ತಾನೆ. ವಾಚ್ ಅಲ್ಲಿ ಸಮಯ ೨:೫೮ ತೋರಿಸುತ್ತದೆ.

೫. ಗೋಪಾಲ್ ಅವರನ್ನು ತೆಪ್ಪಕ್ಕೆ ಹಾಕಿದ್ದೆ ಅಪೂರ್ವ ನೀರಿಗೆ ದುಮುಕುತ್ತಾನೆ , ವಾಚ್ ಅಲ್ಲಿ ಸಮಯ ೨:೫೮ ತೋರಿಸುತ್ತದೆ. ನದಿಯ ಒಳಗೆಯೇ ಕಣ್ಣು ಮುಚ್ಚುತ್ತಾನೆ.

ಎರಡೂ ಕಡೆ ಎಕ್ಸ್ಪೋಷರ್ ಹೆಚ್ಚಾಗುತ್ತಹೋಗುತ್ತದೆ. ಇಬ್ಬರೂ ಏಕಕಾಲಕ್ಕೆ ಕಣ್ಣು ಮುಚ್ಚುತ್ತಾರೆ.

DIP TO BLACK:

ಸಂಪೂರ್ಣವಾಗಿ ಸೈಲೆನ್ಸ್  ಆವರಿಸಿಕೊಳ್ಳುತ್ತದೆ

FADE IN:

INT. APOORVA HOUSE , DAY

**September 8 . 2022**

ಸ್ಲೋ ಶಾಟ್ಸ್

ಅಪೂರ್ವನ ಮೈಯಲ್ಲ ಒದ್ದೆಯಾಗಿದೆ , ಮೂಗಲ್ಲಿ ರಕ್ತಸುರಿಯುತ್ತಿದೆ , ಕಣ್ಣೆಲ್ಲ ಕೆಂಪಾಗಿಹೋಗಿದೆ , ವಿಪರೀತ ಸುಸ್ತಾಗಿದ್ದಾನೆ  ಒದ್ದೆಮೈಯಲ್ಲೇ ಹಾಗೇ ನೆಲದ ಮೇಲೆ ಕುಸಿದು ನಡಗುತ್ತ ಮಲಗುತ್ತಾನೆ. ಕಣ್ಣು ಬ್ಲರ್ ಆಗುತ್ತದೆ. ಕೆಮ್ಮುತ್ತಿದ್ದಾನೆ. ಅಪೂರ್ವನ ಮೈಯಿಂದ ಧಾರಾಕಾರವಾಗಿ ನೀರು ಸುರಿಯುತ್ತಿದೆ.

CUT TO:


©Srinidhi S
SWA Membership Number:54490

EXT. SHANTHALA BRIDGE , DAY

**September 8 . 1996**

ಅರಿವು ಬಟ್ಟೆ ತುಸು ತರುಚಿದೆ , ಕಣ್ಣು ಕೆಂಪಾಗಿದೆ , ವಿಪರೀತ ಸುಸ್ತಾದವನೇ ಕಾರಿನಲ್ಲಿ ಕೂರುತ್ತಾನೆ.

DIP TO BLACK:

INT. MUDUKA HOUSE , DAY

ಅಪೂರ್ವ ಮುದುಕ ಮಾಡಿರುವ ಲೈಮ್ ಟಿ ಕುಡಿಯುತ್ತಿದ್ದಾನೆ.

MUDUKA

ಇನ್ಸ್ಟಿಕ್ಟ್ ಗೆ ರಿಯಾಕ್ಟ್ ಆಗಿ ಹೀಟ್ ಆಫ್ ದಿ ಮೊಮೆಂಟ್ ಅಲ್ಲಿ ಆತ್ಮಹತ್ಯೆಗೆ ಮುಂದಾದೋರ್ನ ಒಂದ್ ಸರ್ತಿ ಸೇವ್ ಮಾಡಿದ್ರೆ ಸಾಕು , ಅವ್ರು ಮತ್ತೆ ಪ್ರಯತ್ನ ಪಡೋ ಚಾನ್ಸೆಸ್ ತುಂಬಾನೇ ಕಮ್ಮಿ

DIALOGUE CUT

EXT. SHANTHALA RIVER BANK , DAY

ಅರಿವು ನದಿಯಲ್ಲಿ ಕಾಲು ಇಟ್ಟು ನದಿಗೆ ಕಲ್ಲು ಎಸೆಯುತ್ತಾ ಕುಳಿತಿದ್ದಾನೆ. ಎಲ್ಲೆಡೆಯೂ ಶಾಂತತೆ ನೆಲೆಸಿದೆ. ( ಸಂಭಾಷಣೆಯ ಮೇಲೆ )

DISSOLVE TO:

INT. MUDUKA HOUSE , DAY

ಅಪೂರ್ವ ಲೈಮ್ ಟಿ ಕುಡಿಯುತ್ತ ಮಾತನಾಡುತ್ತಿದ್ದಾನೆ.

APOORVA

ಅವ್ರನ್ನ ದಡಕ್ಕೆ ರೀಚ್ ಮಾಡಿಸೋಕ್ಕೆ ಆಗ್ಲಿಲ್ಲ ಸರ್ , ಅಷ್ರಲ್ಲಿ ಮೂರ್ ಗಂಟೆ ಆಗೋಯ್ತು !!

MUDUKA

ನಿನ್ನ ಕೆಲಸ ನೀನ್ ಮಾಡಿದ್ಯಾ

APOORVA

ಬದುಕುಳಿದಿರ್ತಾರಲ್ವಾ !?

ಮುದುಕ ಉತ್ತರಿಸುವುದಿಲ್ಲ , ಸ್ಮೈಲ್ ಮಾಡುತ್ತಾರೆ.

APOORVA
(CONT'D)
ಸಾಯೋ ನಿರ್ಧಾರ ತಗೊಳ್ಳುವಂತದ್ ಏನಾಗಿತ್  ಸರ್ ಅವ್ರಿಗೆ ‼ , ನನ್ ಅಪ್ಪ …

MUDUKA

ಎಲ್ಲದಕ್ಕೂ ಉತ್ರ ಸಿಗತ್ತೆ ಅಪೂರ್ವ , ತಾಳ್ಮೆ ಇರ್ಲಿ ‼

ಮುದುಕ ಅಪೂರ್ವನಿಗೆ ಹತ್ತುಸಾವಿರ ಹಣ ತಗೆದುಕೊಡುತ್ತಾರೆ

APOORVA

ಅಡ್ವಾನ್ಸ್ ಅನ್ಕೋ   ಈ ಡೈರಿಲಿ ನಿನ್ ಮೊಬೈಲ್ ನಂಬರ್ ಬರೆದಿಟ್ ಹೋಗು ‼ ನಾನೇ ಫೋನ್ ಮಾಡಿ ಕರೆಸ್ಕೊಳ್ತಿನಿ , ಅಲ್ಲಿವರ್ಗು ಸಿಗೋದ್ ಬೇಡ ‼

ಅಪೂರ್ವ ಹಣವನ್ನು ನೋಡುತ್ತಾನೆ

CUT TO:

EXT. REHEARSAL PLACE , EVENING

ಮೈಕಲ್ ಹಾಗೂ ಸತ್ಯ ಜತೆ ಕಿಟ್ಟಿ ಸ್ಮೋಕ್ ಮಾಡುತ್ತಾ ಮತ್ತೊಂದು ಕೈಯಲ್ಲಿ ದೊಡ್ಡ ಸೆಟ್ ಅನ್ನು ಕೂರಿಸುತ್ತಿದ್ದಾನೆ.. ಮೇಷ್ಟ್ರು ಫೋಮ್ ಆರ್ಟ್ ಮಾಡುತ್ತಿದ್ದಾರೆ , ಮಿಕ್ಕಿ ಕಿರೀಟಗಳನ್ನು ರೆಡಿಮಾಡುತ್ತಿದ್ದಾಳೆ , ಕಿಟ್ಟಿ ಕತ್ತಲ್ಲಿ ಬ್ಲೂಟೂತ್ ಸ್ಪೀಕರ್ ನೇತಾಡುತ್ತಿದೆ , ಹಾಡು ಕೇಳುತ್ತ ಎಂಜಾಯ್ ಮಾಡಿಕೊಂಡು ಕೆಲಸಮಾಡುತ್ತಿದ್ದಾನೆ. ನಿರ್ದೇಶಕರು ಸ್ಕ್ರಿಪ್ಟ್ ಪೇಪರ್ ಹಿಡಿದು ಎರಡು ಮೂರು ಪಾತ್ರಧಾರಿಗಳಿಗೆ ಇಂಟಾನೇಷನ್ಸ್  ಕರೆಕ್ಟ್ ಮಾಡುತ್ತಿದ್ದಾರೆ. , ಸ್ವಪ್ನ ಟೈಲರಿಂಗ್ ಮಶೀನಿನಲ್ಲಿ ಕಾಸ್ಟ್ಯೂಮ್ ಗೆ ಸ್ಟಿಚ್ ಮಾಡುತ್ತಿದ್ದಾಳೆ. ಆಕೆಯ ಪಕ್ಕದಲ್ಲೇ ಸತ್ಯ ಕುಳಿತಿದ್ದ ಕಾರಣ ಅಪೂರ್ವ ಸ್ವಪ್ನ ಹತ್ತಿರದಲ್ಲೇ ಒಂದು ಹಲಗೆಯ ಸೆಟ್ ತಂದು ಅದಕ್ಕೆ ಮೊಳೆ ಹೊಡೆಯಲು ಮುಂದಾಗುತ್ತಾನೆ , ಸತ್ಯ ನಿಧಾನವಾಗಿ ಅಲ್ಲಿಂದ ಜಾಗ ಖಾಲಿ ಮಾಡುತ್ತಾನೆ.

KITTI

ಮಗ ಏನೋ ಇದ್ದಕ್ಕಿದ್ದಂಗ್ ೨ ಸಾವಿರ ಟ್ರಾನ್ಸ್ಫರ್ ಮಾಡಿದ್ಯಾ

SWAPNA

ಯಾವುದೊ ಹಳೆ ಸಾಲ ಇರತ್ತೆ , ನಿಂಗ್ ನೆನಪಿರಲ್ಲ ಬಿಡು

KITTI

ಇಗ್ಯಾವ್ ಬೋಳಿಮಗ ದುಡ್ ಕೇಳಿದ್ನಪ್ಪಾ

APOORVA

ಹೊಸ ಕೆಲ್ಸದ್ ಅಮೌಂಟ್ ಬಂತು ಮಗ


©Srinidhi S
SWA Membership Number:54490

MICHAEL

ಇನ್ನೂ ಒಂದ್ ವಾರನೂ ಆಗಿಲ್ವಲ್ಲ ಭೈ

APOORVA

ಪ್ರೊಜೆಕ್ಟ್ ಬೇಸಿಸ್ ಮೇಲೆ ಪೆ ಮಾಡ್ತಾರೆ ಮೈಕಲ್

KITTI

ಅಮೌಂಟ್ ಸೆಟ್ಲು ಮಾಡೋದ್ ಬದ್ಲು , ಎಣ್ಣೆಗಿಂಣೆ ಹಾಕಿಸ್ಪೆ ಚನ್ನಾಗಿರೋದು , ಏನೋ ನೋಡಪ್ಪ ಒತ್ತಾಯಯಿಲ್ಲ , ನಿನ್ನಿಷ್ಟ

CUT TO:

EXT. GOPAL KRISHNA HOUSE , NIGHT

ಕ್ಯಾಮ್ಪ್ ಫಯರ್ ಹಾಕಿಕೊಂಡು , ಗುಂಡು , ಅಡಿಗೆ ಇಟ್ಟುಕೊಂಡು ಅರಿವು , ದೇವಕಿ , ಯಶೋಧ , ಗೋಪಾಲ್ ಬೆಂಕಿಯ ಸುತ್ತಲೂ ಕುಳಿತಿದ್ದಾರೆ. ಗೋಪಾಲ್ ಅರಿವಿಗೆ ಕುಡಿಯಲು ಡ್ರಿಂಕ್ಸ್ ನೀಡುವನು ಅರಿವು ಬೇಡ ಎಂದು ತಲೆಯಾಡಿಸುತ್ತಾ ಮಾತನಾಡುತ್ತಾನೆ

ARIVU

ಇಲ್ಲ ಸರ್ , ನನ್ ಕುಡಿಯಲ್ಲ

GOPAL KRISHNA URS

ಸಂಕೋಚಕ್ಕೆ ಕುಡಿಯಲ್ವ , ಅಥವಾ

ARIVU

ಅಭ್ಯಾಸಾಯಿಲ್ಲ

GOPAL KRISHNA URS

( ಒಂದು ಸಿಪ್ ಎಳೆದು , ನಾಟಕೀಯವಾಗಿ ) ಮನುಷ್ಯ ಸದಾ ಕುಡಿದ ಸ್ಥಿತಿಯಲ್ಲಿರಬೇಕು , ಏನನ್ನು ಕುಡಿಯುವುದು !?

ಅರಿವು ಸ್ಮೈಲ್ ಮಾಡುತ್ತಾ ಗೊತ್ತಿಲ್ಲವೆಂಬಂತೆ ತಲೆಯಾಡಿಸುತ್ತಾನೆ ಗೋಪಾಲ್ ಮಾತು ಮುಂದುವರೆಸುತ್ತಿದ್ದಂತೆ , ಕೈನಲ್ಲಿ ವೈನ್ ಹಿಡಿದಿದ್ದ ದೇವಕಿ ಕೂಡ ಆತನ ಜತೆಗೆ ಕೋಟ್ ಹೇಳಲು ಮುಂದಾಗುತ್ತಾಳೆ.

SCREENWRITERS ASSOCIATION

DEVAKI & GOPAL KRISHNA URS

ವೈನ್ , ಕಾವ್ಯ , ಋಜತ್ವ , ಯಾವುದನ್ನಾದರೂ ಸರಿ ,
ಒಟ್ಟಿನಲ್ಲಿ ಕುಡಿಯಬೇಕು ಮಾತ್ರ ( ನಗು )

ARIVU

ಬೋದಿಲೇರ್ ಮಾತುಗಳು , ಯಾವಾಗ್ಲೋ ಓದಿದ್ ನೆನಪು

GOPAL KRISHNA URS

( ನಗುತ್ತ ) ಮಾತುಗಳು ಮನ್ಸಿಗ್ ಮುಟ್ಟಿಲ್ಲ ಅಂತ ಕಾಣತ್ತೆ
, ಅರಿವು ನಿಮಗೆ ಪರ್ಷಿಯನ್ ಕವಿ ರೂಮಿ ಗೊತ್ತಾ !!
ಅವನೊಂದು ಮಾತ್ ಹೇಳ್ತಾನೆ , The wound is the
place where the light enters you ಅಂತ , ಬೆಳಕು
ಪ್ರವೇಶಿಸಬೇಕಿದ್ರೆ , ಮೊದ್ಲು ನಿಮ್ಮಲ್ಲೊಂದು ಗಾಯ
ಆಗಿರ್ಬೇಕು.. ( ಮತ್ತೊಂದು ಗುಟುಕೇರಿಸುತ್ತಾನೆ )
( ಮರೆತಂತಾಗಿ ) ನಿಮಗೆ ಗಾಯ ಆಗಿರೋದ್ರಿಂದ ಬೆಳಕು
ಪ್ರವೇಶಿಸಬಹುದೇನೋ ನೋಡ್ಬೇಕು ( ನಗುವನು ) ನನ್
ಯಾಕ್ ಈ ಮಾತುಗಳನ್ನ ಹೇಳ್ದೆ ( ನಗುವನು )

DEVAKI

ನೀವ್ ಮಾತಾಡ್ತಿಲ್ಲ , ನಿಮ್ಮ ಕೈಲಿರೋದು ನಿಮ್ಮನ್ನ
ಮಾತಾಡಿಸ್ತಿದೆ ( ಎಲ್ಲರು ನಗುವರು )

ARIVU

ನಾಳೆ ಬೆಳಗಿನ ಟ್ರೈನ್ ಗೆ ಹೊರಡಬೇಕು ಅಂತಿದ್ದೀನಿ
ಸರ್ , ಈಗ ಸ್ವಲ್ಪ ಆರಾಮಾಗಿದ್ದೀನಿ , ನಾನಿಲ್ದೆ ಪ್ರೊಡಕ್ಷನ್
ಸ್ಲೋ ಆಗ್ತಿದೆಯಂತೆ ಸೊ..

ದೇವಕಿಯ ಮುಖ ಸಣ್ಣಗಾಗುತ್ತದೆ , ಗೋಪಾಲ್ ಕೃಷ್ಣ ಅದನ್ನು ಗಮನಿಸುತ್ತಾರೆ.

GOPAL KRISHNA URS

( ನಗು ನಿಲ್ಲುವುದು ) ಅರಿವು , ನಿಮಗೇನೋ ಹೇಳ್ಬೇಕು ,
ಅವತ್ ಕಲ್ಲಯ್ಯ ನಿಮ್ಮೆಲೆ ಅಗ್ರೆಸಿವ್ ಆಗಿದ್ದಕ್ಕೆ , ನಾವ್
ನಿಮ್ ಜತೆ ಒಂದಿಷ್ಟ್ ಸಮಯ ಕಳೆಯೋಹಾಗಾಯ್ತು ,
ಮಾತ್ ಹೆಚ್ಚಿಗೆ ಆಡದೆ ಇರಬಹುದು ಆದ್ರೆ ಮನಸಿಗೆ
ತುಂಬಾ ಹಿಡಿಸ್ಬಿಟ್ರಿ ನೀವು , ಹೇಳ್ತಾರಲ್ಲ ದೈವಿಕ ಸಾಂಗತ್ಯ
ಅಂತ ಆ ಥರ

SWA SCREENWRITERS ASSOCIATION

ARIVU

( ಸ್ಮೈಲ್ , ಅರಿವು ಕಣ್ಣು ತುಂಬಿ ಬಂದಿದೆ ) ಪ್ರೀತಿ , ಸ್ನೇಹ , ಫ್ಯಾಮಿಲಿ ಬಾಂಡಿಂಗ್ , ಇದ್ಯಾವುದ್ರ ಅನುಭಾನೂ ನಂಗಾಗ್ಲಿಲ್ಲ ಸರ್ , ಹೆಚ್ಚು ಒಂಟಿಯಾಗೇ ಇದ್ದಿದ್ ನೆನಪು , ಆದ್ರೆ ಯಾಕೋ ಗೊತ್ತಿಲ್ಲ , ನಿಮ್ಮನೆಲ್ಲ ನೋಡಿದ್ರೆ , ನಂಗ್ ತುಂಬಾ ಹತ್ತಿರದೋರೇನೋ ಅಂತ ಅನ್ಸತ್ತೆ

GOPAL KRISHNA URS

ನೀವ್ಯಾರೂ , ಏನ್ ಕತೆ , ನಂಗಿದ್ಯಾವುದೂ ಬೇಡ , ದೇವಕಿ ನಿಮ್ಮನ್ನ

DEVAKI

ಭಾವ ಸುಮ್ನಿರಿ ಈಗ , ಏನಿಲ್ಲ ಅರಿವು ಅವ್ರೆ

YASHODHA

ಅರೆ , ಇರೋದನೆ ಹೇಳ್ತಿದ್ದಾರೆ , ನಿಂಗ್ ಹೇಳೋ ಧೈರ್ಯ ಇಲ್ಲ , ಅವ್ರೆ ಹೇಳ್ಲಿ ಬಿಡು

DEVAKI

ಅರಿವು , ನೀವ್ ನಂಗ್ ತುಂಬಾ ಇಷ್ಟ ಆದ್ರಿ , ನಿಮ್ ಜತೆ ಜೀವನ ಮಾಡ್ಬೇಕು ಅಂತ ಆಸೆ ಆಯಿತು , ಇವ್ರಿಗೆ ಅಷ್ಟೇ ಹೇಳಿದ್ ನಾನು , ಬೇರೆದೇನು ಸೇರಿಸಿ ಹೇಳೋಹಾಗಿಲ್ಲ ಆಯ್ತಾ . ಪ್ರೀತಿಗಿತಿ ಎಲ್ಲ ಏನಿಲ್ಲ ( ಕುಡಿಯುವಳು )

ಅರಿವು ಅಳುವುದಕ್ಕೆ ಮುಂದಾಗುತ್ತಾನೆ .. ಭೀಕ್ಕಿಸುತ್ತಾನೆ

DEVAKI (CONT'D)

ನಿಮಗಿಷ್ಟ ಇಲ್ಲ ಅಂದ್ರೆ ಪರವಾಗಿಲ್ಲ , ಹೇಳಿದ್ದಷ್ಟೇ , ಭಾವ ಎಲ್ಲ ನಿಮ್ಮಿಂದಲೇ ಆಗಿದ್ದು

ARIVU

ಥ್ಯಾಂಕ್ಸ್... ನಿಮ್ ಜತೆ ಇರೋದಕ್ಕೆ ಅವಕಾಶ ಕೊಟ್ಟಿದ್ದಕ್ಕೆ

ಅರಿವು ದೇವಕಿಯ ಕೈ ಹಿಡಿಯುತ್ತಾನೆ , ಅಗ್ನಿ ಉರಿಯುತ್ತಿದೆ .. ಸಂಗೀತ ತಾರಕಕ್ಕೇರುತ್ತಿದೆ.

J CUT :

EXT. OUTSIDE OF REHERSAL SPACE , NIGHT

ಮಿಕ್ಕಿ ಗಾಡಿಯಲ್ಲಿ ಕುಳಿತಿದ್ದಾಳೆ , ಅಪೂರ್ವ ಸ್ವಪ್ನಾಳಿಗೆ ಹಗ್ ಮಾಡುತ್ತಿದ್ದಾನೆ. ಮಿಕ್ಕ ಕೆಲವು ಗಾಡಿಗಳು ಹಿನ್ನೆಲೆಯಲ್ಲಿ ಬೈ ಹೇಳಿ ಮೂವ್ ಆಗುತ್ತಿವೆ

APOORVA

(ಹಗ್ ಮಾಡುತ್ತಾನೆ) ಲವ್ ಯು , ಹುಷಾರು

ಸ್ವಪ್ನ ಮಿಕ್ಕಿ ಹೊರಡುತ್ತಾರೆ , ಡೈರೆಕ್ಟರ್ ಮೈಕಲ್ ಗಾಡಿಯಲ್ಲಿ ಕುಳಿತಿರುತ್ತಾರೆ , ಹಾಗೂ ಫೋನ್ ಕರೆಯಲ್ಲಿ ನಿರತರಾಗಿರುತ್ತಾರೆ. ಫೋನ್ ನಲ್ಲಿ ಮಾತನಾಡುತ್ತ ಅಪೂರ್ವ ಸನಿಹಕ್ಕೆ ಗಾಡಿ ನಿಲ್ಲಿಸುವಂತೆ ಸನ್ನೆ ಮಾಡಿ,  ಮಾತನಾಡಲು ಪ್ರಾರಂಭಿಸುತ್ತಾರೆ.

NIRDESHAKA

ಅಪೂರ್ವ , ಮೇಷ್ಟ್ರನ್ನ ಇವತ್ ನಿನ್ ರೂಮ್ ಗೆ ಕರ್ಕೊಂಡ್ ಹೋಗ್ಬೋದ , ಹೆಂಡತಿಗೆ ಲೇಬರ್ ಪೈನ್ ಸ್ಟಾರ್ಟ್ ಆಯ್ತಂತೆ , ಆಗ್ಲೇ ಆಸ್ಪತ್ರೆಗೆ ಆನ್ ದಿ ವೆ ಇದಾರೆ ಮನೆಗ್ ಹೋಗೋಗಾಕ್ತಿಲ್ಲ ಸೊ ,

APOORVA

ಸರಿ ಸರ್ , ನೋ ಇಷುಸ್ , ಹುಷಾರು ಸರ್ , ಏನಾದ್ರು ಇದ್ರೆ ಫೋನ್ ಮಾಡಿ

NIRDESHAKA

( ಮೇಷ್ಟ್ರಿಗೆ ) ಮೇಷ್ಟ್ರೇ ಇವತ್ತೊಂದ್ ದಿನ ಅಡ್ಜೆಸ್ಟ್ ಮಾಡ್ಕೊಳ್ಳಿ , ( ಕರೆಯಲ್ಲಿ ) ಬರ್ತಿದ್ದೀನಿ ರಾಜೀವ್ ಹೊರಟೆ , ಇಪ್ಪತ್ ನಿಮಿಷ ಅಲ್ಲಿರ್ತೀನಿ

ಮತ್ತೆ  ಫೋನ್ ಕರೆಯಲ್ಲಿ ನಿರತರಾಗುತ್ತಾರೆ

CUT TO:

EXT. BENGALURU ROADS , NIGHT

ಮೇಷ್ಟ್ರು , ಅಪೂರ್ವ , ಕಿಟ್ಟಿ ಒಂದೇ ಗಾಡಿಯಲ್ಲಿ ತ್ರಿಬಲ್ ರೈಡ್ ಮಾಡುತ್ತಿದ್ದಾರೆ. ಆನ್ ದಿ ವೇ ಒಂದು ರೋಡ್ ಸೈಡ್ ಊಟದ ಗಾಡಿಯಲ್ಲಿ ಊಟ ಪಾರ್ಸೆಲ್ ತಗೆದುಕೊಳ್ಳುತ್ತಾರೆ  , ಅಪೂರ್ವನ ಮನೆಯ ಹತ್ತಿರ ಇವರಿಬ್ಬರನ್ನು ಬಿಟ್ಟು ಕಿಟ್ಟಿ ಹೊರಡುತ್ತಾನೆ

CUT TO:

SWA SCREENWRITERS ASSOCIATION

I/E. APOORVA HOUSE , NIGHT

MONTAGES

೧. ಮೇಷ್ಟ್ರು ಬ್ಯಾಗ್ ತಗೊಂಡು ಅಪೂರ್ವ ರೂಮ್ ಒಳಗೆ ಇಡುತ್ತಾನೆ.
೨. ಮೇಷ್ಟ್ರು ಕೈ ಕಾಲು ತೊಳೆಯುತ್ತಾರೆ.
೩. ಮೇಷ್ಟ್ರಿಗೆ ತಟ್ಟೆ ತೊಳೆದು ಊಟ ಬಡಿಸುತ್ತಾನೆ , ಮೇಷ್ಟ್ರು ಅಪೂರ್ವನ ಮನೆಯಲ್ಲಿದ್ದ ಪುಸ್ತಕವೊಂದನ್ನು ನೋಡುತ್ತಾರೆ.
೪. ಇಬ್ಬರೂ ತಿನ್ನುತ್ತಾರೆ.
೫. ಚಾಪೆ ಹಾಸಲು ಮುಂದಾದಾಗ ಮೇಷ್ಟ್ರು , ತಾನು ಮನೆಯ ಹೊರಗಡೆ ಮಲಗುವುದಾಗಿ ಕೈಸನ್ನೆಯಲ್ಲಿ ತಿಳಿಸುತ್ತಾರೆ

APOORVA

ಹೊರಗ್ ವಿಪರೀತ ಸೊಳ್ಳೆಗಳಿವೆ ಸರ್ ‼

೬. ಪರವಾಗಿಲ್ಲ ಎನ್ನುತ್ತಾರೆ , ಹಾಗೂ ಚಾಪೆ ಹಾಸಿಕೊಂಡು ಮಹಡಿಯಮೇಲೆ ನಿಂತು ಆಕಾಶವನ್ನು ವಿಚಿತ್ರವಾಗಿ ನೋಡುತ್ತಾರೆ. ಹಾಳೆಯಲ್ಲಿ ಏನನ್ನೋ ಗೀಚಲು ಮುಂದಾಗುತ್ತಾರೆ.
೭. ಅಪೂರ್ವ ತನ್ನ ಮೊಬೈಲ್ ಅಲ್ಲಿ ಮೆಸೇಜ್ ಗಳಿಗೆ ರಿಪ್ಲೆ ಮಾಡುತ್ತಾನೆ

ಸ್ವಪ್ನ , ರೀಚ್ಡ್  ಎಂದು ಮೆಸೇಜ್ ಸೆಂಡ್ ಮಾಡಿರುತ್ತಾಳೆ , ಅದಕ್ಕೆ ಒಂದು ಹಾರ್ಟ್ ಕಳಿಸಿ ಗುಡ್ನೈಟ್ ಮೆಸೇಜನ್ನು ಕಳಿಸುತ್ತಾನೆ. ತಕ್ಷಣ ಗ್ರೂಪ್ ಅಲ್ಲಿ ಮೆಸೇಜ್ ಗಳು ಬರಲು ಶುರುವಾಗುತ್ತದೆ. ಗ್ರೂಪ್ ತೆರೆಯುತ್ತಾನೆ , ಮೈಕಲ್ ನಿರ್ದೇಶಕರಿಗೆ ಗಂಡುಮಗುವಾಗಿರುವುದರ ಫೋಟೋ ಒಂದನ್ನು ಕಳಿಸುತ್ತಾನೆ , ಹಾಗೂ ಅದನ್ನು ನಿರ್ದೇಶಕರು ಕೈಲಿ ಹಿಡಿಕೊಂಡಿರುವುದನ್ನು ಸಹ ಗಿಫ್ ಮಾಡಿ ಕಳಿಸಿರುತ್ತಾನೆ. ಅಪೂರ್ವ ಫೋಟೋ ನೋಡಿ ಸ್ಮೈಲ್ ಮಾಡುತ್ತಾನೆ

KITTI

( ವಾಯ್ಸ್  ಮೆಸೇಜ್ ) ನಾಳೆ ರಿಹರ್ಸಲ್ ಆದಮೇಲೆ ಎಣ್ಣೆ ಪಾರ್ಟಿ ಫಿಕ್ಸು

ಮಿಕ್ಕಿ , ಹಾಗೂ ಸ್ವಪ್ನ ನಗುವ ಎಮೋಜಿ ಕಳಿಸುತ್ತಾರೆ. ಅಪೂರ್ವ ಒಂದು ಫನ್ನಿ ಸ್ಟಿಕ್ಕರ್ ಕಳಿಸುತ್ತಾನೆ.

೮. ಲೈಟ್ ಆರಿಸಲು ಅಪೂರ್ವ ಮುಂದಾದಾಗ , ಕಿಟಕಿಯ ಆಚೆ ಮೇಷ್ಟ್ರು ನಿಂತು ಆಕಾಶ ನೋಡುತ್ತಿರುವುದು ಕಾಣುತ್ತದೆ. ಲೈಟ್ ಆಫ್ ಮಾಡಿ ಅಪೂರ್ವ ಮಲಗುತ್ತಾನೆ

CUT TO:

EXT. DREAMY , RIVER

SWA SCREENWRITERS ASSOCIATION

ಅಪೂರ್ವ ನದಿಯಲ್ಲಿ ಬಿದ್ದು ಒದ್ದಾಡುತ್ತಿದ್ದಾನೆ , ಆತನ ಎದುರಿಗೆ ತೆಪ್ಪದಲ್ಲಿ , ಅಪೂರ್ವನ ತಂದೆ , ಅಂಬಿಗ , ಮುದುಕಿ , ಯಶೋಧ , ಪುಟ್ಟ ಅಪೂರ್ವ ಕುಳಿತ್ತಿದ್ದಾರೆ , ಅಪೂರ್ವ ಒದ್ದಾಡುತ್ತಿದ್ದಾನೆ , ಟೈಮ್ ಮಷಿನ್ ವಾಚ್ ಸಮಯವನ್ನು ಹಿಂದೆ ಮುಂದೆ ಮಾಡುತ್ತಿದೆ , ಅಪೂರ್ವ ಸಹಾಯ ಮಾಡಿ ಎಂದು ಕೂಗುತ್ತಿದ್ದಾನೆ , ಯಾರೂ ಸಹಾಯ ಮಾಡಲು ಮುಂದಾಗುತ್ತಿಲ್ಲ. ಅಪೂರ್ವ ಒದ್ದಾಡುತ್ತಾನೆ , ನೀರಿನಲ್ಲಿ ಮುಳುಗುತ್ತಾನೆ. ರೆಡ್ ಲೈಟ್ ಪಾಪ್ ಅಪ್ ಆಗುತ್ತದೆ. ಸಂಗೀತ ತಾರಕಕ್ಕೇರುತ್ತದೆ.

MATCH CUT TO:

I/E. APOORVA HOUSE , DAY

**September 9 . 2022**

ಅಪೂರ್ವ ತಲೆಗೆ ನೀರು ಹಾಕಿಕೊಳ್ಳುತ್ತಾನೆ , ಸ್ನಾನ ಮಾಡುತ್ತಾನೆ , ನಂತರದಲ್ಲಿ ಒದ್ದೆ ಬಟ್ಟೆಗಳನ್ನು ಒಣಗಿಹಾಕುತ್ತಾನೆ , ಸಿಂಕ್ ಅಲ್ಲಿ ಪಾತ್ರೆಗಳನ್ನು ತೊಳೆಯುತ್ತ ಫೋನ್ ಕರೆಯಲ್ಲಿ ಕಿಟ್ಟಿಯೊಡನೆ ಮಾತನಾಡುತ್ತಿದ್ದಾನೆ

KITTI

( ಕರೆಯಲ್ಲಿ ) ಲೋ ಇವತ್ ಕೆಲಸ ಇಲ್ಲ ಅಂದ್ರೆ ಸರ್ ಮಗು ನೋಡ್ಕೊಂಡ್ ಬರೋಣ ಬಾರೋ ಮಗ

APOORVA

ಅಯ್ತಿರು ಗುರು ಮೇಷ್ಟ್ರನ್ನು ಎಬ್ಬಿಸ್ತೀನಿ , ಒಟ್ಟಿಗೆ ಹೋಗೋಣ

KITTI

ಬಾಸು ಇನ್ನೂ ಎದ್ದಿಲ್ವಾ !?

APOORVA

ರಾತ್ರಿ ಆಕಾಶ ನೋಡ್ಕೊಂಡ್ ನಿಂತಿದ್ರಪ್ಪ , ಲೇಟ್ ಆಗ್ ಮಲಗಿರ್ಬೇಕು ಮೇಬಿ

KITTI

ಸರಿ ಸರಿ ರೆಡಿ ಇರಿ ಹತ್ ನಿಮಿಷ ಬಂದ್ಬಿಟ್ಟೆ

ಅಪೂರ್ವ ಪಾತ್ರೆಗಳನ್ನು ತೊಳೆದವನೇ , ಮೇಷ್ಟ್ರು ಬಳಿ ನಡೆದು ಹೋಗುತ್ತಾನೆ , ಮೇಷ್ಟ್ರನ್ನು ಎಬ್ಬಿಸಲು ಮುಂದಾಗುತ್ತಾನೆ ,

(CONT'D)

APOORVA

ಸರ್ ಸರ್ ..

SWA SCREENWRITERS ASSOCIATION

ಮೇಷ್ಟ್ರು ಎದ್ದೇಳೋದಿಲ್ಲ , ಕೈ ಮುಟ್ಟುತ್ತಾನೆ ತಣ್ಣಗಾಗಿರುತ್ತದೆ , ಮುಖದ ಮುಂದೆ ಒಂದೆರಡು ನೊಣಗಳು ಹಾರುತ್ತಿರುತ್ತವೆ , ಅಪೂರ್ವನಿಗೆ ಅನುಮಾನವಾಗುತ್ತದೆ. ದೃಶ್ಯ ಸಂಪೂರ್ಣ ವಾಯ್ಸ್ ಲೆಸ್ ಆಗುತ್ತದೆ. ಎಲ್ಲವೂ ಸ್ಲೋ ಮೋಷನ್ ಅಲ್ಲಿ ಮೂವ್ ಆಗುತ್ತವೆ. ಮೇಷ್ಟ್ರು ಉಸಿರಾಟ ನಿಲ್ಲಿಸಿರುತ್ತಾರೆ , ಬರೆದಿಟ್ಟಿರುವ ಹಾಳೆಗಳು ಹಾರುತ್ತಿರುತ್ತವೆ , ಅಪೂರ್ವ ಮೇಷ್ಟ್ರು ಮುಖಕ್ಕೆ ಬಟ್ಟೆ ಮುಚ್ಚುತ್ತಾನೆ. ಖಾಲಿ ಮಹಡಿಯ ಮದ್ಯದಲ್ಲಿ ಹೆಣವಾಗಿ ಮಲಗಿರುವ ಮೇಷ್ಟ್ರು ಗಾಡ್ ಐ ವ್ಯೂ ಶಾಟ್

GOD EYE VIEW SHOT

J CUT :

EXT. REHEARSAL PLACE , EVENING

ನಾಟಕದ ಹುಡುಗರು ಹಾಗೂ ನಿರ್ದೇಶಕರು , ಎಲ್ಲರೂ ಸರ್ಕಲ್ ನಲ್ಲಿ ನಿಂತು ಕಣ್ಣು ಮುಚ್ಚಿ ಮೌನಾಚಾರಣೆ ಮಾಡುತ್ತಿದ್ದಾರೆ , ತಾಲೀಮು ಮಾಡುವ ಜಾಗದಲ್ಲಿ ಮೇಷ್ಟ್ರು ಫೋಟೋ ಇದೆ , ಫೋಟೋಗೆ ಹಾರ ಹಾಕಲಾಗಿದೆ.

NIRDESHAKA

ನಿಗೂಢವಾಗಿ ಬದುಕಿದ್ರು ಮೇಷ್ಟ್ರು , ಒಂದು ಕಾಲದಲ್ಲಿ ಪತ್ತೇದಾರಿ ಕಥೆಗಳನ್ನು ಬರೀತಿದ್ರು ಅನ್ನೋದ್ ಬಿಟ್ರೆ , ಇನ್ನೇನು ಅವರ ಬಗ್ಗೆ ನನಗೆ ಗೊತ್ತಿಲ್ಲ , ಹೀಗೆ ಹತ್ ವರ್ಷದ ಹಿಂದೆ ಒಂದು ನಾಟದ ಸೆಟ್ ವರ್ಕ್ ಗೆ ಹೋದಾಗ ಪರಿಚಯ ಆದೋರು , ವಿಚಿತ್ರವಾದ ಮನುಷ್ಯ . ಮಗುವಿನ ಮನಸಿತ್ತು ಅವರಿಗೆ , ಸ್ವಾರ್ಥ , ಅಸೂಯೆ , ದ್ವೇಷ ಯಾವುದನ್ನೂ ಇಟ್ಕೊಂಡೋರಲ್ಲ ಅವ್ರು , ( ಕಣ್ಣು ತುಂಬಿದೆ ) ಮಗು ಹುಟ್ಟಿದ್ ಖುಷಿನೂ ಅನುಭವಿಸೋಕ್ ಆಗ್ಲಿಲ್ಲ , ತಕ್ಷಣ ವಿಚಾರ ತಿಳಿದು ಶಾಕ್ ಅಗೋಯ್ತು , ( ದೀರ್ಘವಾಗಿ ಉಸಿರೆಳೆದು ಬಿಡುತ್ತಾರೆ ) ಓಕೆ ಗ್ರೂಪ್ ಸೀನ್ಸ್ ಸ್ವಲ್ಪ ಪಾಲಿಶ್ ಮಾಡ್ತೀನಿ ( ಚಪ್ಪಾಳೆ ) , ಸ್ವಪ್ನ , ನಿನ್ ಮೊನೊಲಾಗ್ ಸ್ವಪ್ಲ ಎಡಿಟ್ ಮಾಡಿದ್ದೀನಿ. ಆ ಪಾರ್ಟ್ ಲ್ಯಾಗ್ ಅನ್ನಿಸ್ತಿತ್ತು

CUT TO:

EXT. REHEARSAL PLACE , EVENING

ಸಂಭಾಷಣೆ ಮುಗಿಯುವ ವೇಳೆಗೆ ಸ್ವಪ್ನ , ಮಿಕ್ಕಿ , ಅಪೂರ್ವ , ಕಿಟ್ಟಿ , ಮೈಕಲ್ ಟಿ ಕುಡಿಯುತ್ತ ನಿರ್ದೇಶಕರ ಜತೆಗೆ ಮಾತನಾಡುತ್ತ ನಿಂತಿದ್ದಾರೆ..

MIKKI

( ಮಗುವಿನ ಫೋಟೋ ನೋಡುತ್ತಾ ) ಎಷ್ಟ್ ಕ್ಯೂಟ್ ಇದಾನೆ ಸರ್ , ಏನ್ ಹೆಸರು ಇಡಬೇಕಂತಿದ್ದೀರ ‼

MICHAEL

ನಿನ್ನೆ ತಾನೇ ಹುಟ್ಟಿದೆ , ಆಗ್ಲೇ ಹೆಸರು ಥಿಂಕ್ ಮಾಡಿರ್ತಾರೆ ನಿಂಗೆ

MIKKI

ನಾವ್ ಈಗ್ಲೇ ಏನ್ ಹೆಸರು ಇಡಬೇಕಂತ ಆಪ್ಷನ್ಸ್ ಇಟ್ಕೊಂಡಿಲ್ವ , ಹಾಗೆ ಸರ್ ತಲೆಲೂ ಯಾವದಾದ್ರು ನೇಮ್ ಇದ್ದೇಯಿರತ್ತೆ , ಅಲ್ವ ಸರ್

NIRDESHAKA

ಅರಿವು ‼

ಸಂಪೂರ್ಣ ನಿಶಬ್ಧ ಆವರಿಸಿಕೊಳ್ಳುತ್ತದೆ , ಟಿ ಕುಡಿಯುತ್ತಿದ್ದ ಅಪೂರ್ವ ನಿರ್ದೇಶಕನ ಕಡೆಗೆ ಗಮನ ಕೊಡುತ್ತಾನೆ , ಅಲ್ಲಿದ್ದವರೆಲ್ಲರೂ ಹೆಸರನ್ನು ಪುನರುಚ್ಚರಿಸುತ್ತಾರೆ.

ALL

ಅರಿವು ‼

SWAPNA

ಸಕ್ಕತ್ತಾಗಿದೆ ಸರ್ ಹೆಸರು ‼

NIRDESHAKA

ಮೇಷ್ಟ್ರು ಆಗಂತುಕ ಅಂತ ಒಂದು ಕಥೆ ಬರ್ದಿದ್ರು , ಅದ್ರಲ್ಲಿ ಇದ್ದಿದ್ ಪಾತ್ರ ಇದು , ಅದನ್ನ ಓದಿದಾಗ ಈ ಹೆಸರು ತುಂಬಾ ಇಷ್ಟ ಆಗಿತ್ತು ನನಗೆ. ಆಗ್ಲೇ ಡಿಸೈಡ್ ಮಾಡಿದ್ದೆ , ಗಂಡ್ ಮಗು ಹುಟ್ಟಿದ್ರೆ , ಅದೇ ಹೆಸರು ಇಡಬೇಕಂತ

ಅಪೂರ್ವನ ರಿಯಾಕ್ಷನ್

CUT TO:

SWA SCREENWRITERS ASSOCIATION

EXT. REHEARSAL PLACE , EVENING

ವೇದಿಕೆಯ ಮೇಲೆ ತಾಲೀಮು ನಡೆಯುತ್ತಿದೆ , ನಿರ್ದೇಶಕರು ಹಾಗೂ ಅಪೂರ್ವ ತುಸುದೂರದಲ್ಲಿ ಸಿಗರೇಟ್ ಸೇದುತ್ತ ನಿಂತಿದ್ದಾರೆ , ಅಪೂರ್ವ ಪ್ರಶ್ನೆ ಮಾಡುತ್ತಿದ್ದಾನೆ

APOORVA

ಆ ಕಥೆ ಪಬ್ಲಿಶ್ ಆಗಿತ್ತ ⁉

NIRDESHAKA

ಇಲ್ಲ , ಅವರು ಕುಡಿದಾಗೆಲ್ಲ ಸುಮ್ನೆ ಕಥೆಗಳನ್ನ ಗೀಚ್ತಿದ್ರು , ಯಾವ್ದು ಪಬಲಿಷ್ ಆಗಿಲ್ಲ , ನಾನು ಒಂದೆರಡು ಓದಿದ್ದೆ , ಅದ್ರಲ್ ಇಷ್ಟ ಆಗಿದ್ ಕಥೆ ಇದು. ಈ ಟೈಮ್ ಟ್ರಾವೆಲರ್ ಮೇಲೆ ಬರ್ದಿದ್ರು ,
ಆ ಟೈಮ್ ಟ್ರಾವೆಲರ್ ಹೆಸರು ಅರಿವು ‼

APOORVA

( ಕ್ಯೂರಿಯಸ್ ) ಆ ಕಥೆ ಸಿಗಬೋದ ‼

NIRDESHAKA

ನಮ್ಮನೇಲಿ ಒಂದೆರಡು ಫೈಲ್ ಗಳಿಟ್ಟಿದ್ದಾರೆ , ನೋಡ್ತೀನಿ ಸಿಕ್ರೆ ಫಾರ್ವರ್ಡ್ ಮಾಡ್ತೀನಿ.

J CUT :

EXT. XEROX SHOP , BENGALURU , NIGHT

ಅಪೂರ್ವ ಜೆರಾಕ್ಸ್ ಅಂಗಡಿಯಲ್ಲಿ ನಿಂತಿದ್ದಾನೆ , ಐದಾರು ಪುಟಗಳು ಪ್ರಿಂಟ್ ಆಗಿ ಬರುತ್ತಿವೆ ,

NIRDESHAKA

( ಫೋನ್ ಕರೆಯ ವಾಯ್ಸ್ ಓವರ್ ) ಸಿಕ್ಕಿದ್ ನಾಲ್ಕೇ ಪೇಜ್ ಅಪೂರ್ವ , ಅಷ್ಟು ಸ್ಕ್ಯಾನ್ ಮಾಡಿ ವಾಟ್ಸಾಪ್ ಮಾಡಿದ್ದೀನಿ ನೋಡು.

ಅಪೂರ್ವನ ಮುಖದಲ್ಲಿ ನೂರಾರು ಪ್ರಶ್ನೆಗಳು ಓಡಾಡುತ್ತೀವೆ. ಜೆರಾಕ್ಸ್ ಅಂಗಡಿಯನು ಸ್ಟೇಪ್ಲರ್ ಪಿನ್ ಮಾಡುತ್ತಾನೆ

CUT TO:

SCREENWRITERS ASSOCIATION

EXT. RAYADURGA VILLAGE . DAY

**September 5 . 1996**

ಅರಿವು ಗೋಪಾಲ್ ಕೃಷ್ಣ ಅರಸ್ ಅವರನ್ನು ಮೊದಲಬಾರಿಗೆ ಭೇಟಿಯಾದ ಸನ್ನಿವೇಶ.

**ಹಾಡು ಪ್ರಾರಂಭ**

ಅಮೇರಿಕ ಅಮೇರಿಕ ಚಿತ್ರದ ಪೋಸ್ಟರ್ , ಅಮೋಘವರ್ಷ ನೃಪತುಂಗನ ಸಾಹಿತ್ಯ ಕೊಡುಗೆ ಕುರಿತಾದ ಕಾರ್ಯಕ್ರಮದ ಪೋಸ್ಟರ್ ಹಾಗೂ ಒಂದು ಮೂಲೆಯಲ್ಲಿ ನಾಗಮಂಡಲ ಸಿನೆಮಾದ ಪೋಸ್ಟರ್ ಅಂಟಿಸಿರುವ ಬಸ್ ಸ್ಟಾಪ್ ಗೋಡೆಯ ಮುಂದೆ ಕೈನಲ್ಲಿ ಒಂದು ಸೂಟ್ಕೇಸ್ ಮತ್ತೊಂದು ಕೈಲಿ ಪಾಂಪ್ಲೆಟ್ ಹಿಡಿದು ಅರಿವು ಅವನ ಎದುರಿಗೆ ನಿಂತಿರುವ ಪ್ರೀಮಿಯರ್ ಪದ್ಮಿನಿ ಕಾರ್ ಸಮೀಪ ನಡೆದು ಬರುತ್ತಿದ್ದಾನೆ , ಕಾರ್ ಒಳಕ್ಕೆ ಗೋಪಾಲ್ ಕೃಷ್ಣ ಅರಸ್ ಕುಳಿತಿರುತ್ತಾರೆ , ಅರಿವು ತನ್ನ ಕೈಲಿ ಇರುವ ಕಾರ್ಯಕ್ರಮದ ಪಾಂಪ್ಲೆಟ್ ನೋಡುತ್ತಾ ಅವರನ್ನು ಮಾತನಾಡಿಸಲು ಮುಂದಾಗುತ್ತಾನೆ

ARIVU

ಸರ್ ನಮಸ್ಕಾರ

GOPAL KRISHNA URS

( ಕಡಲೆಕಾಳು ತಿನ್ನುತ್ತಿರುತ್ತಾನೆ ) ತಾವ್ಯಾರು ಅಂತ ಗೊತ್ತಾಗಿಲ್ಲ

ARIVU

ಅರಿವು ಅಂತ ಮೈಸೂರ್ ಇಂದ ಬಂದಿದ್ದೀನಿ ,

GOPAL KRISHNA URS

ಅರಿವು , ತುಂಬಾ ಚನ್ನಾಗಿದೆ ರೀ ನಿಮ್ ಹೆಸರು , ( ನಸು ನಗು ) ಏನಾಗ್ಬೇಕಿತ್ತು !?

MESHTRU / GOPAL KRISHNA URS

( ವಾಯ್ಸ್ ನರೇಷನ್ ) ಅರಿವು , ಮೊದಲ್ನೇ ಭೇಟಿಯಲ್ಲೇ ನನ್ನ ಸೆಳೆದುಬಿಟ್ಟಿದ್ದ , ಒಂದೆರಡು ಗಂಟೆಗಳ ಮಾತುಕತೆಯಲ್ಲೆ ನಂಗ್ ತುಂಬಾ ಹತ್ತಿರದೋನು ಅನ್ನಿಸೋಕ್ ಶುರುವಾದ..

SWA SCREENWRITERS ASSOCIATION

THIRD SONG

MONTAGES

ಹಾಡಿನ ಮೇಲೆ ಮಾಂಟೇಜ್ ಗಳು ಮೂವ್ ಆಗುತ್ತವೆ

೧. ಅರಿವು ಗೋಪಾಲ್ ಅವರ ಮನೆಗೆ ಬರುವುದು. ಎಲ್ಲರೂ ಒಟ್ಟಿಗೆ ಊಟ ಮಾಡುವುದು.
೨. ಗೋಪಾಲ್ ತನ್ನ ಬಳಿಯಿದ್ದ ಕಾಯಿನ್ ಕಲೆಕ್ಷನ್ ತೋರಿಸುತ್ತಿರುವುದು.
೩. ಅರಿವು ಕಲ್ಲಯ್ಯನ ಬಳಿ ಏಟು ತಿಂದು ಬಂದಾಗ ಗೋಪಾಲ್ ದೇವಕಿ ಯಶೋಧ ವೈದ್ಯರನ್ನು ಕರೆಸಿ ಶುಸ್ರೂಷೆ ಮಾಡುತ್ತಿರುವುದು.
೪. ಗೋಪಾಲ್ ಶೇವ್ ಮಾಡಿಕೊಳ್ಳುತ್ತಿದ್ದಾಗ ದೇವಕಿ ಅರಿವು ಮೇಲಿನ ಪ್ರೀತಿಯನ್ನು ಹೇಳಿಕೊಳ್ಳುವುದು.

INT. GOPAL KRISHNA HOUSE , DAY

**September 8 . 1996**

ಗೋಪಾಲ್ ಕೃಷ್ಣ ಶೇವ್ ಮಾಡಿಕೊಳ್ಳುತ್ತಿದ್ದಾರೆ , ಅರಿವು ಕಾರ್ ಅಲ್ಲಿ ಹೊರಟಿದ್ದೆ , ದೇವಕಿ ಭಾವನ ಜತೆಗೆ ತನ್ನ ಪ್ರೀತಿಯ ವಿಚಾರವನ್ನು ತಿಳಿಸಲು ಮುಂದಾಗುತ್ತಾಳೆ.

DEVAKI

ಭಾವ , ಅರಿವು ಬಗ್ಗೆ ನಿಮಗೆ ಏನನ್ನಿಸತ್ತೆ !!

GOPAL KRISHNA URS

ನಿಂಗೇನನ್ನಸತ್ತೆ ಅದನ್ನ ನೇರವಾಗ್ ಹೇಳು ,

DEVAKI

ನಂಗ್ ತುಂಬಾ ಇಷ್ಟ ಆದ್ರು , ಅವ್ರಲ್ಲಿ ಏನೋ ಆರ ಇದೆ ಅನ್ಸತ್ತೆ , ತುಂಬಾ ಅಟ್ರಾಕ್ಟ್ ಮಾಡ್ಬಿಟ್ರು ನನ್ನ , ಆದ್ರೆ ಅವ್ರು ಯಾರಂತನೇ ಗೊತ್ತಿಲ್ಲ

GOPAL KRISHNA URS

ಯಾಕೆ ಜಾತಿ ಸಮಸ್ಯೆನಾ !!

DEVAKI

ಏ ಹಾಗಲ್ಲ

SWA SCREENWRITERS ASSOCIATION

GOPAL KRISHNA URS

ನನ್ ಆಫೀಸ್ ಎದುರುಗಡೆ ನಿಮ್ಮಕ್ಕ ಗಾರ್ಮೆಂಟ್ಸ್ ಕೆಲಸಕ್ ಬರ್ತಿದ್ಲು , ಒಂದಿನ ಜೋರಾಗ್ ಮಳೆ ಬಂತು ಅಂತ ನಮ್ ಆಫೀಸ್ ಚಾವಣಿ ಕೆಳಗೆ ಬಂದು ನನಿಂತ್ಕೊಂದ್ಲು ೨ ಗಂಟೆ , ಎರಡೇ ಗಂಟೇಲಿ ಒಬ್ರಿಗೊಬ್ರು ಪರಿಚಯ ಆದ್ವಿ , ಹತ್ತಿರ ಆದ್ವಿ

DEVAKI

ಗೊತ್ತು , ಇನ್ನೆರಡ್ ತಿಂಗಳಲ್ಲಿ ಮದುವೆನೇ ಆದ್ರಿ ‼ , ಆದ್ರೂ

GOPAL KRISHNA URS

ರೀಸನ್ ಇಸ್ ಪವರ್ಲೆಸ್ ಇನ್ ದಿ ಎಕ್ಸ್ಪ್ರೆಷನ್ ಆಫ್ ಲವ್ , ಮನಸಿಗ್ ಹಿಡಿಸ್ತಾ ಹೇಳಿಬಿಡಬೇಕು , ಜಾಸ್ತಿ ಯೋಚಿಸಕ್ ಹೋಗ್ಬಾರ್ದು , ಕಣ್ಣ್ ಸುಳ್ ಹೇಳ್ಬೋದು , ಮನಸು ಸುಳ್ ಹೊಳೋದಿಲ್ಲ.

ದೇವಕಿ ಸ್ಮೈಲ್ ಮಾಡುವಳು . ಹಾಡು ಪುನರಾರಂಭವಾಗುತ್ತದೆ

I/E. GOPAL KRISHNA HOUSE , DAY

EXT. SHANTHALA BRIDGE , DAY

EXT. RAYADURGA ROADS , DAY

INT. GOPAL KRISHNA HOUSE , NIGHT

INT. KUVEMPU BAVANA . DAY

INT. GOPAL KRISHNA HOUSE , ROOM , NIGHT

INT. GOPAL OFFICE , DAY

MONTAGES

೧. ದೇವಕಿ ಅರಿವು ಹತ್ತಿರವಾಗುತ್ತಾರೆ , ಕುಟುಂಬದ ನಾಲ್ಕೂ ಜನ ಕಾರ್ ಅಲ್ಲಿ ಸುತ್ತಾಡುತ್ತಾರೆ.
೨. ಶಾಂತಲಾ ಬ್ರಿಡ್ಜ್ ಮೇಲೆ ನಾಲ್ಕೂ ಜನ ನಿಂತಿದ್ದಾರೆ.
೩. ಅರಿವು ಗೋಪಾಲ್ ಜತೆಗೆ ಟೈಪ್ ರೈಟಿಂಗ್ ಕಲಿಯುತ್ತಾನೆ.
೪. ನಾಲ್ಕೂ ಜನ ಸುಂದರ ಕುಟುಂಬದಂತೆ ಇರುತ್ತಾರೆ.
೫. ದೇವಕಿ ಹಾಗೂ ಅರಿವಿಗೆ ಕುವೆಂಪು ಕಲಾಭವನದಲ್ಲಿ ಮಂತ್ರ ಮಾಂಗಲ್ಯವಾಗುತ್ತದೆ , ರತ್ನಾಕರ ಶಾಸ್ತ್ರಿಗಳು ಕುವೆಂಪು ರಂಗಮಂದಿರದಲ್ಲಿ ಮದುವೆ ಮಾಡಿಸುತ್ತಾರೆ.

MESHTRU / GOPAL KRISHNA URS

( ವಾ . ಓ ) ಮೈಸೂರಿನಲ್ಲಿ ಯಾರಿಲ್ಲ , ಬಿಸಿನೆಸ್ ಕೂಡ ಡೌನ್ ಆಗ್ಬಿಟ್ಟಿದೆ , ನಾನು ಇದೇ ಮನೇಲಿರ್ತೀನಿ , ಇಲ್ಲೇ ಯಾವ್ದಾದ್ರು ಕೆಲಸ ನೋಡ್ಕೊಳ್ತೀನಿ ಅಂತ ಹೇಳಿದ., ನಾನು ಕೆಲಸ ಮಾಡುತಿದ್ದ ಪತ್ರಿಕೆಯಲ್ಲೇ ಕರೆಸ್ಪಾಂಡೆಂಟ್ ಆಗಿ ಸೇರ್ಕೊಂಡ..

ಹಾಡು ಮುಂದುವರೆಯುತ್ತದೆ

೬. ಅರಿವು ಹಾಗೂ ಗೋಪಾಲ್ ಒಂದೇ ಕಾರಿನಲ್ಲಿ ಓಡಾಡುತ್ತಿರುವುದು ,
೭. ರತ್ನಾಕರ ಶಾಸ್ತ್ರಿಗಳನ್ನು ಭೇಟಿಯಾಗುವುದು.
೮. ಅರಿವು ಆಫೀಸಿನಲ್ಲಿ ಒಮ್ಮೆ ಕೆಲಸಮಾಡುವಾಗ ಗೋಪಾಲ್ ಬೇಜಾರಿನಲ್ಲಿರುವುದನ್ನು ನೋಡುವುದು.

ಹಾಡು ಮುಕ್ತಾಯ

CUT TO:

EXT. SHANTHALA BRIDGE , EVENING

ಬ್ರಿಡ್ಜ್ ಸಮೀಪದಲ್ಲೇ ಪ್ರೀಮಿಯರ್ ಪದ್ಮಿನಿ ಕಾರ್ ನಿಂತಿದೆ , ಅರಿವು ಹಾಗೂ ಗೋಪಾಲ್ ಬ್ರಿಡ್ಜ್ ಮೇಲೆ ನಿಂತು ಹರಿಯುವ ನದಿಯನ್ನು ನೋಡುತ್ತಾ ಸಂಜೆಗಾಳಿಯಲ್ಲಿ ಮಗ್ನರಾಗಿದ್ದಾರೆ. ಸಂಪೂರ್ಣ ನಿಶಬ್ದ ಆವರಿಸಿದೆ. ಗೋಪಾಲ್ ಬೇಜಾರಿನಲ್ಲಿರುವುದನ್ನು ಗಮನಿಸಿ ಅರಿವು ಮಾತನಾಡಲು ಮುಂದಾಗುತ್ತಾನೆ

ARIVU

ತುಂಬಾದಿನದಿಂದ ನೋಡ್ತಿದ್ದೀನಿ , ಮೊದಲಿನ ಉತ್ಸಾಹ , ನಿಮ್ಮ ಮಾತುಗಾರಿಕೆಯೆಲ್ಲ ಕಳೆದುಹೋಗಿದೆ ಅನ್ನಿಸ್ತಿದೆ !!

ಗೋಪಾಲ್ ಕೃಷ್ಣ ಮಾತನಾಡುವುದಿಲ್ಲ , ಅರಿವು ಕೂಡ ಮಾತನಾಡುವುದಿಲ್ಲ , ಇಬ್ಬರೂ ಬ್ರಿಡ್ಜ್ ಎಡ್ಜ್ ಅಲ್ಲಿ ನಿಂತು ನದಿಯನ್ನು ನೋಡುತ್ತಿದ್ದಾರೆ , ಸಂಪೂರ್ಣ ನಿಶಬ್ದತೆ ಆವರಿಸಿಕೊಂಡಿದೆ , ಗೋಪಾಲ್ ದೀರ್ಘವಾಗಿ ಉಸಿರೆಳೆದು ಬಿಡುತ್ತ ಮಾತನಾಡಲು ಆರಂಭಿಸುತ್ತಾನೆ.

GOPAL KRISHNA URS

ಸ್ಪರ್ಮ್ ಕೌಂಟ್ ಕಮ್ಮಿಯಿದೆ , ಮಕ್ಕಳಾಗೋ ಸಾಧ್ಯತೆ ತುಂಬಾ ಕಮ್ಮಿ ಅಂದ್ರು ಡಾಕ್ರು.. ಆಯುರ್ವೇದ , ಇಂಗ್ಲಿಷ್ ಮೆಡಿಸನ್ ಎಲ್ಲ ಟ್ರೈ ಮಾಡ್ತಿದ್ದೆ , ಲೋಕಲ್ ಟ್ಯಾಬ್ಲೇಟ್ಸ್ ಉ ಬಿಟ್ಟಿಲ್ಲ , ಅಡ್ವರ್ಸ್ ಎಫೆಕ್ಟ್ ಆಗತ್ತೆ ನಿಲ್ಲಿಸ್ಬಿಡಿ ಅಂದ್ರು .. ನನ್ಗದಕ್ಕೆ ಬೇಜಾರಾಗ್ತಿಲ್ಲ ಅರಿವು , ಆಗದೆಯಿದ್ರೆ ದತ್ತು ತಗೊಳೋಣ ಅಂತಿದ್ದೀನಿ , ಬೇಜಾರೇನಂದ್ರೆ ಸೊಸೈಟಿ ಯಶೋಧ ಬಗ್ಗೆ ಮಾತಾಡೋಕ್ ಶುರುಮಾದತ್ತೆ. ಅವಳು ಇನ್ ಕೆಫೇಬಲ್ , ಬಂಜೆ ಅಂತ !!

ARIVU

ಗೋಪಾಲ್ ಸರ್ ಪ್ರಪಂಚದ್ ಮಾತಿಗ್ ಕಿವಿಕೊಟ್ಕೊಂಡ್ ಕೂತ್ರೆ ಆಯಿತ್ ಕತೆ , ಕೆಲವೊಂದನ್ನ ಫೇಸ್ ಮಾಡ್ಲೇಬೇಕಲ್ಲ !!

ಗೋಪಾಲ್ ಉತ್ತರಿಸುವುದಿಲ್ಲ , ಸಂಗೀತ ತಾರಕಕ್ಕೇರುತ್ತದೆ.

DISSOLVE TO:

EXT. RAYADURGA VILLAGE . DAY

ಕಾರ್ ರಸ್ತೆಯ ಮೂಲೆಯಲ್ಲಿದೆ , ಗೋಪಾಲ್ ಅಳುತಿದ್ದಾರೆ , ಯಶೋಧ ಸಮಾಧಾನ ಮಾಡುತ್ತಿದ್ದಾಳೆ

MESHTRU / GOPAL KRISHNA URS

ಮಗು ದತ್ತು ತಗೋಳದ್ರ ಬಗ್ಗೆ ಯೋಚಿಸ್ತಿದ್ವಿ , ಅಷ್ಟರಲ್ಲೇ ದೇವಕಿ ಗರ್ಭಿಣಿಯಾದ ವಿಚಾರ ತಿಳಿತು ..

DISSOLVE TO:

INT. GOPAL KRISHNA HOUSE , ROOM 2 , NIGHT

ಗೋಪಾಲ್ ಹಾಗೂ ಯಶೋಧ ತಮ್ಮ ರೂಮ್ ಅಲ್ಲಿ ಮಲಗಿದ್ದಾರೆ , ಯಶೋಧ ಗೋಪಾಲ್ ಎದೆಯ ಮೇಲೆ ತಲೆಯಿಟ್ಟು , ಮಾತನಾಡಲು ಮುಂದಾಗುತ್ತಾಳೆ.

YASHODHA

ಗೋಪಾಲ್ , ನಾವ್ ಈಗ್ಲೇ ಮಗು ದತ್ತು ತಗೋಳೋದು ಬೇಡ , ದೇವಕಿಗೆ ಮಗುವಾಗಲಿ , ಒಂದೆರಡ್ ವರ್ಷ ಕಾಯೋಣ ಅನ್ನಿಸ್ತಿದೆ , ಹರಿಕೆ ಹೊತ್ಕೊಂಡಿದ್ದೀನಿ , ತಾಯಿ ನೋಡ್ಕೋತಾಳೆ

(CONT'D)

GOPAL KRISHNA URS

ಹುಚ್ಚಿ ಥರ ಮಾತಾಡ್ಬೇಡ ಯಶು , ಯಾವ್ ದೇವರ
ಕೈಲೂ ಏನೂ ಮಾಡಕ್ಕಾಗೋಲ್ಲ , ಸತ್ಯ ಇಷ್ಟೇ , ನನಗೆ
ಮಗು ಕೊಡೋದಕ್ಕೆ ಆಗೋಲ್ಲ , ಐಯಾಮ್ ಇನ್
ಕೆಪೆಬಲ್ , ನೀನು ತಪಸ್ಸು , ಆಚರಣೆ , ವ್ರತ ಏನ್
ಮಾಡಿದ್ರು ಈ ಸತ್ಯ ಸುಳ್ಳಾಗಲ್ಲ , ನಂಕೈಲಾಗೋಲ್ಲ ಅಷ್ಟೇ.
ಐ ಆಮ್ ಇಂಕೆಫೇಬಲ್

ಕಣ್ಣಂಚಲ್ಲಿ ನೀರು ತುಂಬಿರುತ್ತದೆ , ಮತ್ತೊಂದು ದಿಕ್ಕಿಗೆ ತಿರುಗಿ ಮಲಗುತ್ತಾನೆ. ನಿದ್ರೆ ಬರುವುದಿಲ್ಲ ,

CUT TO:

I/E. GOPAL KRISHNA HOUSE , NIGHT

ರೂಮ್ ನಿಂದ ಹೊರಕ್ಕೆ ಬರುತ್ತಾನೆ. ರೈಟಿಂಗ್ ಟೇಬಲ್ ಮುಂದೆ ಕೂರುತ್ತಾನೆ , ಟೇಬಲ್ ಲ್ಯಾಂಪ್ ಅನ್ನು ಆನ್ ಆಫ್ ಮಾಡುತ್ತಿರುತ್ತಾನೆ , ಕಿಟಕಿಯ ಹೊರಕ್ಕೆ ಅರಿವು ನಿಂತಿರುವುದು ಕಾಣುತ್ತದೆ , ಅರಿವು ಕಾರ್ ಬಾನೆಟ್ ಮೇಲೆ , ಸೂಟ್ ಕೇಸ್ ಇಟ್ಟು ಕೈಗೆ ವಾಚ್ ಹಾಕಿಕೊಳ್ಳುತ್ತಾನೆ , ಹಾಗೂ ವಾಚ್ ಅಲ್ಲಿ ಗ್ರೀನ್ ಲೈಟ್ ಪಾಪ್ ಆಪ್ ಆಗುತ್ತದೆ , ವಾಚ್ ಇಂದ ಎಲ್ ಈ ಡಿ ಸ್ಕ್ರೀನ್ ಓಪನ್ ಆಗುತ್ತದೆ , ಅದರಲ್ಲಿ ಏನೇನೋ ಸೆಟಿಂಗ್ ಮಾಡುತ್ತಿರುತ್ತಾನೆ , ಮತ್ತೆ ಆ ಸ್ಕ್ರೀನ್ ಆಫ್ ಆಗುತ್ತದೆ , ಅತ್ತಿತ್ತ ಒದ್ದಾಡುತ್ತಾನೆ , ವಾಚ್ ಅಲ್ಲಿ ಲೈಟ್ ಪಾಪ್ ಅಪ್ ಆಗುತ್ತದೆ. ಓವರ್ ಎಕ್ಸ್ಪೋಸ್ಡ್ ಆಗುತ್ತದೆ , ಅರಿವು ಆ ಬೆಳಕಿನಲ್ಲಿ ಮಾಯವಾಗುತ್ತಾನೆ.

ಮತ್ತೆ ಕತ್ತಲಾಗುತ್ತದೆ.

ಗೋಪಾಲ್ ಗೆ ತಾನು ಏನು ನೋಡಿದೆ ಎನ್ನವುದೇ ತಿಳಿಯುವುದಿಲ್ಲ.

MESHTRU / GOPAL KRISHNA URS

ನಾನು ನೋಡ್ತಿರೋದೇನು , ಆ ಕ್ಷಣಾಕ್ ಅಲ್ಲಾಗಿದ್ದೇನು ,
ಏನೂ ಅರ್ಥ ಆಗ್ಲೆಯಿಲ್ಲ , ಹಾಗೆ ನಡೆದು ಸೂಟ್ ಕೇಸ್
ಇಟ್ಟಿದ್ದ ಜಾಗದ ಹತ್ತಿರ ಹೋದೆ , ಆ ಸೂಟ್ಕೇಸ್ ಓಪನ್
ಆಗಿತ್ತು . ಅದರಲ್ಲಿ ಎರಡು ವಿಚಿತ್ರವಾದ
ಕೈಗಡಿಯಾರಗಳಿದ್ವು , ಸಮಯ ತೋರಿಸ್ತಿರ್ಲಿಲ್ಲ , ಅದನ್ನ
ಮುಟ್ಟಿದ್ದೆ ಬೆಳಕು ಬರೋದಕ್ಕೆ ಶುರುವಾಯ್ತು. ಅದೊಂದು
ಪುಟ್ಟ ಕಂಪ್ಯೂಟರ್ ರೀತಿ ಕಾಣಿಸ್ತು ..

ಗೋಪಾಲ್ ಆ ವಾಚ್ ಮುಟ್ಟಿದ್ದೆ ವಿಚಿತ್ರವಾಗಿ ಬರುವ ಬೆಳಕನ್ನು ನೋಡುತ್ತಾನೆ , ಗಾಭರಿಯಾಗುತ್ತದೆ , ಹೆದರಿ ಅದನ್ನು ಮತ್ತೆ ಸೂಟ್ ಕೇಸ್ ಅಲ್ಲಿ ಇಡುತ್ತಾನೆ , ಆ ಐ ಡ್ರಾಪ್ ಬಾಕ್ಸ್ ಮೇಲೆ , ಫ್ರೇಮ್ಸ್ – ಚೇಂಗಿಂಗ್ ಟೈಮ್ ಲೈನ್. ಅಂತ ಬರೆದಿರುತ್ತೆ , ಹಾಗೂ ಅವರ್ ಪ್ರೌಡ್ ಇನೋವೇಷನ್ , ಪ್ಲೆ ವಿತ್ ಟೈಮ್ ಅಂತೆಲ್ಲ ಬರೆದಿರುತ್ತೆ.

(CONT'D)

(CONT'D)

MESHTRU / GOPAL KRISHNA URS

ತುಂಬಾ ಹೆದರಿಕೆ ಆಯ್ತು , ವಸ್ತುಗಳನ್ನೆಲ್ಲ ಅದರ ಒಳಗೆ
ಹಾಕಿ ಸೂಟ್ಕೇಸ್ ಮುಚ್ಚಿಟ್ಟೆ

DISSOLVE TO:

INT. GOPAL KRISHNA HOUSE , DAY

ಗೋಪಾಲ್ ಶೇವ್ ಮಾಡಿಕೊಳ್ಳುತ್ತಿರುತ್ತಾನೆ , ದೇವಕಿ ನಡೆದುಬಂದು ಮಾತನಾಡಿಸಲು ಆರಂಭಿಸುತ್ತಾಳೆ.

DEVAKI

ಭಾವ , ಅರಿವುನ್ ನೋಡಿದ್ರು , ರಾತ್ರಿಯಿಂದ ಕಾಣ್ತಿಲ್ಲ
ಅವ್ನು !!

ಗೋಪಾಲ್ ಗಾಭರಿಗೆ , ಕೆನ್ನೆ ತರಚಿಕೊಳ್ಳುತ್ತಾನೆ.

DEVAKI (CONT'D)

ಏನಾಯ್ತು !!

GOPAL KRISHNA URS

ಏನಿಲ್ಲ ಸ್ವಲ್ಪ ತಾಗಿಸ್ಕೊಂಡೆ   ಅರಿವು , ಹಾ , ಮೈಸೂರಿಗೆ
ಹೋಗ್ಬೇಕು , ಏನೋ ಕೆಲಸ ಅರ್ಧಕ್ಕೆ ನಿಂತಿದ್ದೆ ಅಂತ
ಹೇಳಿ ಹೋದ್ನಪ್ಪಾ !!

DEVAKI

ಹಾಗಂದ್ರ !! ಎಲ್ಲೇ ಹೋಗೋದಿದ್ರೂ ನಂಗ್ ಹೇಳೇ
ಹೋಗೋರು , ರಾತ್ರಿ ಹನ್ನೆರಡ್ ಗಂಟೆ ತನಕ ರೂಮ್
ಅಲ್ಲೆಯಿದ್ರು , ನಂಗೇನು ಹೇಳಿಲ್ವಲ್ಲ !!

GOPAL KRISHNA URS

ಊರಿಂದ ಯಾರೋ ಬಂದಿದ್ರಮ್ಮ , ನೀವೆಲ್ಲ ಮಲಗಿದ್ರಿ
ಅಂತ ಹಾಗೆ ಹೊರಟ , ತುಂಬಾ ಅರ್ಜೆಂಟಿಲಿದ್ದ ..

ದೇವಕಿ ಪ್ರಶ್ನಾರ್ಥಕ ಭಾವದಲ್ಲಿ ನಿಂತಿರುತ್ತಾಳೆ.

CUT TO:

EXT. SHANTHALA RIVER BANK , DAY

ಗೋಪಾಲ್ ತನ್ನ ಕಾರ್ ಬಾನೆಟ್ ಮೇಲೆ ಸೂಟ್ಕೇಸ್ ಇಟ್ಟು ಅದನ್ನು ತೆರೆಯಲು ಪ್ರಯತ್ನ ಪಡುತ್ತಾನೆ , ಅದು ಓಪನ್ ಆಗುವುದಿಲ್ಲ , ಎಷ್ಟೇ ಪ್ರಯತ್ನ ಪಟ್ಟರು ತೆರೆಯುವದಿಲ್ಲ , ಸೂಟ್ಕೇಸ್ ಹಿಂದೆ , ಒಂದು ಸಣ್ಣ ಬಟನ್ ಇರುತ್ತದೆ , ಅದನ್ನು ಒತ್ತುತ್ತಾನೆ , ಕಾಮೆರಾ ಆನ್ ಆಗಿ ಇವನ ಮುಖ ಕಾಣಿಸುತ್ತದೆ , ವಿಪರೀತವಾಗಿ ಹೆದರುತ್ತಾನೆ

ಸೂಟ್ಕೇಸ್ ಇಂದ ಫೇಸ್ ರೆಕಗ್ನಿಷನ್ ಇನಿಷಿಯೇಟೆಡ್ ಎಂದು ಶಬ್ದಬರಲು ಪ್ರಾರಂಭವಾಗುತ್ತದೆ ಗೋಪಾಲ್ ಹೆದರಿ ಆ ಬಟನ್ ಆಫ್ ಮಾಡುತ್ತಾನೆ , ಸೂಟ್ಕೇಸ್ ಅನ್ನು ವಿಚಿತ್ರವಾಗಿ ನೋಡುತ್ತಾನೆ ಪ್ಲೇ ವಿತ್ ಟೈಮ್ , ಟೈಮ್ ಟ್ರಾವೆಲ್ ಗೈಡ್ಲೈನ್ಸ್ ಅಂತ ಸ್ಕ್ರೀನ್ ಮೇಲೆ ನಾಲ್ಕೈದು ಟ್ಯಾಬ್ಸ್ ಓಪನ್ ಆಗಿ ಕ್ಲೋಸ್ ಆಗುತ್ತದೆ.

CUT TO:

INT. GRANTHALAYA , RAYADURGA , DAY

MONTAGES

೧. ಗೋಪಾಲ್ ಗ್ರಂಥಾಲಯದಲ್ಲಿ ಟೈಮ್ ಟ್ರಾವೆಲ್ ಕುರಿತು ನಾಲಕ್ಕೈದು ಪುಸ್ತಕಗಳನ್ನು ನೋಡುತ್ತಾನೆ.
೨. ಏನೂ ಅರ್ಥವಾಗುವುದಿಲ್ಲ , ಟೈಮ್ ಟ್ರಾವೆಲ್ ಪುರಾವೆಗಳಿದ್ದ ಕೆಲವು ಆರ್ಟಿಕಲ್ಸ್ ಓದುತ್ತಾನೆ , ವಿಚಿತ್ರವೆನಿಸುತ್ತದೆ.

J CUT :

INT. GOPAL OFFICE , DAY

ಗೋಪಾಲ್ ಹಾಗೂ ರತ್ನಾಕರ ಶಾಸ್ತ್ರಿಗಳು ಊಟ ಮಾಡುತ್ತಿದ್ದಾರೆ , ಗೋಪಾಲ್ ತನ್ನಲ್ಲಿರುವ ಪ್ರಶ್ನೆಯೊಂದನ್ನು ಹಂಚಿಕೊಳ್ಳಲು ಮುಂದಾಗುತ್ತಾನೆ.

GOPAL KRISHNA URS

ಟೈಮ್ ಟ್ರಾವೆಲ್ ಮಾಡಬೋದ ಅಂತ ⁉ ,
ಇವತ್ತೊಂದೆರಡು ಪುಸ್ತಕಗಳನ್ನ ನೋಡಿದೆ , ಟೈಮ್
ಟ್ರಾವೆಲ್ ಮಾಡಿರೋ ಪುರಾವೆಗಳಿವೆ ಅಂತ ಕೊಟ್ಟಿದ್ರು

RATNAKARA SHASTRI

ಫಿಕ್ಷನ್ ಗಳಲ್ಲಿ ಮಾತ್ರ ಸಧ್ಯ ನೋಡಿ , ( ಸ್ಮೈಲ್ ) ಸೈನ್ಸ್ ಏನ್ ಹೇಳತ್ತೇ , ಎರಡ್ ರೀತಿ ಟೈಮ್ ಟ್ರಾವೆಲ್ ಮಾಡಬೋದು , ಒಂದು ಗ್ರಾವಿಟೇಶನಲ್ ಫುಲ್ ಸಹಾಯದಿಂದ , ಮತ್ತೊಂದು ಸ್ಪೀಡ್ ಆಫ್ ಲೈಟ್ ನ ದಾಟಿ ಹೋಗೋದ್ರ ಮೂಲಕ , ಈಗಿನ ಮನುಷ್ಯ ಪ್ರಯತ್ನಗಳಲ್ಲಿ ಅದು ಸದ್ಯ ಇಲ್ಲ ಅಂತ ಹೇಳಬಹುದು , ಟೈಮ್ ಟ್ರಾವೆಲ್ ಮಾಡಿರೋ ಪುರಾವೆ ಸಿಕ್ಕಿರೋದೆಲ್ಲ , ಬುಲ್ಶಿಟ್ ಕಣ್ರೀ

GOPAL KRISHNA URS

ಯಾವುದಾದ್ರೂ ವಾಚ್ , ಅಥವಾ ಐ ಡ್ರಾಪ್ ಮೂಲಕ ಟೈಮ್ ಟ್ರಾವೆಲ್ ಮಾಡಬೋದ

RATNAKARA SHASTRI

ಗೋಪಾಲ್ , ರಾತ್ರಿ ಯಾವ್ ಬ್ರಾಂಡ್ ಹೊಡಿದ್ರಿ ( ನಗುವನು ) ಅಷ್ಟೆಲ್ಲ...

SMASH CUT TO:

INT. APOORVA HOUSE , NIGHT

ಅಪೂರ್ವ ಕೊನೆಯ ಹಾಳೆಯಲ್ಲಿದ್ದಾನೆ , ಕೊನೆಯ ಸಾಲು ಓದಿ ಮುಗಿಸುತ್ತಾನೆ , ಎಲ್ಲವು ಅರ್ಥಕ್ಕೆ ನಿಂತಿದೆ , ಅಪೂರ್ವ ಕಣ್ಣು ಬ್ಲಿಂಕ್ ಮಾಡುತ್ತಾನೆ. ಅಪೂರ್ವನ ಎಡಬದಿಯಲ್ಲಿ ಮೇಷ್ಟ್ರು , ಬಲಬದಿಯಲ್ಲಿ ಗೋಪಾಲ್ ಕೃಷ್ಣ ಕುಳಿತಿದ್ದಾರೆ.

APOORVA

( ಮೈಂಡ್ ವಾಯ್ಸ್ ) ಒಂದೊಂದೇ ಪ್ರಶ್ನೆಗಳಿಗೆ ಉತ್ತರಗಳು ಸಿಕ್ತಿವೆ ಅನ್ಕೊಂಡಿದ್ದೆ , ಆದ್ರೆ ಉತ್ತರಾಗೆಲ್ಲ ಪ್ರಶ್ನೆಗಳಾಗ್ತಿದ್ವು .

CUT TO:

EXT. APOORVA HOUSE , NIGHT

ಅಪೂರ್ವ ಫೋನ್ ಕರೆಯಲ್ಲಿ ನಿರತನಾಗಿದ್ದಾನೆ , ಮುಖದಲ್ಲಿ ಸಾಕಷ್ಟು ಪ್ರಶ್ನೆಗಳಿರುವುದು ಕಾಣುತ್ತಿದೆ. ಅಪೂರ್ವನ ಹಿಂದೆ ಮೇಷ್ಟ್ರು , ಗೋಪಾಲ್ , ಯಶೋಧ , ದೇವಕಿ ಔಟ್ ಆಫ್ ಫೋಕಸ್ ಅಲ್ಲಿ ನಿಂತಿದ್ದಾರೆ.

APOORVA

ಅಮ್ಮ , ಚಿಕ್ಕಮ್ಮಂಗ್ ಮದುವೆ ಆಗಿತ್ತ ‼

AMMA

( ತೊದಲುತ್ತಾಳೆ ) ಮದುವೆ ‼ , ಇಲ್ಲ
ಆಶ್ರಮದಲ್ಲಿದ್ದಾಗಲೇ ಖಾಯಿಲೆ ಬಂದು ತೀರಿಕೊಂಡ್ಲು ,
ಯಾಕೆ ⁉

APOORVA

ಅರಿವು , ಈ ಹೆಸರಿನೋರ್ ಯಾರಾದ್ರೂ ನಿಂಗೊತ್ತಾ !

ತುಸು ಸಮಯ ಸಂಪೂರ್ಣ ನಿಶಬ್ದ ಆವರಿಸುತ್ತದೆ.

AMMA

ಊರಿಗ್ ಬಾ ಮಾತಾಡನ

APOORVA

ಸೊ , ಚಿಕ್ಕಮ್ಮಂಗ್ ಮದುವೆ ಆಗಿತ್ತು ‼

AMMA

ಇಲ್ಲ ಕಣೋ , ಆಶ್ರಮದಲ್ಲಿದ್ದಾಗಲೇ

APOORVA

ಅರಿವು ಅಂತ ಯಾರಾದ್ರೂ ಗೊತ್ತಾ ‼

AMMA

ಏನಾಯ್ತು , ಯಾಕೇನೇನೋ ಮಾತಾಡ್ತಿದ್ಯ ‼

APOORVA

ಇನ್ನೂ ಎಷ್ಟ್ ಸುಳ್ಳ್ ಹೇಳಿದ್ಯಮ್ಮ , ಯಾಕೆಲ್ಲ
ಮುಚ್ಚಿಟ್ಕೊಂಡೆ , ಈಗ್ಲಾದ್ರೂ ಹೇಳು ,
( ಕೂಗುವನು ) , ಅರಿವು ಅಂತ ನಿಂಗ್ಯಾರಾದ್ರೂ ಗೊತ್ತ ‼

SWA SCREENWRITERS ASSOCIATION

AMMA

ಅಪ್ಪು ಊರಿಗ್ ಬಾ , ನೋಡ್ಬೇಕು ಅನ್ನಿಸ್ತಿದೆ , ಕಾಲ್ ವಿಪರೀತ ನೋವ್ವು ಕಣೋ , ಊಟ ಆಯ್ತಾ !

APOORVA

ನಂಗ್ ಉತ್ರ ಬೇಕು

AMMA

ನಿಜವಾಗ್ಲೂ ನಂಗ್ಯಾರೂ ..

APOORVA

ನಂಗ್ ಉತ್ರ ಬೇಕು

AMMA

ಮನೆಗ್ ಬಾ ಮಾತಾಡಣ

APOORVA

ಈಗ್ಲೇ ಬೇಕು ‼

AMMA

ಅರಿವು ನಿನ್ ತಂದೆ , ದೇವಕಿ ನಿನ್ನಮ್ಮ , ನಾನ್ ನಿನ್ನ ಸಾಕುತಾಯಿ ಕಣೋ ‼

ನಿಶಬ್ದ ..

ಅಮ್ಮ ಫೋನ್ ಅಲ್ಲಿ ಹಲೋ ಹಲೋ ಎನ್ನುತ್ತಾರೆ

AMMA (CONT'D)

ಈ ವಿಚಾರ ನಿಂಗ್ ತಿಳಿಸಿದ್ರೆ ..

APOORVA

ಅವ್ರಿಗೆಲ್ಲಿದ್ದಾರಮ್ಮ ‼

AMMA

ಅರಿವು ಮನೆ ಬಿಟ್ಟೋದೋರು ಹಿಂತಿರುಗ್ಲೆಯಿಲ್ಲ   ಇನ್ನು ದೇವಕಿ ‼

SWA SCREENWRITERS ASSOCIATION

APOORVA

ದೇವಕಿ ⁉ ..

AMMA

ನಿಂಗೆ ಅರಿವು ಬಗ್ಗೆ ಹೇಗ್ ಗೊತ್ತಾಯ್ತು !

APOORVA

ಸತ್ಯ ಕೊನೆಗೂ ಗೊತ್ತಾಗಲೇಬೇಕಲ್ಲ , ಹೇಳು , ಚಿಕ್ಕಮ್ಮ
ಹುಫ್ , ಅಮ್ಮಂಗ್ ಏನಾಯ್ತು ⁉

AMMA

ಅರಿವು ಮನೆ ಬಿಟ್ಟು ಹೋದ್ಮೇಲೆ , ನಮ್ಮನೆ ವಾತಾವರ್ಣನೆ
ಬದಲಾಗಿ ಹೋಗಿತ್ತು.. ಗೋಪಾಲ್ ಅನ್ಯಾಯವಾಗಿ ದೇವಕಿ
ಬದುಕು ಹಾಳ್ ಮಾಡಿದೆ ಅಂತ ತಲೆ ಚಚ್ಕೋತಿದ್ರು ‼ ,
ಇನ್ನು ದೇವಕಿ , ಅರಿವು ಇವತ್ತಲ್ಲ ನಾಳೆ ಬಂದೇ
ಬರ್ತಾರಂತ ಕಾಯ್ತಿರ್ತಿದ್ಲು..

DISSOLVE TO:

INT. GOPAL KRISHNA HOUSE , DAY

MONTAGES

ಸಂಭಾಷಣೆಯ ಮೇಲಿನ ಮಂಟೇಜಸ್

೧. ದೇವಕಿ ಅರಿವು ಬರುವಿಕೆಯನ್ನು ನಿರೀಕ್ಷಿಸುವುದು
೨. ರೂಮಿನ ಹಾಸಿಗೆಯಲ್ಲಿ ಕುಳಿತವಳೇ , ಕಿಟಕಿಯಿಂದ ಆಚೆಗೆ ನೋಡುತ್ತಿರುವುದು
೩. ಕೈಯಲ್ಲಿ ತಟ್ಟೆಪೂರ್ತಿ ಅನ್ನ ಇದ್ದರೂ, ತಿನ್ನದೇ ಕಿಟಕಿಯನ್ನೇ ನೋಡುತ್ತಿರುವುದು.
೪. ಗೋಪಾಲ್ ದೇವಕಿಯ ಪರಿಸ್ಥಿತಿ ನೋಡುತ್ತಾ , ತಲೆ ಚಚ್ಚಿಕೊಳ್ಳುತ್ತಿರುವುದು.

AMMA

( ವಾ.ಓ ) ದೇವಕಿಗೆ ಎಂಟು ತಿಂಗ್ಳು ತುಂಬಿತ್ತು ,
ಗೋಪಾಲ್ ಕೆಲ್ಸದ್ ಮೇಲೆ ಹೊರಗ್ ಹೋಗಿದ್ರು ..

CUT TO:

SWA SCREENWRITERS ASSOCIATION

INT. GOPAL KRISHNA HOUSE , NIGHT

ಹೊರಗೆ ಜೋರಾಗಿ ಮಳೆ ಬೀಳುತ್ತಿದೆ , ನಡೆಯುತ್ತಿದ್ದ ದೇವಕಿ ಅಲ್ಲೇ ಕುಸಿದು ಕೂರುತ್ತಾಳೆ , ನೀರು ಹೊರಹೋಗಲು ಪ್ರಾರಂಭವಾಗುತ್ತದೆ , ಅಕ್ಕ ಎಂದು ಕೂಗಿಕೊಳ್ಳುತ್ತಾಳೆ , ಯಶೋಧ ಕೆಲಸ ಮಾಡುತ್ತಿರುವವಳು , ಓಡಿಬರುತ್ತಾಳೆ , ಅವಳಿಗೆ ಏನು ಮಾಡುವುದು ಎಂದೇ ತಿಳಿಯುವುದಿಲ್ಲ , ದೇವಕಿ ಕಿರುಚುತ್ತಿದ್ದಾಳೆ ನೋವಿನಲ್ಲಿ ಒದ್ದಾಡುತ್ತಾಳೆ , ಮನೆಯಿಂದ ಹೊರಕ್ಕೆ ಹೋಗಲಾರದಷ್ಟು ಬಿರುಸಿನ ಮಳೆ , ಕರೆಂಟ್ ಕೂಡ ಇರುವುದಿಲ್ಲ. ದೀಪದ ಬೆಳಕಲ್ಲೇ ಆಕೆಯನ್ನು ಸಮಾಧಾನಪಡಿಸಲು ಪ್ರಯತ್ನ ಪಡುತ್ತಾಳೆ , ಸಮಯ ಸರಿಯುತ್ತದೆ , ದೇವಕಿ ಜ್ಞಾನ ತಪ್ಪಿಬಿಡುತ್ತಿರಿವುದು ಗಮನಕ್ಕೆ ಬರುತ್ತದೆ , ಯಶೋಧ ಆಕೆಯ ಕಪಾಳಕ್ಕೆ ಜೋರಾಗಿ ಹೊಡೆಯುತ್ತಿದ್ದಾಳೆ ,ಅರ್ಧ ಹೊರಕ್ಕೆ ಮಗು ಬಂದಿದೆ , ಪೂರ್ತಿ ಹೊರ ಬರಲು ಪುಶ್ ಮಾಡುವಂತೆ ಯಶೋಧ ಹೇಳುತ್ತಾಳೆ , ಸಾಧ್ಯವಾಗುವುದಿಲ್ಲ ‼ , ಕಾರಿನಲ್ಲಿ ಗೋಪಾಲ್ ಬರುತ್ತಾನೆ , ಕಾರ್ ಬೆಳಕು ಬರುತ್ತಿದ್ದಂತೆ , ಯಶೋಧ ಓಡಿ ಹೋಗುತ್ತಾಳೆ , ದೇವಕಿ ಉಸಿರು ನಿಲ್ಲುವ ಮಟ್ಟಕ್ಕೆ ನಿಧಾನವಾಗಿ ಏದುಸಿರು ಬಿಡಲು ಪ್ರಾರಂಭಿಸುತ್ತಾಳೆ , ಫಿಡ್ಸ್ ಬರುವಂತಾಗಿ ಒದ್ದಾಡುತ್ತಿರುತ್ತಾಳೆ. ಅಷ್ಟರಲ್ಲಿ ಬಂದಿದ್ದ ಗೋಪಾಲ್ ಕಾರ್ ಅಲ್ಲೇ ತಕ್ಷಣಕ್ಕೆ ಹೊರಡುತ್ತಾನೆ. ಯಶೋಧ ಕಪಾಳಕ್ಕೆ ಬಾರಿಸುತ್ತಿರುತ್ತಾಳೆ , ದೇವಕಿಯ ರಿಯಾಕ್ಷನ್ ಬರಬರುತ್ತ ಕಡಿಮೆಯಾಗುತ್ತಬರುತ್ತದೆ. ಗೋಪಾಲ್ ಡಾಕ್ಟರ್ ಜೊತೆಗೆ ಬರುತ್ತಾನೆ , ಮಗು ಮುಕ್ಕಾಲು ಹೊರ ಬಂದಿರುತ್ತದೆ. ಆಪರೇಟ್ ಮಾಡಿ ಮಗುವನ್ನು ಹೊರತಗೆಯುತ್ತಾರೆ.

ಮಗು ಅಳುವ ಸದ್ದು ಕೇಳಿಬರುತ್ತದೆ , ದೇವಕಿಯ ಉಸಿರು ನಿಂತಿದೆ. ಸಂಪೂರ್ಣ ಮೌನ ಆವರಿಸಿಕೊಂಡಿದೆ.

DOCTOR

ಸ್ಟ್ರೇಂಜ್ ಕೇಸ್ ಇದು , ಮಗು ತಾಯಿ ಗರ್ಭದಿಂದ ಸಂಪೂರ್ಣವಾಗಿ ಹೊರಕ್ಕೆ ಬರೋವಷ್ಟರಲ್ಲೇ ತಾಯಿ ತೀರಿಕೊಂಡಿದ್ದಾರೆ , ಮಗು ಉಳಿದಿರೋದೇ ಪವಾಡ , ಮಗು ಶವದ ಗರ್ಭದಿಂದ ಹೊರಗ್ ಬಂದಿರೋದು ಗೋಪಾಲ್ , ಐ ಆಮ್ ಸಾರಿ ,

CUT TO:

EXT. APOORVA HOUSE , NIGHT

ಅಪೂರ್ವ ಕಾಲಿಗೆ ಆಗಿದ್ದ ಗಾಯವನ್ನು ಕೆರೆಯುತ್ತ ಕುಳಿತಿದ್ದಾನೆ , ರಕ್ತ ಸೋರುತ್ತಿದೆ.

APOORVA

ಅಮ್ಮ ನಿನ್ ಕಾಲ್ ನೋವ್ ಹೇಗಿದೆ ⁉

AMMA

ಊರಿಗ್ ಬಾರೋ ‼

SWA SCREENWRITERS ASSOCIATION


**©Srinidhi S**
**SWA Membership Number:54490**

APOORVA

ಥ್ಯಾಂಕ್ಸ್ , ಇಷ್ಟ್ ದಿನ ಇವೆಲ್ಲ ಹೇಳದೆ ಒಳ್ಳೆ ಕೆಲಸ
ಮಾಡಿದ್ದೆ , ನಂಗಿದ್ಯಾವ್ದು ಗೊತ್ತಾಗಲೇಬಾರದಿತ್ತು , ಛೆ !!

AMMA

ಅಪ್ಪು , ನನ್ ಸತ್ಯ ಮುಚ್ಚಿಟ್ಟಿದ್ರು ಹಿಂದೆ ..

APOORVA

ಅಮ್ಮ , ಏನೂ ಹೇಳ್ಬೇಡ !! , ನಾನೇ ಕಾಲ್ ಮಾಡ್ತೀನ್
ಆಮೇಲೆ

AMMA

ಇಲ್ ಕೇಳೋ , ಅಪ್ಪು , ನಿಂಗ್ ಮೋಸ ಮಾಡ್ಬೇಕಂತ
ಮುಚ್ಚಿಡಲಿಲ್ವೋ , ನಿಂಗೆ ಅನಾಥ ಅನ್ನೋ ಭಾವನೆ
ಬರ್ಬಾರದಂತ....

ಅಪೂರ್ವ ಕರೆ ಕಟ್ ಮಾಡುತ್ತಾನೆ.

CUT TO:

EXT. APOORVA HOUSE , NIGHT

**September 8 . 2022**

ಅಪೂರ್ವ ಕಿಟಕಿಯಿಂದ ಹೊರನೋಡುತ್ತಿದ್ದಾನೆ , ಹೊರಕ್ಕೆ ಆಕಾಶ ನೋಡುತ್ತಾ ಗೋಪಾಲ್ ನಿಂತಿದ್ದಾರೆ , ಲೈಟ್ ಆಫ್ ಮಾಡುತ್ತಾನೆ , ಅದೇ ಸಮಯಕ್ಕೆ ಮಹಡಿಯ ಮೇಲೆ ವಿಚಿತ್ರವಾದ ಬೆಳಕು ಆವರಿಸುತ್ತದೆ. ಟೈಮ್ ಟ್ರಾವೆಲ್ ಮಾಡಿರುವ ಅಪೂರ್ವ ಗೋಪಾಲ್ ಸರ್ ಪಕ್ಕಕ್ಕೆ ಬಂದು ನಿಲ್ಲುತ್ತಾನೆ. ಅವರು ಇವನನ್ನು ನೋಡಿ ಇನ್ನು ಮಲಗಿಲ್ಲವೋ ಎಂಬಂತೆ ಸನ್ನೆ ಮಾಡುತ್ತಾರೆ , ಅಪೂರ್ವ ಇಲ್ಲ ಎಂದು ತಲೆಯಾಡಿಸುತ್ತಾನೆ. ಹಾಗೂ ಅವರ ಕೈ ಹಿಡಿಯುತ್ತಾನೆ.

APOORVA

ನಿಮ್ ತಪ್ಪೇನಿಲ್ಲ , ನಿವ್ಯಾಕ್ ನಮ್ಮನ್ನ ಬಿಟ್ಟು ಬಂದ್ರಿ !

ಗೋಪಾಲ್ ವಿಚಿತ್ರವಾಗಿ ಅಪೂರ್ವನನ್ನೇ ನೋಡುತ್ತಾರೆ , ಅಪೂರ್ವ ಕೈಲಿ ಇದ್ದ ಫ್ಯಾಮಿಲಿ ಫೋಟೋ ತೋರಿಸುತ್ತಾನೆ. ಅವರಿಗೆ ಶಾಕ್ ಆಗುತ್ತದೆ.

APOORVA
(CONT'D)

ಆ ಟೈಮ್ ಟ್ರಾವೆಲರ್ “ಅರಿವು” ನಂಗ್ ಸಿಕ್ಕಿದ್ದಾನೆ ಅಪ್ಪ ,
ನಿಮ್ಮನ್ನ , ನನ್ನ , ಅಮ್ಮನ ಈ ಸ್ಥಿತಿಗ್ ತಂದಿರೋ ಅವನ್ನ
ನಾನ್ ಸುಮ್ಮನೆ ಬಿಡೋಲ್ಲ , ನಿಮ್ ತಪ್ಪೇನಿಲ್ಲ

MESHTRU / GOPAL KRISHNA URS

( ತೊದಲುತ್ತ ) ಅಪ್ ... ಅಪ್ಪು ..... ಅಪ್ಪ . ಅಪೂರ್ವ ..

ಗಾಭರಿಯಲ್ಲಿ ನೋಡುತ್ತಾರೆ ಕೈ ನಡುಕ ಶುರುವಾಗುತ್ತದೆ ಓಡಾಡಲು ಕಷ್ಟವಾದವರೇ ಕುಸಿದು ನೆಲದಮೇಲೆ ಕೂರುತ್ತಾರೆ , ಅಪೂರ್ವನೇ ಅವರನ್ನು ನೆಲಕ್ಕೆ ಮಲಗಿಸುತ್ತಾನೆ . ಬಿಟ್ಟ ಕಣ್ಣು ಬಿಟ್ಟಲ್ಲೇ ಅಪೂರ್ವನನ್ನು ನೋಡುತ್ತಾರೆ. ಉಸಿರೆಳೆದು ಧೀರ್ಘವಾಗಿ ಉಸಿರುಬಿಡುತ್ತಾರೆ. ಅಪೂರ್ವ ಅವರ ತಲೆಯನ್ನು ಸವರುತ್ತಾನೆ , ಅವರನ್ನು ಚಾಪೆಯ ಮೇಲೆ ಮಲಗಿಸುತ್ತಾನೆ , ಅವರ ಕಣ್ಣನ್ನು ಮುಚ್ಚುತ್ತಾನೆ.

J CUT :

EXT. MUDUKA HOUSE , NIGHT

**September 9 . 2022**

ಅಪೂರ್ವ ಮುದುಕನ ಮನೆಯ ಮುಂದೆ ನಿಂತಿದ್ದಾನೆ , ಜೋರಾಗಿ ಬಾಗಿಲು ಬಡಿಯುತ್ತಿದ್ದಾನೆ , ಕಿರುಚುತ್ತಿದ್ದಾನೆ ,

APOORVA

ಸರ್ , ಬಾಗಿಲು ತಗಿರಿ , ಸರ್ ..

ಅಪೂರ್ವ ಎಷ್ಟೇ ಬಾರಿ ಬಾಗಿಲು ಬಡಿದರು , ಬಾಗಿಲು ತೆರೆಯುವುದಿಲ್ಲ , ಕಿಟಕಿಯ ಗಾಜು ಒಡೆದು ಅದರೊಳಗೆ ಕಣ್ಣು ಹಾಯಿಸುತ್ತಾನೆ . ಮುದುಕ ಕಾಣುವುದಿಲ್ಲ , ಅಲ್ಲೇ ಕುಸಿದು ಕೂರುತ್ತಾನೆ , ಅತ್ತಿತ್ತ ನೋಡುತ್ತಾನೆ , ದಿಕ್ಕೆತೋರುವುದಿಲ್ಲ , ತುಸುಹೊತ್ತು ಸುಮ್ಮನಿರುತ್ತಾನೆ , ಮತ್ತೊಮ್ಮೆ ಬಾಗಿಲುಬಡಿಯಲು ಮುಂದಾಗುತ್ತಾನೆ.

ಯಾವುದೇ ಉತ್ತರ ಬರುವುದಿಲ್ಲ .

CUT TO:

INT. APOORVA HOUSE , NIGHT

ಅಪೂರ್ವ ಗೋಡೆಗೆ ತಲೆ ಚಚ್ಚಿಕೊಳ್ಳುತ್ತಿದ್ದಾನೆ ,

APOORVA

( ಮೈಂಡ್ ವಾಯ್ಸ್ ) ಕೆಲವ್ ಪ್ರಶ್ನೆಗಳಿಗೆ ಉತ್ತರ
ಸಿಗ್ದೆಯಿರೋದೇ ಒಳ್ಳೇದು , ಹುಫ್ , ಹೆವಿ ಅನ್ನಿಸ್ತಿದೆ.

SMASH CUT TO:

SCREENWRITERS ASSOCIATION

INT. GREEN ROOM , EVENING

**September 2 . 2022**

ನಾಟಕದ ದೃಶ್ಯಗಳು ಹಿನ್ನೆಲೆಯಲ್ಲಿ ನಡೆಯುತ್ತಿರುವ ಸದ್ದು ಕೇಳುತ್ತಿದೆ , ಅಪೂರ್ವ ಮೇಕಪ್ ವಸ್ತುಗಳನ್ನು ಪ್ಯಾಕ್ ಮಾಡುತ್ತಿದ್ದಾನೆ , ಗ್ರೀನ್ ರೂಮ್ ಅಲ್ಲಿ ಬೇರೆಯಾರೂ ಕಾಣುತ್ತಿಲ್ಲ , ಕೆಲವೇ ಕ್ಷಣಗಳಲ್ಲಿ ಒಬ್ಬ ಮುದುಕ ಕನ್ನಡಿಯಲ್ಲಿ ಕಾಣಿಸಿಕೊಳ್ಳುತ್ತಾನೆ , ಅಪೂರ್ವ ಮುದುಕನನ್ನು ಗಮನಿಸುವುದಿಲ್ಲ , ಆದರೆ ಆ ಮುದುಕ ವಿಚಿತ್ರವಾಗಿ  ಅಪೂರ್ವನನ್ನೇ ನೋಡುತ್ತಿರುತ್ತಾನೆ ನಂತರದಲ್ಲಿ ಅಪೂರ್ವನನ್ನು ನೋಡುತ್ತಾ ಮಾತನಾಡಲು ಆರಂಭಿಸುತ್ತಾನೆ.

MUDUKA

ಅಪೂರ್ವ .. ಹೇಗಿದ್ಯಾ , ಯಶೋಧ ಹೇಗಿದ್ದಾಳೆ !

ನಿಧಾನವಾಗಿ ವೇದಿಕೆಯ ಅಂಬಿಯನ್ಸ್ ಕಡಿಮೆಯಾಗತೊಡಗುತ್ತದೆ.

APOORVA

( ಕೆಲಸ ಮಾಡುತ್ತಿದ್ದವ ನಿಲ್ಲಿಸಿ ) ಎಕ್ಸ್ ಕ್ಯೂಸ್ ಮೀ !

MUDUKA

ನಿನ್ನಮ್ಮ ಹೇಗಿದ್ದಾಳೆ ಅಂತ ಕೇಳ್ದೆ !?

APOORVA

ನಿವ್ಯಾರ್ ಅಂತ ಗೊತ್ತಾಗ್ಲಿಲ್ಲ !

MUDUKA

ಅವಳಿಗೆ ಹೇಳು , ಅವಳ ಗಂಡ ಇನ್ನು ಸತ್ತಿಲ್ಲ ಅಂತ ..

CUT TO:

INT. APOORVA HOUSE , NIGHT

ಅಪೂರ್ವ ಕೈಗೆ ವಾಚ್ ಹಾಕಿಕೊಳ್ಳುತ್ತಾನೆ , ಟೈಮ್ , ಡೇಟ್ , ಪ್ಲೇಸ್ ಸೆಟ್ ಮಾಡುತ್ತಾನೆ , ಕಣ್ಣಿಗೆ ಐ ಡ್ರಾಪ್ ಹಾಕಿಕೊಳ್ಳುತ್ತಾನೆ , ಕಣ್ಣು ಮುಚ್ಚುತ್ತಾನೆ.

APOORVA

( ಮೈಂಡ್ ವಾಯ್ಸ್  ) ಎಲ್ಲಿಂದ ಶುರುವಾಯ್ತೋ , ಅಲ್ಲೇ
ಮುಗಿಸೋದ್ ಒಳ್ಳೇದ್

CUT TO:

SCREENWRITERS ASSOCIATION

INT. GREEN ROOM TOILET , EVENING

**SEPTEMBER 2 . 2022**

ಅಪೂರ್ವ ಗ್ರೀನ್ ರೂಮ್ ಟಾಯ್ಲೆಟ್ ಅಲ್ಲಿದ್ದಾನೆ , ಸ್ಟೇಜ್ ಅಲ್ಲಿ ಸಂಭಾಷಣೆ ಕೇಳಿಬರುತ್ತಿದೆ , ಗ್ರೀನ್ ರೂಮ್ ಅಲ್ಲಿ  ಯಾರೋ ನಿಂತು ಮಾತನಾಡುವುದು ಕೇಳುತ್ತದೆ. ಟಾಯ್ಲೆಟ್ ಡೋರ್ ಓಪನ್ ಮಾಡುತ್ತಾನೆ , ಗ್ರೀನ್ ರೂಮ್ ಮೂಲೆಯಲ್ಲಿ ಸತ್ಯ ನಿಂತಿರುತ್ತಾನೆ , ಸಂಭಾಷಣೆ ಉರು ಹೊಡೆಯುತ್ತಿರುತ್ತಾನೆ , ಅವನ ಎಂಟರಿ ಇರುವುದರಿಂದ ಅಪೂರ್ವನ ಕಡೆಗೆ ನಡೆದು ಬರುತ್ತಾನೆ , ಅಪೂರ್ವ ಮತ್ತೆ ಬಾಗಿಲು ಮುಚ್ಚುತ್ತಾನೆ , ಸತ್ಯ ಮತ್ತೊಂದು ಬಾಗಿಲ ಕಡೆಗೆ ನಡೆಯುತ್ತಾನೆ , ಗ್ರೀನ್ ರೂಮ್ ಖಾಲಿಯಾಗುತ್ತದೆ , ಮತ್ತೊಬ್ಬ ಅಪೂರ್ವ ಗ್ರೀನ್ ರೂಮ್ ಪ್ರವೇಶಿಸಿ ಮೇಕಪ್ ಐಟೆಮ್ಸ್ ಅನ್ನು ಸರಿಪಡಿಸಿಕೊಳ್ಳಲು ಮುಂದಾಗುತ್ತಾನೆ.  ಟೈಮ್ ಟ್ರಾವೆಲರ್ ಅಪೂರ್ವ ಟಾಯ್ಲೆಟ್ ಕಡೆಯಿಂದ ನಡೆದು ಎರಡು ಹೆಜ್ಜೆ ಇಡುತ್ತಾನೆ , ಅಷರಲ್ಲಿ ಮುದುಕ ಪ್ರವೇಶ ಪಡೆದು ಅಪೂರ್ವನೊಂದಿಗೆ ಮಾತನಾಡುತ್ತಿರುತ್ತಾನೆ , ಟೈಮ್ ಟ್ರಾವೆಲರ್ ಒಂದು ಹೆಜ್ಜೆ ಇಡುತ್ತಾನೆ , ಹಿಂದಿನಿಂದ ಟೈಮ್ ಟ್ರಾವೆಲರ್ ಮುದುಕನ ಪ್ರತಿರೂಪಿ ಬಂದು ಅಪೂರ್ವನನ್ನು ಬಾಯಿ ಮುಚ್ಚಿ ಮತ್ತೆ ಟಾಯ್ಲೆಟ್ ಗೆ ರಪ್ಪನೆ ಎಳೆದು ಲಾಕ್ ಮಾಡಿ ಕಣ್ಣು ಮುಚ್ಚಿಸಲು ಯತ್ನಿಸುತ್ತಾನೆ. ಟೈಮ್ ಟ್ರಾವೆಲರ್ ಅಪೂರ್ವ ಹೊರಕ್ಕೆ ಹೋಗಲು ಪ್ರಯತ್ನಿಸುತ್ತಾನೆ , ಆದರೆ ಆಗುವುದಿಲ್ಲ , ಟೈಮ್ ಟ್ರಾವೆಲರ್ ಮುದುಕನ ಪ್ರತಿರೂಪಿ ಅಪೂರ್ವನ ವಾಚ್ ಅಲ್ಲಿ ಸೆಟ್ಟಿಂಗ್ ಬದಲಿಸುತ್ತಾನೆ. ಟಾಯ್ಲೆಟ್ ಅಲ್ಲಿ ಇರುವ ನೀರು ಕಣ್ಣಿಗೆ ಎರೆಚುತ್ತಾನೆ. ಅಪೂರ್ವ ಕಣ್ಣು ಮುಚ್ಚುತ್ತಾನೆ.

CUT TO:

INT. APOORVA HOUSE , NIGHT

**September 9 . 2022**

ಅಪೂರ್ವ ಕಣ್ಣುರಿಗೆ ಒದ್ದಾಡುತ್ತಿದ್ದಾನೆ , ವಾಚ್ ಅಲ್ಲಿ ರೆಡ್ ಲೈಟ್ ಪಾಪ್ ಅಪ್ ಆಗುತ್ತಿದೆ , ಅದಷ್ಟಕ್ಕದೇ ಸೆಟ್ಟಿಂಗ್ಸ್ ಬದಲಾಯಿಸಿಕೊಳ್ಳುತ್ತದೆ .. ಮತ್ತೆ ಬ್ರೈಟ್ ಲೈಟ್ ಆನ್ ಆಗಿ , ವಾಚ್ ಸಂಪೂರ್ಣವಾಗಿ ಆಫ್ ಆಗಿಬಿಡುತ್ತದೆ..

ಅಪೂರ್ವ ಸುಧಾರಿಸಿಕೊಳ್ಳುತ್ತಾನೆ , ಮತ್ತೆ ಕಣ್ಣಿಗೆ ಐ ಡ್ರಾಪ್ ಹಾಕಿಕೊಳ್ಳುತ್ತಾನೆ.

CUT TO:

SWA SCREENWRITERS ASSOCIATION

EXT. APOORVA HOUSE , NIGHT

**September 3 . 2022**

ಜೋರಾಗಿ ಮಳೆ ಸುರಿಯುತ್ತಿದೆ , ಟೈಮ್ ಟ್ರಾವೆಲರ್  ಅಪೂರ್ವ ನಡೆದು ತನ್ನ ಮನೆಯ ರೂಮ್ ಹೊರಕ್ಕೆ ನಿಂತಿದ್ದಾನೆ , ಬಾಗಿಲು ಬಡಿಯುತ್ತಾನೆ , ರೂಮ್ ಒಳಗಡೆ , ಮೊಬೈಲ್ ಅಲ್ಲಿ ಯಾವುದೋ ಆಡಿಯೋ ಪುಸ್ತಕ ಪ್ಲೆ ಆಗುತ್ತಿರುತ್ತದೆ. ಎಷ್ಟೇ ಬಾಗಿಲು ಬಡಿದರು ಅಪೂರ್ವ ಬಾಗಿಲು ತೆರೆಯುವುದಿಲ್ಲ. ಟೈಮ್ ಟ್ರಾವೆಲರ್ ಅಪೂರ್ವ ಕೂಗಾಡುತ್ತಾನೆ ಆದರೂ ಮಳೆಯ ಶಬ್ದಕ್ಕೆ ಒಳಗಿರುವ ಅಪೂರ್ವನಿಗೆ ಕೇಳಿಸುವುದಿಲ್ಲ , ಬೇಜಾರಿನಲ್ಲಿ ತುಸುದೂರ ಹೊರಡುತ್ತಾನೆ , ಅತ್ತಿತ್ತ ನೋಡುತ್ತಾನೆ , ಅಪೂರ್ವ ರೂಮ್ ಒಳಗೆ ಲೈಟ್ ಆನ್ ಆಗುತ್ತದೆ , ಗಾಳಿಗೆ ಕಿಟಕಿ ಮುಚ್ಚಿ ತಗೆದು ಆಗುತ್ತಿರುತ್ತದೆ , ಒಳಗಿರುವ ಅಪೂರ್ವ , ಹೊರಗೆ ನಿಂತಿರುವ ಅಪೂರ್ವನನ್ನು ನೋಡುತ್ತಾನೆ , ಇವನು ಇನ್ನೇನು ಮಾತನಾಡಬೇಕು ಎನ್ನುವಾಗ ಮಳೆಯ ನೀರಿನ ಹನಿಯೊಂದು ಕಣ್ಣಿಗೆ ಬೀಳುತ್ತದೆ , ಕಣ್ಣು ಮುಚ್ಚಿಬಿಡುತ್ತಾನೆ.

CUT TO:

INT. APOORVA HOUSE , NIGHT

**September 9 . 2022**

ಅಪೂರ್ವನಿಗೆ ದಿಕ್ಕೇ ತೋರುವುದಿಲ್ಲ , ಅತ್ತಿತ್ತ ನೋಡುತ್ತಾನೆ , ವಾಚ್ ಭಯಾನಕವಾಗಿ ಸದ್ದು ಮಾಡಲು ಪ್ರಾರಂಭಿಸುತ್ತದೆ. ಸಡನ್ ಆಗಿ ಒಂದು ಲೈಟ್ ಆನ್ ಆಗಿ , ವಾಚ್ ಹೊರಕ್ಕೆ  ಸ್ಕ್ರೀನ್ ಪಾಪ್ ಅಪ್ ಆಗುತ್ತದೆ. ಅಪೂರ್ವನಿಗೆ ಏನೂ ಅರ್ಥವಾಗುವುದಿಲ್ಲ , ಸ್ಕ್ರೀನ್ ಅಲ್ಲಿ ಇವನ ಮುಖವೇ ಕಾಣುತ್ತಿದೆ. ಅಪೂರ್ವನ ಕಣ್ಣು ಉರಿಯುತ್ತಿದೆ , ಆತನ ಕಣ್ಣು ಸ್ಕ್ಯಾನ್ ಆಗುತ್ತದೆ , ಆಟೋಮೆಟಿಕ್ ಅಪೂರ್ವನ ಕಣ್ಣು ಮುಚ್ಚುತ್ತದೆ. ಅಪೂರ್ವ ಹಿಂದುಗಡೆಗೆ ನಿಧಾನವಾಗಿ ಬೀಳುತ್ತಾನೆ.

ಸ್ಲೋ ಶಾಟ್ಸ್

CUT TO:

EXT. BENGALURU ROADS , DAY

**September 6 . 2022**

ಟೈಮ್ ಟ್ರಾವೆಲರ್ ಅಪೂರ್ವ ರಸ್ತೆಯ ಮದ್ಯ ಪ್ರತ್ಯಕ್ಷವಾಗುತ್ತಾನೆ , ಮತ್ತೊಂದು ಕಡೆಯಿಂದ ಬರುತ್ತಿದ್ದ ಅಪೂರ್ವನ ಓಮಿನಿ ಗಾಡಿ ಡ್ರಿಫ್ಟ್  ಆಗುತ್ತದೆ. ಟೈಮ್ ಟ್ರಾವೆಲರ್ ಅಪೂರ್ವ ಕಣ್ಣು ಆಟೋಮೆಟಿಕ್ ಆಗಿ ಮುಚ್ಚಿಕೊಳ್ಳುತ್ತದೆ . ವಾಚ್ ಬ್ಲಿಂಕ್ ಆಗುತ್ತಿರುತ್ತದೆ. ಸಂಗೀತ ತಾರಕಕ್ಕೇರುತ್ತಿದೆ.

ವಾಚ್ ಟೈಮ್ ಟ್ರಾವೆಲರ್ ಅಪೂರ್ವನ ಕೈಮೀರಿ ಹೋಗಿದೆ , ತನ್ನಿಷ್ಟದಂತೆ ಬೇರೆ ಬೇರೆ ಟೈಮ್ ಲೈನ್ ಗೆ ಟ್ರಾವೆಲ್ ಆಗುತ್ತಿದೆ.

CUT TO:

SCREENWRITERS ASSOCIATION

EXT. SHANTHALA BRIDGE , DAY

**August 28 . 2001 , Time : 4:10 P.M**

ಅಪೂರ್ವ ದೂರದಲ್ಲಿ ನಿಂತು ನೋಡುತ್ತಿದ್ದಾನೆ , ತೆಪ್ಪದಿಂದ ಗೋಪಾಲ್ ಅನ್ನು ಇಳಿಸಿದ್ದಾರೆ , ದಡದಲ್ಲಿ ನಾಲ್ಕೈದು ಜನ ಸೇರಿದ್ದಾರೆ , ಗೋಪಾಲ್ ಹೆದರಿ ಮುದುಕಿ ಪಕ್ಕ ಕುಳಿತಿದ್ದಾರೆ , ಅಳುತ್ತಿದ್ದಾರೆ ಅಪೂರ್ವನ ಕಣ್ಣು ಮಂಜಾಗಿ ಮುಚ್ಚಿಕೊಳ್ಳುತ್ತದೆ.

CUT TO:

EXT. BENGALURU ROADS , DAY

**September 6 . 2022**

ಟೈಮ್ ಟ್ರಾವೆಲರ್ ಅಪೂರ್ವ ಕಣ್ಣು ಬಿಡುತ್ತಾನೆ , ಕಾರ್ ಒಳಗೆ ತನ್ನ ಪಕ್ಕದಲ್ಲಿ ಕುಳಿತಿರುವ ಅಪೂರ್ವನನ್ನು ನೋಡುತ್ತಾನೆ , ಆ ಅಪೂರ್ವ ವಿಪಾರೀತ ಹೆದರಿದ್ದಾನೆ , ಟೈಮ್ ಟ್ರಾವೆಲರ್ ಅಪೂರ್ವ ಸಮಯ ವೆಸ್ಟ್ ಮಾಡದೆ ಮಾತನಾಡಲು ಮುಂದಾಗುತ್ತಾನೆ , ವಾಚ್ ಅಲ್ಲಿ ರೆಡ್ ಲೈಟ್ ಪಾಪ್ ಅಪ್ ಆಗುತ್ತದೆ.

APOORVA 2

ಅಪೂರ್ವ !!

APOORVA

( ಸ್ವಗತ ) ಕಾಮ್ ಡೌನ್ ಅಪೂರ್ವ , ಭ್ರಮೆ ಇರ್ಬೇಕು

ಕಣ್ಣು ಎಳೆಯಲು ಆರಂಭವಾಗುತ್ತದೆ. ಕಣ್ಣು ಉರಿಯುತ್ತಿದೆ

APOORVA 2

ದುಡ್ಡಿನಾಸೆಗೆ ಎಡಿಟಿಂಗ್ ಕೆಲ್ಸಕ್ಕೆ ಹೋಗ್ಬೇಡ ಅಪೂರ್ವ ,
ಇಟ್ಸ್ ಎ ಟ್ರ್ಯಾಪ್ , ತುಂಬಾ ಸಫರ್ ಪಡಬೇಕಾಗತ್ತೆ

APOORVA

ಯಾರ್ ನೀನು !?

APOORVA 2

ಅದನ್ನ ಹೇಳ್ … ನಾನ್ ಹೇಳ್ದಷ್ಟ್ ಮಾಡು , ಹೋಗ್ಬೇಡ
ಪ್ಲೀಸ್ ( ಗ್ಲಿಚ್ )

ಕಣ್ಣು ವಿಪಾರಿತವಾಗಿ ನೋಯ್ಯುತ್ತ , ಟೈಮ್ ಟ್ರಾವೆಲರ್ ಆಪೂರ್ವ ಕಣ್ಣು ಮುಚ್ಚಿಕೊಳ್ಳುತ್ತಾನೆ , ಭಯಂಕರವಾದ ಬೆಳಕು ಆವರಿಸಿಕೊಳ್ಳುತ್ತದೆ , ಕೈಲಿದ್ದ ವಾಚ್ ಜೋರಾಗಿ ಬ್ಲಿಂಕ್ ಮಾಡುತ್ತಿರುತ್ತದೆ ಅಪೂರ್ವನಿಗೆ ೨೦೦೧ ಸ್ಪೇಸ್ ಒಡೆಸ್ಸಿ ರೀತಿಯಲ್ಲಿ ವಿಚಿತ್ರವಾಗಿ ಬೆಳಕು ಮೂವ್ ಆಗುತ್ತದೆ.

CUT TO:

SWA
SCREENWRITERS
ASSOCIATION

EXT. MARALUGAADU , DAY

ಅಪೂರ್ವನಿಗೆ ತಾನು ಎಲ್ಲಿದ್ದೇನೆ ಎಂಬುದೇ ತಿಳಿಯುತ್ತಿಲ್ಲ , ಎಲ್ಲಿಯವರೆಗೂ ಕಣ್ಣು ಹಾಯಿಸಿದರೂ ಖಾಲಿ ಜಾಗ, ಕೈಲಿದ್ದ ವಾಚ್ ನೋಡುತ್ತಾನೆ , ಆಫ್ ಆಗಿರುತ್ತದೆ , ಕಣ್ಣು ಮಿಟುಕಿಸುತ್ತಾನೆ , ಏನೂ ಬದಲಾಗುವುದಿಲ್ಲ , ಅದೇ ಜಾಗದಲ್ಲಿರುತ್ತಾನೆ , ವಾಚ್ ಎಷ್ಟೇ ಬಾರಿ ಸರಿಮಾಡಲು ಯತ್ನಿಸಿದರೂ ಏನೂ ಬದಲಾಗುವುದಿಲ್ಲ. ಅಪೂರ್ವನಿಗೆ ದಿಕ್ಕೇ ತೋರುತ್ತಿಲ್ಲ. ಜೋರಾಗಿ ಗಾಳಿ ಬೀಸುತ್ತಿದೆ , ಅಪೂರ್ವ ಕಣ್ಣು ಬ್ಲಿಂಕ್ ಮಾಡುತ್ತಲೇ ಇದ್ದಾನೆ , ಏನೂ ಪ್ರಯೋಜನವಾಗುತ್ತಿಲ್ಲ. ಅಲ್ಲಿಂದ ಒಂದೆರಡು ಹೆಜ್ಜೆ ಇಡುತ್ತಾನೆ , ಮೂಗಿಂದ ರಕ್ತ ಸುರಿಯುತ್ತಿದೆ. ಕಣ್ಣಲ್ಲಿ ನೀರು ತುಂಬಿದೆ , ಎಲ್ಲಿದ್ದೇನೆ , ಎಲ್ಲಿ ಹೋಗಬೇಕು ಏನೂ ತಿಳಿಯುತ್ತಿಲ್ಲ , ಒಂದಿಷ್ಟು ದೂರ ಹಾಗೆ ಸಾಗುತ್ತಾನೆ , ತುಸುವೇ ದೂರದಲ್ಲಿ ಅರಿವು ಇವನ ಕಡೆಗೆ ಬರುತ್ತಿರುವುದು ಅಷ್ಪಷ್ಟವಾಗಿ ಕಾಣುತ್ತದೆ , ತಲೆ ಸುತ್ತಲು ಆರಂಭವಾಗುತ್ತದೆ ಕುಸಿದುಬೀಳುತ್ತಾನೆ. ವಾಚ್ ಲೈಟ್ ಆನ್ ಆಗುತ್ತದೆ

CUT TO BLACK.

INT. MUDUKA HOUSE , EVENING

**September 23 . 2022**

ಅಪೂರ್ವ ಕಣ್ಣು ಬಿಡುತ್ತಾನೆ , ಎಲ್ಲವೂ ಅಷ್ಪಷ್ಟವಾಗಿ ಕಾಣುತ್ತಿದೆ , ದೂರದಲ್ಲಿ ಮಾತುಗಳು ಕೇಳಿಸುತ್ತಿವೆ , ವ್ರೇಮ್ಯ ಬಾಟಲ್ಗಳು ಟೇಬಲ್ ಮೇಲಿದೆ , ಖುರ್ಚಿ ಬಿದ್ದಿದೆ , ಮನೆಯಲ್ಲಿದ್ದ ವಸ್ತುಗಳು ಚಲ್ಲಾಪಿಲ್ಲಿಯಾಗಿವೆ , ಅಪೂರ್ವನಿಗೆ ಅಷ್ಪಷ್ಟವಾಗಿರುವುದೆಲ್ಲ ತುಸುವೇ ಹೊತ್ತಿನಲ್ಲಿ ಸ್ಪಷ್ಟವಾಗುತ್ತದೆ , ಸುಸ್ತಲ್ಲಿ ಎದ್ದೇಳುತ್ತಾನೆ , ನಿಧಾನಕ್ಕೆ ನಡೆದು ನೀರು ಕುಡಿಯುತ್ತಾನೆ , ಅ ಪೂರ್ವನಿಗೆ ವಿಪರೀತ ಸುಸ್ತಾಗಿದೆ , ನಿಧಾನಕ್ಕೆ ರೂಮ್ ಕಡೆಗೆ ನಡೆಯುತ್ತಾನೆ , ರೂಮ್ ಅಲ್ಲಿ ಮುದುಕ ಟೈಮ್ ಟ್ರಾವೆಲರ್ ಅಪೂರ್ವನಿಗೆ ಬೆನ್ನಾಗಿ ನಿಂತಿದ್ದಾನೆ , ಮತ್ತೊಂದು ಕಡೆ ನಿಂತಿರುವ ಅಪೂರ್ವನ ಕೈಲಿ ಗನ್ ಇದೆ , ಗನ್ ಲೋಡ್ ಮಾಡಲು ಕಷ್ಟಪಡುತ್ತಿದ್ದಾನೆ , ಗನ್ ಮುದುಕನ ಕಡೆಗೆ ಪಾಯಿಂಟ್ ಮಾಡುತ್ತಾನೆ , ಮುದುಕ ಏನೂ ಮಾತನಾಡುತ್ತಿಲ್ಲ , ಮುದುಕನಿಗೆ ಶೂಟ್ ಮಾಡುತ್ತಾನೆ , ರಕ್ತ ಮುದುಕನ ಬೆನ್ನ ಹಿಂದೆ ನಿಂತಿರುವ ಈ ಟೈಮ್ ಟ್ರಾವೆಲರ್ ಅಪೂರ್ವನಿಗೆ ಬೀಳುತ್ತದೆ , ಶಾಕ್ ಗೆ ಕಣ್ಣು ಮುಚ್ಚುತ್ತಾನೆ. ನಿಶಬ್ದ

CUT TO BLACK.

SWA SCREENWRITERS ASSOCIATION

INT. APOORVA OFFICE , DAY

ಅಪೂರ್ವ ತನ್ನ ಕ್ಯೂಬಿಕಲ್ ಅಲ್ಲಿ ಕುಳಿತಿದ್ದಾನೆ , ಟೈಪ್ ಮಾಡುತ್ತಿದ್ದಾನೆ ಹಾಗೂ ಪ್ರೊಜೆಕ್ಟ್ ಲೈವ್ ಮಾಡುತ್ತಾನೆ ಅಪೂರ್ವನ ಲುಕ್ ತುಸುಬದಲಾಗಿದೆ , ಹೆಚ್ . ಆರ್ ಬಂದು ಸ್ಮೈಲ್ ಮಾಡುತ್ತಾರೆ. ಅಪೂರ್ವನೂ ಸ್ಮೈಲ್ ಮಾಡುತ್ತಾನೆ

H.R

ಅಪೂರ್ಣ್ , ನಿನ್ನೆ ಏನ್ರಿ ಅದು ಸೆನ್ಸೇಷನಲ್ ಟಾಪಿಕ್ , ರೆಕಾರ್ಡ್ ಬ್ರೇಕಿಂಗ್ ಟ್ರಾಫಿಕ್ ಕ್ರಿಯೇಟ್ ಆಗಿದೆ ವೆಬ್ ಪೇಜ್ ಅಲ್ಲಿ, ಆದ್ರೂ ತುಂಬಾ ಕನ್ನಡ ಕನ್ನಡ ಬರೀಬೇಡಿ , ಒಂದುಚೂರು ಇಂಗ್ಲೀಷು ಮಿಕ್ಸ್ ಮಾಡಿ ಮಸಾಲೆ ಹಾಕಿ

APOORVA

ಓಕೆ ಸರ್ ‼

H.R

ಓಕೇ ನಾ , ಕಾರಿಯಾನ್ ಕಾರಿಯಾನ್ ‼ ( ಸ್ಮೈಲ್ )

CUT TO:

INT. APOORVA OFFICE , DAY , CAFETARIA

ಅಪೂರ್ವ ಹಾಗು ಪ್ರಾಜೆಕ್ಟ್ ಹೆಡ್ ಶಿವಕುಮಾರ್ ಊಟ ಮಾಡುತ್ತಿದ್ದಾರೆ

SHIVU

ವರ್ಕ್ ಫ್ರಮ್ ಹೋಮ್ ಮಾಡ್ತೀನಿ ಅಂದಿದ್ರಿ

APOORVA

ವಾತಾವರಣ ಚೇಂಜ್ ಬೇಕು ಅನ್ನಿಸ್ತು , ಈ ಅಂಬಿಯನ್ಸ್ ಅಲ್ಲಿ ಕೆಲಸ ಮಾಡೋಕ್ಕೆ ಖುಷಿ ಸಿಗತ್ತೆ ಶಿವೂ ‼

ಅಪೂರ್ವ ಊಟ ಮಾಡುತ್ತಿದ್ದಾನೆ

CUT TO:

SWA SCREENWRITERS ASSOCIATION

MONTAGES

INT. APOORVA OFFICE , DAY

EXT. BENGALURU ROADS , DAY

೧. ಊಟ ಮಾಡಿದ ಡಬ್ಬ ತೊಳೆದು ಇಡುತ್ತಾನೆ
೨. ಸಂಜೆಯ ವರೆಗೂ ಕೆಲಸ ಮಾಡುತ್ತಾನೆ
೩. ಕಾಫಿ ಕುಡಿಯುತ್ತಾನೆ , ಸಿಗರೇಟ್ ಸೇದುತ್ತಾನೆ.
೪. ಕೆಲಸ ಮುಗಿಯುತ್ತದೆ , ಬೌನ್ಸ್ ಗಾಡಿಗಾಗಿ ಹುಡುಕುತ್ತಾನೆ. ಸ್ಕಾನ್ ಮಾಡುತ್ತಾನೆ , ಗಾಡಿ ಹತ್ತುತ್ತಾನೆ. ಸಿಗ್ನಲ್ ಬರುತ್ತದೆ , ಅಪೂರ್ವ ಸಿಗ್ನಲ್ ಅಲ್ಲಿ ನಿಲ್ಲುತ್ತಾನೆ.
೫. ಅಪೂರ್ವನ ಎದಿರು ಭವಿಷ್ಯ ಹೇಳುವ ಹೆಂಗಸರು ರಸ್ತೆ ದಾಟುತ್ತಾರೆ. ಅಪೂರ್ವ ಅವರನ್ನೇ ನೋಡುತ್ತಾನೆ , ಸಿಗ್ನಲ್ ಅಲ್ಲಿ  ರೆಡ್ ಲೈಟ್ ಆನ್ ಆಗುತ್ತದೆ , ಕಣ್ಣು ಮುಚ್ಚುತ್ತಾನೆ.

J CUT :

INT. APOORVA HOUSE , NIGHT

**September 9 . 2022**

ಗನ್ ಶಾಟ್ ಶಬ್ದ ಕೇಳಿಸುತ್ತದೆ , ಅಪೂರ್ವ ಕಣ್ಣು ಬಿಟ್ಟಿದ್ದಾನೆ , ಮುಖವೆಲ್ಲ ರಕ್ತವಾಗಿದೆ , “ನೋ” ಎಂದು ಕಿರುಚುತ್ತಾನೆ , ಫ್ರೇಮ್ಯ ಬಾಟಲ್ ತೆಗೆದು ನೆಲಕ್ಕೆಸೆಯುತ್ತಾನೆ , ಒಡೆದು ಪುಡಿಪುಡಿಯಾಗುತ್ತದೆ , ವಾಚ್ ಬಿಚ್ಚುತ್ತಾನೆ. ಎಸೆಯುತ್ತಾನೆ , ಸಿಕ್ಕಸಿಕ್ಕಲ್ಲಿ ಅದನ್ನು ಒಡೆಯಲು ಆರಂಭಿಸುತ್ತಾನೆ , ವಾಚ್ ಪುಡಿಪುಡಿಯಾಗುವವರೆಗೂ ಬಿಡುವುದಿಲ್ಲ  ನಿಧಾನವಾಗಿ ಹಾಡು ಆರಂಭವಾಗುತ್ತದೆ.

FORTH SONG

CUT TO:

MONTAGES

ಸ್ಲೋ - ಮೊ ಲಿ ದೃಶ್ಯಗಳು ಮೂವ್ ಆಗುತ್ತವೆ

INT. APOORVA HOUSE , NIGHT

EXT. BENGALURU ROADS , DAY

EXT. REHEARSAL PLACE , EVENING

EXT. FOOD CART , MORNING

೧. ಅಪೂರ್ವ ಮನೆಯನ್ನು ಗುಡಿಸುತ್ತಿದ್ದಾನೆ
೨. ಒಡೆದ ಗಾಜುಗಳನ್ನು ಕಸದ ಬುಟ್ಟಿಗೆ ಹಾಕುತ್ತಿದ್ದಾನೆ.

೩. ತಣ್ಣೀರನ್ನೇ ತಲೆಗೆ ಸುರಿದುಕೊಳ್ಳುತ್ತಿದ್ದಾನೆ
೪. ನಾಟಕದ ಪ್ರಾಕ್ಟೀಸ್ ಗೆ ತೆರಳಿದ್ದಾನೆ , ಪಾತ್ರಧಾರಿಗಳಿಗೆ ಟಿ ಕೊಡುತ್ತಿದ್ದಾನೆ.
೫. ಫ್ರೆಂಡ್ಸ್ ಮಾತನಾಡುತ್ತಿದ್ದಾರೆ , ಅಪೂರ್ವನ ಗಮನ ಬೇರೆಲ್ಲೋ ಇದೆ , ಸಿಗರೇಟಿನ ಮೇಲೆ ಸಿಗರೇಟು ಸೇದುತಿದ್ದಾನೆ.
೬. ರಾತ್ರಿ ರೂಮ್ ಅಲ್ಲಿ ಮಲಗಿದ್ದಾನೆ , ನಿದ್ರೆಬರುತ್ತಿಲ್ಲ ,
೭. ತೊಳೆದ ಮುಖವನ್ನೇ ಉಜ್ಜಿ ಉಜ್ಜಿ ತೊಳೆಯುತ್ತಿದ್ದಾನೆ , ತೊಳೆದ ಕೈಯನ್ನೇ ಮತ್ತೆ ಮತ್ತೆ ತೊಳೆಯುತ್ತಿದ್ದಾನೆ.
೮. ಅಮ್ಮನೊಂದಿಗೆ ಕರೆಯಲ್ಲಿ ಮಾತನಾಡುತ್ತಿದ್ದಾನೆ.
೯. ಸ್ವಪ್ನ ಹೆಗಲ ಮೇಲೆ ಮಲಗಿದ್ದಾನೆ . ಸ್ವಪ್ನ ಅಪೂರ್ವನ ತಲೆ ಸವರುತ್ತಿದ್ದಾಳೆ.
೧೦. ಅಪೂರ್ವ ನಾರ್ಮಲ್ ಆದವನಂತೆ ಬಿಹೇವ್ ಮಾಡಲು ಮುಂದಾಗಿದ್ದಾನೆ.

CUT TO:

EXT. REHEARSAL PLACE , EVENING

ಅಪೂರ್ವ ಕರೆಕ್ಟರ್ ಕಾಸ್ಟ್ಯೂಮ್ಸ್ ಎಲ್ಲ ಸೆಪೆರೇಟ್ ಬ್ಯಾಗ್ ಗಳಿಗೆ ಹಾಕುತ್ತಿರುತ್ತಾನೆ , ಕೆಲವು ನಟರು ತಾವು ಕೂತ ಕಡೆ ಅಥವಾ ನಿಂತ ಕಡೆಗಳಲ್ಲೇ ಸ್ತಬ್ಧರಾಗಿ , ಗೇಬಲ್ ರನ್ ಮಾಡುತ್ತಿರುತ್ತಾರೆ , ಸ್ವಪ್ನ ಮಲಗಿರುತ್ತಾಳೆ , ಕೆಲವರು ಖುರ್ಚಿಗೆ ಒರಗಿ ಕುಳಿತಿರುತ್ತಾರೆ. ಸತ್ಯ ತುಸು ದೂರದಲ್ಲಿ ಕುಳಿತಿದ್ದಾನೆ , ಮೊಬೈಲ್ ಅಲ್ಲಿ ಸ್ವಪ್ನ ಮಲಗಿರುವುದನ್ನು ರೆಕಾರ್ಡ್ ಮಾಡುತ್ತಿದ್ದಾನೆ , ಅಪೂರ್ವ ಅದನ್ನು ಗಮನಿಸುತಾನೆ , ಸತ್ಯ ಅಪೂರ್ವನನ್ನು ನೋಡಿರುವುದಿಲ್ಲ , ಹಾಗೆ ವಿಡಿಯೋ ಮಾಡುತ್ತಿರುತ್ತಾನೆ , ಅಪೂರ್ವನಿಗೆ ಪಿತ್ತ ನೆತ್ತಿಗೇರುತ್ತದೆ , ಸತ್ಯನ ಸಮೀಪ ನಡೆಯುತ್ತಾನೆ . ಸತ್ಯ ಅದನ್ನು ಗಮನಿಸಿ ಮೊಬೈಲ್ ಅನ್ನು ಸರಿಪಡಿಸುತ್ತಾನೆ. ಮೊಬೈಲ್ ಅಲ್ಲಿ ಸ್ಕ್ರಿಪ್ಟ್  ಓಪನ್ ಮಾಡಿಕೊಳ್ಳುತ್ತಾನೆ.

APOORVA

ಸತ್ಯ ಏನೋ ಮಾಡ್ತಿದ್ಯ , !!

SATHYA

ಸ್ಕ್ರಿಪ್ಟ್  ನೋಡ್ತಿದ್ದೀನಿ ಭೈ , ಯಾಕೆ ಏನಾಯ್ತು !?

APOORVA

ನಿನ್ನಮ್ಮನ್, ಸ್ವಪ್ನ ಮಲಗಿದ್ರೆ ವಿಡಿಯೊ ಮಾಡ್ತ್ಯಾ

ಅಪೂರ್ವ ಸ್ತಿಮಿತತೆ ಕಳೆದುಕೊಂಡಿದ್ದಾನೆ , ಸತ್ಯನಿಗೆ ಹೊಡೆಯುತ್ತಾನೆ , ಮೊಬೈಲ್ ಕಿತ್ತು ಎಸೆಯುತ್ತಾನೆ , ನಟರಿಗೆಲ್ಲ ಎಚ್ಚರವಾಗುತ್ತದೆ , ಸ್ವಪ್ನ ಎದ್ದವಳೇ ಅಪೂರ್ವನ ಹತ್ತಿರ ನಡೆಯುತ್ತಾಳೆ , ಕಿಟ್ಟಿ , ಮೈಕಲ್ ಅಪೂರ್ವನನ್ನು ಬಿಡಿಸಲು ಮುಂದಾಗುತ್ತಾರೆ , ಅಪೂರ್ವ ಸತ್ಯನನ್ನು ಹೊಡೆಯುತ್ತಿದ್ದಾನೆ , ನೆಲಕ್ಕೆ ಬಿದ್ದು ಹೊಡೆದಾಡುತ್ತಿದ್ದಾರೆ. ಕಾಲಿನಲ್ಲಿ ಕೆಳಗಡೆ ಸತ್ಯನನ್ನು ಹಾಕಿಕೊಂಡು ಒದೆಯುತ್ತಿದ್ದಾನೆ. ಎಲ್ಲರು ಸೇರಿ ಅಪೂರ್ವನನ್ನು ಬಿಡಿಸುತ್ತಾರೆ. ಸ್ವಪ್ನ ಓಡಿಹೋಗಿ ಸತ್ಯನ ರಕ್ಷಣೆಗೆ ನಿಲ್ಲುತ್ತಾಳೆ.

APOORVA
(CONT'D)
ನಿನ್ ಮಲಗಿದ್ರೆ ವಿಡಿಯೋ ಮಾಡ್ತಾನೆ ಸೂಳೆಮಗ

SATHYA

ಇಲ್ಲ ಸ್ವಪ್ನ ಸ್ಕ್ರಿಪ್ಟ್  ಓದುತಿದ್ದೆ , ಸುಮ್ನೆ ಬಂದು
ಹೊಡಿತಿದ್ದರೆ , ಐ ಡಿಡ್ ನಥಿಂಗ್

APOORVA

ಸೂಳೆಮಗ್ನೇ ಸುಳ್ ಹೇಳ್ಬ್ಯಾ , ನಾನೇ ನೋಡಿದ್ದೀನಿ ‼

SWAPNA

ಆಪೂರ್ವ ಎನಫ್ , ಬಿಡು ಅವನ್ನ , ಏನ್ ರೌಡಿ
ಅನ್ಕೊಂಡಿದ್ಯಾ ನಿನ್ನ ‼ , ಕಿಟ್ಟಿ ಕರ್ಕೊಂಡ್ ಹೋಗವನ್ನ

ಅಪೂರ್ವ ಬೇಜಾರಿನಲ್ಲಿ ಸ್ವಪ್ನ ಮುಖ ನೋಡುತ್ತಾನೆ. ಕಿಟ್ಟಿ ಅಪೂರ್ವನನ್ನು ಪಕ್ಕಕ್ಕೆ ಎಳೆದುಕೊಳ್ಳುತ್ತಾನೆ

CUT TO:

EXT. APOORVA HOUSE , NIGHT

ಅಪೂರ್ವ ಫೋನ್ ಕರೆಯಲ್ಲಿ ಸ್ವಪ್ನ ಜತೆಗೆ ಮಾತನಾಡುತ್ತಿದ್ದಾನೆ. ವಿಪರೀತ ಸಿಟ್ಟಿನಲ್ಲಿದ್ದಾನೆ. ಹಣೆಗೆ ಬ್ಯಾಂಡೇಜ್ ಹಾಕಿಕೊಂಡಿದ್ದಾನೆ.

APOORVA

ನಂಗ್ ನಿನ್ ಮಾಡಿದ್ದು ಇಷ್ಟ ಆಗಿಲ್ಲ ಸ್ವಪ್ನ , ತಪ್ಪು
ಅವನಕಡೆ ಇದ್ದಿದ್ದು , ನಿನ್ ಮಲಗಿದ್ರೆ ವಿಡಿಯೊ ಮಾಡ್ತಿದ್ದ
ಗೊತ್ತ ‼

SWAPNA

ಅಪ್ಪು  ನಿಂಗೆ ಮೊದಲಿಂದಾನೂ ಅವನ್ ಕಂಡ್ರೆ ಆಗಲ್ಲ ,
ಅವನು ಸ್ಕ್ರಿಪ್ಟ್ ನೋಡ್ತಿದ್ರು , ನಿಂಗೆ ಹಾಗೆ ಕಾಣಿಸಿರತ್ತೆ ,
ನೆಗಟಿವ್ ಅಪ್ರೋಚ್ ಇದ್ರೆ ಏನ್ ಮಾಡಕ್ಕಾಗಲ್ಲ ,
ನೋಡೋದೆಲ್ಲಾ ಹಾಗೆ ಕಾಣಿಸುತ್ತದೆ . ನೋಡೋ ದೃಷ್ಟಿ
ಸರಿಗಿರ್ಬೇಕು

APOORVA

ಅಂದ್ರೆ ತಪ್ಪು ನಂದೇ , ಸತ್ಯ ಏನೂ ಮಾಡೇಯಿಲ್ಲ ಅಲ್ವ ,
ಫೈನ್ ಹೋಗಿ ಕಿಟ್ಟಿನ್ ಕೇಳು , ನಿನ್ ಬಗ್ಗೆ ಏನೇನ್
ಮಾತಾಡಿದ್ದಾನೆ ಅಂತ , ಅಸಯ್ಯ ಆಗ್ತಿದೆ ನಂಗೆ ,

SWA SCREENWRITERS ASSOCIATION

SWAPNA

ಅವ್ನು ಹೇಗೆ ಇರ್ಲೋ , ನೀನ್ ಮ್ಯಾನ್ ಹ್ಯಾಂಡಲ್ ಮಾಡ್ಬಾರ್ದಿತ್ತು

APOORVA

ಹೊ ಶಭಾಷ್ , ಸರಿಬಿಡು , ನಂದೇ ತಪ್ಪು . ಮತ್ತೆ ಕಾಲ್ ಮಾಡ್ಬೇಡ , ಸಾಯಿಸ್ಬಿಡ್ತೀನಿ

SWAPNA

ಸಾಯಿಸಿದ್ರು ಸಯೀಸ್ತ್ಯ , ಯಾರಿಗೊತ್ತು , ರಾಕ್ಷಸ ಆಗ್ಬಿಟ್ಟಿದ್ಯ , ನಿನ್ ಯೂಸ್ ಮಾಡಿದ್ ಭಾಷೆ ಕೇಳಿದ್ರೆ . ...

APOORVA

ಕಟ್ ಮಾಡೇ ಕಾಲು

SWAPNA

ನೀನೆ ಕಾಲ್ ಮಾಡಿರೋದು , ನೀನೇ ಕಟ್ ಮಾಡು ಬೇಕಿದ್ರೆ

APOORVA

ಕಟ್ ಮಾಡ್ತೀನಿ , ನಿಂಗ್ಯಾಕ್ ಡಿಸ್ಟರ್ಬ್ ಮಾಡಬೇಕು , ಸತ್ಯ ಕಾಲ್ ಮಾಡಬೋದು ನಿಂಗೆ , ಯಾರಿಗ್ ಗೊತ್ತು ನಿಮ್ಮಿಬ್ಬರಿಗೆ ಏನ್ ಮಾತಾಡೋದ್ ಇರುತ್ತೋ ಏನೋ ‼

SWAPNA

ವ್ಹಾ , ಸಕತ್ , ನಿನ್ ಯೋಚನೆಗಳು ಹೇಗಿದ್ದವೇ ಅಂತ ಗೊತ್ತಾಗ್ತಾಯಿದೆ , ಇಷ್ಟ್ ದಿನ ನಿನ್ ಜತೆ ಇದ್ನಲ್ಲ , ನಿನ್ ಮನಸಲ್ಲಿ ಇನ್ನೂ ಏನೇನಿದ್ಯೋ ಯಾರಿಗ್ ಗೊತ್ತು ‼

ಅಪೂರ್ವ ಸಿಟ್ಟಾಗಿ ಕರೆ ಕಟ್ ಮಾಡುತ್ತಾನೆ

CUT TO:

EXT. REHEARSAL PLACE , EVENING

EXT. FOOD CART , MORNING

MONTAGES

೧. ಅಪೂರ್ವ ರಿಹರ್ಸಲ್ ಜಾಗದಲ್ಲಿ ಸ್ವಪ್ನಾಳನ್ನು ಮಾತನಾಡಿಸಲು ಮುಂದಾಗುತ್ತಾನೆ ಸ್ವಪ್ನ ಈಗ್ನೋರ್ ಮಾಡುತ್ತಾಳೆ.
೨. ರಿಹರ್ಸಲ್ ಮುಗಿಯುತ್ತದೆ , ಸ್ವಪ್ನ ಹೊರಡುವಾಗಲು ಬೇರೆ ಎಲ್ಲರಿಗೂ ಬೈ ಹೇಳಿ , ಹಾಗೆ ಹೊರಡುತ್ತಾಳೆ.
೩.ಅಪೂರ್ವ ಸಲೂನ್ ಅಲ್ಲಿ ಇದ್ದಾನೆ , ಅಪೂರ್ವನ ಕೂದಲು ಕಟ್ ಮಾಡಲಾಗುತ್ತಿದೆ
೪. ಬೆಳಗ್ಗೆ ರಸ್ತೆಯಲ್ಲಿ ತಿಂಡಿಮಾಡುತ್ತ ಅಪೂರ್ವ

APOORVA

ಹಲೋ ಸರ್ ಗುಡ್ ಮಾರ್ನಿಂಗ್ !!

H.R

ಹೇ ಅಪೂರ್ಣ್ , ಏನೋ ನಿನ್ನೆ ಕಾಲ್ ಮಾಡಿದ್ರಿ ,
ಸಾರಿನಪ್ಪ , ಡಾಕ್ಯುಮೆಂಟರಿ ಶೂಟ್ ಅಲ್ಲಿದ್ದೆ !!

APOORVA

ಸರ್ ಸಾರಿ , ಸ್ವಲ್ಪ ಫ್ಯಾಮಿಲಿ ಪ್ರಾಬ್ಲಮ್ ಆಗಿತ್ತು , ಅದಕ್ಕೆ
ಈ ಕಡೆ ಗಮನ ಇರ್ಲಿಲ್ಲ , ನೀವು ಒಂದೆರಡ್ ಸರ್ತಿ
ಕಾಲ್ ಮಾಡಿದ್ರಿ , ನನ್ ರಿಸೀವ್ ಮಾಡೋ ಪರಿಸ್ತಿತಿಲ್
ಇರ್ಲಿಲ್ಲ !!

H.R

ಹೇ , ನೋ ಪ್ರಾಬ್ಲಮ್ , ಈಗೆಲ್ಲ ಆರಾಮಾಗಿದ್ಯಾ !!

APOORVA

ಹಾ ಸರ್ , ಪರವಾಗಿಲ್ಲ

H.R

ನೀವು ಕಾಲ್ ಪಿಕ್ ಮಾಡದೆಯಿದ್ದಿದ್ ನೋಡಿ ,
ನಾನೇನೋ ನಿಮಗೆ ಪೇ ಸ್ಕೇಲ್ ಇಷ್ಟ ಆಗ್ಲಿಲ್ಲ ಅನ್ಕೊಂಡಿದ್ದೆ

SWA SCREENWRITERS ASSOCIATION

APOORVA

ಹಾಗೇನು ಇಲ್ಲ ಸರ್ ( ಯೋಚಿಸಿ ) ಸರ್ ಈಗ್ಲೂ
ವೇಕೆನ್ಸಿ ಖಾಲಿಯಿದ್ಯ , ನಾನ್ ಜಾಯಿನ್ ಆಗಬೋದ
ಅಂತ !!

CUT TO:

EXT. BENGALURU ROADS , DAY

ಅಪೂರ್ವ ಕಣ್ಣು ಬಿಡುತ್ತಾನೆ , ಸಿಗ್ನಲ್ 3,2,1 ಎಂದು ಬಂದು ಗ್ರೀನ್ ಆಗುತ್ತದೆ , ಅಪೂರ್ವ ಗಾಡಿಯಲ್ಲಿ ಮೂವ್ ಆಗುತ್ತಾನೆ. ಗಾಡಿ ಮನೆ ಮುಂದೆ ನಿಲ್ಲಿಸುತ್ತಾನೆ , ಗಾಡಿಯ ಫೋಟೋ ತೆಗೆಯುತ್ತಾನೆ. ಮೆಟ್ಟಿಲೇರಿ ಮನೆಯೊಳಗೇ ಹೊರಡುತ್ತಾನೆ.

CUT TO:

I/E. APOORVA HOUSE , NIGHT

ಅಪೂರ್ವ ಚಪ್ಪಲಿ ಬಿಟ್ಟು , ಮನೆಯ ಒಳಕ್ಕೆ ಹೋಗುತ್ತಾನೆ , ಬ್ಯಾಗ್ ಎಸೆದು ಕೈ ಕಾಲು ತೊಳೆದು ಕೂರುತ್ತಾನೆ , ಮನೆಯ ಒಳಗೆ ಒಂದು ಸೂಟ್ಕೇಸ್ ಇರುತ್ತದೆ , ಅದರ ಮೇಲೆ ವ್ರೇಮ್ಯ ಬಾಟಲ್ ಹಾಗೂ ವಾಚ್ ಇರುತ್ತದೆ. ಅಪೂರ್ವ ಅದನ್ನು ನೋಡುತ್ತಾನೆ. ಅಡಿಗೆ ಮನೆಯಿಂದ ಲೈಮ್ ಟಿ ಮಾಡಿಕೊಂಡು , ಎರಡು ಲೋಟ ಕೈಲಿ ಹಿಡಿದುಕೊಂಡು ಮುದುಕ ಬಂದು ಅಪೂರ್ವನ ಎದುರು ಕೂರುತ್ತಾನೆ.

APOORVA

ಮತ್ತೆ ನಿವ್ಯಾಕ್ ಬಂದ್ರಿ

MUDUKA

ಲೈಮ್ ಟಿ ಕೂಡಿ , ಅಪರೂಪಕ್ಕೆ ಇವತ್ತು ಹದವಾಗಿ
ಬಂದಿದೆ ಅನ್ನಿಸ್ತಿದೆ

APOORVA

ನಂಗೆ ನೀವ್ಯಾರು ಅನ್ನೋದು ಗೊತ್ತಾಗೋದ್ ಬೇಡ ,
ನಿವ್ಯಾಕ್ ನನ್ನ ಹುಡುಕೊಂಡ್ ಬಂದ್ರಿ ಅನ್ನೋದು
ಗೊತ್ತಾಗೋದ್ ಬೇಡ ದಯವಿಟ್ಟು ಇಲ್ಲಿಂದ ಹೊರ್ಟ್ಬಿಡಿ
ಸರ್ , ಎಲ್ಲ ಬಿಟ್ಟು ಹೇಗೋ ನೆಮ್ಮದಿಯಾಗಿದ್ದೀನಿ

MUDUKA

ಟೈಮ್ ಬರ್ಲಿ ಅಂತ ಕಾಯ್ತಿದೆ , ಆ ಟೈಮ್ ಈಗ
ಬಂದಿದೆ ಅಪೂರ್ವ , ನಾನ್ ಹೇಳೋದ್ ಒಂದ್ ಸರ್ತಿ
ಕೇಳು , ಮತ್ತೆ ನಿಂಗೆ ತೊಂದ್ರೆ ಕೊಡೋಲ್ಲ !!

APOORVA

ನಂಗೇನು ಹೆಳ್ಬೇಡಿ , ನಾನೇನು ಕೇಳೊದುಯಿಲ್ಲ ,
ಹೊರ್ಟ್ಬಿಡಿ ಇಲ್ಲಿಂದ

MUDUKA

ನಿಂಗಿದು ಗೊತ್ತಾಗಲೇಬೇಕು , ಮುಚ್ಚಿಟ್ಟು ಪ್ರಯೋಜನ
ಇಲ್ಲ

APOORVA

ಸರ್ ಪ್ಲೀಸ್ , ಇಲ್ಲಿಂದ ಹೊರಡ್ತೀರಾ

MUDUKA

ಹೊರಡೋಕ್ಕಂತಾನೆ ಬಂದಿರೋದು ಅಪೂರ್ವ , ನಗೈದು
ನಿಮಿಷ ಅವಕಾಶ ಕೊಡು ಸಾಕು !

APOORVA

ಸರ್ ಇಲ್ಲಿಂದ ಹೊರಡಿ ‼ ಪ್ಲೀಸ್

MUDUKA

ಅಪೂರ್ವ ನಾನ್ ಯಾರು ಅಂತ ತಿಳ್ಕೊಳ್ಬೇಕು
ಅನ್ನಿಸ್ತಿಲ್ವಾ ‼

APOORVA

ನೀವ್ ನನ್ ಅಪ್ಪ , ಆ ಸತ್ಯ ಗೊತ್ತಾಗಿದೆ , ಇನ್ನು ನಿಮ್ಮ
ಹಿನ್ನೆಲೆ ತಿಳ್ಕೊಳೋ ಆಸಕ್ತಿಯಿಲ್ಲ , ಸಾಕು , ನಂಗೇನೂ
ಗೊತ್ತಾಗೋದು ಬೇಕಾಗಿಲ್ಲ , ನಾನ್ ಹೀಗೆ ಇದ್ದುಬಿಡ್ತೀನಿ.
ನಂಗ್ ಹೇಗೆ ಇರೊಳಕ್ಕೆ ಬಿಡಿ ಪ್ಲೀಸ್

MUDUKA

ನಿನಗಿದು ಗೊತ್ತಾಗಲೇಬೇಕು ಅಪೂರ್ವ , ನಾನ್
ಬೇರೆಯಾರು ಅಲ್ಲ , ನೀನೇ ‼

ಅಪೂರ್ವನಿಗೆ ಶಾಕ್ ಆಗುತ್ತದೆ.

MUDUKA (CONT'D)

ಪ್ಲೀಸ್ ನನ್ ಮಾತ್ ಕೇಳು ‼ ಕಾಮ್ ಡೌನ್ , ಕಾಮ್
ಡೌನ್ ಅಪೂರ್ವ

ಅಪೂರ್ವನಿಗೆ ದಿಕ್ಕೆ ತೋರುವುದಿಲ್ಲ . ಮುದುಕ ಅಪೂರ್ವನ ಎದುರಿಗೆ ಕೂರುತ್ತಾನೆ

SWA SCREENWRITERS ASSOCIATION

MUDUKA (CONT'D)

ಆರ್ ತಿಂಗಳಲ್ಲಿ ಯಶೋಧ ತೀರಿಕೊಳ್ತಾಳೆ , ಸ್ವಪ್ನಾನು
ನಿನ್ ಬಿಟ್ಟೋಗ್ತಾಳೆ , ಒಳ್ಳೆಕಡೆ ಕೆಲಸ ಸಿಗತ್ತೆ , ಹಣ
ಚನ್ನಾಗೇ ಸಂಪಾದನೆ ಮಾಡ್ತ್ಯಾ , ಆದ್ರೆ ಯಾರೂ ನಿನ್ನೋರ್
ಅಂತ ಇರೋದೆಯಿಲ್ಲ , ಒಂಟಿಯಾಗಿ ಬಾದುಕ್ತ್ಯಾ ,
ಒಂಟಿತನ ನಿನ್ನ ವರ್ಷದಿಂದ ವರ್ಷಕ್ಕೆ ಕುಗ್ಗುಸ್ತ ಬರತ್ತೆ.
೨೦೩೨ ಕ್ಕೆ ಕೆಲಸದ ಮೇಲೆ  ಕಲ್ಕತ್ತಾಗೆ  ಹೋಗ್ತ್ಯಾ , ಅಲ್ಲಿ
ಅರಬಿಂದ್ ಸೇನಾ ಅನ್ನೋ ವ್ಯಕ್ತಿ ಪರಿಚಯ ಆಗತ್ತೆ ,
ಅವನ್ ಇಂದ ಈ ಐ ಡ್ರಾಪ್ ವಿಚಾರ ತಿಳಿಯತ್ತೆ ,
ಪೀಸ್ಫ್ಯುಲ್ ಆಗಿ ಬದುಕೋಕೆ ಆಗದಷ್ಟು ವೈಲೆನ್ಸ್  ,
ವಾರಗಳ ಗಟ್ಟಲೆ ಕಾರ್ಫ್ಯು , ಹೊಸ ಹೊಸ ವೈರಸ್ ಗಳು ,
ಮನುಷ್ಯ ಮನುಷ್ಯನೇ ಮೇಲೆ ನಂಬಿಕೆನೇ ಇಡೋಕಾಗಲ್ಲ ,
ಬದುಕು ಕೊಲ್ಲೋದಕ್ಕೆ ಶುರುಮಾಡುತ್ತೆ ,

MONTAGES

INT. APOORVA / ARIVU HOUSE 2032

ಸಂಭಾಷಣೆಯ ಮೇಲೆ ದೃಶ್ಯ ಮೂವ್ ಆಗುತ್ತದೆ

1. ಅರಿವು ಪ್ರತೀ ರಾತ್ರಿ ಮಾತ್ರೆ ತಗೆದುಕೊಂಡು ಮಲಗುತ್ತಿರುತ್ತಾನೆ
2. ಒನ್ಲೈನ್ ಅಲ್ಲಿ ಮೀಟ್ ನಡೆಯುತ್ತದೆ , ಕೆಲಸ ಮಾಡುತ್ತಾನೆ
3. ಸೂಪ್ ಹಾಗು ಬ್ರೆಡ್ ಸೇವಿಸುತ್ತಾನೆ
4. ಪ್ರತಿದಿನ ಅದೇ ರೊಟಿನ್ , ಅದೇ ಕೆಲಸ
5. ಜನ ಸಂಪರ್ಕ ಇಲ್ಲದೆ ಒಂಟಿತನದಲ್ಲಿ ಬದುಕುತ್ತಿದ್ದಾನೆ

MUDUKA

( ವಾ .ಓ ) ನಿನ್ನೂರು ಅಂತ ಯಾರೂ ಇಲ್ಲ , ಅದು
ನಿನ್ನೂರು ಅಲ್ಲ , ವಾಪಾಸ್ ಬೆಂಗಳೂರಿಗೆ ಹೋಗಣ
ಅಂದ್ರು , ಅಲ್ಲೂ ಅದೇ ಪರಿಸ್ಥಿತಿ , ಆಗ ಇಲ್ಲಿಗಲ್ ಆಗಿ
ಅರಬಿಂದೋ ಸಹಾಯದಿಂದ ಐ ಡ್ರಾಪ್ ತರುಸ್ಕೊಳ್ತ್ಯಾ
ಅಪೂರ್ವ ಎರಡ್ ರೀತಿ ಐ ಡ್ರಾಪ್ಸ್ ಇವೆ , ಮೊದಲನೇದು
ನಿನ್ ಎಷ್ಟೊತ್ತು ಬ್ಲಿಂಕ್ ಹೋಲ್ಡ್ ಮಾಡ್ತ್ಯಾ ಅಷ್ಟೊತ್ತು
ಇನ್ನೊಂದು ಟೈಮ್ ಲೈನ್ ಅಲ್ಲಿ ಇರ್ಬೋದು ,
ಇನ್ನೊಂದು ಒನ್ ವೆ ಟಿಕೆಟ್ , ಐ ಡ್ರಾಫ್ ಹಾಕಿ ಕಣ್ಣು
ಬ್ಲಿಂಕ್ ಮಾಡಿದ್ರೆ ಮುಗಿತು , ನೀನು ಕೊನೆ ಸರ್ತಿ ಕಣ್ಣು
ಮುಚ್ಚೋತನಕ ವಾಪಸ್ ಬರೋದಕ್ಕೆ ಆಗೋಲ್ಲ. ಅಪೂರ್ವ
ಅರಿವು ಆಗಿದ್ದು ಆಗ್ಲೇ , ಕಳೆದುಕೊಂಡ ಮನುಷ್ಯ
ಸಂಬಂಧ , ಸ್ನೇಹ , ಪ್ರೀತಿಯ ಹುಡುಕಾಟದಲ್ಲಿ ೧೯೯೬ ಕ್ಕೆ
ನನ್ನೂರಿಗೆ ಟ್ರಾವೆಲ್ ಮಾಡಿದೆ , ಒನ್ ವೆ ಟಿಕೇಟ್
ತಗೊಂಡು

ಸಂಭಾಷಣೆಯ ಮೇಲೆ ದೃಶ್ಯ ಮೂವ್ ಆಗುತ್ತದೆ

1 ಅಪೂರ್ವ ಪ್ರೇಮ್ಯ ತರಿಸಿಕೊಳ್ಳುವ ಇನ್ಸೆರ್ಟ್ಸ್
2 ಕಂಪನಿಗೆ ರೆಸಿಗ್ನೇಷನ್ ಫಾರ್ವರ್ಡ್ ಮಾಡುತ್ತಾನೆ
3 ಪ್ರೇಮ್ಯ ಪ್ರಾಡೆಕ್ಟ್ ಮೂಲಕ ಎದೆಯ ಮೇಲೆ ಮೈನ್ಯೂಟ್ ಲೇಸರ್ ಆಪರೇಟ್ ಆಗುತ್ತದೆ

CUT TO:

EXT. RAYADURGA VILLAGE . DAY

**September 5 . 1996**

ಅಮೇರಿಕ ಅಮೇರಿಕ ಚಿತ್ರದ ಪೋಸ್ಟರ್ , ಅಮೋಘವರ್ಷ ನೃಪತುಂಗನ ಸಾಹಿತ್ಯ ಕೊಡುಗೆ ಕುರಿತಾದ ಕಾರ್ಯಕ್ರಮದ ಪೋಸ್ಟರ್ ಹಾಗೂ ಒಂದು ಮೂಲೆಯಲ್ಲಿ ನಾಗಮಂಡಲ ಸಿನೆಮಾದ ಪೋಸ್ಟರ್ ಅಂಟಿಸಿರುವ ಬಸ್ ಸ್ಟಾಪ್ ಗೋಡೆಯ ಮುಂದೆ ಕೈನಲ್ಲಿ ಒಂದು ಸೂಟ್ಕೇಸ್ ಮತ್ತೊಂದು ಕೈಲಿ ಪಾಂಪ್ಲೆಟ್ ಹಿಡಿದು ಅರಿವು ಅವನ ಎದುರಿಗೆ ನಿಂತಿರುವ ಪ್ರೀಮಿಯರ್ ಪದ್ಮಿನಿ ಕಾರ್ ಸಮೀಪ ನಡೆದು ಬರುತ್ತಿದ್ದಾನೆ , ಕಾರ್ ಒಳಕ್ಕೆ ಗೋಪಾಲ್ ಕೃಷ್ಣ ಅರಸ್ ಕುಳಿತಿರುತ್ತಾರೆ , ಅರಿವು ತನ್ನ ಕೈಲಿ ಇರುವ ಕಾರ್ಯಕ್ರಮದ ಪಾಂಪ್ಲೆಟ್ ನೋಡುತ್ತಾ ಅವರನ್ನು ಮಾತನಾಡಿಸಲು ಮುಂದಾಗುತ್ತಾನೆ.

ARIVU

ಸರ್ ನಮಸ್ಕಾರ

GOPAL KRISHNA URS

( ಕಡಲೆಕಾಳು ತಿನ್ನುತ್ತಿರುತ್ತಾನೆ ) ತಾವ್ಯಾರು ಅಂತ ಗೊತ್ತಾಗಿಲ್ಲ

ARIVU

ಅರಿವು ಅಂತ ಮೈಸೂರ್ ಇಂದ ಬಂದಿದ್ದೀನಿ

CUT TO:

SWA SCREENWRITERS ASSOCIATION

INT. APOORVA HOUSE , NIGHT

MUDUKA

( ವಾ .ಓ ) ದೇವಕಿ ನಾನು ಒಂದಾದ್ವಿ , ಮದುವೆ ಆಯಿತು ತೃಪ್ತಿಯಾಗುವಷ್ಟು ಮುದ್ದಾಡ್ತಿದ್ವಿ , ಅವಳಿದ್ರೆ ನಾನ್ ಮೈ ಮರೆತು ಹೋಗ್ತಿದ್ದೆ. ನೆಮ್ಮದಿಯಾಗಿದ್ದೆ. ಇಷ್ಟ್ ವರ್ಷ ಕಳೆದುಕೊಂಡಿದ್ದ , ಪ್ರೀತಿ , ಫ್ಯಾಮಿಲಿ ಬಂಡೇಜ್ , ಸ್ನೇಹ ಎಲ್ಲ ಜಾಸ್ತಿನೇ ಸಿಕ್ಕಿತ್ತು . ಒಂದ್ ಸರ್ತಿ ಕಲ್ಲಯ್ಯನ ಮಗಳು ರೇವತಿನ ಹುಡುಕಿ ಸಹಾಯ ಮಾಡಣ ಅಂತ ಟೆಂಪರರಿ ಟ್ರಾವೆಲ್ ಮಾಡಿದೆ .ನನ್ ತಗೆದುಕೊಂಡ ತಪ್ಪು ನಿರ್ಧಾರ ಅದು , ಒನ್ ವೆ ಟ್ರಾವೆಲ್ ಗೆ ಮೈನರ್ ಆಗಿ ಆಪರೇಟ್ ಮಾಡಿ ಚೆಸ್ಟ್ ಹತ್ರ ಸರ್ಕುಲರ್ ರಿಂಗ್ ಹಾಕಿರ್ತಾರೆ , ಅವತ್ತು ರೇವತಿಗೆ ಹೆಲ್ಪ್ ಮಾಡೋವಾಗ ಬಾಡಿ ಸ್ಪೀಡ ಎಕ್ಸೀಡ್ ಆಗಿ ರಿಂಗ್ ಬ್ರೇಕ್ ಆಗೋಗಿತ್ತು , ಮತ್ತೆ ಹುಡುಕೋ ಪ್ರಯತ್ನ ಮಾಡಿದೆ ಸಿಗ್ಲೆಯಿಲ್ಲ , ರಿಂಗ್ ಹೋದ್ರೆ , ಮ್ಯಾಕ್ಸಿಮಮ್ ಒನ್ ಇಯಾರ್ ಆ ಟೈಮ್ ಲೈನ್ ಅಲ್ಲಿ ಸರ್ವಯ್ವ್ ಆಗಬೋದು , ಅಷ್ಟೇ ದಿನಗಳು ಕಳೆದಹಾಗೆ , ಕಣ್ಣು ವಿಪರೀತ ನೊಯ್ಯೊದಕ್ಕೆ ಶುರುವಾಯ್ತು , ಬಿಸಿಲಿಗೆ ಒಂದೊಂದ್ ಸರ್ತಿ ಕಣ್ಣು ಬಿಡೋದಕ್ಕೂ ಸಾಧ್ಯ ಆಗ್ತಿರ್ಲಿಲ್ಲ. ತುಂಬಾ ಸರ್ತಿ ವ್ರೇಮ್ಯ ಕಂಪನಿಗೆ ಕನೆಕ್ಟ್ ಆಗೋಕೆ ಟ್ರೈ ಮಾಡ್ತಿದ್ದೆ ಆದ್ರೆ ಆಗ್ಲೆಯಿಲ್ಲ. ಒನ್ ಫೈನ ಡೇ

MONTAGES

EXT. RAYADURGA ROADS , DAY

EXT. SHANTHALA BRIDGE , DAY

INT. GOPAL KRISHNA HOUSE , DAY

INT. GOPAL KRISHNA HOUSE , NIGHT

INT. GOPAL KRISHNA HOUSE , ROOM , DAY

SWA SCREENWRITERS ASSOCIATION

INT. GOPAL KRISHNA HOUSE , ROOM , NIGHT

ಸಂಭಾಷಣೆಯ ಮೇಲೆ ಮೊಂಟೆಜ್ ಸಾಗುತ್ತವೆ

೧. ದೇವಕಿ ಅರಿವು ಮುದ್ದಾಡುವುದು
೨. ಅರಿವು ಫ್ಯಾಮಿಲಿ ಪ್ರೀತಿಯನ್ನು ಪಡೆಯುತ್ತಿರುವುದು
೩. ಕಾರ್ ಅಲ್ಲಿ ನಾಲ್ಕೂ ಜನರೂ ಟ್ರಾವೆಲ್ ಮಾಡುತ್ತಿರುವುದು.
೪. ರೇವತಿಗೆ ಸಹಾಯ ಮಾಡಿದಾಗ ರಿಂಗ್ ಬ್ರೇಕ್ ಆಗುವುದು
೫. ಅರಿವಿಗೆ ಕಣ್ಣಿನ ಸಮಸ್ಯೆ ಶುರುವಾಗುವುದು , ಎದೆ ವಿಪರೀತವಾಗಿ ನೋಯಲು ಪ್ರಾರಂಭವಾಗುವುದು
೬. ರಾತ್ರಿ ಸೂಟ್ ಕೇಸ್ ತಗೆದು ಕನೆಕ್ಟ್ ಮಾಡಲು ಪ್ರಯತ್ನ ಪಡುವುದು

CUT TO:

INT. GOPAL KRISHNA HOUSE , NIGHT

ದೇವಕಿ ಹೊಟ್ಟೆಗೆ ಅರಿವು ತಲೆಯಿಟ್ಟಿದ್ದಾನೆ , ಮಗು ಒದೆಯುತ್ತದೆ , ಇಬ್ಬರು ಸಂತಸದಿಂದ ಇದ್ದಾರೆ ಆದರೆ ಅಪೂರ್ವನಿಗೆ ಎದೆಯಲ್ಲಿ ವೈಬ್ರೇಶನ್ ಶುರುವಾಗುತ್ತದೆ. ಕಣ್ಣು ಮಂಜಾಗುತ್ತದೆ , ಅಲ್ಲಿಂದ ಸ್ನಾನದ ಕೊಠಡಿಗೆ ಹೋಗುತ್ತಾನೆ , ಎದೆಯಲ್ಲಿ ರೆಡ್ ಲೈಟ್ ಬ್ಲಿಂಕ್ ಆಗುತ್ತಿರುತ್ತದೆ. ಜೋರಾಗಿ ಎದೆಗೆ ಗುದ್ದುತ್ತಾನೆ , ಲೈಟ್ ಪಾಪ್ ಆಪ್ ಆಗುವುದು ನಿಲ್ಲುತ್ತದೆ. ಜೋರಾಗಿ ಉಸಿರೆಳೆದುಕೊಳ್ಳುತ್ತಾನೆ.

CUT TO:

INT. GOPAL KRISHNA HOUSE , ROOM , NIGHT

EXT. GOPAL KRISHNA HOUSE , NIGHT

ಅರಿವು ಎದೆಗೆ ಒರಗಿ ದೇವಕಿ ಮಲಗಿದ್ದಾಳೆ , ಅರಿವು ಎದೆಯಲ್ಲಿ ಮತ್ತೆ ಕೆಂಪು ಲೈಟ್ ಬರಲು ಪ್ರಾರಂಭವಾಗುತ್ತದೆ. ಎದೆ ವೈಬ್ರೇಟ್ ಆಗುತ್ತದೆ , ರಾತ್ರಿ ಅವಳನ್ನು ಮಲಗಿಸಿ , ಕಿಟಕಿಗಳನ್ನು ಮುಚ್ಚು ಸೂಟ್ಕೇಸ್ ತಗೆದುಕೊಂಡು ಹೊರಕ್ಕೆ ನಡೆಯುತ್ತಾನೆ , ಮತ್ತೊಮ್ಮೆ ವಾಚ್ ಹಾಕಿಕೊಂಡು , ಫೇಸ್ ಅಕ್ಸೆಸ್ ಮಾಡಿ , ಟ್ರೈ ಮಾಡುತ್ತಾನೆ , ಕನೆಕ್ಷನ್ ಫೇಲ್ಯೂರ್ ಆಗುತ್ತದೆ. ಅರಿವು ಕಣ್ಣು ತನ್ನಷ್ಟಕ್ಕೆ ತಾನೇ ಮುಚ್ಚಿಕೊಳ್ಳುತ್ತದೆ.

CUT TO:

EXT. MARALUGAADU , DAY

ಅರಿವು ಮರಳುಭೂಮಿಯಲ್ಲಿ ಓಡಾಡುತ್ತಿದ್ದಾನೆ , ಏನೂ ಅರ್ಥವಾಗುತ್ತಿಲ್ಲ , ವಾಚ್ ಸರಿಮಾಡಲು ಪ್ರಯತ್ನಿಸುತ್ತಾನೆ , ಸರಿಹೋಗುವುದಿಲ್ಲ , ದೂರದಲ್ಲಿ ಯಾರೋ ನಡೆದು ಬರುತ್ತಿರುವುದು ಕಾಣುತ್ತದೆ , ಅಲ್ಲಿಗೆ ನಡೆಯಲು ಮುಂದಾಗುತ್ತಾನೆ , ಅಲ್ಲಿ ವಿಪರೀತ ಬೆಳಕು ಮೂಡುತ್ತದೆ. ಕಣ್ಣು ಮುಚ್ಚುತ್ತಾನೆ.

CUT TO:

SWA SCREENWRITERS ASSOCIATION

EXT. ROAD , 2033 , NIGHT

ಅರಿವು ರಸ್ತೆಯಲ್ಲಿ ಬಿದ್ದಿದ್ದಾನೆ , ದೂರದಲ್ಲಿ ಎ.ಐ ಶಬ್ದ ಕೇಳುತ್ತಿದೆ. ಅರಿವು ಕಣ್ಣು ಬಿಡುತ್ತಾನೆ.

CUT TO:

INT. APOORVA HOUSE , NIGHT

ಅಪೂರ್ವ ಗಾಭರಿಯಾಗಿ ಕುಳಿತಿದ್ದಾನೆ , ಅರಿವು ಮಾತನಾಡಲು ಮುಂದುವರೆಸುತ್ತಾನೆ.

MUDUKA

೨೦೩೩ ಕ್ಕೆ ಟ್ರಾವೆಲ್ ಬ್ಯಾಕ್ ಮಾಡಿದೆ, ಮತ್ತೆ
ಅರಬಿಂದೋ ನ ಕಾಂಟ್ಯಾಕ್ಟ್ ಮಾಡಿದೆ , ಪ್ರೇಮ್ಯ
ಪ್ರೊಡೆಕ್ಟ್ಸ್ ಸಿವಿಲಿಯನ್ಸ್ ಗೆ ಸಿಗೋದು ತುಂಬಾ ಕಷ್ಟ
ಆಗ್ತಿದೆ , ಟ್ರೈ ಮಾಡ್ತೀನಿ ಅಂದ , ತುಂಬಾ ಪ್ರಯತ್ನ ಪಟ್ಟೆ
೨೦೩೮ರಲ್ಲಿ ಒನ್ ವೆ ಟಿಕೆಟ್ ಸಿಕ್ತು ೨೦೦೧ ಕ್ಕೆ ನನ್ನ
ಲೀಡ್ ಮಾಡ್ತು , ಅದಕ್ಕೂ ಮುಂಚಿನ ವರ್ಷಗಳನ್ನ ಆಕ್ಸಸ್
ಮಾಡೋಕ್ಕಾಗಲ್ಲ ಅಂತ ಗೊತ್ತಾಯ್ತು ,.. ಕಡೇಪಕ್ಷ
ಈಗಲಾದ್ರೂ ಆಯ್ತಲ್ಲ ಅಂತ ಟ್ರಾವೆಲ್ ಬ್ಯಾಕ್ ಮಾಡಿದೆ

CUT TO:

EXT. GOPAL KRISHNA HOUSE , NIGHT

ಅರಿವು ಗೋಪಾಲ್ ಕೃಷ್ಣ ಮನೆಯ ಮುಂದೆ ನಿಂತಿದ್ದಾನೆ , ಇನ್ನೇನು ಮನೆಯ ಕಡೆಗೆ ಹೋಗಬೇಕು ಎನ್ನುವಾಗ ಅವನ ಹೆಗಲ ಮೇಲೆ ಗೋಪಾಲ್ ಕೃಷ್ಣ ಕೈ ಇಡುತ್ತಾರೆ.

ARIVU

ಗೋಪಾಲ್ ಸರ್

ಗೋಪಾಲ್ ಗೆ ಶಾಕ್ ಆಗುತ್ತದೆ

GOPAL KRISHNA URS

ಓ ಟೈಮ್ ಟ್ರಾವೆಲರ್ , ಮಾತ್ಯಾಕ್ ಬಂದೆ

ARIVU

ಏನ್ ಮಾತಾಡ್ತಿದ್ದೀರಾ ಸರ್ , ಟೈಮ್ ಟ್ರಾವೆಲ್ ಆ ,
ಹಾಗೇನು ಇಲ್ಲ , ನಾನೆಲ್ಲ ಹೇಳ್ತಿನಿ

SWA SCREENWRITERS ASSOCIATION

GOPAL KRISHNA URS

ನಂಗೇನು ಹೇಳೋದ್ ಬೇಕಾಗಿಲ್ಲ , ದೇವಕಿನ ಸಾಯ್ಸಿ ,
ನಮ್ ಬದುಕು ಹಾಳ್ ಮಾಡಿ ಮತ್ತೆ ಬಂದಿದ್ಯ ,
ನಮ್ಮಿಂದ ಏನ್ ಬೇಕು ನಿಂಗೆ ‼

ARIVU

ದೇವಕಿ , ದೇವಕಿ , ತೀರಿಹೋದ್ಲಾ ‼ , ಮತ್ತೆ ಮಗು

ಗೋಪಾಲ್ ಕೈ ಗಡಿಯಾರ ನೋಡಿಕೊಳ್ಳುತ್ತಾ , ಅರ್ಜೆನ್ಸಿ ಲಿ ಇರುತ್ತಾನೆ

GOPAL KRISHNA URS

ನಾಳೆ ಮದ್ಯಾನ , ಶಾಂತಲಾ ನದಿ ತೀರದಲ್ಲಿ ಭೇಟಿ
ಮಾಡಿ , ನನ್ ಹೆಂಡತಿ ಬರೋ ಟೈಮ್ ಆಯ್ತು , ಮೊದ್ಲು
ಇಲ್ಲಿಂದ ಹೊರಡಿ , ಇದೊಂದ್ ಉಪಕಾರ ಆದರು ಮಾಡಿ
ಪ್ಲೀಸ್

J CUT :

EXT. SHANTHALA RIVER BANK , DAY

ಗೋಪಾಲ್ ಕಾರ್ ಪ್ರವೇಶಿಸುತ್ತದೆ , ಕಾರ್ ಅಲ್ಲಿ ಅರಿವು ಸೂಟ್ ಕೇಸ್ ತಂದಿರುತ್ತಾನೆ , ಹಿಂದಿನ ಸೀಟ್ ಅಲ್ಲಿ ಒಂದು ರಾಡ್ ಕೂಡ ತಂದಿರುತ್ತಾನೆ.

GOPAL KRISHNA URS

ನೋಡಿ , ಆ ಮಗುಗೆ ನಾನು ಯಶೋಧನೆ ತಂದೆ
ತಾಯಿಯಾಗಿದ್ದೀವಿ , ನಮ್ ಬದುಕಲ್ಲಿ ನೆಮ್ಮದಿ ಕಿತ್ಕೊಂದ್ರಿ
ದೇವಕಿನ್ ಕಿತ್ಕೊಂದ್ರಿ , ಈಗ ಮಗೂನೂ ಕಿತ್ಕೊಳಕ್
ಬಿಡೋದಿಲ್ಲ , ದಯವಿಟ್ಟು ಹೊರಟುಹೋಗಿ ಇಲ್ಲಿಂದ

ಅರಿವು ಕೈಲಿ ಸೂಟ್ಕೇಸ್ ಇಡುತ್ತಾನೆ

ARIVU

ಸರ್ ಏನ್ ಮಾತಾಡ್ತಿದ್ದೀರಾ ‼

ಗೋಪಾಲ್ ಅರಿವು ಕೊರಳು ಪಟ್ಟಿ ಹಿಡಿಯುತ್ತಾನೆ , ಕತ್ತು ಹಿಸುಕಲು ಮುಂದಾಗುತ್ತಾನೆ , ಅರಿವು ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ , ಆದರೆ ಎಷ್ಟೇ ಶ್ರಮಪಟ್ಟರು ಆಗುವುದಿಲ್ಲ , ಗೋಪಾಲ್ ನಿಂದ ಬಿಡಿಸಿಕೊಳ್ಳುತ್ತ

ARIVU (CONT'D)

ಒಂದ್ ಸರ್ತಿ ನನ್ ಮಗುನ ತೋರ್ಸಿ , ಮತ್ತೆ ನಿಮಗೆ
ತೊಂದ್ರೆ ಕೊಡೋದಿಲ್ಲ ‼

ಗೋಪಾಲ್ ಪ್ರಯತ್ನಮೀರಿ ಅರಿವಿಗೆ ಹೊಡೆಯುತ್ತಾನೆ , ಅರಿವು ಕುಸಿದು ಬೀಳುತ್ತಾನೆ , ತನ್ನ ಕಾರಿನಲ್ಲಿದ್ದ ರಾಡ್ ತಗೆದುಕೊಂಡು ಬಂದು ರಭಸವಾಗಿ ಹೊಡೆಯುತ್ತ ಅರಿವನ್ನು ನೀರಿಗೆ ಎಸೆಯುತ್ತಾನೆ , ಅರಿವು ಜ್ಞಾನ ತಪ್ಪಿಹೋಗುತ್ತಾನೆ , ಅಲ್ಲಿಂದ ಕಾರ್ ಹತ್ತಿ ಓಡಿಹೋಗುತ್ತಾನೆ. ನೀರಿನಲ್ಲಿ ರಿಂಗ್ ಕಳಚಿ ನಿಧಾನವಾಗಿ ನೆಲಕ್ಕೆ ಬೀಳುತ್ತದೆ.

CUT TO:

INT. APOORVA HOUSE , NIGHT

MUDUKA

೨೦೩೭ ಕ್ಕೆ ಟ್ರಾವೆಲ್ ಆದೆ , ಮತ್ತೆ ಒಂಟಿಯಾದೆ ‼

APOORVA

ಹಾಗಿದ್ರೆ ದೇವಕಿ ಮಗ , ⁉ ( ನಿಶಬ್ದ ) ನೀವು , ಅಂದ್ರೆ
ನಾನು , ನಾನ್ ನನ್ ತಾಯಿ ಜೊತೆ ಮಲಗಿ , ನನಗೇ
ಜನ್ಮ ಕೊಟ್ನಾ ‼ , ಇಲ್ಲ ನನ್ ನಂಬಲ್ಲ ‼

MUDUKA

ನಿನ್ ನಂಬಲಿ ಬಿಡ್ಲಿ , ಅದೇ ಸತ್ಯ ಅಪೂರ್ವ ಇದೊಂದು
ಲೂಪ್ , ನಾನ್ ಎಷ್ಟೇ ಪ್ರಯತ್ನ ಪಟ್ರು ಇದನ್ನ
ನಿಲ್ಲಿಸೋಕಾಗ್ತಿಲ್ಲ , ಅರಿವು ದೇವಕಿ ಒಂದಾಗ್ತಾರೆ ,
ಅಪೂರ್ವ ಹುಟ್ಟುತಾನೆ , ಅಪೂರ್ವ ಒಂಟಿಯಾಗ್ತಾನೆ ,
ಪ್ರೀತಿ ಹುಡುಕ್ತಾ ಟೈಮ್ ಟ್ರಾವೆಲ್ ಮಾಡ್ತಾನೆ , ಅಪೂರ್ವ
ಮತ್ತೆ ಅರಿವು ಆಗ್ತಾನೆ , ಅರಿವು ದೇವಕಿ ಒಂದಾಗ್ತಾರೆ ‼

ಅಪೂರ್ವ ಜೋರು ಅಳಲು ಮುಂದಾಗುತ್ತಾನೆ.

CUT TO:

SWA
SCREENWRITERS ASSOCIATION



INT.RANGAMANDIRA STAGE , DREAMY

ಅಪೂರ್ವ ಈಡಿಪಸ್ ಆಗಿದ್ದಾನೆ ಆತನ ಸುತ್ತ ಬಲೆಗಳು ಮೂಡಿವೆ , ಆತನ ಕಾಲಲ್ಲಿ ರಕ್ತ ಸೋರುತ್ತಿದೆ , ಇಡೀ ರಂಗಮಂದಿರದಲ್ಲಿ ಅವನೊಬ್ಬನೇ ಇದ್ದಾನೆ

OEDIPUS / APOORVA

ಹುಟ್ಟಿನಲ್ಲಿ ಪಾಪಿ ಈಡಿಪಸ್ , ಮದುವೆಯಲ್ಲಿ ಪಾಪಿ , ತನ್ನ ಕಯ್ಯಿಂದ ಹರಿಸಿದ ರಕ್ತದಿಂದ ಪಾಪಿ , ಓ ಬೆಳಕೇ , ಎಲ್ಲ ಬಯಲಾಗಿ ಬದುಕುಳ್ಳ ನನ್ನನ್ನೂ ಮುಚ್ಚು , ನಾನು ಮತ್ತೆ ನಿನ್ನನ್ನು ನೋಡದಂತಾಗಲಿ.

ಈಡಿಪಸ್ ಕಣ್ಣು ಕಿತ್ತುಕೊಳ್ಳಲು ಮುಂದಾಗುತ್ತಾನೆ.

CUT TO:

INT. APOORVA HOUSE , NIGHT

MUDUKA

ನಾನು ಇದನ್ನ ಅಂತ್ಯ ಮಾಡ್ಬೇಕು ಅಂತಾನೆ ಇಲ್ಲಿವರೆಗೂ ಬಂದೆ , ೨೦೩೭ ರಿಂದ , ೨೦೫೦ ರ ತನಕ ತುಂಬಾ ಟೈಮ್ ಲೈನ್ ಗಳಿಗೆ ಟ್ರಾವೆಲ್ ಮಾಡಿದೆ , ನಾನೇ ಹಿಂದೆ ಹೋಗಿ ಅರಿವು ದೇವಕಿನ ಮೀಟ್ ಆಗದೆಯಿರೋಹಾಗೆ ಮಾಡೋದಕ್ಕೆ ಪ್ರಯತ್ನ  ಪಟ್ಟೆ, ಸಮಯ ಮುಂದೆ ಹೋಗ್ತಿದ್ದಹಾಗೆ , ನಾನ್ ತುಂಬಾ ಹಿಂದೆ ಟ್ರಾವೆಲ್ ಮಾಡೋದು ಕಷ್ಟ ಆಗ್ತಾ ಹೋಯ್ತು , ವರ್ಷಗಳು ಉರುಳ್ತಾಯಿದ್ವು ನಾನ್ ಸೋತಿದ್ದೆ ೨೦೫೦ರಲ್ಲಿ ಸೂಸೈಡ್ ಮಾಡಿಕೊಳ್ಳೋದಕ್ಕೆ ಪ್ರಯತ್ನ ಪಟ್ಟೆ , ಆಗ , ನಾನ್ ಸಾಯಾದ್ರಿಂದ ಈ ಸಮಸ್ಯೆ ಎಂಡ್ ಆಗೋದಿಲ್ಲ , ಅಪೂರ್ವ ಅರಿವು ಆಗೋದನ್ನೇ ತಡಿಯೊ ಕೊನೆ ಪ್ರಯತ್ನ ಮಾಡೋಣ ಅನ್ನಿಸ್ತು , ರಷ್ಯಾ ದ ಡಾರ್ಕ್ ವೆಬ್ ಮೂಲಕ ವ್ರೇಮ್ಯ ಒನ್ ವೆ ಟಿಕೆಟ್ ತಗೊಂಡೆ , ೨೦೨೧ ಕ್ಕೆ ಟ್ರಾವೆಲ್ ಆದೆ , ಅದಕ್ಕೂ ಹಿಂದೆ ಟ್ರಾವೆಲ್ ಆಗೋಕೆ ಆಗ್ಲಿಲ್ಲ. ಅಪೂರ್ವ ಐ ಕಾಂಟ್ ಚೇಂಜ್ ಮೈ ಪಾಸ್ಟ್ , ಬಟ್ ಯು ಕಾನ್ ಚೇಂಜ್ ಯುವರ್ ಫ್ಯೂಚರ್.

APOORVA

ಅಂದ್ರೆ ‼

(CONT'D)


©Srinidhi S
SWA Membership Number:54490

MUDUKA

ಅಪೂರ್ವ – ಅರಿವು ಆಗಬಾರದಂದ್ರೆ , ನೀನು
ಸಾಯಲೇಬೇಕು ‼ , ನಾನೇ ಸಾಕಷ್ಟು ಸಲ ಸಾಯಿಸೋ
ಪ್ರಯತ್ನ ಮಾಡಿದೆ , ನನ್ ಮನ್ಸು ಒಪ್ಲಿಲ್ಲ , ನಿನಗೆ
ಮೊದಲು ವಿಷಯ ತಿಳಿಸಬೇಕು ಅನ್ನಿಸ್ತು

ಮುದುಕನ ಸಂಭಾಷಣೆಯ ಮೇಲೆ ಮಾಂಟೇಜಸ್

MONTAGES

೧. ಗ್ರೀನ್ ರೂಮ್ ಅಲ್ಲಿ ಮುದುಕ ಅಪೂರ್ವನನ್ನು ಸಾಯಿಸಲು ಗನ್ ತೆರೆಯಲು ಮುಂದಾಗುತ್ತಾನೆ ಆದರೆ ಆಗುವುದಿಲ್ಲ , ಹಿಂಜರಿಯುವುದು
೨. ಅವೆನ್ಯೂ ರಸ್ತೆಯಲ್ಲೂ ಗನ್ ಕಡೆಗೆ ಕೈ ಹೋದರೂ ಮುದುಕ ತಡೆದುಕೊಳ್ಳುವುದು

APOORVA

ಏನ್ ಹೇಳ್ತಿದ್ದೀರಾ ‼?

MUDUKA

ಬೇರೆ ಒಪ್ಷನ್ ಇಲ್ಲ

ಮುದುಕ ಬ್ಯಾಗ್ ಇಂದ ಗನ್ ತಗೆದು ಅಪೂರ್ವನ ಕಡೆಗೆ ಪಾಯಿಂಟ್ ಮಾಡುತ್ತಾನೆ , ಅಪೂರ್ವ ಹೆದರುತ್ತಾನೆ.

APOORVA

ನಾನೇನ್ ತಪ್ಪು ಮಾಡಿದೆ , ನಿಮ್ಮ ತಪ್ಪಿಗೆ ನಾನ್ಯಾಕ್
ಸಯ್ಬೇಕು ‼

MUDUKA

ನೀನು ನಾನಾಗಿ ತಪ್ಪು ಮಾಡಬಾರದಂದ್ರೆ , ಇದೊಂದೇ
ಆಪ್ಷನ್ ಇರೋದು ಅಪೂರ್ವ

APOORVA

ಒಂದ್ ನಿಮಿಷ ನನ್ ಮಾತ್ ಕೇಳಿ , ಇವತ್ತೊಂದ್ ದಿನ
ಅವಕಾಶ ಕೊಡ್ತೀರಾ , ಕೊನೆ ಸರ್ತಿ ಸ್ವಪ್ನಾನ್ ಮೀಟ್
ಮಾಡಿ ಬರ್ತೀನಿ. ನಾಳೆ ಸಂಜೆ ನಾನೇ ನೀವಿರೋ ಜಾಗಕ್
ಬರ್ತೀನಿ , ಪ್ಲೀಸ್ , ಅವಕಾಶಕೊಡಿ.

ಅಪೂರ್ವ ಬೇಡಿಕೊಳ್ಳುತ್ತಾನೆ , ಅರಿವು ಗನ್ ಡೌನ್ ಮಾಡುತ್ತಾನೆ.

CUT TO:

SWA SCREENWRITERS ASSOCIATION

EXT. REHEARSAL PLACE , EVENING

ಅಪೂರ್ವ ರಿಹರ್ಸಲ್ ಜಾಗಕ್ಕೆ ಬಂದಿದ್ದಾನೆ , ಸ್ವಪ್ನ ಕಾಣುತ್ತಿಲ್ಲ .ಪ್ರಾಪರ್ಟೀಸ್ ಮೂವ್ ಮಾಡುತ್ತಿರುವ ಕಿಟ್ಟಿಯನ್ನು ಕರೆಯುತ್ತಾನೆ.

APOORVA

ಕಿಟ್ಟಿ ಸ್ವಪ್ನಾನ್ ನೋಡಿದ್ಯಾ !!

KITTI

ಅವ್ಳು ಇವತ್ತು ಬಂದಿಲ್ಲ ಮಗ , ಏನ್ ಮ್ಯಾಟ್ರು

APOORVA

ಏನಿಲ್ಲ , ನನ್ ಕಾಲ್ ಕೂಡ ರಿಸೀವ್ ಮಾಡ್ತಿಲ್ಲ , ನಿನ್ ಮೊಬೈಲ್ ಅಲ್ಲಿ ಒಂದ್ ಸರ್ತಿ ಕಾಲ್ ಮಾಡೋಕ್ಕಾಗತ್ತಾ !!

ಕಿಟ್ಟಿ ಕರೆಮಾಡುತ್ತಾನೆ , ಸ್ವಿಚ್ ಆಫ್ ಎಂದು ಬರುತ್ತದೆ

KITTI

ಸ್ವಿಚ್ ಆಫ್ ಬರ್ತಿದ್ಯಲ್ಲೋ

APOORVA

ಮಗ , ಗಾಡಿ ಕಿ ಕೊಡೊ

CUT TO:

EXT. NEAR SWAPNA HOUSE , DAY

ಅಪೂರ್ವ ಗಾಡಿಯಲ್ಲಿ ಸ್ವಪ್ನನ ಮನೆಯ ಹತ್ತಿರಕ್ಕೆ ನಡೆಯುತ್ತಾನೆ , ಮನೆಯ ಹೊರಕ್ಕೆ ಸ್ವಪ್ನಾಳ ಗಾಡಿಯೂ ನಿಂತಿರುವುದಿಲ್ಲ , ಗಾಡಿಯಲ್ಲಿ ಮೂವ್ ಆಗುತ್ತಾ , ಸ್ವಪ್ನಾಳ ಮನೆಯನ್ನೇ ನೋಡುತ್ತಾನೆ , ಲೈಟ್ ಆಫ್ ಆಗಿರುತ್ತದೆ.

CUT TO:

SWA SCREENWRITERS ASSOCIATION

EXT. APOORVA HOUSE , NIGHT

ಸ್ವಪ್ನಾಗೆ , ಮತ್ತೊಮ್ಮೆ ಕರೆ ಮಾಡುತ್ತಾನೆ , ಸ್ವಿಚ್ ಆಫ್ ಬರುತ್ತದೆ. ಬೇಸರದಲ್ಲಿ ಅಮ್ಮನಿಗೆ ಕರೆ ಮಾಡುತ್ತಾನೆ. ಅಮ್ಮ ಕಾಲ್ ರಿಸೀವ್ ಮಾಡುತ್ತಾಳೆ

APOORVA

ಅಮ್ಮ ಹೇಗಿದ್ದೀಯ !

AMMA

ನೀನ್ ಹೇಗಿದ್ದೀಯ ಅಪ್ಪು , ಅವತ್ ವಿಚಾರ ತಿಳಿದ್ಮೇಲಿಂದ ಸರೀಗ್ ಮಾತಾಡ್ಲೂಯಿಲ್ಲ ನೀನು

APOORVA

ಊಟ ಆಯ್ತಾ ‼

AMMA

ಊರಿಗ್ ಬಾರೋ , ನೋಡ್ಬೇಕು ಅನ್ನಿಸ್ತಿದೆ.

APOORVA

ತಿಂಗ್ಳು ಸಂಬಳದ ಜತೆ ಬರ್ತೀನಮ್ಮ ‼ , ಅಮ್ಮ ಹುಷಾರು

ಅಪೂರ್ವನ ಕಣ್ಣು ತುಂಬಿದೆ , ಆಡಿ ಬಾ ಮಗನೆ ರಾಮು ಹಾಡಿನ ಪ್ಯಾಥೊ ವೇರ್ಶನ್ ಪ್ರಾರಂಭವಾಗುತ್ತದೆ.

FORTH SONG PYATHO

CUT TO:

INT. APOORVA HOUSE , NIGHT

ಅಪೂರ್ವ ಲೆಟರ್ ಬರೆಯುತ್ತಿದ್ದಾನೆ.

APOORVA

(ವಾ.ಓ) ಕೆಲವೊಂದ್ ಸರ್ತಿ , ಉತ್ತರಗಳು ಸಿಗದೆಯಿದ್ರೆನೇ ಚನ್ನಾಗಿರೋದು ಅನ್ಸತ್ತೆ , ಎಷ್ಟೋ ವಿಚಾರಗಳು ಪ್ರಶ್ನೆಗಳಾಗಿ ಉಳ್ಕೊಂಡ್ ಬಿಟ್ರೇನೇ ಒಳ್ಳೇದು.

ಅಪೂರ್ವ ಲೆಟರ್ ಬರೆದವನೇ , ಸೂಟ್ಕೇಸ್ ಮೇಲೆ ಇಡುತ್ತಾನೆ. ಜೇಬಿಗೆ ಪರ್ಸ್ ಮತ್ತೆ ಮೊಬೈಲ್ ಹಾಕಿಕೊಳ್ಳುತ್ತಾನೆ , ವಾಚ್ ಕಯ್ಯಿಗೆ ಕಟ್ಟಿಕೊಳ್ಳುತ್ತಾನೆ . ಕಣ್ಣಿಗೆ ಐ ಡ್ರಾಪ್ ಹಾಕುತ್ತಾನೆ.

CUT TO:

SWA SCREENWRITERS ASSOCIATION

EXT. BENGALURU ROADS , DAY

ಅಪೂರ್ವನ ಮೊಬೈಲ್ ಡೆಡ್ ಆಗಿರುತ್ತದೆ , ಕಾಯಿನ್ ಬೂತ್ ಅಲ್ಲಿ ಸ್ವಪ್ನಾಳಿಗೆ ಕರೆ ಮಾಡುತ್ತಿದ್ದಾನೆ ಸ್ವಪ್ನ ಕಾಲ್ ಪಿಕ್ ಮಾಡುತ್ತಾಳೆ.

APOORVA

ಹಲೋ ಸ್ವಪ್ನ ..

SWAPNA

ಯಾರು !

APOORVA

ನಿಮ್ಮಜ್ಜ ನಾನ್ ಕಣೆ ಅಪೂರ್ವ

SWAPNA

ನಿನ್ ಮೊಬೈಲ್ ಗೆ ಏನಾಯ್ತೋ !! ,
ಇದ್ಯಾವ್ ನಂಬರ್ ಓ

APOORVA

ಮೊಬೈಲ್ ಅಲ್ಲಿ ಔಟ್ಗೋಇಂಗ್ ಹೋಗ್ತಾಯಿಲ್ಲ ಕಣೆ
ಅದಿಕ್ಕೆ ಕಾಯಿನ್ ಬೂತ್ ಇಂದ ಕಾಲ್ ಮಾಡಿದೆ !

SWAPNA

ಏನ್ ವಿಷ್ಯ !?

APOORVA

ಆಫೀಸ್ ನಾಲ್ಕಕ್ಕೆ ಮುಗ್ಯತ್ತೆ ಅಂದ್ಯಲ್ಲೇ , ಅದಿಕ್ಕೆ , ಆಗ್ಲೇ
ಆಫೀಸ್ ಹತ್ರ ಬಂದ್ಬಿಟ್ಟಿದ್ದೀನಿ !

SWAPNA

ಐದು ನಿಮಿಷ ಕಣೋ , ಒಂದ್ ಮೇಲ್ ಫಾರ್ವರ್ಡ್
ಮಾಡಿ ಲಾಗೌಟ್ ಆಗ್ತೀನಿ

CUT TO:

SWA SCREENWRITERS ASSOCIATION

ಹಾಡು ಪುನರಾರಂಭವಾಗುತ್ತದೆ

EXT. SWAPNA OFFICE , DAY

EXT. BENGALURU ROADS , DAY

INT. CAFE , NIGHT

INT. CAFE TOILET , NIGHT

MONTAGES

ಅಪೂರ್ವ ಸ್ವಪ್ನ ಆಫೀಸ್ ಹೊರಗಡೆಯಿದ್ದಾನೆ. ಸ್ವಪ್ನ ಅಪೂರ್ವ ಗಾಡಿ ಹತ್ತುತ್ತಾರೆ , ಒಂದು ಸಿಗ್ನಲ್ ಅಲ್ಲಿ ಗಾಡಿ ನಿಲ್ಲುತ್ತದೆ , ಅಷ್ಟರಲ್ಲಿ ಸ್ವಪ್ನ ಮೊಬೈಲ್ ರಿಂಗ್ ಆಗುತ್ತದೆ , ಸ್ವಪ್ನ ಮೊಬೈಲ್ ತೆರೆದು ಅಪೂರ್ವನಿಗೆ ಕೊಡುತ್ತಾಳೆ. ಅಪೂರ್ವ ನೋಡುತ್ತಾನೆ , ಅಪೂರ್ವನಿಂದ ಕರೆ ಬಂದಿರುತ್ತದೆ . ಕಾಲ್ ಕಟ್ ಮಾಡಿ ಮೊಬೈಲ್ ಸ್ವಿಚ್ ಆಫ್ ಮಾಡುತ್ತಾನೆ , ದೂರದಲ್ಲಿ ಪಾನಿಪುರಿ ಅಂಗಡಿಯ ಬಳಿ ನಿಂತಿರುವ ಅಪೂರ್ವ ಈ ಅಪೂರ್ವನನ್ನು ನೋಡುತ್ತಾನೆ.

೧. ಅಪೂರ್ವ ಹಾಗೂ ಸ್ವಪ್ನ ಕೆಫೆಗೆ ಬಂದಿದ್ದಾರೆ .ಕೆಫೆ ಎಂಟರಿಂಗ್ ಅಲ್ಲಿ ಶಾಕುಂತಲೆ ನಾಟಕದ ಪೋಸ್ಟರ್ ಇರುತ್ತದೆ
೨. ಆರ್ಡರ್ ಮಾಡುವಂತೆ ಅಪೂರ್ವ ಕೇಳುತ್ತಿದ್ದಾನೆ.
೩.ಆರ್ಡರ್ ಬರುತ್ತದೆ , ಇಬ್ಬರೂ ತಿನ್ನುತ್ತಾ ಮಾತನಾಡುತ್ತಾರೆ , ಅಪೂರ್ವ ಸ್ವಪ್ನಾಳನ್ನೇ ನೋಡುತ್ತಾನೆ.
೪. ಸ್ವಪ್ನ ಅಪೂರ್ವನ ಜತೆಗೆ ಒಂದೆರಡು ಫೋಟೋಗಳನ್ನು ತಗೆದುಕೊಳ್ಳುತ್ತಾಳೆ.
೫. ಅಪೂರ್ವ ಐದು ನಿಮಿಷ ಬರುತ್ತೇನೆ ಎಂದು ಹೇಳುತ್ತಾನೆ. ಸ್ವಪ್ನ ಎಲ್ಲಿಗೆ ಎಂದು ಕೇಳುತ್ತಾಳೆ , ಅಪೂರ್ವ ಸುಸು ಎಂದು ಕೈನಲ್ಲಿ ತೋರಿಸುತ್ತಾನೆ.
೬. ಅಪೂರ್ವ ಟಾಯ್ಲೆಟ್ ಗೆ ಹೋದವನೇ ಬಾಗಿಲು ಹಾಕಿಕೊಂಡು ಕಣ್ಣು ಮುಚ್ಚುತ್ತಾನೆ. ಹಾಗು ಮತ್ತೆ ಕಣ್ಣು ಬಿಡುತ್ತಾನೆ.
೭. ಅಪೂರ್ವ ಸ್ವಪ್ನ ಮಾತನಾಡುತ್ತಿದ್ದಾರೆ.

ಸ್ವಪ್ನ ತನ್ನ ಮೊಬೈಲ್ ಅಲ್ಲಿ ರೆಕಾರ್ಡ್ ಮಾಡುತ್ತಿದ್ದಾಳೆ , ಅಪೂರ್ವ ಮಾತನಾಡುತ್ತಿದ್ದಾನೆ

SWAPNA

ನಾನು ಸ್ವಲ್ಪ ದಿನ ಟೈಮ್ ಬೇಕು ಅಂದಾಗ ಏನ್ ಅನ್ಸಿತ್ ನಿಂಗೆ ⁉

APOORVA

ನಿಂಗೂ ನಾನ್ ಇಷ್ಟ ಇದೀನಿ ಅಂತ ಕನ್ಫರ್ಮ್ ಆಯ್ತು ಅಷ್ಟೇ

SWAPNA

ವಾಟ್ , ಕನ್ಫರ್ಮ್ ಆಗ್ಬಿಡ್ತಾ ⁉ , ಸುಳ್ಳು ( ನಗುತ್ತ )

APOORVA

ನಿನ್ ಹೇಗೆ ಅಂತ ,ನಂಗೊತ್ತಿತ್ತು , ಪ್ರಪೋಸಲ್ ಇಷ್ಟ
ಆಗ್ದೇ ಇದ್ದಿದ್ರೆ ಸ್ಟ್ರೇಟ್ ಆಗೇ ಹೇಳ್ಬಿಡ್ತಿದ್ದೆ ನೀನು ,
ಯಾವಾಗ ಟೈಮ್ ತಗೋಂತಿನಿ ಅಂದ್ಯೋ , 80%
ಒಪಿಕೊಂಡ ಹಾಗೇನೇ ಅಂತ ಫಿಕ್ಸ್ ಆಗೋದೇ

ಲ. ಅಪೂರ್ವ ಸ್ವಪ್ನಾಳ ಕೈಗಳನ್ನು ಹಿಡಿಯುತ್ತಾನೆ.
೯. ಇಬ್ಬರೂ ತುಂಬಾ ಪ್ರೀತಿಯಿಂದ ಮಾತನಾಡುತ್ತಿದ್ದಾರೆ. ಇಬ್ಬರು ಚುಂಬಿಸುತ್ತಾರೆ

APOORVA
(CONT'D)
ಯಾವ ಮೋಹನ ಮುರುಳಿ ಹಾಡು ಹೇಳೇ !!

SWAPNA

ಇಲ್ಲಿ ಆಗಲ್ಲ ಕಣೋ , ಎಂಬ್ರಾಸ್ ಮಾಡ್ಬೇಡ ನನ್ನ

APOORVA

ಕೇಳ್ಬೇಕು ಅನ್ನಿಸ್ತಿದೆ , ಪ್ಲೀಸ್

SWAPNA

ಲೋ , ಇಲ್ಲೆಲ್ಲಾ ಆಗಲ್ಲ ಕಣೋ , ಬೇಕಿದ್ರೆ ಮನೆಗ್ ಹೋಗಿ
ರೆಕಾರ್ಡ್ ಮಾಡಿ ಕಳಿಸ್ತೀನಿ !!

APOORVA

ಮರೀಬಾರ್ದು ಆಯ್ತಾ

SWAPNA

ನಿಂಗೇನೋ ತೋರಿಸ್ಬೇಕು ವಯ್ಟ್

ಸ್ವಪ್ನಾ ಬ್ಯಾಗ್ ತೆರೆದು ಒಂದು ಜಿವೆಲ್ ಬಾಕ್ಸ್ ತಗಿತಾಳೆ. ಆ ಬಾಕ್ಸ್ ತಗೆದು ಅಪೂರ್ವನಿಗೆ
ತೋರಿಸುತ್ತಾಳೆ , ಅದರಲ್ಲಿ ಒಂದು ರಿಂಗ್ ಇರುತ್ತದೆ.

APOORVA

ಏನೇ ಇದು !!

SWAPNA

ಅಮ್ಮಂದು ಎಂಗೇಜ್ಮೆಂಟ್ ರಿಂಗ್ ಕಣೋ , ಎಂಗೊತ್ತಾ ,
ನಿಂಗೆ ಹೇಳಿರ್ಲಿಲ್ಲಾ ಅಲ್ಲ , ಅಮ್ಮ ಒಂದ್ ಸರ್ತಿ
ಸೂಸೈಡ್ ಮಾಡ್ಕೊಳ್ಬೇಕು ಅಂತ ಇದ್ದಾಗ , ಯಾವುದೊ
ಒಂದು ಎನರ್ಜಿ ಬಂದು ಅವರನ್ನ ಕಾಪಾಡಿತಂತೆ , ಅಲ್ಲಿ
ಅವರಿಗೆ ಸಿಕ್ಕಿದ್ ರಿಂಗ್ ಇದು , ಇದನ್ನೇ ಹಾಕಿ ಅಂತ
ಅಪ್ಪಂಗೆ ಹೇಳಿ ಎಂಗೇಜ್ಮೆಂಟ್ ಗೆ ಹಾಕಿಸ್ಕೊಂಡಿದ್ರು ,
ಅಮ್ಮ ಮೊನ್ನೆ ಹೀಗೆ ಮಾತಾಡೋವಾಗ ಇದರಬಗ್ಗೆ
ಹೇಳಿದ್ರು , ಮತ್ತೆ ನನ್ ಮದುವೆಗೂ ಇದೇ ರಿಂಗ್
ಕೊಡ್ತೀನಿ ಅಂದ್ರು ಗೊತ್ತ ಅದಿಕ್ಕೆ ನಿಂಗ್ ತೋರ್ಸೋಕೆ
ಅಂತ ತಗೊಂಡ್ ಬಂದೆ.

CUT TO:

INT. CAFE TOILET , NIGHT

EXT. CAFE PARKING

EXT. BENGALURU ROADS , NIGHT

EXT. APOORVA HOUSE , NIGHT

ಅಪೂರ್ವ ಕಣ್ಣು ಬಿಡುತ್ತಾನೆ , ಹಾಗೂ ಟಾಯ್ಲೆಟ್ ಕನ್ನಡಿಯಲ್ಲಿ ಮುಖ ನೋಡುತ್ತಾ , ಕೈ ತೊಳೆಯುತ್ತಾನೆ , ಹಾಗು ಅಲ್ಲಿಂದ ಹೊರಡುತ್ತಾನೆ. ಹೊರಗಡೆ ಸ್ವಪ್ನ ಕಾಯುತ್ತಿರುತ್ತಾಳೆ.

೧. ಇಬ್ಬರೂ ಗಾಡಿ ಹತ್ತುತ್ತಾರೆ.
೨. ಅಪೂರ್ವನ ಮನೆಯ ಮುಂದೆ ಗಾಡಿ ನಿಲ್ಲುತ್ತದೆ.
೩. ಅಪೂರ್ವ ಹಗ್ ಮಾಡುತ್ತಾನೆ , ಸ್ವಪ್ನ ಹೊರಡುತ್ತಾಳೆ , ಸ್ವಪ್ನ ಹೋರಾಡುವುದನ್ನೇ ನೋಡುತ್ತಾನೆ , ಹಾಗೂ ಮನೆಗೆ ಹೋಗುವವನಂತೆ ಮೆಟ್ಟಿಲ ಸಮೀಪ ಬರುತ್ತಾನೆ.. ಮೆಟ್ಟಿಲು ಹತ್ತುವುದಿಲ್ಲ ಅಲ್ಲೇ ಕಣ್ಣು ಮುಚ್ಚುತ್ತಾನೆ , ಮಾಯವಾಗುತ್ತಾನೆ.

FILM DISSOLVE:

SWA SCREENWRITERS ASSOCIATION

EXT. APOORVA HOUSE , DAY

ರಾತ್ರಿಯಿಂದ ಹಾಗೆ ಮೆಟ್ಟಿಲ ಮೇಲೆ ಬೆಳಕು ಮೂಡುತ್ತದೆ , ಬೆಳಗ್ಗೆಯಾಗುತ್ತದೆ , ಅಪೂರ್ವ ಮೆಟ್ಟಿಲು ಇಳಿದು ನಿಧಾನಕ್ಕೆ ನಡೆದು ಬರುತ್ತಿದ್ದಾನೆ. ಎಲ್ಲವೂ ನಿಧಾನಗತಿಯಲ್ಲಿ ಸಾಗುತ್ತಿದೆ.

MONTAGES

EXT. BENGALURU ROADS , DAY

E/I. MUDUKA HOUSE , DAY

೧. ಅಪೂರ್ವ ಜನರ ನಡುವೆ ಒದ್ದಾಡುತ್ತ , ಬಸ್ ಅಲ್ಲಿ ನಿಂತಿದ್ದಾನೆ
೨. ಬಸ್ ಇಳಿದು ಒನ್ ವೆ ಎನ್ನುವ ಬೋರ್ಡ್ ಇದ್ದ ರೋಡ್ ಬಳಿ ನಡೆದುಹೋಗುತ್ತಿದ್ದಾನೆ.
೩. ಅಲ್ಲಿಂದ ಅರಿವು ಮನೆ ಬಾಗಿಲಲ್ಲಿ ನಿಂತಿದ್ದಾನೆ.
೪. ಅರಿವು ಲೇಮನ್ ಟೀ ಮಾಡಿಕೊಡುತ್ತಾರೆ , ಇಬ್ಬರೂ ಕುಡಿಯುತ್ತಾರೆ.
೫. ಗನ್ ತಗೆದು ಪಕ್ಕದಲ್ಲಿ ಇಟ್ಟುಕೊಳ್ಳುತ್ತಾನೆ.
೬. ಆ ಲೈಮ್ ಟಿ ಕುಡಿಯುತ್ತಿದ್ದ ಲೋಟ ಒಡೆದು , ಗನ್ ಕೈಲಿ ಹಿಡಿಯುತ್ತಾನೆ. ಮುದುಕನ ಮೇಲೆ ಅಟ್ಯಾಕ್ ಮಾಡಲು ಮುಂದಾಗುತ್ತಾನೆ. ಎಲ್ಲವನ್ನು ಛಿದ್ರಗೊಳಿಸುತ್ತಾನೆ.

MUDUKA

ನನ್ನ ಸಾಯಿಸೋದ್ರಿಂದ ನಿನ್ನ ಸಮಸ್ಯೆ ಪರಿಹಾರ ಆಗೋಲ್ಲ ಅಪೂರ್ವ , ನಿನ್ ಸುಮ್ಮನೆ ಇಲ್ಲದ ಸಮಸ್ಯೆಗಳನ್ನ ತಂದ್ಕೊಳ್ತಿದ್ಯ

APOORVA

ತಪ್ಪು ಮಾಡಿರೋದು ನೀನು , ಶಿಕ್ಷೆ ನನಗೆ ಮಾತ್ರಾನಾ ‼

MUDUKA

ಎಮೋಷನಲ್ ಆಗ್ಬೇಡ , ಅಪೂರ್ವ ಅರ್ಥ ಮಾಡ್ಕೋ ‼

APOORVA

ಯಾಕ್ , ಸಾಯೋದಕ್ಕೆ ಭಯಾನ ?

MUDUKA

ನನ್ನ ಸಾವಿನಿಂದ ಏನೂ ಬದಲಾಗೊಕ್ಕೆ ಆಗೋಲ್ಲ ‼

SWA SCREENWRITERS ASSOCIATION

APOORVA

ಬದಲಾಗೋದು ಬೇಡ , ನೀವ್ ಬರೋತನಕ ಎಲ್ಲಾ
ಚನ್ನಾಗಿತ್ತು , ಈಗ ಯಾವುದು ಮೊದಲಿನ ಥರ ಇಲ್ಲ ,
ಮೊದಲಿನ ಥರ ಇನ್ಯಾವದು ಇರೋದಿಲ್ಲ ,
ನನ್ ಲೈಫ್ ಗೆ ಯಾಕ್ ಬಂದ್ರಿ !!

MUDUKA

ತಪ್ಪನ್ನ ಸರಿಮಾಡೊಕ್ಕೆ

APOORVA

ನಾನ್ಯಾವ ತಪ್ಪನ್ನೂ ಮಾಡಿಲ್ಲ

MUDUKA

ನಿನ್ ನನ್ನ ಕೊಂದ್ರು ಈ ಲೂಪ್ ಇಂದ ಹೊರಗ್
ಬರೋಕ್ಕಾಗಲ್ಲ !!

APOORVA

ಪರವಾಗಿಲ್ಲ , ಆದ್ರೆ ನಿನಗೆ ಸಾಮಾನ್ಯವಾದ ಸಾವು
ಬರ್ಬಾರ್ದು , ನಿನಗೆ ಸಾಮಾನ್ಯವಾದ

ಅಷ್ಟರಲ್ಲಿ ಹೊರಗಿನಿಂದ ಮತ್ತೊಬ್ಬ ಅಪೂರ್ವ ಬರುತ್ತಾನೆ , ಅದೇ ಸಮಯಕ್ಕೆ ಕೈಲಿ ಗನ್ ಹಿಡಿದಿರುವ ಅಪೂರ್ವ ಶೂಟ್ ಮಾಡುತ್ತಾನೆ, ನಾಲ್ಕೈದು ಬುಲೆಟ್ ಹೊರಹೋಗುತ್ತದೆ. ಭಯಂಕರವಾದ ಬೆಳಕು ಆವರಿಸಿಕೊಳ್ಳುತ್ತದೆ. ಸಂಪೂರ್ಣ ನಿಶಬ್ದ್ತತೆ

ಒಂದು ಮೂಲೆಯಲ್ಲಿ ಮುದುಕ ಸತ್ತು ಬಿದ್ದಿದ್ದಾನೆ. ಅಪೂರ್ವ ಮತ್ತೊಂದು ಮೂಲೆಯಲ್ಲಿ ಕುಳಿತಿದ್ದಾನೆ. ಚಾಕುವಿನಲ್ಲಿ ಮುದುಕನನ್ನು ಚುಚ್ಚುತ್ತಾನೆ , ಅತ್ತಿತ್ತ ನೋಡುತ್ತಾನೆ. ಜೋರಾಗಿ ಅಳುತ್ತಾನೆ. ಒಂದು ಖುರ್ಚಿ ಎಳೆದು ಮುದುಕನ ದೇಹದ ಎದುರಿಗೆ ಕೂರುತ್ತಾನೆ , ತನ್ನ ಹಣೆಗೆ ಗನ್ ಪಾಯಿಂಟ್ ಮಾಡಿಕೊಳ್ಳುತ್ತಾನೆ.

CUT TO:

SWA SCREENWRITERS ASSOCIATION

INT.RANGAMANDIRA STAGE , DREAMY

ಅಪೂರ್ವ ಖುರ್ಚಿಯ ಮೇಲೆ ಕುಳಿತಿದ್ದಾನೆ. ಆತನ ಹಿಂದೆ ಸಾಲಾಗಿ , ಸ್ವಪ್ನ , ಯಶೋಧ , ಗೋಪಾಲ್ , ರೇವತಿ , ಕಲ್ಲಯ್ಯ , ದೇವಕಿ , ಅಂಬಿಗ , ಅಜ್ಜಿ , ಮುಂತಾದವರೆಲ್ಲ ಕುಳಿತಿದ್ದಾರೆ. ಅವರೆಲ್ಲ ವಿಪರೀತವಾಗಿ ಮಾತನಾಡುತ್ತಿದ್ದಾರೆ , ಅಪೂರ್ವ ತನ್ನ ಹಣೆಗೆ ಗನ್ ಪಾಯಿಂಟ್ ಮಾಡಿಕೊಂಡಿದ್ದಾನೆ. ಟ್ರಿಗರ್ ಪ್ರೆಸ್ ಮಾಡುತ್ತಾನೆ.

FADE TO BLACK.

ಕತ್ತಲಿನಲ್ಲಿ ಗನ್ ಫಯರ್ ಆಗುತ್ತದೆ

CUT TO:

EXT. RAYADURGA VILLAGE . DAY

ಗೋಪಾಲ್ ಕಾರಿನಲ್ಲಿ ಕುಳಿತು ಕಡಲೇಕಾಯಿ ತಿನ್ನುತ್ತಾ ರತ್ನಾಕರ ಶಾಸ್ತ್ರಿಗಳಿಗೆ ಕಾಯಿತ್ತಿದ್ದಾರೆ , ರತ್ನಾಕರ ಶಾಸ್ತ್ರಿಗಳು ಆತುರಾತುರದಲ್ಲಿ ಪ್ರವೇಶಿಸುತ್ತಾರೆ.

RATNAKARA SHASTRI

ಗೋಪಾಲ್ , ಸಮಯ ಕೈಮೀರಿ ಹೋಗಿಲ್ಲ ತಾನೇ , ರಸ್ತೆ ಬೇರೆ ಸರಿಗಿಲ್ಲ , ಅರ್ಧ ಗಂಟೆಯಾದ್ರೂ ಹಿಡಿಯತ್ತೆ .
( ಕಾರ್ ಒಳಗೆ ಕೂರುತ್ತಾರೆ )

GOPAL KRISHNA URS

ಸಮಸ್ಯೆಯಿಲ್ಲ ಹೋಗಬೋದು

ಗಾಡಿ ಮೋವ್ ಆಗುತ್ತದೆ , ಗಾಡಿ ಒಂದೆರಡು ಕಡೆಗಳಲ್ಲಿ ಪಾಸ್ ಆಗುತ್ತದೆ. ಗಾಡಿ ಪಾಸ್ ಆಗುತ್ತಿರುವ ದೃಶ್ಯಗಳ ಮೇಲೆಯೇ ಜೆ ಕಟ್ ನಲ್ಲಿ ಸಂಭಾಷಣೆ ಮೂಡಿಬರುತ್ತದೆ.

J CUT :

INT. RANGAMANDIRA , EVENING

ನಾಟಕದ ಕೊನೆಯ ಸಂಭಾಷಣೆಗಳು ಮೂಡಿಬರುತ್ತಿವೆ

OEDIPUS

ನಾನು ನನ್ನ ತಂದೆಯನ್ನು ಕೊಂದು , ತಾಯಿಯ ಜೊತೆಯಲ್ಲೇ ಮಲಗುತ್ತೇನೆಂದು ಹೇಳಿದ , ಅದನ್ನು ಕೇಳಿದವನೇ ಅಲ್ಲಿಂದ ಓಡಿದೆ.

ನಿಧಾನವಾಗಿ ವೇದಿಕೆಯಲ್ಲಿ ಕತ್ತಲು ಆವರಿಸುತ್ತದೆ. ಜನರ ಚಪ್ಪಾಳೆಯ ಸದ್ದು ಕೇಳಿಬರುತ್ತದೆ. ಬೆಳಕು ಮೂಡಿದ್ದೇ , ಪಾತ್ರ ಪರಿಚಯಕ್ಕೆ ಪಾತ್ರದಾರಿಗಳು ನಿಂತಿದ್ದಾರೆ , ಆದರೆ , ಸ್ವಪ್ನ ಹಾಗೂ ಅಪೂರ್ವ ಇಲ್ಲ .

SWA SCREENWRITERS ASSOCIATION

MONTAGES

೧. ಅಪೂರ್ವನ ಮನೆ ವಯ್ಡ್ ಶಾಟ್
೨. ಗೋಪಾಲ್ ಮನೆ ವಯ್ಡ್ ಶಾಟ್
೩. ಅಜ್ಜನ ಮನೆ ವಯ್ಡ್ ಶಾಟ್
೪. ಶಾಂತಲಾ ಬ್ರಿಡ್ಜ್ ವಯ್ಡ್ ಶಾಟ್

DIP TO BLACK:

T H E   E N D

SWA
SCREENWRITERS
ASSOCIATION


**©Srinidhi S**
**SWA Membership Number:54490**

SWA
SCREENWRITERS ASSOCIATION

# CERTIFICATE OF REGISTRATION

This is to certify that I have registered this creation and as a proof thereof is placed below my digital signature and seal of the Association with relevant details in the QR code.

**ZAMAN HABIB**
Hon. General Secretary
SWA

**Author:**

**Srinidhi S**

**SWA Membership Number:**

**54490**

**(Digitally Signed)**

**Type of Creation:**

**Screenplay**

**Title of Creation:**

**Blink**

**Date and Time**

**Sunday 2021-11-21 19:58:08**

**Transaction ID:**

**1637504715-1182913959**

**Reference Number**

**110339710676**

**Tampering with this document will invalidate and cancel the registration.**

The Online Script Registration from Screenwriters Association (SWA) is based on the following **SELF DECLARATION** made by the person seeking registration of a work with SWA:

*"I solemnly undertake that I am legally qualified and authorized to register this work. I further affirm to the best of my knowledge that this work does not infringe the intellectual property rights of any other work. In case it is found otherwise, I understand that this registration will automatically stand canceled. Besides, I will be solely responsible for the consequences whatsoever. I fully understand that any kind of tampering with this document will make this registration null and void.*

*I understand that registering a work with SWA is a legal declaration of authorship and hence, only the author of a work is legally entitled to register her/his work with SWA. I understand that SWA strictly discourages any activity of proxy registration. I declare that I shall never register a work on my name, or anyone else's behalf, if I am not the author, or one of the authors, of the same.*

*I hereby declare that I have duly read and understood the rules and regulations of SWA regarding the registration of a work. I further affirm that I understand the content of this declaration and accept the same."*